# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

# Visvesvaraya Technological University

**B.Sc Engg - ಬಿ.ಎಸ್ಸಿ- ದ್ವಿತೀಯ ಸೆಮಿಸ್ಟರ್ ಕನ್ನಡ**

# ಸಾಹಿತ್ಯ ಸಿಂಚನ

# Sahitya Sinchana (21KSS27)

**Notes and Material Prepared by :**

**Dr. L Thimmesha**
Assistant Professor & Head
Dept of English & Humanities,
Government Engineering College – Hassan.

For Any clarifications and Feedback Please contact : 9900832331

VTU BSc ಸಾಹಿತ್ಯ ಸಿಂಚನ 21KSS27 Draft copy

# ಸಾಹಿತ್ಯ ಸಿಂಚನ

# Sahitya Sinchana (21KSS27)

This course/ subject has been introduced under ability enhancement scheme in 2021 NEP – New scheme for second semester B Sc students. This is the authorised material and notes for all VTU students and teaching faculties.

**Author of 21KSS27 Material : Dr. L. THIMMESHA**

**Pages** **: 210**

**Copy rights @** **: Author**

VTU BSc ಸಾಹಿತ್ಯ ಸಿಂಚನ 21KSS27 Draft Copy

**This material/notes has been prepared to meet the immediate requirement of the VTU students and faculties. The task of upgrading the material is being taking place.**

## ಬಿ.ಎಸ್ಸಿ- ದ್ವಿತೀಯ ಸೆಮಿಸ್ಟರ್,

**ಕನ್ನಡ ಬಲ್ಲ ಮತ್ತು ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಪಠ್ಯಕ್ರಮ**

**(For Kannadiga Students – Who knows to speak, read and write kannada)**

# ಸಾಹಿತ್ಯ ಸಿಂಚನ

| | | | |
|---|---|---|---|
| **ವಿಷಯ ಸಂಕೇತ** (Course Code) | **21KSS27** | ನಿರಂತರ ಆಂತರಿಕ ಮೌಲ್ಯಮಾಪನದ ಅಂಕಗಳು (CIE) | **50** |
| ಒಂದು ವಾರಕ್ಕೆ ಬೋಧನಾ ಅವಧಿ<br>(Teaching Hours/Week (L:T:P: S) | **L –3 , P-O, S-1 = 03**<br>**ಗಂಟೆಗಳು / ವಾರಕ್ಕೆ** | ಸೆಮಿಸ್ಟರ್ ಅಂತ್ಯದ ಪರೀಕ್ಷೆಯ ಅಂಕಗಳು (SEE) | **50** |
| ಒಟ್ಟು ಬೋಧನಾ ಅವಧಿ<br>Total Hours of Pedagogy | **40 ಗಂಟೆಗಳು** | ಒಟ್ಟು ಅಂಕಗಳು | **100** |
| **ಕ್ರೆಡಿಟ್ಸ್** (Credits) | **03** | ಪರೀಕ್ಷೆಯ ಅವಧಿ | **03** |

ಸಾಂಸ್ಕೃತಿಕ ಕನ್ನಡ ಪಠ್ಯದ ಕಲಿಕೆಯ ಉದ್ದೇಶಗಳು **(Course Objectives):**

- ಪದವಿ ವಿದ್ಯಾರ್ಥಿಗಳಾಗಿರುವುದರಿಂದ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ನಾಡು ನುಡಿಯ ಪರಿಚಯ ಮಾಡಿಕೊಡುವುದು.
- ತಾಂತ್ರಿಕ ವಿದ್ಯಾರ್ಥಿಗಳಿಗೆ ಹಳೆಗನ್ನಡ, ನಡುಗನ್ನಡ ಮತ್ತು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಕಾಲಘಟ್ಟಗಳ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವುದು.
- ನಾಡು-ನುಡಿಗೆ ಸಂಬಂಧಪಟ್ಟಂತೆ ವಿವಿಧ ವಿಷಯಗಳನ್ನು ಪರಿಚಯಿಸುವುದು.

ಬೋಧನೆ ಮತ್ತು ಕಲಿಕಾ ವ್ಯವಸ್ಥೆ **(Teaching-Learning Process - General Instructions) :**

These are sample Strategies, which teacher can use to accelerate the attainment of the various course outcomes.

1. ತರಗತಿಯಲ್ಲಿ ಶಿಕ್ಷಕರು ಪ್ರಸ್ತುತ ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನವನ್ನು ಅನುಸರಿಸುವುದು. ಪ್ರಮುಖ ಅಂಶಗಳ ಚಾರ್ಟ್ ಗಳನ್ನು ತಯಾರಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು ಮತ್ತು ತರಗತಿಯಲ್ಲಿ ಅವುಗಳನ್ನು ಚರ್ಚಿಸಲು ಅವಕಾಶ ಮಾಡಿಕೊಡುವುದು.
2. ಡಿಜಿಟಲ್ ತಂತ್ರಜ್ಞಾನದ ಮುಖಾಂತರ ಇತ್ತೀಚೆಗೆ ಡಿಜಿಟಲೀಕರಣ ಗೊಂಡಿರುವ ಸಾಹಿತ್ಯ ಮತ್ತು ಸಂಸ್ಕೃತಿ, ನಾಡು-ನುಡಿಯ ಅಂಶಗಳನ್ನು ತರಗತಿಯಲ್ಲಿ ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ಮುಖಾಂತರ ಚರ್ಚಿಸಲು ಕ್ರಮಕೈಗೊಳ್ಳುವುದು.
3. ಇತ್ತೀಚಿನ ತಂತ್ರಜ್ಞಾನದ ಅನುಕೂಲಗಳನ್ನು ಬಳಸಿಕೊಳ್ಳುವುದು ಸೂಕ್ತ - ಅಂದರೆ ಕವಿ-ಕಾವ್ಯ ಪರಿಚಯ ದಲ್ಲಿ ಕವಿಗಳ ಚಿತ್ರಣವನ್ನು ಮತ್ತು ಲೇಖನಗಳು ಮತ್ತು ಕಥೆ ಕಾವ್ಯಗಳ ಮೂಲ ಅಂಶಗಳಿಗೆ ಸಂಬಂಧಪಟ್ಟ ಧ್ವನಿ ಚಿತ್ರಗಳು, ಸಂಭಾಷಣೆಗಳು, ಈಗಾಗಲೇ ಇತರ ವಿಮರ್ಶಕರು ಬರೆದಿರುವ ವಿಮರ್ಶಾತ್ಮಕ ವಿಷಯಗಳನ್ನು ಟಿಪಿಟಿ, ಡಿಜಿಟಲ್ ಮಾಧ್ಯಮಗಳ ಮುಖಾಂತರ ವಿಶ್ಲೇಷಿಸುವುದು.

21KSS27 Draft copy

**ಘಟಕ - 1**

1. ಕರ್ನಾಟಕದ ಸಂಕ್ಷಿಪ್ತ ಇತಿಹಾಸ
2. ಕನ್ನಡ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆ
3. ಹಳೆಗನ್ನಡ ಸಾಹಿತ್ಯ - ಪಂಪ ಪೂರ್ವ ಯುಗ
4. ಕನ್ನಡ ಸಾಹಿತ್ಯದ ರಚನೆಗೆ ಪ್ರಮುಖ ಪ್ರೇರಣೆಗಳು ಮತ್ತು ಪ್ರಭಾವಗಳು,
5. ಕನ್ನಡ ಸಾಹಿತ್ಯ ಪರಂಪರೆ ಮತ್ತು ರಾಜಾಶ್ರಯ
6. ಕವಿರಾಜಮಾರ್ಗ ಮತ್ತು ವಡ್ಡಾರಾಧನೆ

ಬೋಧನೆ ಮತ್ತು ಕಲಿಕಾ ವಿಧಾನ :

ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನ, ಪ್ರಮುಖ ಅಂಶಗಳ ಚಾರ್ಟ್ ಗಳನ್ನು ಬಳಸುವುದು, ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ವಿಡಿಯೋಗಳನ್ನು ಬಳಸುವುದು, ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಮುಖಾಂತರ ಚರ್ಚಿಸುವುದು.

**ಘಟಕ - 2**

1. ಪಂಪ / ಚಂಪೂ ಯುಗದ ಕನ್ನಡ ಸಾಹಿತ್ಯ ಮತ್ತು ಪರಂಪರೆ
2. ಆದಿಕವಿ ಪಂಪ, ರನ್ನ, ಪೊನ್ನ ಮತ್ತು ಜನ್ನ
3. ಒಂದನೇ ನಾಗವರ್ಮ, ನಾಗಚಂದ್ರ, 10 ಮತ್ತು 11ನೇ ಶತಮಾನದ ಸಮಕಾಲೀನ ಪ್ರಮುಖ ಕವಿಗಳು
4. ನಡುಗನ್ನಡ ಸಾಹಿತ್ಯ - ವಚನ ಸಾಹಿತ್ಯ / ಬಸವ ಯುಗ
5. ವಚನ ಸಾಹಿತ್ಯದ ಬೆಳವಣಿಗೆಗೆ ಕಾರಣಗಳು ಮತ್ತು ಅದರ ಮಹತ್ವ
6. ಪ್ರಮುಖ ವಚನಕಾರರು, ವಚನ ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಕಾಯಕ ತತ್ತ್ವ
7. ಕುಮಾರವ್ಯಾಸ ಯುಗ ಮತ್ತು ಸಾಹಿತ್ಯದ ಇತರೆ ರೂಪಗಳು - ರಗಳೆ – ಹರಿಹರ, ಷಟ್ಪದಿ –

ಬೋಧನೆ ಮತ್ತು ಕಲಿಕಾ ವಿಧಾನ :

ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನ, ಪ್ರಮುಖ ಅಂಶಗಳ ಚಾರ್ಟ್ ಗಳನ್ನು ಬಳಸುವುದು, ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ವಿಡಿಯೋಗಳನ್ನು ಬಳಸುವುದು, ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಮುಖಾಂತರ ಚರ್ಚಿಸುವುದು.

**ಘಟಕ - 3**

1. ದಾಸ ಸಾಹಿತ್ಯ / ಕೀರ್ತನೆಗಳು - ಪುರಂದರದಾಸರು, ಕನಕದಾಸರು ಮತ್ತು ಇತರೆ ಕೀರ್ತನೆಕಾರಾರು
2. ತ್ರಿಪದಿ - ಸರ್ವಜ್ಞ, ಜಾನಪದ ಸಾಹಿತ್ಯ, ತತ್ತ್ವಪದಗಳು - ಶಿಶುನಾಳ ಶರೀಫರು
3. ಮಹಿಳಾ ಸಾಹಿತ್ಯ : ಹೆಳವನಕಟ್ಟೆ ಗಿರಿಯಮ್ಮ ಮತ್ತು ಸಂಚಿಹೊನ್ನಮ್ಮ
4. ಆಧುನಿಕ ಪೂರ್ವ ಕನ್ನಡ ಸಾಹಿತ್ಯ : ಕೆಂಪುನಾರಾಯಣ ಮತ್ತು ಮುದ್ದಣ
5. ಹೊಸಗನ್ನಡ ಸಾಹಿತ್ಯ ಚರಿತ್ರೆ - ಪ್ರಭಾವಗಳು ಮತ್ತು ಪ್ರೇರಣೆಗಳು
6. ಹೊಸಗನ್ನಡ ಸಾಹಿತ್ಯ ಚರಿತ್ರೆ ಬೆಳೆದು ಬಂದ ದಾರಿ
7. ಹೊಸಗನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳು

21KSS27 Draft Copy

VTU BSc ಸಾಹಿತ್ಯ ಸಿಂಚನ

| |
|---|
| ಬೋಧನೆ ಮತ್ತು ಕಲಿಕಾ ವಿಧಾನ :<br><br>ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನ, ಪ್ರಮುಖ ಅಂಶಗಳ ಚಾರ್ಟ್ ಗಳನ್ನು ಬಳಸುವುದು, ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ವಿಡಿಯೋಗಳನ್ನು ಬಳಸುವುದು, ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಮುಖಾಂತರ ಚರ್ಚಿಸುವುದು. |
| **ಘಟಕ - 4** |
| 1. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳು ಮತ್ತು ಸಾಹಿತ್ಯ - ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಪರಿಚಯ<br>2. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳು ಮತ್ತು ಸಾಹಿತ್ಯ - (ಪ್ರಮುಖ ಪಂಥದ/ಪ್ರಕಾರಗಳ ಸಾಹಿತಿಗಳು – ಮಾಹಿತಿಗಾಗಿ)<br>3. ಡಿವಿಜಿಯವರ ಮಂಕುತಿಮ್ಮನ ಕಗ್ಗದಿಂದ ಆಯ್ದು ಪದ್ಯಭಾಗಗಳು<br>4. ಕುವೆಂಪು - "ನೀಂ ಮಹಚ್ಛಿಲ್ಪಿ ದಿಟಂ"<br>5. ದ ರಾ ಬೇಂದ್ರೆ - ನಾದಲೀಲೆ ಯಿಂದ "ನೀ ಹಿಂಗೆ ನೋಡಬ್ಯಾಡ ನನ್ನ"<br>6. ಜಿ. ಎಸ್. ಶಿವರುದ್ರಪ್ಪ - "ಕಾಣದ ಕಡಲಿಗೆ ಹಂಬಲಿಸಿದೆ ಮನ" |
| ಬೋಧನೆ ಮತ್ತು ಕಲಿಕಾ ವಿಧಾನ :<br><br>ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನ, ಪ್ರಮುಖ ಅಂಶಗಳ ಚಾರ್ಟ್ ಗಳನ್ನು ಬಳಸುವುದು, ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ವಿಡಿಯೋಗಳನ್ನು ಬಳಸುವುದು, ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಮುಖಾಂತರ ಚರ್ಚಿಸುವುದು. |
| **ಘಟಕ - 5** |
| 1. ವೈಚಾರಿಕತೆಯ ಲೇಖನ - ನೇಮಿಚಂದ್ರರವರ "ಸೋಲೆಂಬುದು ಅಲ್ಪವಿರಾಮ" ಲೇಖನ<br>2. ಕನ್ನಡದ ಉಪಭಾಷೆಗಳು – ಡಾ. ಎಲ್ ತಿಮ್ಮೇಶ<br>3. ಷೇರುಪೇಟೆ, ಹಣಕಾಸು ನಿರ್ವಹಣೆ ಮತ್ತು ಮಾರುಕಟ್ಟೆ– ಟಿ. ಎಲ್. ರವೀಂದ್ರ<br>4. ಜಾಗತಿಕ ಸನ್ನಿವೇಶದಲ್ಲಿ ತಾಂತ್ರಿಕ ಸಂವಹನ ಕೌಶಲ್ಯಗಳ ಮಹತ್ವ<br>5. ತಾಂತ್ರಿಕ ಭಾಷೆ, ಸಂವಹನ & ಉದ್ಯೋಗ- ಡಾ. ಎಲ್ ತಿಮ್ಮೇಶ ಮತ್ತು ಡಾ. ಅಪ್ಪಾಸಾಬ ಎಲ್. ವಿ |
| ಬೋಧನೆ ಮತ್ತು ಕಲಿಕಾ ವಿಧಾನ :<br><br>ಪುಸ್ತಕ ಆಧಾರಿತ ಬ್ಲಾಕ್ ಬೋರ್ಡ್ ವಿಧಾನ, ಪ್ರಮುಖ ಅಂಶಗಳ ಚಾರ್ಟ್ ಗಳನ್ನು ಬಳಸುವುದು, ಪಿಪಿಟಿ ಮತ್ತು ದೃಶ್ಯ ಮಾಧ್ಯಮದ ವಿಡಿಯೋಗಳನ್ನು ಬಳಸುವುದು, ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಗಳ ಮುಖಾಂತರ ಚರ್ಚಿಸುವುದು. |

21KSS27 Draft Copy

ಸಾಹಿತ್ಯ ಸಿಂಚನ ಪಠ್ಯದ ಕಲಿಕೆಯಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳು ಮತ್ತು ಫಲಿತಾಂಶಗಳು: **course Outcomes (Course Skill Set) :**

1. ಕನ್ನಡ ಸಾಹಿತ್ಯ, ಭಾಷೆ, ಸಂಸ್ಕೃತಿ ಮತ್ತು ನಾಡು ನುಡಿಯ ಕುರಿತು ಆಳವಾದ ಜ್ಞಾನವನ್ನು ಗಳಿಸುತ್ತಾರೆ.
2. ಕನ್ನಡ ಸಾಹಿತ್ಯದ ಪ್ರಮುಖ ಕಾಲಘಟ್ಟಗಳ ಚರಿತ್ರೆಯನ್ನು ಪ್ರಮುಖ ಕವಿಗಳು ಮತ್ತು ಅವರ ಸಾಹಿತ್ಯದ ನಿರೂಪಣೆಯಿಂದ ಅರ್ಥೈಸಿಕೊಳ್ಳುತ್ತಾರೆ.
3. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಪರಿಚಯವಾಗುತ್ತದೆ.
4. ಕನ್ನಡ ಭಾಷೆಯ ಬಳಕೆ ಮತ್ತು ಸಂವಹನ ಎರಡರಲ್ಲಿಯೂ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಮೌಲ್ಯಮಾಪನದ ಮಾಹಿತಿ **(Assessment Details- both CIE and SEE)**

(methods of CIE need to be definetopic wise i.e.- MCQ, Quizzes, Open book test, Seminar or micro project)

The weightage of Continuous Internal Evaluation (CIE) is 50% and for Semester End Exam (SEE) is 50%. The student has to obtain a minimum of 40% marks individually both in CIE and 35% marks in SEE to pass. Theory Semester End Exam (SEE) is conducted for 100 marks (03hours duration). Based on this grading will be awarded.

ನಿರಂತರ ಆಂತರಿಕ ಮೌಲ್ಯಮಾಪನದ ಪ್ರಕ್ರಿಯೆ ಈ ಕೆಳಗಿನಂತಿರುತ್ತದೆ- **Continuous Internal Evaluation (CIE) :**

1. ಸೂಚಿಸಿದ ವಿಧಾನಗಳು : ಕಿರುಪರೀಕ್ಷೆ, ಬಹು ಆಯ್ಕೆ ಮಾದರಿಯ ಪ್ರಶ್ನೆಗಳು, ವಿದ್ಯಾರ್ಥಿಗಳ ಭಾಷಾ ಸಂವಹನ ಕೌಶಲ್ಯವನ್ನು ಪ್ರಸ್ತುತಪಡಿಸಲು ಅನುಕೂಲವಾಗುವಂತಹ ಪಠ್ಯಾಧಾರಿತ ಪ್ರಶ್ನೆಗಳನ್ನು ಕೇಳುವುದು.
2. ಅಸೈನ್ಮೆಂಟ್ ಗಳನ್ನು ನೀಡುವುದು, ಪ್ರಬಂಧ ಸ್ಪರ್ಧೆ/ಚರ್ಚಾ ಸ್ಪರ್ಧೆಗಳು ಮತ್ತು ರಸಪ್ರಶ್ನೆ ಮಾದರಿಯ ಚಟುವಟಿಕೆಗಳನ್ನು ಆಯೋಜಿಸುವುದು. ಈ ರೀತಿಯಲ್ಲಿ ಮೌಲ್ಯಮಾಪನವನ್ನು ಮಾಡಬಹುದಾಗಿರುತ್ತದೆ.
3. ಪ್ರತಿಯೊಂದು ವಿಭಾಗದ ಪಠ್ಯ ಭಾಗ ಮೇಲಿನ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಬರುವಂತೆ ನೋಡಿಕೊಳ್ಳುವುದು.

ಸೆಮಿಸ್ಟರ್ ಅಂತ್ಯದ ಪರೀಕ್ಷೆಯು ಈ ಕೆಳಗಿನಂತಿರುತ್ತದೆ - **Semester End Exam (SEE):**

1. ಪ್ರಶ್ನೆಪತ್ರಿಕೆಯಲ್ಲಿ 10 ಪೂರ್ಣಪ್ರಮಾಣದ ಪ್ರಶ್ನೆಗಳು ಇರುತ್ತವೆ.
2. ಪ್ರತಿಪ್ರಶ್ನೆ 20 ಅಂಕಗಳಿಗೆ ಇರುತ್ತದೆ.
3. ಪ್ರತಿಯೊಂದು ವಿಭಾಗದಿಂದ 2 ಪೂರ್ಣ ಪ್ರಶ್ನೆಗಳು ಇರುತ್ತವೆ.
4. ಪ್ರತಿಯೊಂದು ಪೂರ್ಣ ಪ್ರಶ್ನೆಗೆ ಪೂರಕವಾಗಿ ಮತ್ತು ಸಂಬಂಧಿಸಿದಂತೆ ಉಪ ಪ್ರಶ್ನೆಗಳು ಇರುತ್ತವೆ.
5. ವಿದ್ಯಾರ್ಥಿ 10 ಪೂರ್ಣಪ್ರಮಾಣದ ಪ್ರಶ್ನೆಗಳಲ್ಲಿ 05 ಕ್ಕೆ ಉತ್ತರಿಸಬೇಕು. ಉತ್ತರಿಸುವಾಗ ಪ್ರತಿ ವಿಭಾಗದಿಂದ ಒಂದು ಪೂರ್ಣಪ್ರಮಾಣದ ಪ್ರಶ್ನೆಯನ್ನು ಉತ್ತರಿಸಬೇಕು.

VTU ಸಾಹಿತ್ಯ ಸಿಂಚನ 21KSS27 Draft copy

## Suggested Text Books (ನಿಗದಿಪಡಿಸಿದ ಪರಾಮರ್ಶನ ಗ್ರಂಥಗಳು) :

1. "ಕನ್ನಡ ಸಾಹಿತ್ಯ ಸಿಂಚನ – ಕೈಪಿಡಿ", ಪ್ರಕಾಶಕರು - ಇನ್ಫೋನೈಟ್ ಲರ್ನಿಂಗ್ ಸಲ್ಯೂಷನ್ಸ್, ಬೆಂಗಳೂರು.
   - **(ಮಾಡ್ಯೂಲ್ - 1, 2, 3 ಮತ್ತು 4 ಕ್ಕೆ ಸಂಬಂಧಿಸಿದಂತೆ)**
2. "ಸಾಹಿತ್ಯ ಸಿಂಚನ ಭಾಗ 1 ಮತ್ತು 2", ಡಿಪ್ಲೋಮಾ ದ್ವಿತೀಯ ಮತ್ತು ತೃತೀಯ ಸೆಮಿಸ್ಟರ್

   ಪಠ್ಯಪುಸ್ತಕಗಳು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
   - **(ಮಾಡ್ಯೂಲ್ - 2, 3 ಮತ್ತು 4 ಕ್ಕೆ ಸಂಬಂಧಿಸಿದಂತೆ)**
3. ತಾಂತ್ರಿಕ ಸಂವಹನ ಕೌಶಲ್ಯಗಳು, ಪ್ರಸಾರಾಂಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ.
   - **(ಮಾಡ್ಯೂಲ್ –5 ಕ್ಕೆ ಸಂಬಂಧಿಸಿದಂತೆ)**

================================================================================

### ಹೆಚ್ಚುವರಿ ಸಮಗ್ರ ಅಧ್ಯಯನಕ್ಕಾಗಿ

1. ಆಡಳಿತ ಕನ್ನಡ - ಪ್ರಸಾರಾಂಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ.
2. ಕನ್ನಡ ಸಾಹಿತ್ಯ ಚರಿತ್ರೆ - ರಂ ಶ್ರೀ ಮುಗಳಿ, ಗೀತಾ ಬುಕ್ ಹೌಸ್ ಮೈಸೂರು.

   (ಹೆಚ್ಚುವರಿ ಸಮಗ್ರ ಅಧ್ಯಯನಕ್ಕಾಗಿ)
3. ಹೊಸಗನ್ನಡ ಸಾಹಿತ್ಯ ಚರಿತ್ರೆ - ಎಲ್.ಎಸ್.ಶೇಷಗಿರಿ ರಾವ್, ಸಪ್ನಾ ಬುಕ್ ಹೌಸ್ ಬೆಂಗಳೂರು.

   (ಹೆಚ್ಚುವರಿ ಸಮಗ್ರ ಅಧ್ಯಯನಕ್ಕಾಗಿ)
4. ಕನ್ನಡ ಸಾಹಿತ್ಯ ಕೋಶ – ಸಂಪಾದಕರು, ಡಾ. ರಾಜಪ್ಪ ದಳವಾಯಿ, ಡಾ. ರಾಜಪ್ಪ ದಳವಾಯಿ

   ತರಬೇತಿ ಕೇಂದ್ರ
5. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯು

   ಈಗಾಗಲೇ ಪ್ರಕಟಿಸಿರುವ ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಯ ವಿಷಯಗಳಿಗೆ ಸಂಬಂಧಪಟ್ಟ

   ಪ್ರಕಟಣೆಗಳನ್ನು ಮತ್ತು ಪುಸ್ತಕ ಗಳನ್ನು ಗಮನಿಸುವುದು.

# ಅಧ್ಯಾಯ - ಒಂದು

# ಕರ್ನಾಟಕದ ಸಂಕ್ಷಿಪ್ತ ಇತಿಹಾಸ ಮತ್ತು

# ಸಾಹಿತ್ಯದ ಬೆಳವಣಿಗೆ

---

'ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ,ಪೂರ್ಣದೃಷ್ಟಿ - ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ.ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ. ಆ ಪಥ, ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು.ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ, ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.'

--------------------------------

– **ಕುವೆಂಪು.**

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ - ಒಂದು

# ಕರ್ನಾಟಕದ ಸಂಕ್ಷಿಪ್ತ ಇತಿಹಾಸ ಮತ್ತು ಸಾಹಿತ್ಯದ ಬೆಳವಣಿಗೆ

21KSS27 Draft Copy

## ಕರ್ನಾಟಕ ರಾಜ್ಯದ ಬಗ್ಗೆ ಮಾಹಿತಿ:

ಭಾರತ ದೇಶದ ಐದು ಪ್ರಮುಖ ದಕ್ಷಿಣ ಭಾಗದ ರಾಜ್ಯಗಳಲ್ಲಿ ಕರ್ನಾಟಕವು ಅತಿ ದೊಡ್ಡ ರಾಜ್ಯವಾಗಿದೆ. ದೇಶದ ಆರನೇ ಅತಿದೊಡ್ಡ ರಾಜ್ಯವು ಕೂಡ ಹೌದು. **1973** ಕ್ಕೆ ಮೊದಲು ಕರ್ನಾಟಕ ರಾಜ್ಯದ ಹೆಸರು **ಮೈಸೂರು ರಾಜ್ಯ** ಎಂದಿತ್ತು. ಇದಕ್ಕೆ ಪ್ರಮುಖ ಕಾರಣ ಕರ್ನಾಟಕ ಏಕೀಕರಣದ ಮೊದಲ ಸೃಷ್ಠಿ (ಒಗ್ಗೂಡುವಿಕೆ) ಮೈಸೂರು ಸಂಸ್ಥಾನವನ್ನು ಆಧರಿಸಿದ್ದು ಆಗಿದೆ. **1956** ರಲ್ಲಿ ಸುತ್ತ-ಮುತ್ತಲ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳನ್ನು ಸೇರಿಸಲಾಯಿತು. "ಕರ್ನಾಟಕ" ಎಂಬ ಹೆಸರು ಅನೇಕ ದಾಖಲೆಗಳು ಮತ್ತು ಆಧಾರಗಳಿಂದ ಪ್ರತಿಪಾದಿಸಲ್ಪಟ್ಟಿವೆ. ಒಪ್ಪಲ್ಪಟ್ಟಿರುವ ದಾಖಲೆಯ ಪ್ರಕಾರ ಕರ್ನಾಟಕ **"ಕರು+ನಾಡು"** ಎಂಬುದರಿಂದ ಉತ್ಪತ್ತಿಯನ್ನು ಪಡೆದಿದೆ. ಕರು ನಾಡು ಎಂದರೆ **"ಕಪ್ಪು ಮಣ್ಣಿನ ನಾಡು"**, **"ಎತ್ತರದ ಪ್ರದೇಶ"** ಎಂದು ಅರ್ಥ. ಕರ್ನಾಟಕ ರಾಜ್ಯವು ಸಮುದ್ರ ಮಟ್ಟದಿಂದ ಸರಾಸರಿ ಎತ್ತರ 1500 ಅಡಿ ಎತ್ತರ ಇದ್ದು ಇದು ಭಾರತದ ಅತಿ ಹೆಚ್ಚು ಎತ್ತರವುಳ್ಳ ರಾಜ್ಯಗಳಲ್ಲಿ ಒಂದಾಗಿದೆ. 2011 ರ ಜನಗಣತಿಯಂತೆ, 6 ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಹತ್ತು ಭಾರತೀಯ ರಾಜ್ಯಗಳಲ್ಲಿ ಕರ್ನಾಟಕವೂ ಒಂದು.

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಾತ್ರ 1.30 ಕೋಟಿಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ ನಗರ. ಇತರ ಪ್ರಮುಖ ನಗರಗಳೆಂದರೆ ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ದಾವಣಗೆರೆ, ಬಳ್ಳಾರಿ, ಕಲಬುರಗಿ, ವಿಜಯಪುರ ಮತ್ತು ಬೆಳಗಾವಿ]. ಪೂರ್ವ ಶಿಲಾಯುಗದಷ್ಟು ಪ್ರಾಚೀನತೆಯಿರುವ ಕರ್ನಾಟಕವು ಭಾರತದ ಅನೇಕ ಪ್ರಬಲ ಸಾಮ್ರಾಜ್ಯಗಳಿಗೆ ನೆಲೆಬೀಡಾಗಿದೆ. ಈ ಸಾಮ್ರಾಜ್ಯಗಳಿಂದ ಆಶ್ರಯ ಪಡೆದಿರುವ ಅನೇಕ ತತ್ತ್ವಜ್ಞಾನಿಗಳು ಮತ್ತು ಕವಿಗಳಿಂದ ಆರಂಭಿಸಲ್ಪಟ್ಟಿರುವ ಸಾಮಾಜಿಕ, ಧಾರ್ಮಿಕ ಹಾಗು ಸಾಹಿತ್ಯಕ ಚಳವಳಿಗಳು ಇಂದಿನವರೆಗೂ ನಡೆದುಕೊಂಡು ಬಂದಿವೆ. ಕನ್ನಡ ಭಾಷೆಯ ಸಾಹಿತಿಗಳು

ಭಾರತದಲ್ಲಿ ಅತಿ ಹೆಚ್ಚು (ಹಿಂದಿ ಭಾಷೆಯನ್ನು ಹೊರತುಪಡಿಸಿ) ಜ್ಞಾನಪೀಠ ಪ್ರಶಸ್ತಿ ಪಡೆದಿದ್ದಾರೆ. ಕರ್ನಾಟಕವು ಭಾರತದ ಶಾಸ್ತ್ರೀಯ ಸಂಗೀತ ಪರಂಪರೆಗಳಾದ ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತ ಶೈಲಿಗೆ ಮಹತ್ತರವಾದ ಕೊಡುಗೆ ನೀಡಿದೆ.

## ಕರ್ನಾಟಕದ ಚರಿತ್ರೆ

ಕರ್ನಾಟಕದ ಚರಿತ್ರೆಯು ಪೂರ್ವ ಶಿಲಾಯುಗದಷ್ಟು ಹಳೆಯದಾಗಿದೆ. ಕರ್ನಾಟಕದಲ್ಲಿ ಭೂ ಶೋಧನೆಯಿಂದ ದೊರೆತಿರುವ ಕೈ-ಕೊಡಲಿಗಳು ಮತ್ತು ಕಡುಗತ್ತಿಗಳು (ಶಿಲೆಯಿಂದ ಮಾಡಲ್ಪಟ್ಟಿರುವ) ಪೂರ್ವ ಶಿಲಾಯುಗದ 'ಕೈ-ಕೊಡಲಿ' ಸಂಸ್ಕೃತಿಯ ಇರುವಿಕೆಗೆ ಸಾಕ್ಷಿಯಾಗಿವೆ. ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ಸಂಸ್ಕೃತಿಯ ಕುರುಹುಗಳು ಕೂಡ ಕರ್ನಾಟಕದಲ್ಲಿ ದೊರೆತಿವೆ. ಹರಪ್ಪದಲ್ಲಿ ಭೂ ಶೋಧನೆಯಿಂದ ದೊರೆತಿರುವ ಚಿನ್ನವು ಕರ್ನಾಟಕದ ಗಣಿಗಳಿಂದ ಆಮದು ಮಾಡಲ್ಪಟ್ಟಿರುವ ವಿಚಾರದಿಂದ ವಿದ್ವಾಂಸರು **ಕ್ರಿ.ಪೂ.2000ದಲ್ಲೆ** ಕರ್ನಾಟಕ ಮತ್ತು ಸಿಂಧೂ ಕಣಿವೆ ನಾಗರೀಕತೆ ನಡುವೆ ಸಂಬಂಧಗಳಿದ್ದವೆಂದು ಪ್ರತಿಪಾದಿಸಿದ್ದಾರೆ. ಕ್ರಿ. ಪೂ. 200ಕ್ಕಿಂತ ಮೊದಲು, ಕರ್ನಾಟಕದ ಬಹುಪಾಲು ಭಾಗ **ಸಾಮ್ರಾಟ್ ಅಶೋಕನ "ಮೌರ್ಯ" ಸಾಮ್ರಾಜ್ಯ**ದ ಭಾಗವಾಗಿತ್ತು. ತದನಂತರ ನಾಲ್ಕು ಶತಮಾನಗಳ ಕಾಲ **ಶಾತವಾಹನರು** ಕರ್ನಾಟಕದ ಬಹುಪಾಲು ಭಾಗವನ್ನಾಳಿದರು. ಶಾತವಾಹನರ ಅವನತಿಯು ಪ್ರಪ್ರಥಮ ಪ್ರಾದೇಶಿಕ (ಕನ್ನಡ) ಸಾಮ್ರಾಜ್ಯಗಳಾದ "**ಕದಂಬ**" ಮತ್ತು "**ಪಶ್ಚಿಮ ಗಂಗ**" ಸಾಮ್ರಾಜ್ಯಗಳ ಉಗಮಕ್ಕೆ ನಾಂದಿಯಾಯಿತು. **ಕದಂಬ ಸಾಮ್ರಾಜ್ಯವು ಮಯೂರ ವರ್ಮ**ನಿಂದ ಸ್ಥಾಪಿಸಲ್ಪಟ್ಟಿತು. ಅದರ ರಾಜಧಾನಿ ಬನವಾಸಿಯಾಗಿತ್ತು. ತಲಕಾಡು ಪಶ್ಚಿಮ **ಗಂಗ ಸಾಮ್ರಾಜ್ಯದ** ರಾಜಧಾನಿಯಾಗಿತ್ತು. ಈ ಸಾಮ್ರಾಜ್ಯಗಳು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಉಪಯೋಗಿಸಿದ ಸಾಮ್ರಾಜ್ಯಗಳಲ್ಲಿ ಮೊದಲನೆಯವು. **ಹಲ್ಮಿಡಿ ಶಾಸನ** ಮತ್ತು ಬನವಾಸಿಯಲ್ಲಿ ದೊರೆತ ಐದನೆಯ ಶತಮಾನದ ತಾಮ್ರದ ನಾಣ್ಯವು ಇದಕ್ಕೆ ಸಾಕ್ಷಿಯಾಗಿವೆ.

ರಾಷ್ಟ್ರಕೂಟರು ಮತ್ತು **ಹೊಯ್ಸಳರ** ಕಾಲದಲ್ಲಿ ಸಾಹಿತ್ಯ ಮತ್ತು ವಾಸ್ತುಶಿಲ್ಪ ಉಚ್ಚ್ರಾಯ ಸ್ಥಿತಿಯನ್ನು ತಲುಪಿದವು. ಇದು ವಿಶಿಷ್ಟ ಕನ್ನಡ ಕಾವ್ಯ ಶೈಲಿಗಳ ಉದಯಕ್ಕೆ ಕಾರಣವಾಯಿತು. ಹೊಯ್ಸಳರ ಕಾಲದ ದೇಗುಲಗಳು ಮತ್ತು ಶಿಲ್ಪಗಳನ್ನು ವೇಸರ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿದೆ. 14ನೆಯ ಶತಮಾನದ ಆದಿಯಲ್ಲಿ "**ಹರಿಹರ**" ಮತ್ತು "**ಬುಕ್ಕರಾಯ" ವಿಜಯನಗರ ಸಾಮ್ರಾಜ್ಯ**ವನ್ನು ತುಂಗಾ ನದಿ ತೀರದಲ್ಲಿ ಸ್ಥಾಪಿಸಿದರು. "**ಹಂಪಿ**" ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ವಿಜಯನಗರ ಸಾಮ್ರಾಜ್ಯದ ಪತನ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಭಾರಿ ಬದಲಾವಣೆ ತಂದಿತು. **ಬಹಮನಿ ಸುಲ್ತಾನ**ರ ಪತನಾನಂತರ ವಿಜಯಪುರದ ಸುಲ್ತಾನರು ಪ್ರಾಬಲ್ಯಕ್ಕೆ ಬಂದು, ದಖನ್ ಪ್ರದೇಶವನ್ನು ಆಳಿದರು. ಬಹಮನಿ ಮತ್ತು **ವಿಜಯಪುರದ ಸುಲ್ತಾನರು** ಉರ್ದು ಹಾಗೂ ಪರ್ಷಿಯನ್ ಸಾಹಿತ್ಯ ಮತ್ತು ಇಂಡೋ-ಸಾರ್ಸೆನಿಕ್ ವಾಸ್ತುಶಿಲ್ಪವನ್ನು ಪ್ರೋತ್ಸಾಹಿಸಿದರು. ತದನಂತರದ ತನ್ನ ಅವಧಿಯಲ್ಲಿ, ಉತ್ತರ ಕರ್ನಾಟಕದ ಕೆಲವು ಪ್ರದೇಶಗಳನ್ನು **ಹೈದರಾಬಾದಿನ ನಿಜಾಮರು**, ಬ್ರಿಟೀಷರು ಹಾಗೂ ಅನ್ಯ ರಾಜರು ಆಳಿದರು. ದಕ್ಷಿಣದಲ್ಲಿ **ಮೈಸೂರು**

**ರಾಜಮನೆತನದವರು** (ವಿಜಯನಗರ ಸಾಮ್ರಾಜ್ಯದ ಸಾಮಂತರಸರು) ಕೆಲಕಾಲ ಸ್ವತಂತ್ರವಾಗಿ ಆಳ್ವಿಕೆ ನಡೆಸುತ್ತಿದ್ದರು. ಎರಡನೆಯ ಕೃಷ್ಣರಾಜ ಒಡೆಯರ್ ಅವರ ಮರಣಾನಂತರ ಮೈಸೂರಿನ ಸೇನಾಧಿಪತಿಯಾಗಿದ್ದ **ಹೈದರ್ ಅಲಿಯು** ಆಡಳಿತವನ್ನು ತೆಕ್ಕೆಗೆ ತೆಗೆದುಕೊಂಡನು. ಹೈದರ್ ಅಲಿಯ ನಿಧನಾನಂತರ, ಅವನ ಪುತ್ರನಾದ **ಟಿಪ್ಪು ಸುಲ್ತಾನನು** ಮೈಸೂರನ್ನು ಆಳಿದನು.

ಭಾರತಾದ್ಯಂತ ಬ್ರಿಟೀಷರ **"ದತ್ತು ಮಕ್ಕಳಿಗೆ ಹಕ್ಕಿಲ್ಲ"** ರಾಜನೀತಿಯ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದ ಕಾಲದಲ್ಲಿ, ಕರ್ನಾಟಕದಲ್ಲಿ **ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ** ಮುಂತಾದವರು 1830ರಲ್ಲಿ ಅಂದರೆ 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸುಮಾರು 3 ದಶಕಗಳ ಹಿಂದೆಯೇ ಬ್ರಿಟೀಷರ ವಿರುದ್ಧ ದಂಗೆಯೆದ್ದರು. ತದನಂತರ ಸೂಪ, ಬಾಗಲಕೋಟೆ, ಸುರಪುರ, ನರಗುಂದ ಹಾಗು ದಾಂಡೇಲಿ ಹೀಗೆ ಹಲವೆಡೆಗಳಲ್ಲಿ ದಂಗೆಗಳು ನಡೆಯಿತು. **1857ರ ಸ್ವಾತಂತ್ರ್ಯ ಸಂಗ್ರಾಮದ** ಕಾಲದಲ್ಲಿ ನಡೆದ ದಂಗೆಗಳನ್ನು ಮುಂಡರಗಿ ಭೀಮರಾವ್, ಭಾಸ್ಕರ ರಾವ್ ಭಾವೆ, ಹಲಗಲಿ ಬೇಡರು, ವೆಂಕಟಪ್ಪ ನಾಯಕ ಮುಂತಾದವರು ಮುನ್ನಡೆಸಿದರು. **19ನೆಯ ಶತಮಾನದ ಅಂತ್ಯದಲ್ಲಿ ಸ್ವಾತಂತ್ರ್ಯ ಚಳವಳಿಯು ತೀವ್ರವಾಯಿತು. ಕಾರ್ನಾಡ ಸದಾಶಿವರಾವ್, ಆಲೂರು ವೆಂಕಟರಾಯರು, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ನಿಟ್ಟೂರು ಶ್ರೀನಿವಾಸರಾವ್ ಮುಂತಾದವರು ೨೦ನೆಯ ಶತಮಾನದ ಪೂರ್ವಾರ್ಧದವರೆಗೂ ಸ್ವಾತಂತ್ರ್ಯ ಹೋರಾಟವನ್ನು ಮುಂದುವರೆಸಿಕೊಂಡು ಬಂದರು.** 1947 ರವರೆಗೆ ಕನ್ನಡ ನಾಡು ಮತ್ತು ಕನ್ನಡಿಗರು ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ಹಲವಾರು ಘಟನೆಗಳು ಕರ್ನಾಟಕದಲ್ಲಿ ಜರುಗಿದವು.

## ಕರ್ನಾಟಕ ರಾಜ್ಯದ ಉದಯ

ಭಾರತದ ಸ್ವಾತಂತ್ರ್ಯದ ನಂತರ ಮೈಸೂರು ಸಂಸ್ಥಾನ ಭಾರತದ ಒಕ್ಕೂಟವನ್ನು ಸೇರಿತು. ಮೈಸೂರು ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ "ರಾಜಪ್ರಮುಖ"ರಾದರು. ಈ ಮನೆತನದ ಸದಸ್ಯರು ಈಗಲೂ ಮೈಸೂರು ಅರಮನೆಯ ಒಂದು ಭಾಗದಲ್ಲಿ ವಾಸವಾಗಿದ್ದಾರೆ.

ಏಕೀಕರಣ ಚಳವಳಿಯ ಬಹುಕಾಲದ ಬೇಡಿಕೆಯ ಮೇರೆಗೆ **ನವೆಂಬರ್ 1, 1956** ರಂದು ರಾಜ್ಯ ಪುನರ್ ರಚನಾ ಕಾಯಿದೆಗೆ ಅನುಸಾರವಾಗಿ ಮೈಸೂರು ರಾಜ್ಯಕ್ಕೆ ಕೊಡಗು ರಾಜ್ಯ ಹಾಗೂ ಸುತ್ತಲ ಮದರಾಸು, ಹೈದರಾಬಾದ್, ಮತ್ತು ಬಾಂಬೆ ರಾಜ್ಯಗಳ ಕನ್ನಡ-ಪ್ರಧಾನ ಪ್ರದೇಶಗಳು ಸೇರಿಸಿ ಏಕೀಕೃತ **"ವಿಶಾಲ ಮೈಸೂರು"** ಅಸ್ತಿತ್ವಕ್ಕೆ ಬಂದಿತು. **ನವೆಂಬರ್ 1 1973** ರಲ್ಲಿ ರಾಜ್ಯದ ಹೆಸರನ್ನು **ಕರ್ನಾಟಕ** ಎಂದು ಪುನರ್ ನಾಮಕರಣ ಮಾಡಲಾಯಿತು.

## ಕನ್ನಡ ಸಾಹಿತ್ಯ ಚರಿತ್ರೆ

ಕನ್ನಡ ಸಾಹಿತ್ಯ ಚರಿತ್ರೆಯು ಒಂದು ವಿಭಿನ್ನವಾದ ಮತ್ತು ವಿಶೇಷವಾದ ಹಿನ್ನೆಲೆಯನ್ನು ಹೊಂದಿದೆ. ಕನ್ನಡ ಸಾಹಿತ್ಯವು ಶ್ರೇಷ್ಠ ಕವಿಗಳ ಪರಂಪರೆಯನ್ನೇ ಹೊಂದಿದೆ. **ಆದಿಕವಿ ಪಂಪ** ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಎತ್ತರದ ಸ್ಥಾನದಲ್ಲಿ ನಿಲ್ಲುತ್ತಾನೆ. ಪಂಪ, ರನ್ನ, ಜನ್ನ, ರಾಘವಾಂಕ, ಹರಿಹರ, ಕುಮಾರವ್ಯಾಸ ಲಕ್ಷ್ಮೀಶ, ರತ್ನಾಕರವರ್ಣಿ ಮೊದಲಾದವರು ಅತ್ಯಂತ ಶ್ರೇಷ್ಠ ಕನ್ನಡದ ಪ್ರಾಚೀನ ಕವಿಗಳೆಂದು ಗುರುತಿಸಲ್ಪಟ್ಟಿದ್ದಾರೆ. ಇವರು ಬರೆದಿರುವ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಒಂದು ಭದ್ರ ಬುನಾದಿಯನ್ನು ಹಾಕಿಕೊಟ್ಟಿದೆ. ಇಂದಿಗೂ ಸಹ ಪಂಪ, ರನ್ನ ಮತ್ತು ಕುಮಾರವ್ಯಾಸ ಇವರುಗಳು ಬರೆದ ಸಾಹಿತ್ಯವನ್ನು ಸ್ಮರಿಸಿಕೊಳ್ಳುತ್ತಾ ಆಧುನಿಕ ಸಾಹಿತ್ಯವನ್ನು ಗಮನಿಸುತ್ತೇವೆ. ಕನ್ನಡ ಸಾಹಿತ್ಯದಲ್ಲಿ **ವಚನ ಸಾಹಿತ್ಯವು** ನಂತರದ ದಿನಗಳಲ್ಲಿ ರೂಪುಗೊಂಡಿದ್ದರೂ ಜಾಗತಿಕ ಸಾಹಿತ್ಯದಲ್ಲಿ ವಿಶೇಷವಾದ ಸ್ಥಾನಮಾನವನ್ನು ಪಡೆದುಕೊಂಡಿದೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಜೇಡರ ದಾಸಿಮಯ್ಯ, ಆಯ್ದಕ್ಕಿ ಲಕ್ಕಮ್ಮ ಇವರುಗಳು ಕಾಯಕವನ್ನು ಪ್ರಧಾನವಾಗಿಟ್ಟುಕೊಂಡು ಜೀವನವನ್ನು ಸಾಮಾನ್ಯರಂತೆ ಬದುಕಿ ಅದ್ಭುತ ವೈಚಾರಿಕ ಬದುಕಿನೊಂದಿಗೆ ಶರಣ ಸಾಹಿತ್ಯವನ್ನು ಸೃಷ್ಟಿ ಮಾಡಿದ್ದಾರೆ. ಶರಣ ಸಾಹಿತ್ಯ ಸರಳ ಮತ್ತು ಸ್ಪಷ್ಟತೆಯಿಂದ ಕೂಡಿರುವ ಸಾಹಿತ್ಯವಾಗಿದೆ.

ನಂತರದ ದಿನಗಳಲ್ಲಿ **ದಾಸ ಸಾಹಿತ್ಯ ಮತ್ತು ತ್ರಿಪದಿ ಸಾಹಿತ್ಯ** ರಚನೆಗೊಂಡಿದೆ. ಜನರ ಆಡು ಭಾಷೆಯನ್ನೇ ಸಾಹಿತ್ಯದ ಭಾಷೆಯನ್ನಾಗಿ ಮಾರ್ಪಡಿಸಿಕೊಂಡು ಜನರಿಗೆ ಅರ್ಥವಾಗುವಂತೆ ವೈಚಾರಿಕ ವಿಚಾರಗಳನ್ನು ಜನರ ತಪ್ಪು-ಒಪ್ಪುಗಳನ್ನು ತಿಳಿಸಿದರು. ದಾಸ ಸಾಹಿತ್ಯದ ಕನಕದಾಸರು ಮತ್ತು ಪುರಂದರದಾಸರು. ಸಮಾಜದ ಲೋಪಗಳನ್ನು ಕಟುವಾಗಿ ವಿಮರ್ಶಿಸಿದರು ಮತ್ತು ವಿಶ್ಲೇಷಿಸಿದರು. ಕನ್ನಡ ನಾಡು ಕಂಡ ಶ್ರೇಷ್ಠ ಕವಿ 'ಸರ್ವಜ್ಞ'ನಿಗೂ ಕೂಡ ವಿಶೇಷ ಸ್ಥಾನ ನೀಡಲಾಗಿದೆ.

ಜಾಗತಿಕ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಕನ್ನಡದ ಸಾಹಿತ್ಯ ಪ್ರಕಾರಗಳೆಂದರೆ ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು **ಸರ್ವಜ್ಞನ ತ್ರಿಪದಿಗಳು** ಹಾಗೂ ಕೀರ್ತನೆಗಳು. ಈ ಸಾಹಿತ್ಯ ಪ್ರಕಾರಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಲು ಕಾರಣ ಇವರು ಬಳಸಿದ ಭಾಷೆ. ಸಾಹಿತ್ಯದಲ್ಲಿ ಸಾಮಾನ್ಯ ಜನರ ಬದುಕಿನ ಅನಾವರಣ, ವಿಮರ್ಶೆಗಳು ಮತ್ತು ವಿಶ್ಲೇಷಣೆಗಳು ಈ ಎಲ್ಲಾ ವಿಚಾರಗಳನ್ನು ಸಮಾಜಕ್ಕೆ ಮತ್ತು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ತಲುಪಿಸಿದರು.

**ಆಧುನಿಕ ಕನ್ನಡ ಸಾಹಿತ್ಯ** ಇಂದು ಪ್ರಬುzÀÞವಾಗಿ ಬೆಳೆದಿದೆ. ಕನ್ನಡ ಸಾಹಿತ್ಯವು ಒಟ್ಟು **ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು** ಪಡೆದುಕೊಂಡಿದೆ. ಪ್ರಾದೇಶಿಕ ಭಾಷೆಗಳಲ್ಲಿ ಹಿಂದಿ ಭಾಷೆಯನ್ನು ಬಿಟ್ಟರೆ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಭಾಷೆ ಕನ್ನಡ. ಬಿ. ಎಂ. ಶ್ರೀಕಂಠಯ್ಯ, ಗೋವಿಂದ ಪೈ, ಕುವೆಂಪು, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಅ. ನ. ಕೃಷ್ಣರಾಯರು ಗೋಪಾಲಕೃಷ್ಣ ಅಡಿಗರು, ಡಿ. ವಿ. ಗುಂಡಪ್ಪನವರು, ವಿ. ಕೃ. ಗೋಕಾಕ್, ಯು. ಆರ್. ಅನಂತಮೂರ್ತಿ, ಗಿರೀಶ್

VTU BSc ಸಾಹಿತ್ಯ ಸಿಂಚನ 21KSS27 Draft Copy

ಕಾರ್ನಾಡ್, ಡಾ. ಚಂದ್ರಶೇಖರ ಕಂಬಾರ, ಜಿ. ಎಸ್. ಶಿವರುದ್ರಪ್ಪ, ಎಸ್. ಎಲ್. ಭೈರಪ್ಪ, ಸಿದ್ದಲಿಂಗಯ್ಯ, ದೇವನೂರು ಮಹಾದೇವ ಮೊದಲಾದವರು ಕನ್ನಡದ ಶ್ರೇಷ್ಠ ಆಧುನಿಕ ಕವಿಗಳು ಮತ್ತು ಬರಹಗಾರರಾಗಿದ್ದಾರೆ. ಇವರ ಸಾಹಿತ್ಯವು ಇತ್ತೀಚಿನ ಕಾಲಘಟ್ಟದ ಸಂವೇದನೆಗೆ ಪೂರಕವಾಗಿ ರಚನೆಗೊಂಡಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

1. ಕರ್ನಾಟಕವು ಭಾರತ ದೇಶದ ಎಷ್ಟನೇ ಅತಿ ದೊಡ್ಡ ರಾಜ್ಯವಾಗಿದೆ?
   1. ಐದನೇ
   2. ಎಂಟನೇ
   3. ಆರನೇ
   4. ಏಳನೇ
2. ಕನ್ನಡ ಭಾಷೆಗೆ ಇಲ್ಲಿಯವರೆಗೆ ಎಷ್ಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ?
   1. 6
   2. 8
   3. 10
   4. 5

2. ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಯಾವ ವರ್ಷದಲ್ಲಿ ಮರುನಾಮಕರಣ ಮಾಡಲಾಯಿತು?
   1. 1950
   2. 1956
   3. 1971
   4. 1973
3. ಕ್ರಿಸ್ತಪೂರ್ವದಲ್ಲಿ ಕರ್ನಾಟಕವನ್ನು ಆಳಿದ ಮೌರ್ಯ ಸಾಮ್ರಾಜ್ಯದ ರಾಜ ಯಾರು?

21KSS27 Draft copy
VTU BSc ಸಾಹಿತ್ಯ ಸಿಂಚನ

1. ಇಮ್ಮಡಿ ಪುಲಕೇಶಿ
2. ಹರ್ಷವರ್ಧನ
3. ಅಶೋಕ
4. ಕೃಷ್ಣದೇವರಾಯ

4. ಮಯೂರವರ್ಮನು ಯಾವ ರಾಜವಂಶದ ರಾಜನಾಗಿದ್ದನು?

1. ಶಾತವಾಹನರು
2. ಕದಂಬರು
3. ಗಂಗರು
4. ರಾಷ್ಟ್ರಕೂಟರು

5. ಕನ್ನಡದ ಮೊದಲ ಶಿಲಾಶಾಸನ ಯಾವುದು?

1. ಕಪ್ಪೆ ಅರೆಭಟ್ಟನ ಶಿಲಾಶಾಸನ
2. ಶ್ರವಣಬೆಳಗೊಳದ ಶಿಲಾಶಾಸನ
3. ಹಲ್ಮಿಡಿ ಶಿಲಾಶಾಸನ
4. ಪಟ್ಟದಕಲ್ಲು ಶಿಲಾಶಾಸನ

6. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾವುದಾಗಿತ್ತು?

1. ಹಂಪೆ
2. ಬನವಾಸಿ
3. ಬೇಲೂರು
4. ತಲಕಾಡು

21KSS27 Draft Copy
VTU BSc ಸಾಹಿತ್ಯ ಸಿಂಚನ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

೧ ಕರ್ನಾಟಕ ಎಂಬ ಪದದ ಅರ್ಥವನ್ನು ವಿವರಿಸಿ?

೨. ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಯಾವ ವರ್ಷದಲ್ಲಿ ಮರುನಾಮಕರಣ ಮಾಡಲಾಯಿತು ?

೩. ಕರ್ನಾಟಕವನ್ನು ಆಳಿದ ಪ್ರಮುಖ ರಾಜವಂಶಗಳ ಹೆಸರುಗಳನ್ನು ಬರೆಯಿರಿ?

4 ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಕರ್ನಾಟಕದ ಮಹನೀಯರುಗಳ ಹೆಸರುಗಳನ್ನು ಬರೆಯಿರಿ ?

5. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಹೆಸರುಗಳನ್ನು ಬರೆಯಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

೧. ಕರ್ನಾಟಕ ರಾಜ್ಯದ ಉದಯವನ್ನು ಕುರಿತು ಬರೆಯಿರಿ.

೨. ಕರ್ನಾಟಕ ರಾಜ್ಯವನ್ನು ಆಳಿದ ರಾಜವಂಶಗಳ ಕೊಡುಗೆಯೇನು? ವಿವರಿಸಿ.

3. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಕನ್ನಡದ ಪ್ರಮುಖ ನಾಯಕರುಗಳ ಹೆಸರುಗಳನ್ನು ಬರೆಯಿರಿ.

4. ಕರ್ನಾಟಕ ಎಂಬ ಪದದ ಅರ್ಥವನ್ನು ವಿವರಿಸಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ – ಎರಡು

# ಕನ್ನಡ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆ

" ನಡೆವವರು ಎಡವದೆ ಕುಳಿತವರು ಎಡವುತ್ತಾರೆಯೆ?"

------------------------

-ರಾಘವಾಂಕ

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ – ಎರಡು

# ಕನ್ನಡ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆ

## ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಕಾಲಘಟ್ಟಗಳು:

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕ್ರಿಸ್ತಪೂರ್ವದಿಂದ ಪ್ರಸ್ತುತ ಸನ್ನಿವೇಶದವರೆಗೆ ವಿವಿಧ ಆಯಾಮಗಳಲ್ಲಿ ಮತ್ತು ಜಾಗತಿಕ ಸಾಹಿತ್ಯದೊಡನೆ ಸಮೀಕರಿಸಿ ಮತ್ತು ಇದನ್ನು ಶಾಸ್ತ್ರೀಯ ಸಾಹಿತ್ಯ ಚರಿತ್ರೆಯಾಗಿ ನೋಡಬಹುದು. ಒಂದೊಂದು ಕಾಲಘಟ್ಟದಲ್ಲಿ ಆಡಳಿತ, ಸಾಮಾಜಿಕ, ಸನ್ನಿವೇಶಗಳು ಮತ್ತು ಸಂಸ್ಕೃತಿಯಲ್ಲಿ ಆದಂತಹ ಪ್ರಭಾವಗಳನ್ನು ಒಳಗೊಂಡಂತೆ ಪ್ರತಿ ಕಾಲಘಟ್ಟದ ಸಾಹಿತ್ಯ ವಿಶೇಷ ಮತ್ತು ವೈಶಿಷ್ಟ್ಯತೆಗಳಿಂದ ಶ್ರೀಮಂತವಾಗಿರುವುದನ್ನು ಕಾಣಬಹುದು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಮುಖವಾಗಿ 4 ಹಂತಗಳಲ್ಲಿ ವಿಭಾಗಿಸಿ ಅಧ್ಯಯನ ಮಾಡಲಾಗುತ್ತದೆ. ಈ ವಿಂಗಡನೆಯು ಅಂತಿಮವಾದದ್ದು ಅಲ್ಲ, ಕಾರಣ ಹಲವಾರು ಭಾಷಾ ವಿದ್ವಾಂಸರುಗಳು ಮತ್ತು ಸಾಹಿತ್ಯ ಪರಿಣಿತರು ಕಾಲಘಟ್ಟಗಳನ್ನು ಒಂದೊಂದು ರೀತಿಯಲ್ಲಿ ತಮ್ಮ ಉದ್ಗ್ರಂಥಗಳಲ್ಲಿ ವಿವರಿಸಿರುವುದನ್ನು ಕಾಣುತ್ತೇವೆ.

**ಪ್ರಮುಖ ಕಾಲಘಟ್ಟಗಳೆಂದರೆ,**

೧. ಪೂರ್ವದ ಹಳಗನ್ನಡ ಸಾಹಿತ್ಯ ಚರಿತ್ರೆ
೨. ಹಳೆಗನ್ನಡ ಸಾಹಿತ್ಯ ಚರಿತ್ರೆ
೩. ನಡುಗನ್ನಡ ಸಾಹಿತ್ಯ ಚರಿತ್ರೆ
೪. ಹೊಸಗನ್ನಡ ಸಾಹಿತ್ಯ ಚರಿತ್ರೆ

## ೧. ಪೂರ್ವದ ಹಳಗನ್ನಡ ಸಾಹಿತ್ಯ ಚರಿತ್ರೆ

ಪೂರ್ವದ ಹಳಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಾರಂಭದಿಂದ ಆದಿಕವಿ ಮತ್ತು ಪ್ರಮುಖ ಕವಿಯೆಂದು ಹೆಸರಾದ ಪಂಪನವರೆಗಿನ ಎಲ್ಲಾ ಸಾಹಿತ್ಯವು ಸೇರುತ್ತದೆ. ಈ ಕಾಲಘಟ್ಟದ 'ಕವಿರಾಜಮಾರ್ಗ'ವು ಕನ್ನಡದ ಮೊದಲ 'ಲಕ್ಷಣ

VTU BSc ಸಾಹಿತ್ಯ ಸಿಂಚನ 21KSS27 Draft copy

ಗ್ರಂಥ'ವಾಗಿದೆ. ಈ ಕಾಲಘಟ್ಟದ ಸಾಹಿತ್ಯವನ್ನು 'ಪಂಪ ಪೂರ್ವ ಯುಗದ ಸಾಹಿತ್ಯ' ಎಂದು ಸಹ ಕರೆಯಲಾಗುತ್ತದೆ. ಕಾರಣ ಪಂಪನು ತನ್ನ ಎರಡು ಗ್ರಂಥಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಕುರಿತು ಮಾತನಾಡುವಾಗ **"ಮುನ್ನಿನ ಕಬ್ಬ ಮನ್ನೆಲ್ಲಮಂ ಇಕ್ಕಿ ಮೆಟ್ಟಿದವು ಸಮಸ್ತ ಭಾರತಮಂ ಮುಂ ಪೇಳ್ದದ ಕವೀಶ್ವರರಿಲ್ಲ"** ಎಂಬ ಈ ಮಾತು ಆದಿಕವಿ ಪಂಪನಿಗಿಂತ ಮೊದಲು ಕನ್ನಡ ನಾಡಿನಲ್ಲಿ ಸಾಹಿತ್ಯರಚನೆ ಇತ್ತು ಎಂದು ಕಂಡುಬರುತ್ತದೆ . ಇದಕ್ಕೆ ಪೂರಕವಾಗಿ ನೋಡಬಹುದಾದ ಮತ್ತೊಂದು ಅಂಶವೆಂದರೆ ಕವಿರಾಜಮಾರ್ಗದಲ್ಲಿ ಕವಿರಾಜಮಾರ್ಗಕಾರನು ಕನ್ನಡದ ಕವಿಗಳನ್ನು " **ಪೂರ್ವಾಚಾರ್ಯರು ಚಿಂತನಾಚಾರ್ಯರು**" ಎಂದು ಕರೆದಿದ್ದಾನೆ. ಪಂಪ ಪೂರ್ವ ಯುಗದಲ್ಲಿ ಶಿವಕೋಟ್ಯಾಚಾರ್ಯರ ವಡ್ಡಾರಾಧನೆ'ಯು ಮಹತ್ವದ ಕೃತಿಯಾಗಿದೆ. ಎಂಟನೇ ಶತಮಾನದಲ್ಲಿ ಗುಣನಂದಿ, ಗುಣವರ್ಮ ಇವರುಗಳು ಪಂಪನಿಗಿಂತ ಮೊದಲೇ ಕನ್ನಡ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದ ಕವಿಗಳು ಎಂದು ಕಂಡುಬರುತ್ತದೆ. ಈ ಮೇಲಿನ ಎಲ್ಲಾ ಸಾಹಿತ್ಯದ ಅಂಶಗಳನ್ನು ಗಮನಿಸಿದಾಗ ಕನ್ನಡ ಸಾಹಿತ್ಯವು ಪಂಪ ಪೂರ್ವ ಯುಗದಲ್ಲಿ ಅಸ್ತಿತ್ವದಲ್ಲಿದ್ದು, ಗ್ರಂಥ ರಚನೆಯ ರೂಪವನ್ನು ಪಡೆದುಕೊಂಡಿತ್ತು ಎಂದು ದಾಖಲೆಗಳ ಸಮೇತವಾಗಿ ಮತ್ತು ಕನ್ನಡನಾಡಿನ ಹಲವಾರು ವಿಷಯಗಳ ಪ್ರಸ್ತಾಪದ ಮುಖಾಂತರ ತಿಳಿದುಬರುತ್ತದೆ.

21KSS27 Draft Copy

## ೨. ಹಳೆಗನ್ನಡ ಸಾಹಿತ್ಯ ಚರಿತ್ರೆ

VTU BSc ಸಾಹಿತ್ಯ ಸಿಂಚನ

ಹಳೆಗನ್ನಡ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಮುಖ ಕವಿಗಳಾದ ಪಂಪ ಮತ್ತು ಪೊನ್ನ, ರನ್ನ ಮತ್ತು ಜನ್ನ ಇವರುಗಳನ್ನು ಒಳಗೊಂಡಂತೆ ಸಮಗ್ರವಾಗಿ ನೋಡಲಾಗುತ್ತದೆ. ಆದಿಕವಿ ಪಂಪನು ಚಾಲುಕ್ಯರ ಅರಿಕೇಸರಿ ಆಸ್ಥಾನದಲ್ಲಿ 'ಕವಿಯು' ಮತ್ತು 'ಕಲಿಯು' ಆಗಿದ್ದನು. ಪಂಪನ ಆದಿಪುರಾಣವು ಧಾರ್ಮಿಕ ಮತ್ತು ಅಲೌಕಿಕ ಕೃತಿಯಾಗಿದ್ದು, ವಿಕ್ರಮಾರ್ಜುನ ವಿಜಯ ಲೌಕಿಕ ಕೃತಿಯಾಗಿದೆ. ಪಂಪನ ವಿಕ್ರಮಾರ್ಜುನ ವಿಜಯಕ್ಕೆ ಮಹರ್ಷಿ ವ್ಯಾಸರಿಂದ ರಚಿಸಲ್ಪಟ್ಟಿರುವ ಮಹಾಭಾರತ ಆಕರ ಕೃತಿಯಾಗಿದೆ. ಆದಿಪುರಾಣಕ್ಕೆ ಜಿನಸೇನಾಚಾರ್ಯರ ಪೂರ್ವಪುರಾಣ ಆಕರ ಗ್ರಂಥವಾಗಿದೆ. ಈ ಕಾಲಘಟ್ಟದಲ್ಲಿ ಮತ್ತೊಬ್ಬ ಜೈನಕವಿಯಾದ ಪೊನ್ನನು ಪ್ರಮುಖನಾಗಿದ್ದಾನೆ. ಸಾಹಸಭೀಮವಿಜಯದ (ಗದಾಯುzÀÞದ) ಮುಖಾಂತರ ಕವಿ ರನ್ನ 'ಶಕ್ತಿ ಕವಿ'ಯಾಗಿ ಮೂಡಿಬಂದಿದ್ದಾನೆ. ಇಡೀ ಮಹಾಭಾರತವನ್ನು ಸಿಂಹಾವಲೋಕನ ಮಾಡಿರುವುದನ್ನು ರನ್ನನ ಕೃತಿಯ ಕಾಣಬಹುದು. ಕವಿ ಪಂಪನ ಹಾಗೆ ರನ್ನನ ಅಜಿತನಾಥಪುರಾಣವು ಒಂದು ಧಾರ್ಮಿಕ ಕೃತಿಯಾಗಿದೆ. ಈ ಕಾಲಘಟ್ಟದಲ್ಲಿ 'ಒಂದನೇ ನಾಗವರ್ಮ' 'ಕರ್ಣಾಟಕ ಕಾದಂಬರಿ' ಮತ್ತು 'ಛಂದೋಂಬುಧಿ' ಕೃತಿಗಳನ್ನು ರಚಿಸಿದ್ದಾನೆ. ಹಾಗೆಯೇ ಶ್ರೀಧರಾಚಾರ್ಯನ ಜಾತಕತಿಲಕ ಜ್ಯೋತಿಷ್ಯ ಗ್ರಂಥವನ್ನು ಕಾಣಬಹುದು. ಈ

ಸಮಯದಲ್ಲಿ ಹೊಯ್ಸಳರ ಸಾಮ್ರಾಟ ಒಂದನೇ ವೀರಬಲ್ಲಾಳನ ಆ¸ÁÜನದಲ್ಲಿದ್ದ 'ನಾಗಚಂದ್ರ ' ರಾಮ ಚಂದ್ರ ಚರಿತಪುರಾಣ ಮತ್ತು ಮಲ್ಲಿನಾಥ ಪುರಾಣ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ, ಈ ಎರಡು ಕೃತಿಗಳು ಪ್ರಮುಖವಾಗಿ ಧಾರ್ಮಿಕ ಕಾವ್ಯಗಳಾಗಿವೆ.

## ೩. ನಡುಗನ್ನಡ ಸಾಹಿತ್ಯ ಚರಿತ್ರೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡುಗನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟವು ಸುಮಾರು 12ನೇ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ವಿವಿಧ ಹಂತಗಳಲ್ಲಿ ಮತ್ತು ವಿವಿಧ ಸಾಹಿತ್ಯ ರೂಪಗಳಲ್ಲಿ ಕಂಡುಬರುತ್ತದೆ. ವಚನ ಸಾಹಿತ್ಯ, ಗದ್ಯ-ಪದ್ಯ ಸಾಹಿತ್ಯ ಪರಂಪರೆ, ಷಟ್ಪದಿ, ರಗಳೆ, ತ್ರಿಪದಿ ಮತ್ತು ಸಾಂಗತ್ಯ, ಕೀರ್ತನೆಗಳು, ಜಾನಪದ ಸಾಹಿತ್ಯ ಮತ್ತು ತತ್ವ ಪದಗಳು ಈ ರೀತಿಯಾಗಿ ಹಲವಾರು ರೀತಿಯ ಸಾಹಿತ್ಯರಚನೆಯ ಪರಂಪರೆ ಮತ್ತು ಸಂಸ್ಕೃತಿಯನ್ನು ನಾವಿಲ್ಲಿ ಕಾಣುತ್ತೇವೆ. ಈ ಕಾಲಘಟ್ಟದ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯವು ಜಗತ್ತಿನ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದುದಾಗಿವೆ. ನಡುಗನ್ನಡ ಸಾಹಿತ್ಯ ಚರಿತ್ರೆಯನ್ನು ಮತ್ತು ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಯನ್ನು ವಚನ ಸಾಹಿತ್ಯದಿಂದ ಮೊದಲ್ಗೊಂಡು ಮೈಸೂರು ಒಡೆಯರ ಕಾಲದವರೆಗಿನ (ಮುದ್ದಣನವರಿಗೆ ) ಅಂದರೆ ಆಧುನಿಕ ಸಾಹಿತ್ಯದ ಆರಂಭದ ಕಾಲದ ವರೆಗೆ ನೋಡುತ್ತೇವೆ. ಈ ಕಾಲಘಟ್ಟದಲ್ಲಿ ದಾಸ ಸಾಹಿತ್ಯ, ಕೀರ್ತನೆಗಳು ಮತ್ತು ತತ್ವಪದಗಳಲ್ಲಿ ಮನುಷ್ಯ ಮತ್ತು ಅವನ ಸಂಬಂಧ, ಬದುಕಿನ ಮೌಲ್ಯಗಳು, ಮಾನವ ಮತ್ತು ಪರಿಸರ, ಲೌಕಿಕ ಮತ್ತು ಅಲೌಕಿಕ, ಧಾರ್ಮಿಕ ಮತ್ತು ಸಾಮಾಜಿಕ, ಬಂಧನ ಮತ್ತು ಮುಕ್ತಿ, ಬಿಡುಗಡೆಗೆ ಸಂಬಂಧಿಸಿದ ವಿಚಾರಗಳಿಗೆ ಪೂರಕವಾಗಿ ಸಾಹಿತ್ಯವು ರಚನೆಗೊಂಡಿದೆ. ಈ ಅವಧಿಯಲ್ಲಿನ ಕನ್ನಡ ಸಾಹಿತ್ಯವು ದೇಶೀ ಶೈಲಿಯಲ್ಲಿ ಮೂಡಿಬಂದಿದೆ.

## ೪. ಹೊಸಗನ್ನಡ ಸಾಹಿತ್ಯ ಚರಿತ್ರೆ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು 'ಹೊಸಗನ್ನಡ ಸಾಹಿತ್ಯ ಚರಿತ್ರೆ' ಎಂದು ಕರೆಯುವುದು ರೂಢಿಗತವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಇಡೀ ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸಕ್ಕೆ ಒಂದು ಹೊಸ ತಿರುವನ್ನು ತಂದುಕೊಟ್ಟಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಾವಿರಾರು ಜನ ಕವಿಗಳು ಪಂಡಿತರು ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಈ ಘಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ವಿವಿಧ ರೀತಿಯಲ್ಲಿ ಮತ್ತು ಹೊಸದಾದ ಆಯಾಮಗಳಲ್ಲಿ ಕಾಣುತ್ತೇವೆ. ಇಂಗ್ಲಿಷ್ ಶಿಕ್ಷಣ ಪದ್ಧತಿಯ ಪ್ರಭಾವವು ಕೂಡ ಕನ್ನಡ ಸಾಹಿತ್ಯ ರಚನೆಯ ಮೇಲೆ ಗಾಢವಾದ ಪರಿಣಾಮವನ್ನು ಬೀರಿರುವುದನ್ನು ಗಮನಿಸಬಹುದು. ಬಿ. ಎಂ. ಶ್ರೀಕಂಠಯ್ಯನವರು 'ಇಂಗ್ಲೀಷ್ ಗೀತೆಗಳು' ಎಂಬ ಕವನ ಸಂಕಲನವನ್ನು ಪ್ರಕಟ ಮಾಡುವುದರ ಮುಖಾಂತರ ಕನ್ನಡ ಸಾಹಿತ್ಯಕ್ಕೆ ಆಧುನಿಕತೆಯ ಮೆರುಗನ್ನು ತಂದು ಕೊಟ್ಟಿದ್ದಾರೆ. ಗೋವಿಂದ ಪೈ ಮತ್ತು ಪಂಜೆ ಮಂಗೇಶರಾಯರು ಪ್ರಾರಂಭದಲ್ಲಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ. ಬೆಟಗೇರಿ ಕೃಷ್ಣಶರ್ಮ,

21KSS27 Draft Copy
VTU BSc ಸಾಹಿತ್ಯ ಸಿಂಚನ

ಶಾಂತಕವಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ. ರಾ. ಬೇಂದ್ರೆ, ಕುವೆಂಪು, ಪು.ತಿ.ನ., ಶಿವರಾಮ ಕಾರಂತ, ಕೆ ಎಸ್ ನರಸಿಂಹಸ್ವಾಮಿ ಮೊದಲಾದವರು ಪ್ರಮುಖ ಕವಿಗಳಾಗಿ ಆಧುನಿಕ ಕನ್ನಡ ಸಾಹಿತ್ಯವನ್ನು ಸಂಮೃದ್ಧಿಪಡಿಸಿದ್ದಾರೆ. ಕಾದಂಬರಿಗಳು, ನಾಟಕಗಳು, ಸಣ್ಣ ಕಥೆಗಳು, ವಿಜ್ಞಾನ ಸಾಹಿತ್ಯ, ಮಕ್ಕಳ ಸಾಹಿತ್ಯ, ಮಹಿಳಾ ಸಾಹಿತ್ಯ, ವಿಮರ್ಶಾ ಸಾಹಿತ್ಯ, ಪ್ರಬಂಧ ಎಂದು ವಿವಿಧ ಬಗೆಯ ಸಾಹಿತ್ಯ ರಚನೆ ಈ ಕಾಲಘಟ್ಟದಲ್ಲಿ ಸೃಷ್ಟಿಯಾಗತೊಡಗಿತು.

ನವೋದಯ ಸಾಹಿತ್ಯದ ಆನಂತರ ಪ್ರಗತಿಶೀಲ ಸಾಹಿತ್ಯವು ಮಾರ್ಕ್ಸವಾದಿ ಹಿನ್ನೆಲೆಯಲ್ಲಿ ಹೊಸ ಸಂಚಲನವನ್ನು ಮೂಡಿಸಿತು. ತ.ರಾ.ಸು., ಟಿ. ಎಸ್. ವೆಂಕಣ್ಣಯ್ಯ, ಬಸವರಾಜ ಕಟ್ಟಿಮನಿ, ನಿರಂಜನ, ಅ.ನ.ಕೃಷ್ಣರಾಯರು ಈ ಮೊದಲಾದವರು ಪ್ರಮುಖ ಬರಹಗಾರರಾಗಿದ್ದಾರೆ. ತದನಂತರ ಈ ಸಾಹಿತ್ಯವು ಬೇರೆಯಾದ ರೀತಿಯಲ್ಲಿ ಪರಂಪರೆಯನ್ನು ವಿರೋಧಿಸಿ ನವ್ಯ ಸಾಹಿತ್ಯ ಪರಂಪರೆಯು ವಿ. ಕೃ. ಗೋಕಾಕ್ ಮತ್ತು ಗೋಪಾಲಕೃಷ್ಣ ಅಡಿಗರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಇಲ್ಲಿ ವ್ಯಕ್ತಿಯ ವ್ಯಕ್ತಿತ್ವ ಮತ್ತು ಅವನ ಪರಕೀಯ ಪ್ರಜ್ಞೆಯನ್ನು ಎಚ್ಚರಗೊಳಿಸುವ ಪ್ರಯತ್ನ ಬಲವಾಗಿ ಕಂಡುಬರುತ್ತದೆ. ಮುಂದುವರೆದು, ಯು. ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಯಶವಂತ ಚಿತ್ತಾಲ, ಲಂಕೇಶ್, ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ ಮೊದಲಾದ ಬರಹಗಾರರು ತಮ್ಮ ಕಾವ್ಯ, ಕಥೆ, ಕಾದಂಬರಿ, ನಾಟಕಗಳು, ವಿಮರ್ಶಾತ್ಮಕ ಬರಹಗಳ ಮುಖಾಂತರ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಶ್ರೀಮಂತಗೊಳಿಸಿದ್ದಾರೆ.

ಹೀಗೆ ಮುಂದುವರೆದು, ಹೊಸದಾದ ಸೈzÁÞAತಿಕ ಆಲೋಚನಾ ಮಾದರಿಯಿಂದ ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯ, ಮಹಿಳಾಸಾಹಿತ್ಯಗಳು, ಅಲ್ಪಸಂಖ್ಯಾತರ ಕಲ್ಯಾಣ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳೊಂದಿಗೆ, ಜಾತಿ-ಧರ್ಮ-ಆರ್ಥಿಕ ಅಸಮಾನತೆ, ಸಮಾಜದ ಅಂಕುಡೊಂಕುಗಳನ್ನು ಕೇಂದ್ರೀಕೃತವಾಗಿ ಇಟ್ಟುಕೊಂಡು ಸಮಾಜವನ್ನು ಜಾಗೃತಗೊಳಿಸಲು ವಿವಿಧ ಆಯಾಮಗಳಲ್ಲಿ ಸೃಷ್ಟಿಯಾಗತೊಡಗಿತು. ಕವಿ ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಬೋಳುವಾರು ಮಹಮದ್, ಕುಂ. ವೀರಭದ್ರಪ್ಪ, ತ್ರಿವೇಣಿ, ಅನುಪಮಾ ನಿರಂಜನ, ಬಿ ಟಿ ಲಲಿತಾ ನಾಯಕ್, ಕಮಲಾ ಹಂಪನಾ, ಹಂಪ ನಾಗರಾಜಯ್ಯ, ಹನುಮಂತಯ್ಯ, ರಂಜಾನ್ ದರ್ಗಾ, ಅಲ್ಲಮಪ್ರಭು ಬೆಟ್ಟದೂರ, ಸಾರಾ ಅಬೂಬಕರ್ ಮತ್ತು ಇನ್ನೂ ಅನೇಕರು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮತ್ತು ಅಭ್ಯುದಯಕ್ಕೆ ನಿರಂತರವಾಗಿ ಶ್ರಮಿಸಿದ್ದಾರೆ.

## ಶಾಸ್ತ್ರೀಯ ಭಾಷೆಯಾಗಿ ಕನ್ನಡ :

ಕನ್ನಡ ಭಾಷೆಯನ್ನು ಜಗತ್ತಿನ ಕೆಲವೇ ಶಾಸ್ತ್ರೀಯ ಭಾಷೆಗಳ ಪಟ್ಟಿಯಲ್ಲಿ ನೋಡಬಹುದು. ಕನ್ನಡ ಭಾಷೆಯು ಪುರಾತನ ಕಾಲದಲ್ಲಿ ಬಳಕೆಯಲ್ಲಿ ಇದ್ದುದ್ದರಿಂದ, ಚಿರಂತನವಾಗಿ ಕಾಲಕಾಲಕ್ಕೆ ಪರಿವರ್ತನೆ ಯಾಗಿರುವುದರಿಂದ, ಹಾಗೂ ನಾಡಿನ ಬಹುಸಂಖ್ಯಾತ

VTU BSc ಸಾಹಿತ್ಯ ಸಿಂಚನ 21KSS27 Draft Copy

ಬಹುದೊಡ್ಡ ಜನಸಮುದಾಯವು ಕನ್ನಡ ಭಾಷೆಯನ್ನು ಬಳಸುತ್ತಿರುವುದರಿಂದ ಶಾಸ್ತ್ರೀಯ ಭಾಷೆ ಎಂದು ಪರಿಗಣಿಸಲಾಗಿದೆ ಎಂದು ಸಿ.ಐ.ಎಲ್. ಮತ್ತು ಯುನೆಸ್ಕೋ ಸಮಿತಿಯು ವ್ಯಾಖ್ಯಾನವನ್ನು ನೀಡಿದೆ. ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಪರಿಗಣಿಸಲು ಕಾರಣ ಕನ್ನಡ ಭಾಷೆಗೆ ದಾಖಲಾದ ಮತ್ತು ದಾಖಲೆ ರೂಪದ ಇತಿಹಾಸಕ್ಕೆ ಒಂದುವರೆ ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ ಪುರಾತನ / ಪ್ರಾಚೀನ ಸಾಹಿತ್ಯವು ತಲೆತಲೆಮಾರುಗಳ ಜನರಿಂದ ಅತ್ಯಂತ ಮೌಲಿಕ ಪರಂಪರೆಯೆಂದು ಪರಿಗಣಿಸಲ್ಪಟ್ಟಿದೆ. ಯಾವುದೇ ಸಾಹಿತ್ಯ ಪರಂಪರೆಯು ಸ್ವೋಪಜ್ಞವಾಗಿದ್ದು, ಬೇರೆ ಭಾಷೆ ಮತ್ತು ಸಮುದಾಯದ ಸಹಾಯವನ್ನು ಪಡೆದಿರಬಾರದು. ಶಾಸ್ತ್ರೀಯ ಭಾಷೆ ಮತ್ತು ಅದರ ಸಾಹಿತ್ಯವು ಪ್ರಸ್ತುತ ಸನ್ನಿವೇಶದ ಭಾಷೆ ಮತ್ತು ಸಾಹಿತ್ಯಕ್ಕಿಂತ ಭಿನ್ನವಾಗಿರಬೇಕು. ಆಗಮಾತ್ರ ಅಂತಹ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಕರೆಯಲಾಗುತ್ತದೆ. ನಮ್ಮ ಕನ್ನಡಭಾಷೆಯು ಈ ಮೇಲಿನ ಎಲ್ಲ ಗುಣಲಕ್ಷಣಗಳನ್ನು ಸಂಪೂರ್ಣವಾಗಿ ಹೊಂದಿದ್ದು ಜಗತ್ತಿನ ಶಾಸ್ತ್ರೀಯ ಭಾಷೆಗಳ ಪಟ್ಟಿಯಲ್ಲಿ ಮೇಲುಸ್ತರದಲ್ಲಿ ನಿಲ್ಲುತ್ತದೆ.

21KSS27 Draft Copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು:

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1. ಕನ್ನಡ ಸಾಹಿತ್ಯ ಚರಿತ್ರೆಯನ್ನು ಎಷ್ಟು ವಿಭಾಗಗಳಾಗಿ ವಿಭಾಗಿಸಿ ಅಧ್ಯಯನ ಮಾಡಲಾಗುತ್ತದೆ?

   ( ಪ್ರಸ್ತುತ ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ)

   1. 3
   2. 4
   3. 5
   4. 7

2. ಹತ್ತನೇ ಶತಮಾನದವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟವನ್ನು ಏನೆಂದು ಕರೆಯಲಾಗುತ್ತದೆ?

   1. ಶಾಸನ ಕನ್ನಡ
   2. ಹಳೆಗನ್ನಡ
   3. ಪೂರ್ವದ ಹಳಗನ್ನಡ
   4. ಮೂಲ ಕನ್ನಡ

3. ಕನ್ನಡದ ಮೊದಲ 'ಲಕ್ಷಣ ಗ್ರಂಥ' ಯಾವುದು?

VTU BSc ಸಾಹಿತ್ಯ ಸಿಂಚನ

1. ಕವಿರಾಜಮಾರ್ಗ
2. ವಡ್ಡಾರಾಧನೆ
3. ಚಾವುಂಡರಾಯ ಪುರಾಣ
4. ಆದಿಪುರಾಣ

4. ವಡ್ಡಾರಾಧನೆ ಕೃತಿಯ ಕರ್ತೃ ಯಾರು?.

1. ಶ್ರೀವಿಜಯ
2. ಅಮೋಘವರ್ಷ ನೃಪತುಂಗ
3. ಶಿವಕೋಟ್ಯಾಚಾರ್ಯರು
4. ದುರ್ಗಸಿಂಹ

5. ಜಾತ ತಿಲಕ ಗ್ರಂಥದ ಕರ್ತೃ ಯಾರು?.

1. ಶ್ರೀಧರಾಚಾರ್ಯ
2. ಸಿಂಗರಾರ್ಯ
3. ತಿರುಮಲಾರ್ಯ
4. ನಾಗವರ್ಮ ಆಚಾರ್ಯ

6. ರಾಮಚಂದ್ರ ಚರಿತ ಪುರಾಣದ ಕರ್ತೃ ಯಾರು?

1. ಒಂದನೇ ನಾಗಚಂದ್ರ
2. ಎರಡನೇ ನಾಗಚಂದ್ರ
3. ಮೂರನೇ ನಾಗಚಂದ್ರ
4. ನಾಲ್ಕನೇ ನಾಗಚಂದ್ರ

7.ಇಂಗ್ಲೀಷ್ ಗೀತೆಗಳು ಕವನಸಂಕಲನದ ಕರ್ತೃ ಯಾರು?.

1. ತೀ.ನಂ.ಶ್ರೀ.
2. ಬಿ.ಎಂ.ಶ್ರೀ.
3. ಕುವೆಂಪು
4. ಗಿರೀಶ್ ಕಾರ್ನಾಡ್

21KSS27 Draft Copy
VTU BSc ಸಾಹಿತ್ಯ ಸಿಂಚನ

8. ಭಾರತ ಸರ್ಕಾರವು ಕನ್ನಡ ಭಾಷೆಯನ್ನು………………….. ಎಂದು ಘೋಷಿಸಿದೆ.

1. ನೂತನ ಭಾಷೆ
2. ವೇದಗಳ ಭಾಷೆ
3. ಶಾಸ್ತ್ರೀಯ ಭಾಷೆ
4. ಶಾಸನ ಭಾಷೆ

9. ಕನ್ನಡದ ಮೊದಲ ಶಿಲಾಶಾಸನ ಯಾವುದು?

1. ಕಪ್ಪೆ ಅರೆಭಟ್ಟನ ಶಿಲಾಶಾಸನ
2. ಶ್ರವಣಬೆಳಗೊಳದ ಶಿಲಾಶಾಸನ
3. ಹಲ್ಮಿಡಿ ಶಿಲಾಶಾಸನ
4. ಪಟ್ಟದಕಲ್ಲು ಶಿಲಾಶಾಸನ

10. ಪೂರ್ವದ ಹಳೆಗನ್ನಡದ ಕನ್ನಡ ಭಾಷೆಯನ್ನು ………………….. ಎಂದು ಕರೆಯಲಾಗಿದೆ.

1. ಶಾಸನ ಭಾಷೆ
2. ಶಾಸನ ಪೂರ್ವ ಭಾಷೆ
3. ಪ್ರಾಚೀನ ಭಾಷೆ
4. ನಾಗರೀಕತೆಗಳ ಕಾಲದ ಭಾಷೆ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಕನ್ನಡ ಭಾಷೆಗೆ ಎಷ್ಟು ವರ್ಷಗಳ ಇತಿಹಾಸವಿದೆ?

2. ಹಲ್ಮಿಡಿ ಶಿಲಾಶಾಸನ ಕರ್ನಾಟಕ ರಾಜ್ಯದ ಯಾವ ಜಿಲ್ಲೆಯಲ್ಲಿದೆ?

3. ಪೂರ್ವದ ಹಳಗನ್ನಡದ ಭಾಷೆಯನ್ನು ಎಂತಹ ಭಾಷೆಯೆಂದು ವಿದ್ವಾಂಸರು ಗುರುತಿಸಿದ್ದಾರೆ?

4. ಹಳೆಗನ್ನಡ ಕಾಲದ ಶ್ರೇಷ್ಠ ಕವಿಗಳು ಯಾರು?

5. ನಡುಗನ್ನಡ ಕಾಲದ ಕನ್ನಡ ಸಾಹಿತ್ಯವನ್ನು ಏನೆಂದು ಗುರುತಿಸಲಾಗುತ್ತದೆ?

6. ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳ ಪ್ರಕಾರಗಳನ್ನು ತಿಳಿಸಿರಿ?

21KSS27 Draft Copy
VTU BSc ಸಾಹಿತ್ಯ ಸಿಂಚನ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಕೇಂದ್ರ ಸರಕಾರವು ಘೋಷಿಸಿದೆ. ಇದಕ್ಕೆ ಕಾರಣಗಳನ್ನು ತಿಳಿಸಿರಿ.
2. ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಕಾಲಘಟ್ಟಗಳನ್ನು ಹೆಸರಿಸಿ?..
3. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡುಗನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟದ ಕುರಿತು ಬರೆಯಿರಿ?
4. ಪೂರ್ವದ ಹಳಗನ್ನಡ ಸಾಹಿತ್ಯ ಚರಿತ್ರೆಯ ಕಾಲಘಟ್ಟದ ವೈಶಿಷ್ಟ್ಯಗಳ ಬಗ್ಗೆ ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

## ಅಧ್ಯಾಯ - ಮೂರು

# ಹಳೆಗನ್ನಡ ಸಾಹಿತ್ಯ - ಪಂಪ ಪೂರ್ವ ಯುಗ

---

## ಕನ್ನಡ ಭಾಷೆಯ ಪೂರ್ವ ಇತಿಹಾಸ ಮತ್ತು ಪರಿಚಯ:

ಕನ್ನಡ ಸಾಹಿತ್ಯ ಚರಿತ್ರೆ ಜಗತ್ತಿನ ಸಾಹಿತ್ಯ ಚರಿತ್ರೆಗಳಲ್ಲಿ ಅತ್ಯಂತ ಶ್ರೀಮಂತ ಮತ್ತು ಪ್ರಾಚೀನ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಕನ್ನಡ ಸಾಹಿತ್ಯ ಚರಿತ್ರೆಯು **ಸುಮಾರು 2500 ವರ್ಷಗಳ** ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ದ್ರಾವಿಡಭಾಷೆಗಳಲ್ಲಿ ಕನ್ನಡ ಭಾಷೆಯು ಒಂದು ಪ್ರಮುಖವಾದ ಪ್ರಾಚೀನ ಭಾಷೆಯಾಗಿದೆ. **'ಕನ್ನಡ' ಕರ್ನಾಟಕದ ರಾಜ್ಯಭಾಷೆ**. ಕನ್ನಡವನ್ನು ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಬಳಸಲಾಗುತ್ತದೆ. ಕರ್ನಾಟಕ ರಾಜ್ಯವು ಉತ್ತರದಲ್ಲಿ ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಪೂರ್ವದಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶ, ಪಶ್ಚಿಮದಲ್ಲಿ ಗೋವಾ ಮತ್ತು ಅರಬ್ಬಿ ಸಮುದ್ರದಿಂದ ಸುತ್ತುವರೆಯಲ್ಪಟ್ಟಿದೆ. ಭಾರತ ದೇಶದಲ್ಲಿ ಸಾವಿರಾರು ಭಾಷೆಗಳು ಅಸ್ತಿತ್ವದಲ್ಲಿದ್ದರೂ ಅತ್ಯಂತ ಶ್ರೇಷ್ಠ ಮತ್ತು **ಸಂವಿಧಾನಿಕ ಮಹತ್ವ**ವನ್ನು ಪಡೆದುಕೊಂಡಿರುವ ಪ್ರಾಚೀನ ಶಾಸ್ತ್ರೀಯ ಭಾಷೆಯಾಗಿ ಕನ್ನಡ ಭಾಷೆಯು ಹೆಚ್ಚು ಪ್ರಚಾರದೊಂದಿಗೆ ಬಳಕೆಯಲ್ಲಿದೆ. ದೇಶದಲ್ಲಿ **ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಭಾಷೆ ಕನ್ನಡ**. ಬಹಳ ಮುಖ್ಯವಾಗಿ ಶಾಸ್ತ್ರೀಯ ಸ್ಥಾನಮಾನವನ್ನು ಪಡೆಯುವುದರೊಂದಿಗೆ ಜಗತ್ತಿನ 5000 ಭಾಷೆಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿ.

ಕನ್ನಡ ಎಂಬ ಶಬ್ದವು ಅತ್ಯಂತ ಪ್ರಾಚೀನವಾದುದ್ದಾಗಿದ್ದು ಕನ್ನಡ ಭಾಷೆಯನ್ನಾಡುವ ಜನರನ್ನು ಸೂಚಿಸುತ್ತದೆ. ದೊರೆತಿರುವ ಪ್ರಾಚೀನ ಗ್ರಂಥಗಳು ಮತ್ತು ಶಿಲಾಶಾಸನಗಳ ಆಧಾರದಿಂದ ಕ್ರಿಸ್ತಪೂರ್ವದ ಸಂದರ್ಭದಲ್ಲಿಯೇ ಕನ್ನಡ ಅಸ್ತಿತ್ವದಲ್ಲಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಕನ್ನಡ ಪದಗಳ ಹುಟ್ಟು, ಬೆಳವಣಿಗೆ ಮತ್ತು ಕನ್ನಡ ಪ್ರದೇಶದ ವಿಸ್ತಾರ ಕುರಿತಾಗಿ ವಿದ್ವಾಂಸರಲ್ಲಿಯೂ ಗೊಂದಲವಿದೆ. ಕನ್ನಡ ಭಾಷೆಯ ಪದಗಳ ಬಳಕೆಯನ್ನು ಕುರಿತಂತೆ ನಿಖರವಾಗಿ ಮತ್ತು ನಿರ್ದಿಷ್ಟವಾಗಿ ಇಂತಹ ಕಾಲಘಟ್ಟದಲ್ಲಿಯೇ ಭಾಷೆ ಹುಟ್ಟಿತು ಎಂದು ಹೇಳಲಾಗದು. ಭಾಷಾ ವಿದ್ವಾಂಸರುಗಳು ಒಂದೊಂದು ರೀತಿಯ ಹೇಳಿಕೆಗಳನ್ನು ಕ್ರಿಸ್ತಪೂರ್ವದಿಂದ ಹಿಡಿದು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ಕ್ರಿಸ್ತಶಕ 450ರ ಸಮಯದಲ್ಲಿ ದೊರೆತಿರುವ ಹಲ್ಮಿಡಿ ಶಾಸನದವರೆಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿ ವಿವರಿಸುವುದನ್ನು ಗಮನಿಸಬಹುದು.

VTU BSc ಸಾಹಿತ್ಯ ಸಿಂಚನ 21KSS27 Draft copy

ಆದುದರಿಂದಾಗಿ ಭಾಷೆಯ ಹುಟ್ಟಿನ ಕಾಲಘಟ್ಟದ ಬಗ್ಗೆ ಗೊಂದಲಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಕನ್ನಡ ಭಾಷೆಯು ಪ್ರಾಚೀನವಾದದ್ದು ನಾಗರೀಕತೆಯ ಉಗಮದೊಂದಿಗೆ ಮತ್ತು ಕ್ರಿಸ್ತಪೂರ್ವದ ಸಾಹಿತ್ಯದೊಂದಿಗೆ ಸಂಪರ್ಕವನ್ನು ಹೊಂದಿದ್ದು ಜಗತ್ತಿನ ಕೆಲವೇ ಗುರುತಿಸಲ್ಪಟ್ಟ ಶಾಸ್ತ್ರೀಯ ಭಾಷೆಗಳಲ್ಲಿ ಒಂದಾಗಿರುವುದು ಅತ್ಯಂತ ಸಂತಸದ ವಿಷಯವಾಗಿದೆ.

ಹಲವಾರು ವಿದ್ವಾಂಸರುಗಳು ಕನ್ನಡ ಎಂಬ ಶಬ್ದ 'ಕಮ್ಮಿತ್ತುನಾಡು' ಅಥವಾ 'ಕರುನಾಡು' (ಕರು + ನಾಡು) ಎಂಬ ಪದದಿಂದ ನಿಷ್ಪತ್ತಿಯಾಗಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಕನ್ನಡದ ಪ್ರಸಿದ್ಧ ವ್ಯಾಕರಣ ತಜ್ಞ ಕೇಶಿರಾಜನು ಕನ್ನಡ ಎಂಬ ಶಬ್ದ ಕರ್ಣಾಟ(ಕ) ಎಂಬ ಶಬ್ದದಿಂದ ಹುಟ್ಟಿದೆ ಎಂದು ಹೇಳಿದ್ದಾರೆ. ನರಸಿಂಹಾಚಾರ್ಯರು ಕನ್ನಡ ಎಂಬ ಶಬ್ದ ಕಮ್ಮಿತ್ತುನಾಡು ಎಂಬ ಪದದಿಂದ ಹುಟ್ಟಿದೆ ಎಂದು ಅಭಿಪ್ರಾಯವನ್ನು ನೀಡಿದ್ದಾರೆ. ಕನ್ನಡಕ್ಕೆ ಮೊದಲು ನಿಘಂಟನ್ನು ರಚಿಸಿಕೊಟ್ಟ ಫರ್ಡಿನೆಂಡ್ ಕಿಟೆಲ್, ಬಿ ಎಲ್ ರೈಸ್, ರಾಬರ್ಟ್ ಕಾಲ್ಡವೆಲ್ ಮೊದಲಾದವರು ಕನ್ನಡ ಎಂಬ ಶಬ್ದ ಕರುನಾಡು (ಕರ್ +ನಾಡು ) ಎಂಬ ಸಮಾಸದಿಂದ ವಿಕಾಸಗೊಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕಮ್ಮಿತ್ತುನಾಡು ಎಂಬುದು ದೇಶಿಯ ಪದವಾಗಿದ್ದು. ಶ್ರೀಗಂಧದ ಮರಗಳಿಂದ ತುಂಬಿಹೋಗಿದ್ದ ನಾಡು ಎಂಬ ಅರ್ಥವನ್ನು ನೀಡುತ್ತದೆ. ಕಪ್ಪು ಮಣ್ಣಿನ ನಾಡು, ಎತ್ತರವಾದ ನಾಡು, ವಿಶಾಲವಾದ ನಾಡು ಎಂಬ ಅರ್ಥಗಳನ್ನು ನೋಡಬಹುದು. ಕ್ರಿಸ್ತಪೂರ್ವದ ಮೂರನೇ ಶತಮಾನದ ಅಶೋಕನ ಶಿಲಾಶಾಸನಗಳಲ್ಲಿ ಕರ್ನಾಟಕದ ಕೆಲವು ಭಾಗಗಳ ಹೆಸರುಗಳನ್ನು ನೋಡಬಹುದು.

## ಕನ್ನಡ ಭಾಷೆಯ ಪ್ರಾಚೀನತೆ ಮತ್ತು ಹಲ್ಮಿಡಿ ಶಾಸನದ ಪೂರ್ವ ಇತಿಹಾಸ

ಕ್ರಿಸ್ತ ಪೂರ್ವದಿಂದಲೂ ಕನ್ನಡ ಭಾಷೆಯ ಪದಗಳ ಬಳಕೆಯನ್ನು ಗಮನಿಸಿದರೂ, ಅಧಿಕೃತವಾಗಿ ಕನ್ನಡ ಭಾಷೆಯ ಪರಿಚಯವಾಗುವುದು **ಕ್ರಿಸ್ತಶಕ 450ರ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಶಿಲಾಶಾಸನ**ದಲ್ಲಿ. ಕ್ರಿಸ್ತಶಕ 450ರ ಸುಮಾರಿನಲ್ಲಿ ಕನ್ನಡ ಭಾಷೆಯು ಪ್ರೌಢವಾಗಿ ಬೆಳೆದು ಹೆಚ್ಚು ಬಳಕೆಯಲ್ಲಿ ಇತ್ತು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಕನ್ನಡ ಭಾಷೆಯು ಹಲ್ಮಿಡಿ ಶಿಲಾಶಾಸನ ಸಮಯಕ್ಕೆ ಭಾಷೆಯು ಬರವಣಿಗೆಯ ರೂಪವನ್ನು ಪಡೆದುಕೊಂಡು ಬಳಸಲ್ಪಡುತ್ತಿತ್ತು ಎಂದು ತಿಳಿಯುತ್ತದೆ. ಕನ್ನಡ ನಾಡಿನ ಹಲವಾರು ಶಾಸನಗಳು ಪ್ರಾಕೃತದಲ್ಲಿ ಮತ್ತು ಸಂಸ್ಕೃತದಲ್ಲಿ ದೊರೆತರೆ ಹಲ್ಮಿಡಿ ಶಾಸನವು ಕನ್ನಡ ಭಾಷೆಯಲ್ಲಿ ದೊರೆತ ಮೊದಲ ಅಧಿಕೃತ ಶಾಸನವಾಗಿದೆ.

ಭಾರತದ ಮಹಾಕಾವ್ಯಗಳಾದ **ರಾಮಾಯಣ ಮತ್ತು ಮಹಾಭಾರತ** ದಲ್ಲಿ ಕೆಲವು ಕನ್ನಡ ಪದಗಳನ್ನು ಗಮನಿಸಬಹುದು. ಕ್ರಿಸ್ತಶಕ ಶತಮಾನದ್ದು ಎಂದು ಹೇಳುವ **ಗ್ರೀಕ್ ಪ್ರಹಸನದಲ್ಲಿ** ಕನ್ನಡ ಶಬ್ದಗಳ ಬಳಕೆಗೊಂಡಿರುವುದನ್ನು ಎರಡನೇ ಶತಮಾನದ ತಮಿಳು ಗ್ರಂಥ **ಶಿಲಪ್ಪದಿಕಾರಂ** ನಲ್ಲಿ ಕನ್ನಡ ನಾಡಿಗೆ ಸಂಬಂಧಿಸಿದ ಉಲ್ಲೇಖಗಳು ದೊರೆಯುತ್ತವೆ. ಈ ಆಧಾರಗಳಿಂದಾಗಿ ಕನ್ನಡ ಭಾಷೆಯು ಕ್ರಿಸ್ತಪೂರ್ವ ಮತ್ತು ಕ್ರಿಸ್ತಶಕದ ಮೊದಲ ಭಾಗದಿಂದಲೇ ಹೆಚ್ಚು ಪ್ರಚಾರ ಮತ್ತು ಬಳಕೆಯಲ್ಲಿತ್ತು ಎಂದು ಕಂಡುಬರುತ್ತದೆ. ಈ ಹೇಳಿಕೆಗಳಿಗೆ ಪೂರಕವೆಂಬಂತೆ ಒಂಬತ್ತನೆಯ ಶತಮಾನದ **ಕನ್ನಡದ ಲಕ್ಷಣ ಗ್ರಂಥ ಕವಿರಾಜಮಾರ್ಗ**ದಲ್ಲಿ, **ಶಿವಕೋಟ್ಯಾಚಾರ್ಯರ ವಡ್ಡಾರಾಧನೆ**,

21KSS27 Draft Copy
VTU BSc ಸಾಹಿತ್ಯ ಸಿಂಚನ

ಆದಿಕವಿ ಪಂಪನ ಗ್ರಂಥಗಳಲ್ಲಿ ಕನ್ನಡ ನಾಡು ಮತ್ತು ನುಡಿಯನ್ನು ಸ್ಮರಿಸಿ ಕೊಂಡಿರುವ ರೀತಿಯನ್ನು ಗಮನಿಸಿದರೆ ಕನ್ನಡ ಭಾಷೆ ಎಷ್ಟು ಪ್ರಾಚೀನ ಇತಿಹಾಸವನ್ನು ಹೊಂದಿದೆ ಎಂಬುದು ತಿಳಿಯುತ್ತದೆ. ಮೌರ್ಯ ಸಾಮ್ರಾಜ್ಯದ **ಸಾಮ್ರಾಟ್ ಅಶೋಕನ ಬ್ರಹ್ಮಗಿರಿಯ ಶಿಲಾಶಾಸನದಲ್ಲಿ ಕಂಡುಬರುವ ಇಸಿಲ ಎಂಬ ಶಬ್ಧ** ಮತ್ತು ಶಾತವಾಹನರ ಕಾಲದಲ್ಲಿ ಕಂಡುಬಂದಿರುವ ನಾಣ್ಯಗಳಲ್ಲಿರುವ ಕನ್ನಡದ ಪದಗಳು ಕನ್ನಡ ಭಾಷೆಯ ಪ್ರಾಚೀನತೆಯನ್ನು ಪ್ರತಿಬಿಂಬಿಸುತ್ತವೆ.

## ಹಲ್ಮಿಡಿ ಶಿಲಾಶಾಸನ ಕ್ರಿಸ್ತಶಕ 450

ಹಲ್ಮಿಡಿ ಶಿಲಾಶಾಸನವು ಕನ್ನಡದಲ್ಲಿ ದೊರೆತಿರುವ ಮೊಟ್ಟಮೊದಲ ಐತಿಹಾಸಿಕ ಮತ್ತು ಚಾರಿತ್ರಿಕ ದಾಖಲೆ ಎಂದು ಗುರುತಿಸಲಾಗುತ್ತದೆ. ಹಲ್ಮಿಡಿ ಶಾಸನವು ಒಂದು ಶಿಲಾಶಾಸನವಾಗಿದೆ. **ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತಿದ್ದುಕ್ರಿಸ್ತಶಕ 450**ರ ಸಮಯದಲ್ಲಿ ರಚಿಸಲ್ಪಟ್ಟಿರುವ ಕದಂಬರ ಕಾಲದ ಶಾಸನವಾಗಿದೆ. ಈ ಶಾಸನದಲ್ಲಿ ಪಲ್ಲವ ಸಾಮ್ರಾಟರೊಡನೆ ಯುದ್ಧದಲ್ಲಿ ಹೋರಾಟವನ್ನು ಮಾಡಿ ಗೆದ್ದು ಬಂದಂತಹ ವಿಜಯ ಎಂಬ ಅರಸನಿಗೆ ಕದಂಬರ ಮೃಗೇಶ ಮತ್ತು ನಾಗೇಂದ್ರ ಎಂಬುವವರು **ಬಾಳ್ಗಚ್ಚು ಅಂದರೆ ಅವನು ಬಳಸಿದ ಖಡ್ಗಕ್ಕೆ** ಕೊಟ್ಟಂತಹ ಗೌರವ ಎಂಬ ವಿಷಯವೇ ಈ ಶಾಸನದ ಪ್ರಧಾನ ವಸ್ತುವಾಗಿದೆ. ಹಲ್ಮಿಡಿ ಶಾಸನದಲ್ಲಿ 16 ಸಾಲುಗಳಿದ್ದು ಇಪ್ಪತ್ತಕ್ಕೂ ಹೆಚ್ಚಿನ ಕನ್ನಡ ಪದಗಳನ್ನು ಕಾಣಬಹುದಾಗಿದೆ. ಮುಂದುವರೆದು ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ಬಾದಾಮಿಯ ಬಂಡೆಗಲ್ಲಿನ ಮೇಲೆ ಕೆತ್ತಲ್ಪಟ್ಟಿರುವ ಶಿಲಾಶಾಸನವು ಹಲವಾರು ವಿಷಯಗಳಿಂದಾಗಿ ಶ್ರೇಷ್ಠ ಶಾಸನವಾಗಿದೆ. ಈ ಶಾಸನದಲ್ಲಿ **ತ್ರಿಪದಿ ರೂಪದ** ಸಾಹಿತ್ಯದ ರಚನೆಯನ್ನು ಕಾಣಬಹುದಾಗಿದೆ ಹಾಗೂ **ಕಪ್ಪೆ ಅರಭಟ್ಟನ** ಸ್ವಭಾವ ಚಿತ್ರವನ್ನು ಸಹ ಈ ಶಾಸನದಲ್ಲಿ ಹೇಳಲಾಗಿದೆ. ಬಹಳ ಮುಖ್ಯವಾಗಿ ಇಂದು ನಾವೆಲ್ಲರೂ ಹೇಳುವ ವಾಕ್ಯವಾದ,

**"ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯಂ,**

**ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್,**

**ಮಾಧವನೀತನ್ ಪೆರನಲ್ಲ"**

ಎಂಬುದನ್ನು ತ್ರಿಪದಿ ಸಾಹಿತ್ಯದ ರೂಪದಲ್ಲಿ ಕಾಣುತ್ತೇವೆ. ಚಿತ್ರದುರ್ಗ ತಾಲ್ಲೂಕಿನ ತಮ್ಮಟಕಲ್ಲು ಗ್ರಾಮದಲ್ಲಿ ದೊರೆತಿರುವ **ತಮ್ಮಟಕಲ್ಲು ಶಾಸನ ಎಪಿಗ್ರಾಫಿಯಾ** ಕರ್ನಾಟಕ ಈ ಸಂಪುಟದಲ್ಲಿರುವ 42 ಮತ್ತು 43ನೇ ಶಾಸನಗಳಲ್ಲಿ ಮೂರನೆಯ ವೀರಗಲ್ಲಾಗಿದ್ದು ಶಾಸನವು ಬಹಳ ಮುಖ್ಯವಾದುದು. ಈ ಶಾಸನದ ಕಾಲಘಟ್ಟವನ್ನು ಕ್ರಿಸ್ತಶಕ 500 ಎಂದು ಗುರುತಿಸಲಾಗಿದೆ. ಈ ಶಾಸನದಲ್ಲಿ ಅಂದಿನ ಕಾಲಘಟ್ಟದಲ್ಲಿ ಕನ್ನಡ ಭಾಷೆಯಲ್ಲಿ ಸಂಸ್ಕೃತ ಭಾಷೆಯ ಪ್ರಭಾವ ಅಧಿಕವಾಗಿದ್ದ ಅಂಶವನ್ನು ಕಾಣಬಹುದಾಗಿದೆ. ಕನ್ನಡ ಭಾಷೆಯ ಅಧ್ಯಯನಕ್ಕೆ ತಮ್ಮಟಕಲ್ಲು ಶಾಸನವು ಒಂದು ಒಳ್ಳೆಯ ಲಕ್ಷ್ಯ ಕೃತಿಯಾಗಿದೆ. ಹಾಸನ ಜಿಲ್ಲೆಯ ಮತ್ತೊಂದು ಪ್ರಸಿದ್ಧ ಸ್ಥಳವಾದ ಶ್ರವಣಬೆಳಗೊಳದ ಗೊಮ್ಮಟನ ಸನ್ನಿಧಿಯಲ್ಲಿ ಹಲವಾರು ಶಾಸನಗಳನ್ನು ಕಾಣುತ್ತೇವೆ. ಈ ಶಾಸನಗಳ ಕಾಲಘಟ್ಟವನ್ನು ಸುಮಾರು

VTU BSc ಸಾಹಿತ್ಯ ಸಿಂಚನ 21KSS27 Draft copy

ಕ್ರಿಸ್ತಶಕ 650 ರಿಂದ 700 ಎಂದು ಗುರುತಿಸಲಾಗಿದೆ. ಈ ಎಲ್ಲಾ ಶಾಸನಗಳು ಜೈನ ಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ. ಈ ಶಾಸನಗಳಲ್ಲಿ ಜೈನ ಸನ್ಯಾಸಿಗಳ, ಸನ್ಯಾಸಿನಿಯರ ತಪಸ್ಸು, ದೇಹತ್ಯಾಗ, ತಮ್ಮ ಸಹನಶೀಲತೆಯಿಂದ ಸ್ವರ್ಗಪ್ರಾಪ್ತಿ ಮುಂತಾದ ವಿಷಯಗಳ ಕುರಿತಾಗಿದ್ದು ಸಾರ್ಥಕ ಜೀವನ ಚರಿತ್ರೆಗಳನ್ನು.ತಿಳಿಸುತ್ತವೆ. ಬಹಳ ಮುಖ್ಯವಾಗಿ ಶ್ರವಣಬೆಳಗೊಳದಲ್ಲಿ ದೊರೆತಿರುವ ಅತಿ ಹೆಚ್ಚು ಶಿಲಾಶಾಸನಗಳಿಂದ ಶಾಸನ ಪರಂಪರೆಯಲ್ಲಿ ಕರ್ನಾಟಕವು ಮತ್ತು ಕನ್ನಡ ನಾಡಿನ ಸಂಸ್ಕೃತಿ ಮತ್ತು ಪರಂಪರೆ ಜಗತ್ತಿನ ಇತಿಹಾಸದಲ್ಲಿ ದಾಖಲಾಗಿದ್ದು ಮತ್ತು ಶ್ರೇಷ್ಠತೆಯಲ್ಲಿ ಅತ್ಯಂತ ಎತ್ತರದ ಸ್ಥಾನದಲ್ಲಿರುವುದು ಕಾಣುತ್ತದೆ. ಪಟ್ಟದಕಲ್ಲಿನ ಶಾಸನವೂ ಸಹ ಕನ್ನಡನಾಡಿನ ಶಿಲಾಶಾಸನ ಪರಂಪರೆಯಲ್ಲಿ ಹೆಚ್ಚು ಪ್ರಾಶಸ್ತ್ಯ ಪಡೆದಿರುವುದನ್ನು ಕಾಣುತ್ತೇವೆ.

## ಕನ್ನಡ ಸಾಹಿತ್ಯದ ರಚನೆಗೆ ಪ್ರಮುಖ ಪ್ರೇರಣೆಗಳು ಮತ್ತು ಪ್ರಭಾವಗಳು:

ಜಗತ್ತಿನ ಎಲ್ಲ ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಗಮನಿಸಿದಾಗ ಧರ್ಮ ಮತ್ತು ಸಂಸ್ಕೃತಿಯ ಪ್ರಭಾವವನ್ನು ಕಾಣುತ್ತೇವೆ. ಧರ್ಮವೇ ಜೀವನದ ಉಸಿರೆಂದು ಹೇಳಲಾದ ಭಾರತದಲ್ಲಿ ಕಥೆ ಕಾದಂಬರಿಗಳು, ಕಾವ್ಯಗಳು ಮತ್ತು ವಾಸ್ತುಶಿಲ್ಪ ಗಳಿಗೆ ಮೂಲಭೂತವಾಗಿ ಸ್ಫೂರ್ತಿ ಎಂದರೆ ನಾವು ಆಚರಿಸಿಕೊಂಡು ಮತ್ತು ಪಾಲಿಸುತ್ತಿರುವ ಧರ್ಮಗಳೇ ಆಗಿವೆ. ಈ ಮಾತು ಕರ್ನಾಟಕದ ಸಾಹಿತ್ಯ, ಕಲೆಗಳಿಗೂ ಯಥಾವತ್ತಾಗಿ ಅನ್ವಯವಾಗುತ್ತದೆ. ಕರ್ನಾಟಕದ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಧರ್ಮ ಸಹಿಷ್ಣುತೆಯ ಲಕ್ಷಣ ಎಂದು ಗಟ್ಟಿ ಧ್ವನಿಯಲ್ಲಿ ಹೇಳಬಹುದು. ಕನ್ನಡ ನಾಡು ಅನೇಕ ಧರ್ಮಗಳಿಗೆ ಮನೆಯಾದ್ದರಿಂದ ಮತ್ತು ಧರ್ಮಗಳ ಜೊತೆಗೆ ಹೊಂದಿಕೊಂಡು ಹೋಗುವ ಮನಸ್ಥಿತಿಯನ್ನು ನಾಡಿನ ಜನರು ಹೊಂದಿದ್ದರಿಂದ ಧರ್ಮ ಮತ್ತು ಸಾಹಿತ್ಯಕ್ಕೆ ಅವಿನಾಭಾವ ಸಂಬಂಧ ಇರುವುದನ್ನು ಕಾಣುತ್ತೇವೆ. ಈ ಮಾತನ್ನು ಕನ್ನಡದ ಮೊದಲ ಗ್ರಂಥವೆಂದು ಕರೆಯುವ **ಕವಿರಾಜಮಾರ್ಗದಲ್ಲಿ "ಕಸವರ ವೆಂಬುದು ನೆರೇಳ್ಗೆ ಸೈರಿಸಲಾರ್ಪೊಡೆ ಪರ ವಿಚಾರಮಂ ಧರ್ಮಮಂ"** ಎಂಬ ಮಾತಿನಲ್ಲಿ ನಾಡಿನ ಜನರ ನಿಜವಾದ ಐಶ್ವರ್ಯ ಇರುವುದು ಪರರ ವಿಚಾರಗಳನ್ನು ಮತ್ತು ಅನ್ಯ ಧರ್ಮಗಳನ್ನು ಗೌರವಿಸಿ ಹೊಂದಿಕೊಂಡು ಬಾಳುವುದರಲ್ಲಿ, ಎಂಬಂತಹ ಸದ್ಗುಣಗಳನ್ನು ಕನ್ನಡಿಗರಲ್ಲಿ ಕಾಣುತ್ತೇವೆ ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ.

ಕರ್ನಾಟಕದಲ್ಲಿ ಹಲವಾರು ಪ್ರಮುಖ ಧರ್ಮಗಳು ಸಾಹಿತ್ಯ ಮತ್ತು ಕಲೆಗಳ ಬೆಳವಣಿಗೆಗೆ ಕಾರಣೀಭೂತವಾಗಿವೆ. **ಬೌದ್ಧ ಧರ್ಮ, ಜೈನ ಧರ್ಮ, ವೀರಶೈವ ಧರ್ಮ, ವೈದಿಕ ಧರ್ಮ, ಕ್ರೈಸ್ತ ಮತ್ತು ಇಸ್ಲಾಂ ( ಸೂಫಿ) ಧರ್ಮ** ಎಂದು ಪ್ರಮುಖವಾಗಿ ಗುರುತಿಸಬಹುದು.

### ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಅನ್ಯಭಾಷಾ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವ:

ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಸಂಸ್ಕೃತ, ಪ್ರಾಕೃತ ಭಾಷೆಗಳು ಅಪಾರವಾದ ಪ್ರಭಾವವನ್ನು ಬೀರಿವೆ. ಮಹಾಭಾರತ ರಚಿಸಿದ ವ್ಯಾಸರು, ರಾಮಾಯಣವನ್ನು ರಚಿಸಿದ ಭಾರತದ ಆದಿಕವಿ ಮಹರ್ಷಿ ವಾಲ್ಮೀಕಿ, ಕ್ರಿಸ್ತಶಕ ಎಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಶ್ರೀ ಭಟ್ಟನಾರಾಯಣ, ಅತಿ ಹೆಚ್ಚು ಸಾಹಿತ್ಯವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿ ಉತ್ತಮವಾದ ನಾಟಕಗಳನ್ನು ಸಮಾಜಕ್ಕೆ ನೀಡಿರುವ

VTU BSc ಸಾಹಿತ್ಯ ಸಿಂಚನ 21KSS27 Draft copy

ಕವಿ ಬಾಣ, ಜೈನ ಕೃತಿಯಾದ ಪೂರ್ವಪುರಾಣ ಇದರ ಕರ್ತೃ ಜಿನಸೇನಾಚಾರ್ಯರಾಗಿದ್ದು, ಉತ್ತರ ಪುರಾಣದ ಕರ್ತೃ ಜಿನಸೇನಾಚಾರ್ಯರ ಶಿಷ್ಯ ಗುಣಭದ್ರಾಚಾರ್ಯರು, ಪ್ರಾಕೃತ ಭಾಷೆಯ ಕವಿ ವಿಮಲಸೂರಿ, ಸಂಸ್ಕೃತ ಭಾಷೆಯಲ್ಲಿ ರಚನೆಯಾಗಿರುವ ರವಿಷೇಣನ ಕೃತಿಯಾದ ಪದ್ಮಪುರಾಣ ಮೊದಲಾದ ಭಾಷೆಗಳು, ಸಾಹಿತ್ಯ ಪೂರ್ವದ ಸಾಹಿತ್ಯರಚನಾಕಾರರು ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದ್ದಾರೆ. ಇವರುಗಳ ಪ್ರೇರಣೆ ಮತ್ತು ಪ್ರಭಾವದಿಂದಾಗಿ ಕನ್ನಡ ಸಾಹಿತ್ಯವು ಉತ್ತಮ ರೀತಿಯಲ್ಲಿ ರೂಪಗೊಳ್ಳಲು ಕಾರಣವಾಯಿತು.

## ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ:

ಸುಮಾರು ಎರಡು ಸಾವಿರ ವರ್ಷಗಳಿಗೂ ಮಿಗಿಲಾದ ಭವ್ಯ ಇತಿಹಾಸವನ್ನು ಹೊಂದಿರುವ ಕನ್ನಡದ ನೆಲವನ್ನು ವಿಶಾಲವಾದ ಭೂ ಪ್ರದೇಶವನ್ನು ಹಲವಾರು ರಾಜಮನೆತನಗಳು ಆಳಿವೆ. ಕರ್ನಾಟಕವನ್ನು ಆಳ್ವಿಕೆ ಮಾಡಿರುವ ರಾಜಮನೆತನಗಳಲ್ಲಿ ಶಾತವಾಹನರು, ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರಿಗಳು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಮತ್ತು ಮುಸ್ಲಿಂ ರಾಜವಂಶಗಳು, ತದನಂತರ ರಾಜ್ಯವನ್ನು ಆಳಿದ ಪೋರ್ಚುಗೀಸರು ಬ್ರಿಟಿಷರು ಪ್ರಮುಖರಾದವರು. ಈ ಎಲ್ಲಾ ಆಡಳಿತಗಾರರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯವಾದ ಕೊಡುಗೆಗಳನ್ನು ನೀಡಿದ್ದಾರೆ. ಕದಂಬರು, ಗಂಗರು ಮತ್ತು ಚಾಲುಕ್ಯರ ಅವಧಿಯಲ್ಲಿ ಕನ್ನಡ ಸಾಹಿತ್ಯವು ಹೇಳಿಕೊಳ್ಳುವ ಮಟ್ಟದಲ್ಲಿ ಗ್ರಂಥಸ್ಥ ಭಾಷೆಯಾಗಿ ಬೆಳೆದಿರಲಿಲ್ಲ. ಈ ಕಾಲಘಟ್ಟದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳು ಹೆಚ್ಚು ಪ್ರಚಲಿತದಲ್ಲಿದ್ದವು. ಆದರೂ ಈ ಸಂದರ್ಭದಲ್ಲಿ ರಾಜಮನೆತನಗಳ ಶಾಸನಗಳಲ್ಲಿ ಕನ್ನಡದ ಬಳಕೆ ಮತ್ತು ಕನ್ನಡವನ್ನು ಪ್ರೋತ್ಸಾಹಿಸಿ ಬೆಳವಣಿಗೆಗೆ ಕಾರಣೀಭೂತರಾಗಿರುವುದನ್ನು ಕಾಣುತ್ತೇವೆ.

ಬಾದಾಮಿಯ ಚಾಲುಕ್ಯರು ಕ್ರಿಸ್ತಶಕ ಸುಮಾರು 540 ರಿಂದ 753ರ ಅವಧಿಯಲ್ಲಿ ಕರ್ನಾಟಕದಲ್ಲಿ ಆಳ್ವಿಕೆಯನ್ನು ಮಾಡಿದ್ದು ಮೊದಲ ಬಾರಿಗೆ ಕರ್ನಾಟಕವನ್ನು ಏಕ ಆಡಳಿತಕ್ಕೆ ಒಳಪಡಿಸಿದ್ದಾರೆ. ಇವರ ಕಾಲದಲ್ಲಿ ಸಾಹಿತ್ಯ ಗ್ರಂಥಗಳು ದೊರೆತಿಲ್ಲ. ಆದರೆ ಶಾಸನ ಸಾಹಿತ್ಯವನ್ನು ಗಮನಿಸಿದರೆ ಕನ್ನಡದ ಬಳಕೆಯು ಎದ್ದು ಕಾಣುತ್ತದೆ. ಕವಿರಾಜಮಾರ್ಗದಲ್ಲಿ ಚೆತ್ತಾಣ, ಬೆದಂಡೆ ಮೊದಲಾದ ಕಾವ್ಯ ಪ್ರಕಾರಗಳ ಬಗ್ಗೆ ಹೇಳುವುದರಿಂದ ಚಾಲುಕ್ಯರ ಕಾಲದ ಕನ್ನಡ ಸಾಹಿತ್ಯ ಪ್ರಚಲಿತದಲ್ಲಿತ್ತು ಎಂದು ಕಂಡುಬರುತ್ತದೆ. ಈ ಕಾಲಘಟ್ಟದ ಕಪ್ಪೆ ಅರಭಟ್ಟನ ಶಾಸನದಲ್ಲಿ :

**"ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ**

**ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್**

**ಮಾಧವನೀತನ್ ಪೆರನಲ್ಲ"**

ಎಂದು ಕನ್ನಡಿಗರನ್ನು ಬಣ್ಣಿಸುವ ಸಾಹಿತ್ಯವನ್ನು ಗಮನಿಸಬಹುದು. ಹಲವಾರು ಸಮಕಾಲೀನ ಶಾಸನಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಶ್ರವಣಬೆಳಗೊಳದಲ್ಲಿ ದೊರೆತಿವೆ.

ರಾಷ್ಟ್ರಕೂಟರು ಕ್ರಿಸ್ತಶಕ ಸುಮಾರು 753 ರಿಂದ 773 ಅವಧಿಯಲ್ಲಿ ಕರ್ನಾಟಕವನ್ನು ಸೇರಿದಂತೆ ನಾಡಿನ ಬಹುಭಾಗವನ್ನು ಆಳ್ವಿಕೆ ಮಾಡಿದ್ದಾರೆ. ಸಾಹಿತ್ಯ-ಸಂಸ್ಕೃತಿಗೆ ಇವರು ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅನೇಕ ಜೈನ ಮಹಾಕವಿಗಳು ರಾಷ್ಟ್ರಕೂಟರಲ್ಲಿ ಆಶ್ರಯವನ್ನು ಪಡೆದಿದ್ದರು. ಕನ್ನಡದ ಮೊದಲ ಗ್ರಂಥ ಕವಿರಾಜಮಾರ್ಗ ರಚನೆಯಾಗಲು ಪ್ರೇರಣೆಯಾದ ರಾಜವಂಶವಿದು. ಪಂಪ ಮತ್ತು ಪೊನ್ನರು ರಾಷ್ಟ್ರಕೂಟರ ಕಾಲದಲ್ಲಿ ಇದ್ದ ಮಹಾಕವಿಗಳು. ಪಂಪನು ಅರಿಕೇಸರಿಯ ಆಸ್ಥಾನದಲ್ಲಿದ್ದು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ. ಪೊನ್ನನು ಶಾಂತಿಪುರಾಣ ಮತ್ತು ಭುವನೈಕ ರಾಮಾಭ್ಯುದಯ, ಜಿನಾಕ್ಷರಮಾಲೆ ಕೃತಿಗಳನ್ನು ರಚಿಸಿದ್ದಾನೆ.

ಕಲ್ಯಾಣದ ಚಾಲುಕ್ಯರು ಕ್ರಿಸ್ತಶಕ ಸುಮಾರು 973 ರಿಂದ 1189ರವರೆಗೆ ಕರ್ನಾಟಕವನ್ನು ಆಳಿದ್ದಾರೆ. ಇವರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಪಾರವಾಗಿ ಸೃಷ್ಟಿಯಾಗಿರುವುದನ್ನು ನೋಡುತ್ತೇವೆ. ಕನ್ನಡದ ಹಿರಿಮೆಯನ್ನು ಹೆಚ್ಚಿಸಿರುವ ವಚನಸಾಹಿತ್ಯವು ಇವರ ಕಾಲದ ಕೊಡುಗೆಯಾಗಿದೆ. ಸತ್ಯಾಶ್ರಯನ ಆಶ್ರಯದಲ್ಲಿದ್ದ ಕವಿ ಚಕ್ರವರ್ತಿ ಎಂದು ಬಿರುದು ಪಡೆದಿದ್ದ ರನ್ನನ್ನು ಈ ಕಾಲದ ಮಹಾಕವಿ. ಸಾಹಸಭೀಮವಿಜಯ ಮತ್ತು ಅಜಿತನಾಥಪುರಾಣ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಕಲಚೂರಿ ಬಿಜ್ಜಳನ ಆಸ್ಥಾನದಲ್ಲಿ ಕೋಶಾಧಿಕಾರಿಯಾಗಿದ್ದು ಬಸವಣ್ಣನವರ ನಾಯಕತ್ವದಲ್ಲಿ ನಡೆದ ವಚನ ಸಾಹಿತ್ಯ ಚಳುವಳಿ ಕನ್ನಡ ಸಾಹಿತ್ಯಕ್ಕೆ ಹೊಸ ತಿರುವನ್ನು ನೀಡಿತು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಯ್ಸಳರ ಕಾಲವು ಸಹ ವಿಶೇಷವಾದದ್ದು. 1006 ರಿಂದ 1346 ರ ಅವಧಿಯಲ್ಲಿ ಕರ್ನಾಟಕದ ದಕ್ಷಿಣ ಭಾಗವನ್ನುಆಳ್ವಿಕೆ ಮಾಡಿದ ಹೊಯ್ಸಳರು ವಾಸ್ತುಶಿಲ್ಪದ ಕೊಡುಗೆಗೆ ಪ್ರಸಿzÀÞರಾಗಿದ್ದಾರೆ. ಹರಿಹರ, ರಾಘವಾಂಕ, ಜನ್ನ, ನೇಮಿಚಂದ್ರ, ರುದ್ರಭಟ್ಟ ಮೊದಲಾದವರು ಈ ಕಾಲದ ಪ್ರಮುಖ ಕವಿಗಳು. ಅಭಿನವ ಪಂಪನೆಂದು ಖ್ಯಾತನಾದ ನಾಗಚಂದ್ರನು ಒಂದನೇ ಬಲ್ಲಾಳನ ಆಶ್ರಯದಲ್ಲಿದ್ದು ರಾಮಚಂದ್ರಚರಿತಪುರಾಣ ಎಂಬ ಜೈನ ರಾಮಾಯಣವನ್ನು ಮತ್ತು ಮಲ್ಲಿನಾಥ ಪುರಾಣ ಎಂಬ ತೀರ್ಥಂಕರರ ಚರಿತೆಯನ್ನು ರಚಿಸಿದ್ದಾನೆ. ವಿಷ್ಣುವರ್ಧನನ ಕಾಲಾವಧಿಯಲ್ಲಿ ರಾಜಾದಿತ್ಯ ಎಂಬುವನು ವ್ಯವಹಾರಗಣಿತ, ಲೀಲಾವತಿ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಜನ್ನನು ಮೂರನೇ ಬಲ್ಲಾಳನ ಆಸ್ಥಾನದ ಕವಿಯಾಗಿದ್ದನು. ಯಶೋಧರ ಚರಿತೆ ಮತ್ತು

ಅನಂತನಾಥ ಪುರಾಣ ಎಂಬ ಜೈನ ಕಾವ್ಯಗಳನ್ನು ಬರೆದಿದ್ದಾನೆ. ಇವರ ಆಳ್ವಿಕೆಯ ಕಾಲಘಟ್ಟದಲ್ಲಿಯೇ ಹರಿಹರನ ರಗಳೆ ಮತ್ತು ಗಿರಿಜಾ ಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಕೇಶಿರಾಜನ ಶಬ್ದಮಣಿದರ್ಪಣಂ ಮೊದಲಾದ ಶ್ರೀಮಂತ ಮತ್ತು ನಾಡಿನ ಪರಂಪರೆಯನ್ನು ಪ್ರತಿಬಿಂಬಿಸುವ ಕೃತಿಗಳು ರಚಿತವಾದವು.

ವಿಜಯನಗರದ ಅರಸರುಗಳು ಕ್ರಿಸ್ತಶಕ ಸುಮಾರು 1336 ರಿಂದ 1632ರವರೆಗೆ ಹೆಚ್ಚುಕಡಿಮೆ ಇಡೀ ದಕ್ಷಿಣ ಭಾರತವನ್ನು ಆಳಿದರು. ಪ್ರತಿಯೊಂದು ಭಾಷೆಗಳ ಸಾಹಿತ್ಯ ರಚನೆಗೆ ಅವಕಾಶವನ್ನು ಮಾಡಿಕೊಟ್ಟಂತಹ ಇವರು ಕನ್ನಡ, ತೆಲುಗು, ಸಂಸ್ಕೃತ, ತಮಿಳು ಭಾಷೆಗಳಲ್ಲಿ ಇವರ ಅವಧಿಯಲ್ಲಿ ಹೆಚ್ಚು ಸಾಹಿತ್ಯವು ರಚನೆಯಾಯಿತು. ಕನ್ನಡ ಸಾಹಿತ್ಯದಲ್ಲಿ ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ, ಚಾಮರಸ ಮೊದಲಾದ ಶ್ರೇಷ್ಠ ಕವಿಗಳು ಮತ್ತು ಪುರಂದರದಾಸರು, ಕನಕದಾಸರಂತಹ ದಾಸವರೇಣ್ಯರು ಅತ್ಯಂತ ಉತ್ತಮವಾದ ಸಾಹಿತ್ಯವನ್ನು ಸೃಷ್ಟಿ ಮಾಡಿದರು. ಈ ಕಾಲಘಟ್ಟದಲ್ಲಿಯೇ ಕೀರ್ತನ ಸಾಹಿತ್ಯವೆಂಬ ಹೊಸ ಪ್ರಕಾರದ ಸಾಹಿತ್ಯವು ಕರ್ನಾಟಕದಲ್ಲಿ ಜನ್ಮತಾಳಿತು. ತೆಲುಗು ಸಾಹಿತ್ಯಕ್ಕೆ ವಿಜಯನಗರ ಸಾಮ್ರಾಜ್ಯದ ಕಾಲ ಸುವರ್ಣ ಯುಗ. ಕೃಷ್ಣದೇವರಾಯನು ಸ್ವತ: ಕವಿಯಾಗಿದ್ದನು. ಅಮುಕ್ತಮೌಲ್ಯದ ಎಂಬ ಕೃತಿಯನ್ನು ರಚಿಸಿದ್ದಾನೆ. ಅಷ್ಟದಿಗ್ಗಜರು ಎಂದು ಖ್ಯಾತರಾದ ತೆಲುಗು ಕವಿಗಳಿಗೆ ಆಶ್ರಯ ನೀಡಿದ್ದನು. ಒಟ್ಟಿನಲ್ಲಿ ಹೇಳುವುದಾದರೆ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟ ಎಲ್ಲ ಭಾಷೆಗಳ ಸಾಹಿತ್ಯ ಪ್ರಕಾರಗಳಿಗೆ ಪ್ರೋತ್ಸಾಹವನ್ನು ನೀಡಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಶ್ರೀಮಂತಿಕೆಯನ್ನು ಮತ್ತು ಗೌರವವನ್ನು ಹೆಚ್ಚಿಸಿದ್ದಾರೆ.

ಮೈಸೂರು ಒಡೆಯರು ಕ್ರಿಸ್ತಶಕ 1399 ರಿಂದ 1947 ರವರೆಗೆ ಅಂದರೆ ಸ್ವಾತಂತ್ರ್ಯದ ವರೆಗೆ ಕರ್ನಾಟಕದ ದಕ್ಷಿಣ ಭಾಗವನ್ನು ಆಳಿದರು. ಎಲ್ಲಾ ಭಾಷೆಗಳ ಸಾಹಿತ್ಯದ ರಚನೆಗೆ ಅವಕಾಶವನ್ನು ಒದಗಿಸಿಕೊಟ್ಟಿದ್ದರು. ಮೈಸೂರು ಒಡೆಯರ ರಾಜವಂಶಸ್ಥರಲ್ಲಿಯೇ ಹಲವಾರು ಅರಸರುಗಳು ಸ್ವತB ಸಾಹಿತ್ಯದ ರಚನೆಕಾರರಾಗಿದ್ದರು. ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಿಂಗರಾರ್ಯ, ಸಂಚಿ ಹೊನ್ನಮ್ಮ, ಶೃಂಗಾರಮ್ಮ, ಕೆಂಪುನಾರಾಯಣ ಮೊದಲಾದವರು ಇವರ ಆಶ್ರಯದಲ್ಲಿದ್ದ ಪ್ರಮುಖ ಕವಿಗಳು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಎಲ್ಲಾ ಕಾಲಗಳಲ್ಲೂ, ಎಲ್ಲ ಪ್ರಮುಖ ಧರ್ಮದ ಕವಿಗಳು ಸಾಹಿತ್ಯವನ್ನು ರಚನೆ ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ, ಕರ್ನಾಟಕದ ರಾಜಮನೆತನಗಳು ಸರ್ವಧರ್ಮ ಪೋಷಕರಾಗಿದ್ದರು. ಕರ್ನಾಟಕದ ರಾಜರುಗಳು ಕೇವಲ ಕನ್ನಡ ಭಾಷೆಯನ್ನಷ್ಟೇ ಪ್ರೀತಿಸದೆ ಅನ್ಯ ಭಾಷೆಗಳನ್ನು ಕೂಡ ಗೌರವಿಸುತ್ತಿದ್ದರು. ಇದು ಕರ್ನಾಟಕವನ್ನು ಆಳಿದ ರಾಜಮನೆತನಗಳ ಉದಾರ ಮನೋಭಾವಕ್ಕೆ ಸಾಕ್ಷಿಯಾಗಿದೆ.

VTU BSc ಸಾಹಿತ್ಯ ಸಿಂಚನ 21KSS27 Draft copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1. ಕನ್ನಡದಲ್ಲಿ ದೊರೆತಿರುವ ಮೊದಲ ಅಧಿಕೃತ ಶಿಲಾ ಶಾಸನ ಯಾವುದು?

    1. ಗಾಥಾಸಪ್ತಶತಿ
    2. ಶಿಲಪ್ಪದಿಕಾರಂ
    3. ಹಲ್ಮಿಡಿ ಶಾಸನ
    4. ಪಂಚತಂತ್ರ

2. ಬ್ರಹ್ಮಗಿರಿಯ ಶಾಸನದಲ್ಲಿ ಕನ್ನಡದ ಯಾವ ಪದ ಕಂಡುಬರುತ್ತದೆ?.

    1. ಚೆತ್ತಾಣ
    2. ಇಸಿಲ
    3. ಕರುನಾಡು
    4. ಬೆದಂಡೆ

3. ಕನ್ನಡದಲ್ಲಿ ಮೊದಲು ಅಧಿಕೃತವಾಗಿ ಲಭ್ಯವಾಗಿರುವ ಶ್ರೇಷ್ಠ ಅಲಂಕಾರಿಕ ಗ್ರಂಥ ಯಾವುದು?

    1. ಕವಿರಾಜಮಾರ್ಗ
    2. ವಡ್ಡಾರಾಧನೆ
    3. ಚಾವುಂಡರಾಯ ಪುರಾಣ
    4. ಆದಿಪುರಾಣ

11. ತಮ್ಮಟಕಲ್ಲು ಶಾಸನ ಯಾವ ಜಿಲ್ಲೆಯಲ್ಲಿ ಕಂಡು ಬರುತ್ತದೆ?.

    1. ಹಾಸನ
    2. ಚಿತ್ರದುರ್ಗ
    3. ಬಾದಾಮಿ
    4. ವಿಜಯಪುರ

21KSS27 Draft Copy
VTU BSc ಸಾಹಿತ್ಯ ಸಿಂಚನ

5. ಜೈನ ಕೃತಿಯಾದ ಪೂರ್ವಪುರಾಣದ ಕರ್ತೃ ಯಾರು?.

    1. ಜಿನಸೇನಾಚಾರ್ಯರ
    2. ಶ್ರೀ ರಂಗರಾಯರು
    3. ತಿರುಮಲಾರ್ಯ
    4. ಶ್ರೀಧರ ಆಚಾರ್ಯರು

6. ಸಂಸ್ಕೃತದ ಕವಿ ರವಿಷೇಣನ ಕೃತಿ ಯಾವುದು?

    1. ರಾಮಚಂದ್ರ ಪುರಾಣ
    2. ಕೃಷ್ಣ ಪುರಾಣ
    3. ಪದ್ಮಪುರಾಣ
    4. ವಿಷ್ಣು ಪುರಾಣ

**7.** "ಕಸವರ ವೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಂ ಧರ್ಮಮುಂ" ಈ ಮಾತನ್ನು ಯಾವ ಗ್ರಂಥದಲ್ಲಿ ಕಾಣುತ್ತೇವೆ?.

    1. ಕವಿರಾಜಮಾರ್ಗ
    2. ಪಂಪ ಪುರಾಣ
    3. ವಿಕ್ರಮರ್ಜುನ ವಿಜಯ
    4. ವಡ್ಡಾರಾಧನೆ

VTU BSc ಸಾಹಿತ್ಯ ಸಿಂಚನ 21KSS27 Draft Copy

**ಒಂದು ಅಥವಾ ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಆದಿಕವಿ ಪಂಪನು ಯಾರ ರಾಜಾಶ್ರಯದಲ್ಲಿದ್ದನು?
2. ಬಸವಣ್ಣನವರ ರಾಜಾಶ್ರಯದ ಕುರಿತು ಬರೆಯಿರಿ?
3. ಭಾರತ ದೇಶದಲ್ಲಿ ಮಹಾಕಾವ್ಯಗಳು ಎಂದು ಕರೆಯಲ್ಪಡುವ ಗ್ರಂಥಗಳು ಯಾವುವು?
4. ಮೌರ್ಯ ಸಾಮ್ರಾಜ್ಯ ಚಕ್ರವರ್ತಿ ಅಶೋಕನ ಕಾಲಘಟ್ಟದ ಬ್ರಹ್ಮಗಿರಿಯ ಶಿಲಾಶಾಸನದ ಬಗ್ಗೆ ಬರೆಯಿರಿ?

5. ಕಪ್ಪೆ ಅರಭಟ್ಟನ ಶಾಸನದ ಸಾಲುಗಳ ತಾತ್ಪರ್ಯವನ್ನು ಬರೆಯಿರಿ?

6. ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಪ್ರಭಾವವನ್ನು ಬೀರಿರುವ ಧರ್ಮಗಳ ಹೆಸರುಗಳನ್ನು ಬರೆಯಿರಿ?

7. ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಪ್ರಭಾವವನ್ನು ಬೀರಿರುವ ಅನ್ಯಭಾಷಾ ಗ್ರಂಥಗಳು ಯಾವುವು?

8. ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಹೆಚ್ಚು ಪ್ರಭಾವವನ್ನು ಬೀರಿರುವ ರಾಜವಂಶ ಯಾವುದು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಹಲ್ಮಿಡಿ ಶಿಲಾಶಾಸನ ಪೂರ್ವದ ಇತಿಹಾಸವನ್ನು ಬರೆಯಿರಿ..

2. ಕನ್ನಡ ಭಾಷೆಯ ಪ್ರಾಚೀನತೆಯನ್ನು ತಿಳಿಸುವ ಅನ್ಯಭಾಷಾ ಗ್ರಂಥಗಳನ್ನು ಕುರಿತು ವಿವರವಾಗಿ ಬರೆಯಿರಿ?

3. ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ ಇವೆರಡರ ಮಧ್ಯದ ಸಂಬಂಧವನ್ನು ವಿಶ್ಲೇಷಣಾತ್ಮಕವಾಗಿ ಬರೆಯಿರಿ.

VTU BSc ಸಾಹಿತ್ಯ ಸಿಂಚನ '22-23 / Draft Copy

# ಕವಿರಾಜಮಾರ್ಗ:

ಕವಿರಾಜಮಾರ್ಗವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ **ಅತ್ಯಂತ ಪ್ರಾಚೀನ ಗ್ರಂಥ.** ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಪ್ರಥಮ ಕೃತಿ. ನಾಡು-ನುಡಿ ಹಾಗೂ ನಾಡಿನ ಜನರ ಬಗ್ಗೆ ಅತ್ಯಂತ ಅಭಿಮಾನಪೂರ್ವಕ ಮಾತುಗಳಿಂದ ಮತ್ತು ಕನ್ನಡ ನಾಡಿನ ಬಗ್ಗೆ ಪ್ರೀತಿ, ಆತ್ಮವಿಶ್ವಾಸದ ಮಾತುಗಳನ್ನು ಹೇಳುವ ಹಾಗೂ ನಾಡಿನ ಬಗ್ಗೆ ಹೆಮ್ಮೆಯ ವಿಚಾರಗಳನ್ನು ಕವಿರಾಜಮಾರ್ಗ ತಿಳಿಸುತ್ತದೆ. ಎಲ್ಲ ದೃಷ್ಟಿಯಿಂದಲೂ ಕನ್ನಡದ ಆದ್ಯ ಗ್ರಂಥವೆಂದು ಗುರುತಿಸಲ್ಪಟ್ಟ ಗ್ರಂಥ ಕವಿರಾಜಮಾರ್ಗ. ಇದು ಒಂದು **ಅಲಂಕಾರ ಗ್ರಂಥ** ವಾಗಿದ್ದು ಕವಿರಾಜಮಾರ್ಗ ಪೂರ್ವ ಕಾಲಘಟ್ಟದ ಸಾಹಿತ್ಯದ ವಿಷಯಗಳನ್ನು ಮತ್ತು ಒಂಬತ್ತನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯ ತಿಳಿಸುವ ಕೈಗನ್ನಡಿ, ಕವಿರಾಜಮಾರ್ಗದ ಕಾಲದಿಂದ ಪ್ರಸ್ತುತದವರೆಗಿನ ಕಾವ್ಯರಚನೆಗೆ ಕೈದೀವಿಗೆ ಮತ್ತು ಮಾರ್ಗದರ್ಶನ ಗ್ರಂಥವಾಗಿದೆ.

ಕವಿರಾಜಮಾರ್ಗ ಗ್ರಂಥದಲ್ಲಿ ಅತ್ಯಂತ ಪ್ರಸಿದ್ಧಿಯಾದ **ರಾಷ್ಟ್ರಕೂಟ ದೊರೆ ನೃಪತುಂಗನ** ಉಲ್ಲೇಖವಿರುವುದರಿಂದ **ಕಾಲಾವಧಿ 815 ರಿಂದ 877.** ಈ ಅವಧಿಯಲ್ಲಿ ರಚನೆಯಾಗಿರಬಹುದು ಎಂದು ಹಲವಾರು ವಿದ್ವಾಂಸರು ತಿಳಿಸುತ್ತಾರೆ. ಒಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ರಚನೆಯಾಗಿರುವ ಮಾಹಿತಿ ನಮಗೆ ಹೆಚ್ಚಾಗಿ ದೊರೆಯುತ್ತದೆ. **ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಆಸ್ಥಾನದ ಕವಿ ಶ್ರೀವಿಜಯ**ನಿಂದ ರಚಿತವಾಗಿದೆ ಎಂದು ಹೇಳಲ್ಪಟ್ಟರೂ ಇದು ಸ್ಪಷ್ಟವಾದ ಮಾಹಿತಿ ಎಂದು ಪರಿಗಣಿಸಲ್ಪಟ್ಟಿಲ್ಲ.

ಕವಿರಾಜಮಾರ್ಗವು ಕನ್ನಡ ಸಾಹಿತ್ಯದಲ್ಲಿ ಉಪಲಬ್ಧವಾಗಿರುವ ಕನ್ನಡದ ಮೊದಲ ಪ್ರಾಚೀನ ಅಲಂಕಾರ ಶಾಸ್ತ್ರ ಗ್ರಂಥ, ಲಕ್ಷಣ ಗ್ರಂಥ, ವಿವೇಕಪರ ಕನ್ನಡಿಗರ ವಿಚಾರಗಳನ್ನು ತಿಳಿಸುವ ಗ್ರಂಥ. ನಾಡಿನ ಚರಿತ್ರೆಯನ್ನು ತಿಳಿಸುವ ಚಾರಿತ್ರಿಕ ಗ್ರಂಥ, ನಾಡು-ನುಡಿಯ ಬಗ್ಗೆ ವಿಮರ್ಶೆಯನ್ನು ತಿಳಿಸುವ ವಿಮರ್ಶಾತ್ಮಕ ಗ್ರಂಥವೆಂದು ಗುರುತಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಬಂದಿರುವ ವಿಷಯಗಳು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅನೇಕ ಮಹತ್ವದ ಮಾಹಿತಿಗಳನ್ನು ತಿಳಿಸುವುದರೊಂದಿಗೆ ಹೆಚ್ಚು ಮಹತ್ವವನ್ನು ಪಡೆದುಕೊಂಡಿರುವುದರಿಂದ ಗ್ರಂಥ ರಚನೆಕಾರರ ಬಗ್ಗೆ ಇದ್ದ ಗೊಂದಲಗಳನ್ನು ಯಾರೂ ಅಷ್ಟಾಗಿ ಚರ್ಚಿಸಲು ಇಚ್ಛಿಸುವುದಿಲ್ಲ.

## ಕವಿರಾಜಮಾರ್ಗ ಗ್ರಂಥದ ವಿಶೇಷತೆಗಳು:

೧. ಕವಿರಾಜಮಾರ್ಗವು ಪ್ರಮುಖವಾಗಿ **ಮೂರು ಪರಿZÉÒÃದಗಳನ್ನು** ಒಳಗೊಂಡಿರುವ ಲಕ್ಷಣ ಶಾಸ್ತ್ರ ಗ್ರಂಥವಾಗಿದೆ. ದೋಷಾನುವರ್ಣನ ನಿರ್ಣಯ, ಶಬ್ದಲಂಕಾರ ವರ್ಣನ ನಿರ್ಣಯ ಮತ್ತು ಅರ್ಥಾಲಂಕಾರ ವರ್ಣನ ನಿರ್ಣಯ ಎಂಬ ಮೂರು ಪರಿZÉÒÃದಗಳಿವೆ.

21KSS27 Draft Copy
VTU BSc ಸಾಹಿತ್ಯ ಸಿಂಚನ

೨. ಚಾರಿತ್ರಿಕವಾಗಿ ಕವಿರಾಜಮಾರ್ಗವು **ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ** ವ್ಯಕ್ತಿತ್ವ ಮತ್ತು ಮಹಿಮೆಯನ್ನು ಮತ್ತು ಅಂದಿನ ರಾಜಕೀಯ ಪರಿಸ್ಥಿತಿಯನ್ನು, ರಾಜಕೀಯ ಸ್ಥಿತ್ಯಂತರಗಳನ್ನು ತಿಳಿಸುತ್ತದೆ.

೩. ನಾಡು-ನುಡಿಯ ಬಗ್ಗೆ ಅಪಾರವಾದ ಮಾಹಿತಿಯನ್ನು ತಿಳಿಸುತ್ತಾ, ಕನ್ನಡನಾಡಿನ ಭೂಪ್ರದೇಶದ ವಿಸ್ತೀರ್ಣವನ್ನು ಕುರಿತಾಗಿ **"ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ"** ಎಂಬ ಮಾತಿನಲ್ಲಿ ಕನ್ನಡನಾಡಿನ ಭೌಗೋಳಿಕ ವಿಶಾಲತೆಯನ್ನು ತಿಳಿಸಲಾಗಿದೆ .

೪. ಕನ್ನಡ ನಾಡಿನ ಜನರ ಉದಾರತೆಯನ್ನು ಮತ್ತು ಸ್ವಭಾವವನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ. **"ಕಸವರ ವೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮಂ ಧರ್ಮಮಂ"** ಅಂದರೆ ಬೇರೆಯವರ ವಿಚಾರಗಳನ್ನು ಮತ್ತು ಅವರುಗಳ ಧರ್ಮವನ್ನು ಸಹಿಸುವುದಕ್ಕಿಂತ ಮತ್ತು ಹೊಂದಿಕೊಂಡು ಬಾಳುವುದಕ್ಕಿಂತ ಬೇರೆ ಐಶ್ವರ್ಯ ಸಂಪತ್ತು ಈ ಜಗತ್ತಿನಲ್ಲಿ ಬೇರೆ ಏನು ಇಲ್ಲ ಎಂಬುದು ವಾಕ್ಯದ ಅರ್ಥವಾಗಿದೆ. ಈ ಪದಗಳು ಮತ್ತು ವಾಕ್ಯದಿಂದ ಒಂಬತ್ತನೇ ಶತಮಾನದಲ್ಲಿ ಕನ್ನಡ ನಾಡಿನ ಜನರು ಧರ್ಮಸಹಿಷ್ಣತೆ ಸಹಬಾಳ್ವೆಯ ಬದುಕನ್ನು ಕಟ್ಟಿಕೊಂಡಿದ್ದರು, ಪರರನ್ನು ಪ್ರೀತಿಸುತ್ತಿದ್ದರು ಎಂಬ ವಿಚಾರಗಳನ್ನು ಇದರಲ್ಲಿ ನೋಡಬಹುದಾಗಿದೆ.

೫.ಕವಿರಾಜಮಾರ್ಗ ಗ್ರಂಥವು ಈ ಗ್ರಂಥದ ನಂತರ ರಚನೆಗೊಂಡ ಕನ್ನಡ ಸಾಹಿತ್ಯಕ್ಕೆ ರಾಜಮಾರ್ಗವನ್ನು ಮತ್ತು ರಹದಾರಿಯನ್ನು ಹಾಕಿಕೊಟ್ಟಿದೆ. ತದನಂತರ ಬಂದ ಎಲ್ಲ ಕನ್ನಡದ ಕವಿಗಳು ಮತ್ತು ಸಾಹಿತ್ಯ ರಚನೆಕಾರರು ಕಾವ್ಯರಚನೆಯ ಸಾಮರ್ಥ್ಯದ ಹಿನ್ನೆಲೆಯಲ್ಲಿ ಕವಿರಾಜಮಾರ್ಗದ ಒಂದು ಪದ್ಯವನ್ನು ನೀಡಲಾಗಿದೆ:

**"ಪದನರಿದು ನುಡಿಯಲುಂ ನುಡಿ**
**ದುದನರಿದಾರಯಲುಮಾರ್ಪರಾ ನಾಡವರ್ಗಳ್**
**ಚದುರರ್ ನಿಜದಿಂ ಕುರಿತೋ**
**ದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್"**

ವಿಶಾಲ ಕರ್ನಾಟಕದ ಸಂಸ್ಕೃತಿಯ ಸದ್ಗುಣಗಳನ್ನು ಮತ್ತು ನಾಡಿನ ಜನರ ವಿಶಿಷ್ಟ ಲಕ್ಷಣಗಳನ್ನು ಈ ಕೆಳಗಿನ ಪದ್ಯದಲ್ಲಿ ಗಮನಿಸಬಹುದು:

**"ಸುಭಟರ್ಕಳ್ ಕವಿಗಳು ಸು-**
**ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್**
**ಅಭಿಮಾನಿಗಳತ್ಯುಗ್ರರ್**
**ಗಂಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್"**

ಕವಿರಾಜಮಾರ್ಗ ಗ್ರಂಥದಲ್ಲಿ ಗದ್ಯ ಕಥೆ- **ಬೆದಂಡೆ, ಪಗರಣ, ಚೆತ್ತಾಣ** ಎಂಬ ಪ್ರಾಚೀನ ಸಾಹಿತ್ಯದ ರೂಪಗಳು ದಾಖಲಾಗಿವೆ. ಕನ್ನಡದ ಪ್ರಸಿದ್ಧ ಪ್ರಾಚೀನ ಗದ್ಯ ಕವಿಗಳೆಂಬ **ದುರ್ವಿನೀತ, ನಾಗಾರ್ಜುನ, ಜಯಬಂಧು, ಲೋಕಪಾಲರೂ, ಶ್ರೀವಿಜಯ, ಕವೀಶ್ವರ, ಪಂಡಿತ, ವಿಮಳೋದಯ** ಎಂಬ ಪದ್ಯ ಕವಿಗಳ ಹೆಸರುಗಳು ದಾಖಲಾಗಿರುವುದನ್ನು ಕಾಣುತ್ತೇವೆ. ವಿವೇಚನಾ ಪರವಾದ ವಿಚಾರಗಳು ಮತ್ತು ಗ್ರಂಥಕಾರನ ಹೃದಯ ವಿಶಾಲತೆಯನ್ನು, ಅಂದಿನ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗೆ ಹೊಂದಿಕೊಂಡಂತಹ, ನಾಡಿನ

ಸಂಸ್ಕೃತಿಯನ್ನು ಮತ್ತು ಜನರ ಸದ್ಗುಣಗಳನ್ನುವಿಶಿಷ್ಟವಾಗಿ ಪ್ರಸ್ತುತಪಡಿಸಲು ಪ್ರಯತ್ನಿಸಿರುವ ಪ್ರಾಮಾಣಿಕ ಪ್ರಯತ್ನವನ್ನು ಕವಿರಾಜಮಾರ್ಗದಲ್ಲಿ ಕಾಣುತ್ತೇವೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಪ್ರಥಮ ಕೃತಿ ಯಾವುದು?
2. ಕವಿ ಶ್ರೀವಿಜಯನು ಯಾರ ಆಸ್ಥಾನದಲ್ಲಿ ಕವಿಯಾಗಿದ್ದನು ಎಂದು ಉಲ್ಲೇಖಗಳಲ್ಲಿ ಕಾಣುತ್ತೇವೆ?
3. ಕವಿರಾಜಮಾರ್ಗ ಗ್ರಂಥದಲ್ಲಿ ಎಷ್ಟು ಪರಿZÉÒÃದಗಳಿವೆ?
4. ಕವಿರಾಜಮಾರ್ಗದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಪ್ರಾಚೀನ ಸಾಹಿತ್ಯ ರೂಪಗಳು ಯಾವುವು?
5. ಕವಿರಾಜಮಾರ್ಗ ಗ್ರಂಥದ ರಚನೆಯ ಕಾಲ ಯಾವುದು?
6. ಅಮೋಘವರ್ಷ ನೃಪತುಂಗ ಯಾವ ರಾಜವಂಶದ ಸಾಮ್ರಾಟನಾಗಿದ್ದನು?
7. ಕವಿರಾಜಮಾರ್ಗದಲ್ಲಿ ಕನ್ನಡನಾಡಿನ ಭೌಗೋಳಿಕ ವಿಸ್ತೀರ್ಣ ಎಲ್ಲಿಂದ ಎಲ್ಲಿವರೆಗೆ ಇತ್ತು ಎಂದು ಹೇಳಲಾಗಿದೆ?
8. ಚಾರಿತ್ರಿಕವಾಗಿ ಲಭ್ಯವಿರುವ ಕನ್ನಡದ ಉಪಲಬ್ಧ ಕೃತಿ ಯಾವುದು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಕವಿರಾಜಮಾರ್ಗ ಗ್ರಂಥವು ಕನ್ನಡ ಸಾಹಿತ್ಯದ 'ಲಕ್ಷಣ ಗ್ರಂಥ'ವಾಗಿದೆ ಎಂಬ ಈ ಮಾತನ್ನು ನಿದರ್ಶನಗಳ ಸಮೇತ ವಿವರಿಸಿ.
2. ಕವಿರಾಜಮಾರ್ಗ ಗ್ರಂಥದಲ್ಲಿ ಧರ್ಮಸಹಿಷ್ಣುತ ವಿಷಯಗಳನ್ನು ಮತ್ತು ನಾಡಿನ ಭೌಗೋಳಿಕ ವಿಸ್ತೀರ್ಣದ ಕುರಿತಾಗಿ ಪ್ರಸ್ತುತ ಪಡಿಸಿರುವ ವಿಷಯವನ್ನು ವಿಶ್ಲೇಷಿಸಿರಿ.

21KSS27 Draft Copy
VTU BSc ಸಾಹಿತ್ಯ ಸಿಂಚನ

# ಶಿವಕೋಟ್ಯಾಚಾರ್ಯರ ವಡ್ಡಾರಾಧನೆ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಗದ್ಯಶೈಲಿಯಲ್ಲಿ ಶಿವಕೋಟ್ಯಾಚಾರ್ಯರಿಂದ ರಚನೆಯಾಗಿರುವ ವಡ್ಡಾರಾಧನೆಯು ಜೈನ ಧಾರ್ಮಿಕ ಕಥೆಗಳ ಕೃತಿಯಾಗಿದೆ. ಪಂಪ ಪೂರ್ವ ಯುಗದಲ್ಲಿ ದೊರೆತಿರುವ **ಕನ್ನಡದ ಮೊದಲ ಗದ್ಯ ಕೃತಿ** ಎಂದು ಗುರುತಿಸಲ್ಪಟ್ಟಿದೆ. ಈ ಕೃತಿಯು ಕ್ರಿಸ್ತಶಕ 970 ರಲ್ಲಿ ರಚನೆಯಾಗಿರಬಹುದು ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯ ರಚನೆಗೆ ಆಧಾರ ಹರಿಷೇಣನ **ಬೃಹತ್ ಕಥಾ ಕೋಶ** ಎಂದು ಗುರುತಿಸಲಾಗಿದೆ . ವಡ್ಡಾರಾದನೆಯ ಕಥೆಗಳು ಸಾಂಪ್ರದಾಯಿಕವಾಗಿ ಮತ್ತು ಪ್ರಚಾರಕವಾಗಿ ಕಂಡರೂ ಪ್ರತಿಯೊಂದು ಕಥೆಯಲ್ಲೂ ಆಕರ್ಷಣೆ ಮತ್ತು ಮಾರ್ಗದರ್ಶನವನ್ನು ಕಾಣುತ್ತೇವೆ. ವಡ್ಡಾರಾದನೆಯಲ್ಲಿ 19 ಕಥೆಗಳು ಇವೆ. ವಡ್ಡಾರಾಧನೆ ಕೃತಿಯು ಮೊದಲು ಸುಕುಮಾರಸ್ವಾಮಿಯ ಕಥೆಯಿಂದ ಪ್ರಾರಂಭವಾಗುತ್ತದೆ. **ಸುಕುಮಾರಸ್ವಾಮಿ ಕಥೆ**ಯು ಬೇರೆ ಬೇರೆ ಭವಾವಳಿ (ಜನ್ಮಾಂತರ) ಗಳನ್ನು ಎತ್ತಿ , ಹಲವಾರು ರೀತಿಯ ಅನುವ್ರತಗಳನ್ನು ಪೂರೈಸಿ ಕೊನೆಗೆ ಮೋಕ್ಷ ಪಡೆದ ವಾಯುಭೂತಿಯ ಕತೆಯಾಗಿದೆ. **19ನೆಯ ಕಥೆಯು ವೃಷಭಸೇನ ರಿಸಿಯ ಕಥೆ** : ಇದು ಸಜೀವ ದಹನವನ್ನು ಸಹಿಸಿ ರತ್ನತ್ರಯ ಸಾಧಿಸಿದ ಕಥೆಯಾಗಿದೆ.

**ವಡ್ಡಾರಾಧನೆ ಕೃತಿಗೆ ಉಪಸರ್ಗ ಕೇವಲಿಗಳ ಕತೆ** ಎಂಬ ಮತ್ತೊಂದು ಹೆಸರು ಕೂಡ ಇದೆ. ವಡ್ಡಾರಾಧನೆ ಎಂದರೆ ಹಿರಿಯ ಜೈನಮುನಿಗಳ ಸೇವೆ ಮತ್ತು ವ್ರತ ಎಂಬ ಅರ್ಥವಿದೆ. ಈ ಕೃತಿಯನ್ನು ಮೊಟ್ಟ ಮೊದಲಬಾರಿಗೆ **ಡಿ. ಎಲ್. ನರಸಿಂಹಾಚಾರ್ ಇವರು 1949** ರಲ್ಲಿ ಪ್ರಕಟಿಸಿದರು. ವಡ್ಡಾರಾಧನೆಯು ಬಹಳ ಮುಖ್ಯವಾಗಿ ಜೈನಮುನಿಗಳು ಮತ್ತು ಸಾಧುಸನ್ಯಾಸಿಗಳು ತತ್ವ ಪಾಲನೆಯಿಂದ ತಪಸ್ಸನ್ನು ಆಚರಿಸಿ ಸದ್ಗತಿಯನ್ನು ಪಡೆದು ಹೇಗೆ ಮುಕ್ತಿಯನ್ನು ಪಡೆದರು ಮತ್ತು ಪಡೆಯಬಹುದು ಎಂಬುದನ್ನು ತಿಳಿಸುತ್ತದೆ ಪ್ರತಿಯೊಂದು ಜೀವಿಯ (ಮಾನವರ) ಪೂರ್ವ ಭವಾವಳಿಯ ಕಥೆಗಳು ನಿರೂಪಿತವಾಗಿರುವುದನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಬಹುತೇಕ ಎಲ್ಲ ಕಥೆಗಳು ಮನುಷ್ಯನ ಬದುಕಿನ ಭಯಂಕರತೆಯನ್ನು ಸ್ಪಷ್ಟವಾಗಿ ಚಿತ್ರಿಸಿ, ಆ ಮುಖಾಂತರ ಓದುಗನು ತನ್ನ ಮುಕ್ತಿಯನ್ನು ಹೇಗೆ ಕಂಡುಕೊಳ್ಳಬಹುದು ಮತ್ತು ಅಹಿಂಸೆಯನ್ನು ಬದುಕಿನಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು, ಆ ಮುಖಾಂತರ ಬದುಕಿನ ಸದುದ್ದೇಶದ ಸಾಧನೆಯ ಮಾರ್ಗವನ್ನು ಕಂಡುಕೊಳ್ಳಬಹುದು ಎಂಬುದನ್ನು ತಿಳಿಸುತ್ತವೆ.

ವೈರಾಗ್ಯ ಬೋಧನೆಯನ್ನು ತಿಳಿಸುವುದು ಈ ಕೃತಿಯ ಮೂಲ ಉದ್ದೇಶವಾಗಿರುವಂತೆ ಕಾಣುತ್ತದೆ. ವಡ್ಡಾರಾಧನೆಯಲ್ಲಿ ದೇಸಿ ಭಾಷೆಯ ಸೊಗಡು ಗಮನಾರ್ಹವಾಗಿದೆ. ಜಾನಪದ ಆಶಯಗಳು ವಿಶೇಷವಾಗಿವೆ. ಬಳಕೆಯಲ್ಲಿರುವ ಜನಪದ ಕಥೆಗಳನ್ನೇ ಧರ್ಮನಿರೂಪಣೆಗೆ ಅಳವಡಿಸಿಕೊಂಡಿರುವಂತಿದೆ. ವಡ್ಡಾರಾಧನೆ ಜೈನ ಧರ್ಮದ ಗ್ರಂಥವಾಗಿರುವಂತೆ 10ನೇ ಶತಮಾನದ ಕನ್ನಡನಾಡಿನ ಜೀವನ ಚಿತ್ರಣದ ದಾಖಲೆಯೂ ಆಗಿದೆ. ವಡ್ಡಾರಾಧನೆಯಲ್ಲಿ ದೇಶಿಯ ಕನ್ನಡದ ಬಳಕೆಯ ಪದಗಳನ್ನು ಗಮನಿಸಿದಾಗ ಈ

VTU BSc ಸಾಹಿತ್ಯ ಸಿಂಚನ 21KSS27 Draft Copy

ಕೃತಿಯು ಕನ್ನಡ ಭಾಷೆಯ ಪೂರ್ವದ ಹಳೆಗನ್ನಡದ ಭಾಷಾ ಸ್ವರೂಪವನ್ನು ಪರಿಚಯಮಾಡಿಕೊಡುವ ವಿಶೇಷ ಗ್ರಂಥವಾಗಿ ಪರಿಗಣಿಸಲ್ಪಟ್ಟಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಕನ್ನಡ ಸಾಹಿತ್ಯದಲ್ಲಿ ಲಭ್ಯವಿರುವ ಪ್ರಥಮ ಗದ್ಯ ಕೃತಿ ಯಾವುದು?
2. ವಡ್ಡಾರಾಧನೆ ಗ್ರಂಥವನ್ನು ಯಾರು ಮತ್ತು ಯಾವ ಕಾಲಾವಧಿಯಲ್ಲಿ ರಚಿಸಿದ್ದಾರೆ?
3. ವಡ್ಡಾರಾಧನೆ ಕೃತಿಯ ತಾತ್ಪರ್ಯವನ್ನು ಬರೆಯಿರಿ?
4. ವಡ್ಡಾರಾಧನೆಯಲ್ಲಿ ಬರುವ ಮೊದಲ ಕಥೆ ಸುಕುಮಾರಸ್ವಾಮಿಯ ಕಥೆಯ ಮೂಲ ವಿಷಯ ಯಾವುದು?
5. ವಡ್ಡಾರಾಧನೆ ಕೃತಿಯ ರಚನೆಗೆ ಆಧಾರವಾಗಿರುವ ಆಕರ ಗ್ರಂಥ ಯಾವುದು ಮತ್ತು ಅದನ್ನು ರಚಿಸಿದವರು ಯಾರು?
6. ವಡ್ಡಾರಾಧನೆ ಕತೆಯನ್ನು ಮೊದಲ ಬಾರಿಗೆ ಯಾರು ಮತ್ತು ಯಾವ ವರ್ಷದಲ್ಲಿ ಪ್ರಕಟಿಸಿದ್ದಾರೆ?
7. ಪೂರ್ವದ ಹಳೆಗನ್ನಡದ ಭಾಷೆಯ ಸ್ವರೂಪವನ್ನು ಯಾವ ರೀತಿಯಲ್ಲಿ ವಡ್ಡಾರಾಧನೆಯ ತಿಳಿಸುತ್ತದೆ?
8. ವಡ್ಡಾರಾಧನೆಯಲ್ಲಿ ಎಷ್ಟು ಕಥೆಗಳನ್ನು ಪ್ರಸ್ತುತಪಡಿಸಲಾಗಿದೆ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ವಡ್ಡಾರಾಧನೆ'ಯು ಕನ್ನಡ ಸಾಹಿತ್ಯದ ಗದ್ಯ ಕೃತಿಯ ಸ್ಥಾನದಲ್ಲಿ ಅತ್ಯಂತ ಪ್ರಮುಖ ಕೃತಿಯಾಗಿದೆ ವಿವರಿಸಿ.
2. ವಡ್ಡಾರಾಧನೆ ಕೃತಿಯ ಬಗ್ಗೆ ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ - ನಾಲ್ಕು

# ಪಂಪ / ಚಂಪೂ ಯುಗದ ಕನ್ನಡ ಸಾಹಿತ್ಯ ಮತ್ತು ಪರಂಪರೆ:

## ಪಂಪಯುಗ (ಚಂಪೂ ಯುಗ)

ಕನ್ನಡದ ಶಾಸನ ಸಾಹಿತ್ಯ ಚರಿತ್ರೆ ಮತ್ತು ಕನ್ನಡದ ಮೊದಲ ಉಪಲಬ್ದ ಲಕ್ಷಣ ಗ್ರಂಥ/ ಅಲಂಕಾರ ಗ್ರಂಥವಾದ ಕವಿರಾಜಮಾರ್ಗದ ನಂತರ, ಕ್ರಿಸ್ತಶಕ ಸುಮಾರು ೯೦೦ ರಿಂದ 1150 ರ ಅವಧಿಯನ್ನು ಪಂಪ ಯುಗವೆಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕರೆಯಲಾಗುತ್ತದೆ. ಭಾಷಾ ವಿದ್ವಾಂಸರುಗಳ ಪ್ರಕಾರ ಕನ್ನಡ ಸಾಹಿತ್ಯದ ಪ್ರಥಮ ಘಟ್ಟ ಪಂಪ ಯುಗ ಎಂದು ಗುರುತಿಸಲಾಗಿದೆ. ಆದಿಕವಿ ಪಂಪನಿಂದ ವಚನ ಸಾಹಿತ್ಯ ಚಳುವಳಿಯ ಹರಿಕಾರ ಬಸವಣ್ಣನವರೆಗೆ ಈ ಯುಗದ ವ್ಯಾಪ್ತಿಯಿದೆ. ಪಂಪ ಯುಗದ ಪ್ರಮುಖ ಕೊಡುಗೆಯೆಂದರೆ ಚಂಪೂಕಾವ್ಯಗಳು. ಈ ಯುಗದಲ್ಲಿ ಪಂಪ, ರನ್ನ, ಪೊನ್ನ- ಈ ಮೂವರು ಮಹಾಕಾವ್ಯಗಳನ್ನು ರಚಿಸಿರುವ ಮಹಾಕವಿಗಳು, ಕನ್ನಡದ ರತ್ನತ್ರಯರು ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. **"ಪಸರಿಪ ಕನ್ನಡಕ್ಕೋರ್ವನೇ ಸತ್ಕವಿ ಪಂಪನಾವಗಂ"** ಎಂದು ನಾಗರಾಜ ಕವಿಯು ಪಂಪನನ್ನು ಹೊಗಳಿದ್ದಾನೆ.

10ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಪಂಪ ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಚಾಲುಕ್ಯ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಮತ್ತು ಕಲಿಯೂ ಆಗಿದ್ದ ಈತ ಆ ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಮತ್ತು ಅಸ್ತಿತ್ವವನ್ನು ಜಗತ್ತಿಗೆ ಪರಿಚಯಿಸಿದ್ದರಿಂದ ಕನ್ನಡದ ಆದಿಕವಿ ಎಂದು ಪ್ರಸಿದ್ಧರಾಗಿದ್ದಾರೆ.

ಚಂಪೂ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿ ಅದು ಸುಮಾರು ಎರಡರಿಂದ ಮೂರು ಶತಮಾನಗಳ ಕಾಲ ಪ್ರಭಾವೀ ಸಾಹಿತ್ಯ ಮಾಧ್ಯಮವಾಗಿ ಬಳಕೆಯಾಗುವಂತೆ ಮಾಡಿದವನು ಈತನೇ. ಚಂಪೂ ಪರಂಪರೆಯಲ್ಲಿ ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ರೀತಿಯ ಕಾವ್ಯಮಾರ್ಗಗಳಿಗೆ ಪಂಪನೇ ಸದ್ಯಕ್ಕೆ ಮೊದಲಿಗನೆನ್ನಬಹುದು. ಈತನ ಎರಡು ಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣಗಳಿಗೆ ಕ್ರಮವಾಗಿ ವ್ಯಾಸರ ಮಹಾಭಾರತ ಮತ್ತು ಜಿನಸೇನಾಚಾರ್ಯರ ಪೂರ್ವಪುರಾಣ ಆಕರ ಗ್ರಂಥಗಳು. ವಿಕ್ರಮಾರ್ಜುನ ವಿಜಯದಲ್ಲಿ ತನ್ನ ಆಶ್ರಯದಾತ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮೀಕರಿಸಿ ಪೌರಾಣಿಕ ಗ್ರಂಥವಾಗಿ, ಐತಿಹಾಸಿಕ ಅಂಶಗಳನ್ನು ಸ್ವಾರಸ್ಯವಾಗಿ ಹೊಂದಿಸಿ ಮಹಾಭಾರತದ ಕಥೆಯನ್ನು ನಿರೂಪಿಸಿದ್ದಾನೆ. ಆದಿಪುರಾಣ ಪ್ರಥಮ ಜಿನನಾದ

ವೃಷಭನಾಥನ ಕಥೆಯನ್ನೊಳಗೊಂಡ, ಕಾವ್ಯಧರ್ಮ ಹಾಗೂ ಧರ್ಮ ಎರಡೂ ಸಮರಸವಾಗಿ ಬೆರೆತಿರುವ ಧಾರ್ಮಿಕ ಕಾವ್ಯ. ವಸ್ತು, ಭಾಷೆ, ಭಾವ, ಶೈಲಿ ಈ ಎಲ್ಲ ರೀತಿಯಿಂದ ಪಂಪನ ಕಾವ್ಯಗಳು ಕನ್ನಡ ಭಾಷೆಗೆ ಕೊಟ್ಟ ಅದ್ವಿತೀಯ ಕೊಡುಗೆಗಳಾಗಿವೆ.

## ಆದಿಪುರಾಣ:

ಜೈನ ಧರ್ಮದ ಮೊದಲ ತೀರ್ಥಂಕರನಾದ ವೃಷಭನಾಥನ ಜೀವನದ ಕಥೆಯನ್ನು ಕುರಿತು ತಿಳಿಸುತ್ತದೆ. ಇದು ಕನ್ನಡದ ಪ್ರಧಾನವಾದ ಚಂಪೂಕಾವ್ಯವಾಗಿದೆ. ಒಟ್ಟು 16 ಆಶ್ವಾಸಗಳಲ್ಲಿ ಮೊದಲನೆಯ ೭ ಆಶ್ವಾಸಗಳು -ಪುರದೇವನ ಹಿಂದಿನ ಒಂಬತ್ತು ಜನ್ಮಗಳ ಬಗ್ಗೆ ಹೇಳುತ್ತವೆ. ೭ರಿಂದ ೧೦ನೇ ಆಶ್ವಾಸಗಳು-ಪುರದೇವನ ಜನನ,ಬಾಲ್ಯದ ಜೀವನದ ಬಗ್ಗೆ, ತಪಸ್ಸು, ಸಮವಸರಣದ ಬಗ್ಗೆ ಹೇಳುತ್ತವೆ. ೧೧ ರಿಂದ ೧೬ನೇ ಆಶ್ವಾಸವರೆಗೆ ಭರತ ಚಕ್ರವರ್ತಿಯ ಕಥೆಯನ್ನು ವಿವರಿಸುತ್ತದೆ. ಈ ಕಥೆಗಳಲ್ಲಿ ನೀಳಾಂಜನೆ ಎಂಬ ನರ್ತಕಿಯ ಕಥೆಯು ರೋಮಾಂಚನ ಮೂಡಿಸುತ್ತದೆ. ವೃಷಭನಾಥನ ಹಿರಿಯ ಮಗ ಭರತ ಚಕ್ರವರ್ತಿ ಮತ್ತು ಕಿರಿಯಮಗ ಬಾಹುಬಲಿಯ ನಡುವಿನ ಅಧಿಕಾರಕ್ಕಾಗಿ ನಡೆವ ಕದನದ ಪ್ರಸಂಗ ವಾಸ್ತವಿಕತೆಯಿಂದ ಕೂಡಿದೆ. ತನ್ನ ಅಣ್ಣನ ರಾಜ್ಯದ ಆಸೆಯನ್ನು ಕಂಡು ಬಾಹುಬಲಿಯು ಸನ್ಯಾಸತ್ವ ಪಡೆದು, ಭರತನಲ್ಲಿ ಪಶ್ಚಾತಾಪ ಮೂಢಿಸುವುದು ಕಥೆಯ ಹಿರಿಮೆ.

"ಆದಿಪುರಾಣ" ಜೈನರ ಮೊಟ್ಟಮೊದಲ ತೀರ್ಥಂಕರನಾದ ಆದಿದೇವ ಅಥವಾ ಪುರುದೇವನನ್ನು ಕುರಿತದ್ದು. ಜೈನರ ಪ್ರಕಾರ ಇಪ್ಪತ್ನಾಲ್ಕು ಜನ ತೀರ್ಥಂಕರರು. ತೀರ್ಥಂಕರರು ಎಂದರೆ ಮುಕ್ತಿಯನ್ನು ಪಡೆದು ಪವಿತ್ರರಾದವರು. ಅವರಲ್ಲಿ ಮೊದಲನೆಯ ತೀರ್ಥಂಕರ ಆದಿದೇವ ಅಥವಾ ಪುರುದೇವ. ಈ ಆದಿದೇವನ ಕತೆಯೇ "ಆದಿಪುರಾಣ"ದ ಕತೆ.

ಆದಿಪುರಾಣದ ಉತ್ತರಾರ್ಧದಲ್ಲಿ ಭರತ ಮತ್ತು ಬಾಹುಬಲಿ ನಡುವಿನ ಯುzÀÞದ ಸಂದರ್ಭದಲ್ಲಿ ಭರತನ ಮನ¹Üತಿಯನ್ನು ಮತ್ತು ಅವನು ಸಂಪತ್ತಿನ ಮೇಲೆ ಇಟ್ಟುಕೊಂಡಿದ್ದ ವ್ಯಾಮೋಹವನ್ನು ಕಂಡು ವೈರಾಗ್ಯದ ಮಾತುಗಳನ್ನು (ತೀವ್ರ ಅವಮಾನ, ಆಕ್ರೋಶಗಳಿಂದ ಕೂಡಿದ ಭರತ ತಮ್ಮನನ್ನು ಕೊಲ್ಲಲು ಸಿದ್ಧನಾಗುತ್ತಾನೆ. ಇಡೀ ಬೆಳವಣಿಗೆಯು ಬಾಹುಬಲಿಯಲ್ಲಿ ಐಹಿಕತೆಯ ಬಗ್ಗೆ ತೀವ್ರ ಜಿಜ್ಞಾಸೆ ತಳೆಯುವಂತೆ ಮಾಡುತ್ತದೆ. ತಾನು ಯುದ್ಧದಲ್ಲಿ ಗೆದ್ದ ರಾಜ್ಯವನ್ನು ಅಣ್ಣನಿಗೇ ಕೊಟ್ಟು) ಈ ರೀತಿ ಹೇಳುತ್ತಾನೆ:

**ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ ಈ ಭಟಖಡ್ಗಮಂಡಲೋ**

**ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ**

**ವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನ್**

ಒಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗೞ್ತೆ ಮಾಸದೇ

(ಭರತ ಬಾಹುಬಲಿಯವರ ಮಧ್ಯೆ ರಾಜ್ಯಕ್ಕಾಗಿ ಯುzÀÞ ನಡೆಯುವ ಸಂದರ್ಭದಲ್ಲಿ ಯುದ್ಧ ಸಮರೋಪಾದಿಯಲ್ಲಿ ಸೈನಿಕರ ಖಡ್ಗಸಮೂಹವೆಂಬ ಸರೋವರದಲ್ಲಿ ಸುಳಿದಾಡುವ ದುಂಬಿಯಂತಹ ಸುಂದರವಾದ ರಾಜ್ಯಲಕ್ಶ್ಮಿಯು ನಿನ್ನ ಎದೆಯಲ್ಲಿಯೇ ಶಾಶ್ವತವಾಗಿ ನೆಲಸಲಿ. ಇದರಿಂದ ಮಹಾ ನನಗಾದರೂ ಏನಾದೀತು, ಆದಿದೇವನು ಕೊಟ್ಟ ರಾಜ್ಯಕ್ಕೆ ಏಕೆ ಹೊಡೆದಾಡಬೇಕು, ಅಣ್ಣನಾದ ನೀನು ಒಲಿದ ಹೆಣ್ಣಿಗಾಗಲೀ ಮಣ್ಣಿಗಾಗಲೀ ಆಸೆಪಟ್ಟರೆ ನನಗೆ ಕೆಟ್ಟ ಹೆಸರು ಮತ್ತು ಕಳಂಕವೂ ಬಂದೀತು ಎಂದು ಬಾಹುಬಲಿ ಹೇಳುತ್ತಾನೆ). ತದನಂತರ ಬಹುಬಲಿ ತಪಸ್ಸಿಗೆ ತೆರಳುತ್ತಾನೆ. ಅಣ್ಣ ಭರತನು ಚಕ್ರವರ್ತಿಯಾಗಿ ಮುಂದುವರಿದರೂ ಕ್ರಮೇಣ ಅವನೂ ಸಹ ಪಕ್ವಗೊಳ್ಳುತ್ತಾನೆ.

## ವಿಕ್ರಮಾರ್ಜುನ ವಿಜಯ ( ಪಂಪಭಾರತ):

ಕನ್ನಡದ ಆದಿಕವಿ ಮತ್ತು ಮೇರು ಕವಿ ಪಂಪನು ತಾನು ರಚಿಸಿರುವ ಪಂಪಭಾರತ / ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ ಲೌಕಿಕವನ್ನು ಅಂದರೆ ಲೋಕದ ವ್ಯಾಪಾರ ವ್ಯವಹಾರವನ್ನು, ನಯಗುಣ ಗರಿಮೆಗಳನ್ನು ತಿಳಿದುಕೊಳ್ಳಬಹುದೆನ್ನುತ್ತಾನೆ ಪಂಪ. " ಮಾನವ ಜಾತಿ ತಾನೊಂದೆ ವಲಂ " ಎಂದು ಜಗತ್ತಿಗೆ ಸಂದೇಶವನ್ನು ನೀಡಿದ ಮೊದಲ ಕವಿ ಪಂಪ.

ಈ ಕೃತಿಯಲ್ಲಿ ಕವಿ ಪಂಪನು ಭಾರತದ ಮಹಾಕಾವ್ಯಗಳಲ್ಲಿ ಒಂದಾದ ಮಹಾಭಾರತದ ಕಥೆಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾನೆ. . ಪಂಪಭಾರತದಲ್ಲಿ ಅರ್ಜುನನೆ ಪ್ರಧಾನ ನಾಯಕ. ಇಲ್ಲಿ ಪಂಪ ತನ್ನ ಆಶ್ರಯದಾತ,ಮಿತ್ರನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಕಾವ್ಯ ರಚಿಸಿದ್ದಾನೆ.ಈ ಕೃತಿಯ ಪ್ರಕಾರ ದ್ರೌಪದಿ ವಿವಾಹವಾಗುವುದು ಅರ್ಜುನನನ್ನು ಮಾತ್ರ.ತನ್ನ ರಾಜ ಅರಿಕೇಸರಿಗೆ ಹೋಲಿಸಿ ಬರೆದ ಕಾರಣ ಪಂಪ ಮಹಾಭಾರತದ ಕಥೆಯಲ್ಲಿ ಇಂತಹ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಿ ಬಂತು. ಪಂಪಭಾರತ ಕಾವ್ಯವು ಗದ್ಯ ಪದ್ಯ ಮಿಶ್ರಣದ ಒಂದು ಚಂಪೂ ಕಾವ್ಯ .ಪಂಪ ಕವಿ ತನ್ನ ಕಥಾಭಿತ್ತಿಯಾಗಿ ಆರಿಸಿಕೊಂಡಿದ್ದು ಸಂಸ್ಕೃತ ವ್ಯಾಸಭಾರತ ಕಥೆ. ಕನ್ನಡ ಭಾಷೆಯ ಆದಿಕಾವ್ಯವಾಗಿರುವುದು ಇದರ ವೈಶಿಷ್ಟ್ಯ. ಹಿಂದಿನ ಪ್ರಸಿದ್ಧ ಮಹಾಕಾವ್ಯಗಳಂತಲ್ಲದೆ ನಗರ,ಸಮುದ್ರ, ಪರ್ವತ, ಋತು ಮುಂತಾಗಿ ಪ್ರಸಿದ್ಧವಾಗಿರುವ 18 ವರ್ಣನೆಗಳಿಗೆ ಯಥೋಚಿತ್ತವಾಗಿ ಪ್ರಾಮುಖ್ಯಕೊಟ್ಟು ನಾಯಕನೊಬ್ಬನ ಚರಿತ್ರೆಯನ್ನು ಅವನ ಜನನದಿಂದ ಮೊದಲ್ಗೊಂಡು ಅವನು ಅತಿಶಯವಾದ ಅಭ್ಯುದಯವನ್ನು ಪಡೆಯುವವರೆಗೆ ವರ್ಣಿಸಿರುವುದು ಈ ಕಾವ್ಯದ ಸಾಮಾನ್ಯ ಲಕ್ಷಣವಾಗಿದೆ. ಇದರಲ್ಲಿ 14 ಆಶ್ವಾಸಗಳಿವೆ. ಪಂಪಕವಿಯೇ ಹೇಳುವಂತೆ ಇದು ಆರು ತಿಂಗಳಲ್ಲಿ ಬರೆದು ಮುಗಿಸಿದನಂತೆ ಇದರ ರಚನೆಯ ಭಾಷೆ ಶೈಲಿಗಳ ಹದ ಇಲ್ಲಿ ಹೆಚ್ಚಾಗಿ ಕನ್ನಡತನವನ್ನು ತೋರುತ್ತದೆ. ಹೀಗೆ ವ್ಯಾಸಭಾರತದಂತಹ ಒಂದು ದೊಡ್ಡಗ್ರಂಥದ ಕಥಾವಸ್ತುವನ್ನು ಸಮಗ್ರವಾಗಿ,ಸಂಕ್ಷಿಪ್ತವಾಗಿ ನಿರೂಪಿಸಿದ್ದಾನೆ.

ಅರ್ಜುನನೊಂದಿಗೆ ಸಮೀಕರಿಸಿದ ಕಾವ್ಯ ರಚನೆ ಮಾಡಿದ್ದರು ಅರ್ಜುನ ಕಥಾ ನಾಯಕನಾಗಿದ್ದರು ಸಹ ಕರ್ಣನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಪಂಪನು ಆಡಿದ್ದಾನೆ ಮತ್ತು ಅವನ ಮೇರು ವ್ಯಕ್ತಿತ್ವವನ್ನು ಹಾಡಿ ಹೊಗಳಿದ್ದಾನೆ.

**ನೆನೆಯದಿರಣ್ಣ ಭಾರತದೊಳಿಂ ಪೆರಾರುಮನೊಂದೆ ಚಿತ್ತದೊಳ್**

**ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು ಕ**

**ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ**

**ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ**

**"ನೆನೆಯದಿರಣ್ಣ"** ಭಾರತದಲ್ಲಿ ಇನ್ನೂ ಬೇರೆ ಯಾರನ್ನು, ಒಂದೇ ಮನಸ್ಸಿನಿಂದ ನೆನೆಯುವುದಾದರೆ ಕರ್ಣನನ್ನು ನೆನೆಯೋ!, ಕರ್ಣನಿಗೆ ಯಾರು ಸಮಾನರು? ಕರ್ಣನ ಯುದ್ಧ, ಕರ್ಣನ ಕಠೋರ ಸತ್ಯ ಪ್ರತಿಜ್ಞೆ, ಕರ್ಣನ ಸಾಮರ್ಥ್ಯ, ಕರ್ಣನ ತ್ಯಾಗಮಯಿ ಮನಸ್ಸು ಎಂದು ಹೇಳುತ್ತಾ ಕರ್ಣನ ಸುದ್ದಿಯಿಂದಲೇ ಮಹಾಭಾರತವು ತುಂಬಿ ಕರ್ಣರಸಾಯನವೇ ಆಗಿದೆಯಲ್ಲವೇ ಇಡೀ ಮಹಾಭಾರತ. ಒಟ್ಟಿನಲ್ಲಿ ಪಂಪನು ಕಾವ್ಯದ ನಾಯಕ ಅರ್ಜುನನು ಎಂಬುದನ್ನು ತಿಳಿದಿದ್ದರು ಕರ್ಣನ ನೈಜ ಪ್ರತಿಭೆಯನ್ನು ಈ ರೀತಿಯಾಗಿ ಚಿತ್ರಿಸಿರುವುದು ಇಲ್ಲಿನ ವಿಶೇಷ. ಇದು ಪಂಪಮಹಾಕವಿಯಲ್ಲಿದ್ದ ನಿಷ್ಪಕ್ಷಪಾತ ಕವಿ ಪ್ರತಿಭೆಯನ್ನು ಈ ಪದ್ಯವು ಪ್ರಸ್ತುತಪಡಿಸುತ್ತದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಪಂಪನು ರಚಿಸಿರುವ ಪ್ರಮುಖ ಕೃತಿಗಳು ಯಾವುವು?
2. ಪಂಪನ ಎರಡು ಕೃತಿಗಳ ಪ್ರಮುಖ ವ್ಯತ್ಯಾಸಗಳನ್ನು ತಿಳಿಸಿರಿ?
3. ಪಂಪನನ್ನು ಆದಿಕವಿ ಎಂದು ಕರೆಯಲು ಕಾರಣವೇನು?
4. ಕವಿರಾಜಮಾರ್ಗದ ನಂತರದ ಕಾಲವನ್ನು ಪಂಪ ಯುಗವೆಂದು ಏಕೆ ಕರೆಯುತ್ತೇವೆ?
5. ಆದಿಪುರಾಣ ಕೃತಿಯು ಏಕೆ ಮಹತ್ವದ ಅಲೌಕಿಕ ಗ್ರಂಥವಾಗಿದೆ?
6. ವಿಕ್ರಮಾರ್ಜುನ ವಿಜಯ ಕೃತಿಯನ್ನು ಏಕೆ ಲೌಕಿಕ ಕೃತಿಯೆಂದು ಬಣ್ಣಿಸಲಾಗಿದೆ?
7. ಪಂಪಯುಗದ ಪ್ರಮುಖ ಕವಿಗಳು ಯಾರು?
8. "ಮಾನವ ಜಾತಿ ತಾನೊಂದೆ ವಲಂ" ಎಂಬ ಈ ವಾಕ್ಯದ ತಾತ್ಪರ್ಯವನ್ನು ತಿಳಿಸಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಪಂಪನ "ಆದಿಪುರಾಣ" ಈ ಕೃತಿಯ ಬಗ್ಗೆ ಬರೆಯಿರಿ.

VTU BSc ಸಾಹಿತ್ಯ ಸಿಂಚನ

2. "ವಿಕ್ರಮಾರ್ಜುನ ವಿಜಯ" ಕೃತಿಯ ಬಗ್ಗೆ ಬರೆಯಿರಿ.

3. ಯುದ್ಧದಲ್ಲಿ ಬಾಹುಬಲಿಯು ಭರತನನ್ನು ಕುರಿತು ಹೇಳುವ ವೈರಾಗ್ಯದ ಮಾತುಗಳ ತಾತ್ಪರ್ಯವನ್ನು ಬರೆಯಿರಿ..

## ಪೊನ್ನ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರತ್ನತ್ರಯ ಎಂದು ಕರೆಯಲ್ಪಡುವ ಪಂಪ ಪೊನ್ನ ರನ್ನ ಈ ಮೂವರಲ್ಲಿ ಪೊನ್ನನು ಎರಡನೆಯವನು. ಈತನಿಗೆ ಕವಿಚಕ್ರವರ್ತಿ ಮತ್ತು ಉಭಯಕವಿಚಕ್ರವರ್ತಿ ಎಂಬ ಬಿರುದುಗಳು ಇದ್ದವು. ಪೊನ್ನನು ತನ್ನನ್ನು ತಾನೇ ಸವಣ ಎಂದು ಕರೆದುಕೊಂಡಿದ್ದಾನೆ. ಇಲ್ಲಿ ಸವಣ ಎಂದರೆ ಜೈನ ಸನ್ಯಾಸಿ ಎಂದರ್ಥ. ರಾಷ್ಟ್ರಕೂಟರ ಚಕ್ರವರ್ತಿ ಮುಮ್ಮಡಿ ಕೃಷ್ಣನ ಆಸ್ಥಾನದಲ್ಲಿ ಕವಿಯಾಗಿದ್ದನು. ಪೊನ್ನನು ಅಲೌಕಿಕ/ ಧಾರ್ಮಿಕ/ಆಗಮಿಕ ಕಾವ್ಯವೆಂಬ ಶಾಂತಿ ಪುರಾಣವನ್ನು ಮತ್ತು ಲೌಕಿಕ ಕಾವ್ಯವಾದ ಭುವನೈಕ ರಾಮಾಭ್ಯುದಯ , ಜಿನಾಕ್ಷರಮಾಲೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಕವಿ ಪಂಪನಂತೆ ತದನಂತರ ಬಂದ ಪೊನ್ನನು ಸಹ ತನ್ನ ಕೃತಿಗಳಲ್ಲಿ ಧರ್ಮ ಮತ್ತು ಕಾವ್ಯ ಧರ್ಮ ಎರಡನ್ನೂ ಸಮಾನವಾಗಿ ಪ್ರಸ್ತುತಪಡಿಸಿದ್ದಾನೆ. ಈತನು ತನ್ನ ಬಗ್ಗೆ ತಾನೇ ಹೆಚ್ಚು ಪ್ರಶಂಸೆಯನ್ನು ಉಳ್ಳ ವ್ಯಕ್ತಿಯಾಗಿದ್ದನು. ಈತನ ಕೃತಿ "ಶಾಂತಿನಾಥ ಪುರಾಣ"ವು ಜೈನರ ಹದಿನಾರನೆಯ ತೀರ್ಥಂಕರ ಶಾಂತಿನಾಥನ ಚರಿತ್ರೆಯಾಗಿದೆ. 12 ಆಶ್ವಾಸನೆಗಳನ್ನು ಹೊಂದಿರುವಂತಹ ಶ್ರೇಷ್ಠ ಚಂಪೂ ಕೃತಿ ಇದಾಗಿದೆ. ಇದಕ್ಕೆ 'ಪುರಾಣ ನಾಮ ಚೂಡಾಮಣಿ'ಎಂಬ ಪರ್ಯಾಯನಾಮವಿದೆ.

## ರನ್ನ :

ಕನ್ನಡ ಸಾಹಿತ್ಯ ಚರಿತ್ರೆಯನ್ನು ಜಗತ್ತಿಗೆ ಪ್ರಸ್ತುತಪಡಿಸಿದವರಲ್ಲಿ ಕವಿ ಶ್ರೇಷ್ಠ ಮತ್ತು ರತ್ನತ್ರಯರಲ್ಲಿ ಒಬ್ಬನಾದ ಕವಿ ರನ್ನ ಮೇರು ಸ್ಥಾನದಲ್ಲಿ ನಿಲ್ಲುತ್ತಾನೆ. ಪಂಪ ಪೊನ್ನ ಮತ್ತು ರನ್ನ ಈ ಮೂವರು ರತ್ನತ್ರಯರು ಎಂದು ಹೆಮ್ಮೆಯಿಂದ ಹೇಳಿಕೊಂಡ ಕವಿ ಎಂದರೆ ರನ್ನ. ರನ್ನನಿಗೆ ತನ್ನ ಪ್ರತಿಭೆ ಮತ್ತು ಕಾವ್ಯ ಸಾಮರ್ಥ್ಯಗಳ ಬಗ್ಗೆ ಅಪಾರವಾದ ಅಭಿಮಾನವಿತ್ತು. ಬಳೆಗಾರರ ಕುಲದಲ್ಲಿ ಹುಟ್ಟಿದ್ದರು ತನ್ನ

ಸಂಕಲ್ಪ ಮತ್ತು ಸ್ವಸಾಮರ್ಥ್ಯದಿಂದ ವಿದ್ಯಾ ಬು¢Þಯನ್ನು ಗಳಿಸಿ ಮಹಾಕೃತಿಗಳನ್ನು ಬರೆದ ಮಹಾಕವಿ ರನ್ನ. ರನ್ನನ ಗುರುಗಳು ಅಜಿತಸೇನಾಚಾರ್ಯರು. ದಾನಚಿಂತಾಮಣಿ ಎಂದು ಖ್ಯಾತರಾದ ಅತ್ತಿಮಬ್ಬೆ ಇವನಿಂದ ಅಜಿತಪುರಾಣವನ್ನು ಬರೆಯಿಸಿದಳು. ಇವನು ಬರೆದ ಮಹಾ ಕೃತಿಗಳಾದ ಗದಾಯುzÀÞ ಮತ್ತು ಅಜಿತನಾಥಪುರಾಣ ಅತ್ಯಂತ ಹೆಚ್ಚು ಕೀರ್ತಿಯನ್ನು ತಂದುಕೊಟ್ಟಿವೆ. ಜೊತೆಗೆ ಕವಿಚಕ್ರವರ್ತಿ ಎಂಬ ಬಿರುದನ್ನು ಗಳಿಸಿಕೊಟ್ಟಿವೆ. ರನ್ನನೂ ರಚಿಸಿರುವ ಗದಾಯುದ್ಧವು ಚಂಪು ಕಾವ್ಯರೂಪದಲ್ಲಿ ರಚಿತವಾಗಿದೆ. ರನ್ನನು ಚಾಲುಕ್ಯ ಚಕ್ರವರ್ತಿ ತೈಲಪನ ಆಸ್ಥಾನದಲ್ಲಿ ನೆಲೆಸಿದ್ದನು ಯುವರಾಜನನ್ನು ಕಾವ್ಯದ ನಾಯಕನನ್ನಾಗಿಸಿಕೊಂಡು ಗದಾಯುದ್ಧ ಕೃತಿಯನ್ನು ರಚಿಸಿದ್ದಾನೆ. ಆದುದರಿಂದಾಗಿ ರನ್ನನಿಗೆ ಕವಿಚಕ್ರವರ್ತಿ, ಕವಿಜನಚೂಡಾರತ್ನ, ಕವಿತಿಲಕ, ಕವಿಚತುರ್ಮುಖ ಎಂಬ ಬಿರುದುಗಳು ಲಭಿಸಿವೆ. ರನ್ನನಿಂದ ರಚಿಸಲ್ಪಟ್ಟ ಅಜಿತಪುರಾಣವು ಎರಡನೇ ತೀರ್ಥಂಕರ ಮತ್ತು ಎರಡನೇ ಚಕ್ರವರ್ತಿಯ ಚರಿತ್ರೆಯನ್ನು ಪ್ರಸ್ತುತಪಡಿಸುತ್ತದೆ.

ತನ್ನ ಬಗ್ಗೆ ಅತ್ಯಂತ ಹೆಚ್ಚು ಹೆಮ್ಮೆಯನ್ನು ಹೊಂದಿದ್ದ ರನ್ನನು ತನ್ನ ಅಲೌಕಿಕ ಕೃತಿ ಅಜಿತಪುರಾಣ ದಲ್ಲಿ ಈ ಕೆಳಕಂಡ ರೀತಿ ಹೇಳುತ್ತಾನೆ.

**ಕವಿ ಜನ ದೋಳ್ ರತ್ನತ್ರಯ**

**ಪವಿತ್ರ ಮೇನೆ ನೆಗರ್ದ ಪಂಪನುಂ ಪೊನ್ನಿಗನುಂ**

**ಕವಿರತ್ನನುಮೀ ಮೂವರ್**

**ಕವಿಗಳ್ ಜಿನಸಮಯ ದೀಪಕರ್ ಪೆರೋಳರೆ**

ಈ ಮೇಲಿನ ಪದ್ಯದಲ್ಲಿ ರನ್ನನು ರತ್ನತ್ರಯರು ಮತ್ತು ಕವಿಗಳಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದಿರುವ ಪಂಪ ಪೊನ್ನ ಮತ್ತು ರನ್ನ ಕವಿಗಳನ್ನು ಬಿಟ್ಟರೆ ಜೈನಧರ್ಮವನ್ನು ಹಾಡಿ ಹೊಗಳಿದವರು ಮತ್ತು ಧರ್ಮದ ಪ್ರಖ್ಯಾತಿಗೆ ಕಾರಣಿಕರ್ತರು ಬೇರೆ ಯಾರಿದ್ದಾರೆ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾನೆ. ಯಾವುದೇ ಕಾವ್ಯವನ್ನು ಸಾಮಾನ್ಯನಿಂದ ರಚಿಸಲು ಸಾಧ್ಯವಿಲ್ಲ, ಕಾವ್ಯರಚನೆಯ ಕಾರ್ಯವು ಧೈರ್ಯಶಾಲಿ ಮತ್ತು ಬುದ್ಧಿವಂತ ರಿಂದ ಮಾತ್ರ ಸಾಧ್ಯ ಎಂದು ಹೇಳುತ್ತಾನೆ.

## ಅಜಿತಪುರಾಣ (ಅಲೌಕಿಕ ಗ್ರಂಥ) :

ಈ ಕೃತಿ ಪಂಪನ ಆದಿಪುರಾಣಕ್ಕೂ ಪೊನ್ನನ ಶಾಂತಿಪುರಾಣಕ್ಕೂ ಸರಿಸಮಾನ ಎಂದು ರನ್ನ ಹೊಗಳಿಗೊಂಡಿದ್ದಾನೆ. ೨ನೇ ತೀರ್ಥಂಕರ ಅಜಿತಸ್ವಾಮಿಯ ಕುರಿತ ೧೨ ಆಶ್ವಾಸಗಳ ವಿಸ್ತ್ರತ ಕಥೆಯನ್ನು ದಾನಚಿಂತಾಮಣಿ 'ಅತ್ತಿಮಬ್ಬೆ' ಎಂಬ ಜೈನಶ್ರಾವಕಿ ರನ್ನನಿಂದ

ಬರೆಯಿಸಿದಳು. ೯೯೩ ರಲ್ಲಿ ರನ್ನ ಬರೆದ ಅಜಿತಪುರಾಣವು, ಜೈನ ಧರ್ಮ ಎರಡನೇ ತೀರ್ಥಂಕರ 'ಅಜಿತನಾಥ'ನ ಕಥೆಯನ್ನು ನಿರೂಪಿಸುತ್ತದೆ. ಇದು ಕನ್ನಡ ಭಾಷೆಯಲ್ಲಿ ಸಣ್ಣ ಜಿನಪುರಾಣ ಆಗಿದೆ. ಇದು ತೀರ್ಥಂಕರನ ಎರಡು ಹಳೆ ಜನ್ಮದ ಕಥೆ ಆಗಿದೆ. ಇಲ್ಲಿ ಜೈನಧರ್ಮದ ತಿರುಳನ್ನು ತೀರ್ಥಂಕರರನ್ನು ಕುರಿತು ಸ್ವಾರಸ್ಯ ಕಥೆಗಳ ಹುರುಳಿನೊಂದಿಗೆ ಬೆರೆಸಿ, ಜೈನಧರ್ಮವನ್ನು ಬೆಳಗಿದ್ದಾನೆ.

ತನಗೆ ಕವಿ ಚಕ್ರವರ್ತಿ ಪದವಿ ಹೇಗೆ ಅನ್ವಯಿಕವಾಗಿ ಒಪ್ಪುತ್ತದೆ ಎಂಬುದನ್ನು ಅಜಿತ ಪುರಾಣದಲ್ಲಿ ಹೀಗೆ ವರ್ಣಿಸಿದ್ದಾನೆ:

**"ಬು¢Þಯೇ ಭಂಡಾರ ಪದವಿದ್ಯೇ ಕತ್ತಿನ ಹಾರ ಯಶಸ್ಸು ಬಿಳಿಯ ಛತ್ರಿ,**

**ಸರಸ್ವತಿಯೇ ಮಹಾರಾಣಿ, ಪದ್ಯ ರಚನೆಯ ಶೈಲಿ ಭೆರಿನಾದ,**

**ಪಾಂಡಿತ್ಯವೇ ಸಿಂಹಾಸನ ಕಾವ್ಯದ ಅಲಂಕಾರವೇ ಬೀಸುವ ಚಾಮರ "**

Draft Copy

ವಿದ್ಯೆ ಮತ್ತು ಬುದ್ಧಿಯೆ (ಹಣಕಾಸಿನ) ಭಂಡಾರವಾಗಿದೆ; ಪದವಿದ್ಯೆ (ವ್ಯಾಕರಣ ಶಾಸ್ತ್ರದ ಜ್ಞಾನ) ಕತ್ತಿಗೆ ಹಾರವಿದ್ದಂತೆ; ಗಳಿಸುವ ಯಶಸ್ಸು ಬಿಳಿಯ ಛತ್ರಿ ಇದ್ದಂತೆ; ವಿದ್ಯೆ ನೀಡುವ ಸರಸ್ವತಿಯೇ ಮಹಾರಾಣಿ; ಪದ್ಯ ರಚನೆಯ ಶೈಲಿ ಭೇರೀನಾದ; ಜ್ಞಾನ ಮತ್ತು ಪಾಂಡಿತ್ಯವೇ ಸಿಂಹಾಸನ; ಕಾವ್ಯದ ಅಲಂಕಾರವೇ ತಂಪಾದ ಗಾಳಿಯನ್ನು ಬೀಸುವ ಚಾಮರ ಇದ್ದಂತೆ ಎಂದು ಹೇಳುವ ಮೂಲಕ ಇಂತಹ ಕಾವ್ಯವನ್ನು ರಚನೆ ಮಾಡಿರುವ ತಾನೇ ಉತ್ತಮ ಎಂಬ ಮಾತನ್ನು ರನ್ನನು ಹೇಳಿ ಕೊಂಡಿರುವುದನ್ನು ಕಾಣುತ್ತೇವೆ.

## ಸಾಹಸ ಭೀಮವಿಜಯ (ಲೌಕಿಕ ಗ್ರಂಥ) :

'ಸಾಹಸಭೀಮವಿಜಯ (ಗದಾಯುzÀÞ)' ಲೌಕಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ರಚನೆಯಾಗಿರುವ ಈ ಕೃತಿಯು ರನ್ನನು ತನ್ನ ಆಶ್ರಯದಾತ ಎರಡನೆಯ ತೈಲಪ ಚಕ್ರವರ್ತಿಯಾಗಿದ್ದಾಗ ಯುವರಾಜ ಸತ್ಯಾಶ್ರಯ ಇರಿವಬೆಡಂಗನು ಅನೇಕ ಯುದ್ಧಗಳಲ್ಲಿ ಭಾಗವಹಿಸಿ, ಕನ್ನಡ ರಾಜ್ಯವನ್ನು ಶತ್ರುಗಳ ಆಕ್ರಮಣದಿಂದ ಉಳಿಸಿದನು. ಇದರಿಂದ, ಕನ್ನಡ ಸಾಹಿತ್ಯದ ಉಳಿವಿಗೂ ಏಳಿಗೆಗೂ ಸಹಾಯವಾಯಿತು. ರನ್ನನು ಸತ್ಯಾಶ್ರಯನ ಸಾಹಸಕಾರ್ಯಗಳಲ್ಲಿ ಮಹಾಭಾರತದ ಭೀಮನ ಸಾಹಸ ಪರಂಪರೆಯನ್ನು ಗುರುತಿಸಿದನು. ಸತ್ಯಾಶ್ರಯನು ಸಾಹಸಭೀಮನಾಗಿ ವಂಶಾವಳಿಯನ್ನೂ ಸಾಹಸ ವಿಜಯಗಳನ್ನೂ ವರ್ಣಿಸಿ, ಕಾವ್ಯ ಬರೆಯುವುದರಲ್ಲಿ ತನ್ನ ಗುರಿ ಏನು ಎನ್ನುವುದನ್ನು ತಿಳಿಸಿದ್ದಾನೆ.

**"ಪೃಥ್ವೀವಲ್ಲಭನಾದ ಸತ್ಯಾಶ್ರಯದೇವನೆ ಕಥಾ ನಾಯಕ. ಅವನನ್ನು ಭೀಮನೊಂದಿಗೆ ಹೋಲಿಸಿ ಮಹಾಕವಿ ರನ್ನನು ಈ ಗದಾಯುzÀÞವನ್ನು ಹೇಳಿದನು. ಚಕ್ರವರ್ತಿ ಸಾಹಸಭೀಮನೇ ಕಾವ್ಯಕ್ಕೆ ಒಡೆಯ."**

ಅರಸನಾದ ಸತ್ಯಾಶ್ರಯನನ್ನು ಮಹಾಭಾರತದ ಭೀಮನಿಗೆ ಹೋಲಿಸಿ, ಭೀಮನನ್ನೇ ಕಥಾನಾಯಕನನ್ನಾಗಿ ಕಲ್ಪಿಸಿ ಕೊನೆಯಲ್ಲಿ ಪಟ್ಟಾಭಿಷೇಕವಾಗುವುದು ಭೀಮನಿಗೇ ಎಂದು ಬರೆದಿದ್ದಾನೆ. ಹತ್ತು ಆಶ್ವಾಸಗಳುಳ್ಳ ಈ ಚಂಪೂ ಕೃತಿಯು ಕೇವಲ ಗದಾಯುದ್ಧದ ಪ್ರಸಂಗವನ್ನಷ್ಟೇ ಕಥಾವಸ್ತುವನ್ನಾಗಿ ಹೊಂದಿದ್ದರೂ, ಸಮಗ್ರ ಮಹಾಭಾರತದ ಸಿಂಹಾವಲೋಕನವನ್ನಿಲ್ಲಿ ಕಾಣುತ್ತೇವೆ.

## 10 ಮತ್ತು 11ನೇ ಶತಮಾನದ ರತ್ನತ್ರಯರಿಗೆ ಸಮಕಾಲೀನ ಸಂದರ್ಭದ ಪ್ರಮುಖ ಕವಿಗಳು:

### ಒಂದನೆಯ ನಾಗವರ್ಮ ಮತ್ತು ಎರಡನೆಯ ನಾಗವರ್ಮ:

ಪಂಪಯುಗದ ಕನ್ನಡದ ಪ್ರಮುಖ ಕವಿಗಳಲ್ಲಿ ಒಂದನೆಯ ನಾಗವರ್ಮ ಕಂಡುಬರುತ್ತಾನೆ. ಇವನು ಕರ್ಣಾಟಕ ಕಾದಂಬರಿ ಮತ್ತು ಛಂದೋಂಬುಧಿ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಈತ ಚಂಪೂ ಶೈಲಿಯಲ್ಲಿ ಸಾಹಿತ್ಯ ರಚನೆ ಮಾಡಿರುವ ಮತ್ತೊಬ್ಬ ಕವಿ. ಕರ್ಣಾಟಕ ಕಾದಂಬರಿಯು ಸಂಸ್ಕೃತ ಕವಿ ಬಾಣನ ಕಾದಂಬರಿಯ ಪರಿವರ್ತನೆಯಾಗಿದೆ. ರಾಷ್ಟ್ರಕೂಟರ ರಾಜಧಾನಿ ಬನವಾಸಿಯಲ್ಲಿ ತನ್ನ ಜೀವಿತಾವಧಿಯಲ್ಲಿ ಈತ ಇದ್ದಿರಬಹುದು ಎಂದು ವಿದ್ವಾಂಸರುಗಳು ಅಭಿಪ್ರಾಯವನ್ನು ಪಟ್ಟಿದ್ದಾರೆ. ಈತನ ಕೃತಿಯ ಕಾಲಘಟ್ಟದ ಆಧಾರದ ಮೇಲೆ ಹತ್ತನೆಯ ಶತಮಾನದ ಕವಿ ಎಂದು ಗುರುತಿಸಲಾಗಿದೆ. ಪಂಪ ಮತ್ತು ಚಾವುಂಡರಾಯರಂತೆ ಯುzÀÞ ವೀರನೆಂದು ಈತನ ಕೃತಿಗಳಿಂದ ಕಂಡುಬರುತ್ತದೆ. ಛಂದೋಂಬುಧಿ ಕನ್ನಡದಲ್ಲಿ ದೊರೆತಿರುವ ಮೊದಲನೆಯ ಛಂದಶಾಸ್ತ್ರ ಪರವಾದ ಗ್ರಂಥವೆಂದು ಕರೆಯಲಾಗಿದೆ.

ಒಂದನೆಯ ನಾಗವರ್ಮನ ನಂತರ ಜೈನ ಕವಿಯಾಗಿದ್ದ ಎರಡನೆಯ ನಾಗವರ್ಮನು ವ್ಯಾಕರಣ ಮತ್ತು ಅಲಂಕಾರ, ಛಂದಶಾಸ್ತ್ರಗಳಲ್ಲಿ ಪಂಡಿತನಾಗಿದ್ದನು ಎಂದು ಹೇಳಲಾಗುತ್ತದೆ. ವೀರ ಭಟ್ಟಾರಕ ಇವನ ಗುರು. ಚಂಪು ಸಾಹಿತ್ಯ ಮಾದರಿಯಲ್ಲಿ ಪುರಾಣವನ್ನು, ಅಭಿದಾನ ವಸ್ತುಕೋಶ ಎಂಬ ಸಂಸ್ಕೃತ ಮತ್ತು ಕನ್ನಡ ನಿಘಂಟನ್ನು, ಕಾವ್ಯಾವಲೋಕನ ಎಂಬ ವ್ಯಾಕರಣ - ಅಲಂಕಾರಶಾಸ್ತ್ರ ಗ್ರಂಥವನ್ನು ರಚಿಸಿದ್ದಾನೆ. ಕಾವ್ಯಾವಲೋಕನ ಕನ್ನಡ ವ್ಯಾಕರಣ ಗ್ರಂಥಗಳಲ್ಲಿ ಮೊದಲನೆಯದು. ಅಭಿನವ ಶರ್ಮ, ಕವಿ ಕರ್ಣಪೂರ, ಕವಿಕಂಠಾಭರಣ, ಕವಿತಾ ಗುಣೋದಯ ಎಂಬ ಬಿರುದುಗಳಿಂದ ಗುರುತಿಸುತ್ತೇವೆ.

### ಚಾವುಂಡರಾಯ ಮತ್ತು ದುರ್ಗಸಿಂಹ:

ಚಾವುಂಡರಾಯನು ಗಂಗರ ದೊರೆ ನಾಲ್ಕನೇ ರಾಚಮಲ್ಲನ ಮಂತ್ರಿಯಾಗಿದ್ದನು. ಹಾಸನ ಜಿಲ್ಲೆಯಲ್ಲಿರುವ ಜೈನಕಾಶಿ ಎಂದು ಪ್ರಸಿದ್ಧಿಯನ್ನು ಪಡೆದಿರುವ ಶ್ರವಣಬೆಳಗೊಳದಲ್ಲಿ ಪ್ರಸಿದ್ಧಿಯಾಗಿರುವ ಏಕಶಿಲಾ ವಿಗ್ರಹವಾದ ಬಾಹುಬಲಿ ಗೊಮ್ಮಟೇಶ್ವರನ ಮೂರ್ತಿಯನ್ನು ನಿರ್ಮಿಸಿದ ಕೀರ್ತಿ ಚಾವುಂಡರಾಯನಿಗೆ ಸಲ್ಲುತ್ತದೆ. ಚಾವುಂಡರಾಯ ಪುರಾಣ ( ತ್ರಿಷಷ್ಟಿಲಕ್ಷಣ ಮಹಾಪುರಾಣ ) ಎಂಬ ಗ್ರಂಥವನ್ನು ರಚಿಸಿದ್ದಾರೆ. ಸಂಸ್ಕೃತದ ಜಿನಸೇನ ಗುಣಭದ್ರರ ಮಹಾಪುರಾಣದ ಆಧಾರದ ಮೇಲೆ ಬರೆದಿರುವ ಈ ಕೃತಿಯು ಜೈನರಿಗೆ ಬಹಳ ಪವಿತ್ರವಾದ ಗ್ರಂಥವಾಗಿದೆ. ಈ ಗ್ರಂಥವು ಜೈನ ಪರಂಪರೆಯ 24ನೇ ತೀರ್ಥಂಕರ ಮತ್ತು 63 ಶಲಾಕ ಪುರುಷರ ಜೀವನಚರಿತ್ರೆಯನ್ನು ವಿವರಿಸುವ ಗ್ರಂಥವಾಗಿದೆ. ಚಾವುಂಡರಾಯನು ಸಮರ ಪರಶುರಾಮ, ವೀರ ಮಾರ್ತಾಂಡ ದೇವ ಮತ್ತು

VTU BSc ಸಾಹಿತ್ಯ

ಸಮ್ಯಕ್ತ್ವ ರತ್ನಾಕರ ಎಂಬ ಬಿರುದುಗಳನ್ನು ಹೊಂದಿದ್ದನು. ಕನ್ನಡ ಗದ್ಯ ಸಾಹಿತ್ಯ ಪರಂಪರೆಯಲ್ಲಿ ಚಾವುಂಡರಾಯನ ಸಾಹಿತ್ಯ ಕೃತಿಗಳಿಗೆ ಹೆಚ್ಚು ಮನ್ನಣೆ ದೊರೆತಿದೆ.

ಚಾಲುಕ್ಯರ ಅರಸ ಜಗದೇಕ ಮಲ್ಲನ ಬಳಿ ದಂಡನಾಯಕನಾಗಿದ್ದ ದುರ್ಗಸಿಂಹನು ಕರ್ಣಾಟಕ ಪಂಚತಂತ್ರವನ್ನು ರಚಿಸಿದ್ದಾನೆ. ಗುಣಾಢ್ಯನಿಂದ ರಚಿಸಲ್ಪಟ್ಟಿರುವ ಬೃಹತ್ ಕತೆಯನ್ನು ಆಧಾರವಾಗಿಟ್ಟುಕೊಂಡು ವಸುಭಾಗಭಟ್ಟನು ಪಂಚತಂತ್ರವನ್ನು ಬರೆದಿದ್ದಾನೆ. ಇದನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಪಂಚತಂತ್ರ ಕೃತಿಯನ್ನು ರಚಿಸಿದ್ದಾನೆ. ಪ್ರಮುಖವಾಗಿ 5 ಅಧ್ಯಾಯಗಳನ್ನು ಹೊಂದಿದ್ದು ಅದರಲ್ಲಿ ಅನೇಕ ಉಪಕಥೆಗಳನ್ನು ಒಳಗೊಂಡಿರುವ ಚಂಪು ( ಗದ್ಯ ಪದ್ಯ ಮಿಶ್ರಿತ) ಕೃತಿಯಾಗಿದೆ. ಈ ಗ್ರಂಥದಲ್ಲಿ ಜೀವನ ಮೌಲ್ಯಗಳು ಉತ್ತಮ ಜೀವನ ದೃಷ್ಟಿಯ ವಿಚಾರಗಳು ವಿಶ್ಲೇಷಣೆಯಾಗಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಉತ್ತಮವಾದ ಕೃತಿಯಾಗಿದೆ.

## ನಾಗಚಂದ್ರ ಮತ್ತು ನಯಸೇನ:

**ನಾಗಚಂದ್ರ:** ಅಭಿನವ ಪಂಪ ಎಂಬ ಬಿರುದನ್ನು ಹೊಂದಿರುವ ನಾಗಚಂದ್ರನು ಮಲ್ಲಿನಾಥ ಪುರಾಣ ಎಂಬ ಅಲೌಕಿಕ ಗ್ರಂಥವನ್ನೂ ರಾಮಚಂದ್ರ ಚರಿತ ಪುರಾಣವೆಂಬ (ಪಂಪರಾಮಾಯಣ) ಲೌಕಿಕ ಕೃತಿಯನ್ನು ರಚಿಸಿದ್ದಾನೆ. ಎರಡು ಕೃತಿಗಳು ಜೈನ ಪುರಾಣದ ಕೃತಿಗಳಾಗಿದ್ದು, ನಾಗಚಂದ್ರನು ಜೈನಧರ್ಮದಲ್ಲಿ ನಿಷ್ಠೆಯುಳ್ಳವನಾಗಿದ್ದನು. ಈತನು ಚಾಲುಕ್ಯರ ರಾಜ ಮತ್ತು ಹೊಯ್ಸಳರ ರಾಜ ಬಲ್ಲಾಳನಿಗೆ ಆಪ್ತ ಮತ್ತು ಆಶ್ರಿತನಾಗಿದ್ದನು. ಪಂಪ ರಾಮಾಯಣವು ಕನ್ನಡ ಸಾಹಿತ್ಯದಲ್ಲಿ ದೊರೆತಿರುವ ಮೊದಲ ಜೈನರಾಮಾಯಣ ಕೃತಿಯಾಗಿದೆ. ಪಂಪ ಮತ್ತು ರನ್ನರಂತೆ ಚಂಪು ಪರಂಪರೆಯಲ್ಲಿ ಕಾವ್ಯವನ್ನು ರಚಿಸಿದ್ದಾನೆ. ನಾಗಚಂದ್ರನ ಪಂಪ ರಾಮಾಯಣದಲ್ಲಿ ವಾಲ್ಮೀಕಿ ರಾಮಾಯಣದಲ್ಲಿ ರಾವಣನನ್ನು ರಾಕ್ಷಸ ಎಂಬಂತೆ ಚಿತ್ರಿಸಿರುವಂತೆ ಚಿತ್ರಿಸಿಲ್ಲ, ಬದಲಾಗಿ ಸಮುದ್ರ ಒಂದೊಂದು ಬಾರಿ ತನ್ನ ಎಲ್ಲೆಯನ್ನು ಮೀರುವಂತೆ ರಾವಣನು ಸೀತೆಯ ಅಪಹರಣವನ್ನು ಮಾಡಿದ್ದಾನೆ, ಅವನಲ್ಲಿಯೂ ಸಹ ಉತ್ತಮ ಗುಣಗಳು ಇದ್ದವು ಎಂದು ಹೇಳಲಾಗಿದೆ. ರಾವಣನು ಇಲ್ಲಿ ರಾಮನಿಂದ ಕೊಲ್ಲಲ್ಪಡದೆ ಲಕ್ಷ್ಮಣನಿಂದ ಹತನಾಗುತ್ತಾನೆ ಮತ್ತು ಯಜ್ಞಯಾಗಾದಿಗಳಲ್ಲಿ ಋಷಿ-ಮುನಿಗಳು ಬ್ರಾಹ್ಮಣರು ಕಂಡುಬರುವುದಿಲ್ಲ, ರಾಮನು ಮಹಾವಿಷ್ಣುವಿನ ಅವತಾರಪುರುಷರೆಂದು ಬಿಂಬಿತವಾಗಿಲ್ಲ, ಸುಗ್ರೀವ ಮತ್ತು ಹನುಮಂತರು, ಸೇತುವೆಯನ್ನು ಕಟ್ಟುವ ಸಂದರ್ಭ, ರಾವಣನಿಗೆ ಹತ್ತು ತಲೆಗಳು ಈ ಸಂದರ್ಭಗಳು ಬರುವುದಿಲ್ಲ, ಹಾಗೆಯೇ ಇಲ್ಲಿ ಹನುಮಂತನು ಸಂಸಾರಿ ಮತ್ತು ಲಕ್ಷ್ಮಣನಿಗೆ ಹಲವು ಮದುವೆಗಳು ಸಂಭವಿಸುತ್ತವೆ. ಈ ವಿಷಯಗಳು ನಾಗಚಂದ್ರನ ರಾಮಾಯಣದಲ್ಲಿ ಬರುವ ವಿಶೇಷಗಳಾಗಿವೆ.

**ರಾಮಚಂದ್ರ ಚರಿತ ಪುರಾಣದಲ್ಲಿ (ಪಂಪ ರಾಮಾಯಣ) ಬರುವ ಪದ್ಯಭಾಗ:**

**ಬಲೆ ದೃಷ್ಟಿಗೆ ವಜ್ರದ ಸಂ**

**ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ**



VTU BSc ಸಾಹಿತ್ಯ ಸಿಂಚನ 21KSS27 Draft Copy

**ನ್ಬೊಲದೊಳಿರೆ ಪದ್ಮಪತ್ರದ**

**ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ||**

ತನ್ನ ಕೆಟ್ಟ ಮತ್ತು ದುರ್ಮೋಹದಿಂದ ರಾವಣನು ಆಪ್ತರ ಹಿತವಚನಗಳನ್ನು ಅಲ್ಲಗಳೆದು ಸೀತೆಯನ್ನು ಅಪಹರಿಸಿ ಲಂಕೆಯಲ್ಲಿ ಸೆರೆಮನೆ ವಾಸದಲ್ಲಿ ಇಡುತ್ತಾನೆ.. ಸೀತೆಯು ಅವನಿಗೆ ಒಲಿಯಲಿಲ್ಲ. ಈ ಸಂದರ್ಭದಲ್ಲಿ ರಾವಣ ಸೀತೆಯನ್ನು ಹೆದರಿಸುತ್ತಾ

**"ಇಗೋ ಬಹುರೂಪಿಣೀ ವಿದ್ಯೆಯು ನನಗೆ ವಶವಾಯಿತು.**

**ಇನ್ನು ನನ್ನನ್ನು ಪ್ರತಿಭಟಿಸಬಲ್ಲ ಶತ್ರುಪಕ್ಷವಿಲ್ಲ.**

**ನಿನ್ನ ನೆಚ್ಚಿನ ರಾಮನ ಯೋಚನೆಯನ್ನು ಬಿಡು"**

ಎಂದ ರಾವಣನ ಈ ಮಾತುಗಳಿಂದ ಭಯಗೊಂಡ ಸೀತೆಯು **ರಾಮನ ಪ್ರಾಣಾಪಹರಣ ಮಾತ್ರ ಮಾಡಬೇಡ** ಎಂದು ಪ್ರಾರ್ಥಿಸುತ್ತಾ ಮೂರ್ಛೆ ಹೋಗುತ್ತಾಳೆ. ಇದನ್ನು ಗಮನಿಸಿದ ರಾವಣ ಇಲ್ಲಿ ತನ್ನ ಕ್ರೂರ ಕರ್ಮಕ್ಕೆ ಪಶ್ಚಾತ್ತಾಪಪಡುವನು ಇದೊಂದು ವಿಶೇಷ ಸನ್ನಿವೇಶವಾಗಿದೆ.

**ನಯಸೇನ:** ನಾಗಚಂದ್ರನ ಸಮಕಾಲೀನ ಮತ್ತು ಚಂಪು ಸಾಹಿತ್ಯ ಪರಂಪರೆಯಲ್ಲಿ ಸಾಹಿತ್ಯವನ್ನು ರಚನೆ ಮಾಡಿದ ಮತ್ತೋರ್ವ ಪ್ರಮುಖ ಕನ್ನಡ ಸಾಹಿತಿ ನಯಸೇನ ಧರ್ಮಾಮೃತ ಎಂಬ ಕೃತಿಯನ್ನು ರಚಿಸಿದ್ದಾನೆ. ಜೈನ ಧರ್ಮದ ಶ್ರೇಷ್ಠ ಕೃತಿಯೆಂದು ಧರ್ಮಾಮೃತ ಗುರುತಿಸಲ್ಪಟ್ಟಿದೆ. ಇಲ್ಲಿ ನಯಸೇನ ಜೈನ ಧರ್ಮದ ಮೇಲಿನ ಅತಿಯಾದ ಗೌರವದಿಂದಾಗಿ ಅನ್ಯ ಧರ್ಮವನ್ನು ಕಟುವಾಗಿ ವಿರೋಧಿಸುವುದನ್ನು ಕಾಣುತ್ತೇವೆ. ಈತನನ್ನು ವಿಡಂಬನಾ ಕವಿ ಎಂದು ಕರೆಯಲಾಗಿದೆ. ಭಾಷಾ ಬಳಕೆಯ ಕುರಿತಂತೆ ನಯಸೇನನ ನಿಲುವು ಅತ್ಯಂತ ಸ್ಪಷ್ಟವಾದದ್ದು, ಇದಕ್ಕೆ ಈ ಕೆಳಗಿನ ಪದ್ಯವನ್ನು ನಿದರ್ಶನವಾಗಿ ನೋಡುತ್ತೇವೆ:

ಸಕ್ಕದಮಂ ಪೇಳ್ವೊಡೆ ನೆಱೆ

ಸಕ್ಕದಮಂ ಪೇಳ್ಗೆ ಶುzÀÞ ಗನ್ನಡದೊಳ್ತಂ

ದಿಕ್ಕುವುದೇ ಸಕ್ಕದಮಂ

ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ

ಸಾಹಿತ್ಯವನ್ನು ರಚನೆ ಮಾಡುವವರು ಅಚ್ಚಗನ್ನಡದಲ್ಲಿ ರಚನೆ ಮಾಡಲಿ ಇಲ್ಲವೆಂದರೆ ಸಂಸ್ಕೃತದಲ್ಲಿ ಬರೆಯಲಿ ಎರಡು ಭಾಷೆಗಳನ್ನು ಜೋಡಿಸಿ ಬರೆಯಬಾರದು, ಇದು ಎಣ್ಣೆಯನ್ನು ತುಪ್ಪದಲ್ಲಿ ಬೆರೆಸಿದಂತೆ, ಹೀಗೆ ಮಾಡುವುದು ಸರಿಯೇ ಎಂದು ಪ್ರಶ್ನಿಸುತ್ತಾನೆ. ಒಂದು ಭಾಷೆಯಲ್ಲಿ ರಚಿಸುವ ಸಾಹಿತ್ಯ ಉತ್ತಮವಾದದ್ದು ಎಂಬುದು ನಯಸೇನನ ಅಭಿಪ್ರಾಯ.

## ಜನ್ನ:

ಕವಿ ಚಕ್ರವರ್ತಿ ಎಂದು ಪ್ರಸಿzÀÞನಾದ ಜನ್ನನು ಕ್ರಿಸ್ತಶಕ 1225 ಅಂದರೆ ಹದಿಮೂರನೆಯ ಶತಮಾನದ ಪ್ರಮುಖ ಕವಿ. ಜೈನ ಪರಂಪರೆಗೆ ಸೇರಿದ ಕವಿ ಆಗಿದ್ದಾನೆ. ಎರಡನೆಯ ನಾಗವರ್ಮ ಈತನ ವಿದ್ಯಾ ಗುರುಗಳು ಮತ್ತು ರಾಮಚಂದ್ರ ದೇವಮುನೀಂದ್ರ ಧರ್ಮ ಗುರುಗಳಾಗಿದ್ದಾರೆ. ಹೊಯ್ಸಳರ ಚಕ್ರವರ್ತಿ ವೀರಬಲ್ಲಾಳನ ಆಸ್ಥಾನ ಕವಿಯಾಗಿದ್ದನು. ಜನ್ನನ ಸೋದರಳಿಯ ಕೇಶಿರಾಜನು ಶಬ್ದಮಣಿದರ್ಪಣಂ ಗ್ರಂಥವನ್ನು ರಚಿಸಿದ್ದಾನೆ. ಈತನು ಮೊದಲು ಶಾಸನಗಳನ್ನು ರಚಿಸಿ ತದನಂತರ ಅನಂತನಾಥ ಪುರಾಣ ಮತ್ತು ಯಶೋಧರ ಚರಿತೆ ಎರಡು ಪ್ರಮುಖ ಕಾವ್ಯಗಳನ್ನು ರಚಿಸಿದ್ದಾನೆ. ಎರಡು ಕಾವ್ಯಗಳಲ್ಲಿ ಜೈನಧರ್ಮದ ಪ್ರತಿಪಾದನೆಯನ್ನು ಮಾಡುತ್ತಾ ಮನುಷ್ಯರ ಮೂಲಭೂತ ಆಸೆಯ ಪ್ರವೃತ್ತಿಯನ್ನು ಪ್ರಸ್ತುತಪಡಿಸಿದ್ದಾರೆ. ಅನಂತನಾಥ ಪುರಾಣವು ಜೈನರ 14ನೇ ತೀರ್ಥಂಕರರ ಜೀವನ ಚರಿತ್ರೆಯಾಗಿದೆ.

"ಜೀವದಯೆ ಜೈನಧರ್ಮಂ" ಎಂಬ ಸಂದೇಶವನ್ನು ಬಿತ್ತರಿಸಿ, ಅಹಿಂಸೆಯ ಪಾರಮ್ಯವನ್ನು ಎತ್ತಿಹಿಡಿಯುವುದು ಯಶೋಧರಚರಿತೆಯ ಉದ್ದೇಶವಾಗಿದೆ. ಹಿಂಸೆಯಿಂದಾಗುವ ಘೋರ ದುರಂತವನ್ನು ಕವಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಯಶೋಧರ ಮತ್ತು ಚಂದ್ರಮತಿಯರು ಒಂದು ಹಿಟ್ಟಿನ ಕೋಳಿಯನ್ನು ಕೊಂದು ಸಂಕಲ್ಪ ಹಿಂಸೆಯನ್ನೆಸಗಿದ ಕಾರಣದಿಂದ ಹಲವಾರು ಜನ್ಮಗಳನ್ನೆತ್ತಿ ವಿವಿಧ ಹಂತಗಳಲ್ಲಿ ಬಳಲಿ/ನೊಂದು ಕಡೆಗೆ ಕರ್ಮದಿಂದ ಬಿಡುಗಡೆಗೊಳ್ಳುವುದನ್ನು ಇಲ್ಲಿ ನೋಡುತ್ತೇವೆ. ಈ ಕೃತಿಯಲ್ಲಿ ವ್ಯಕ್ತವಾಗುವ ಅಹಿಂಸಾತತ್ತ್ವ ಜೈನಧರ್ಮಕ್ಕೇ ಮಾತ್ರವೇ ಸೀಮಿತವಾದುದಲ್ಲ, ಅದು ಇಡೀ ಮಾನವ ಧರ್ಮದ ಸಂದೇಶವಾಗಿ ನಿಲ್ಲುತ್ತದೆ. ಇದನ್ನು ಕವಿ ಜನ್ನನು ಕಲಾವಿಲಾಸಪೂರ್ವಕವಾಗಿ ಪ್ರತಿಪಾದಿಸಿದ್ದಾನೆ.

ಯೋಶೋಧರ ಚರಿತೆಯಲ್ಲಿ ಅಮೃತಮತಿಯ ಅಧಾರ್ಮಿಕ ವಿಕೃತ ಪ್ರಣಯದ ಕತೆಯೊಂದು ಪೂರಕವಾಗಿ ಸೇರಿಕೊಂಡಿದೆ. ಇದರಲ್ಲಿ ಬರುವ ಸಮಸ್ಯೆ ಸಾಮಾಜಿಕವಾದುದು ಮತ್ತು ನಿತ್ಯನೂತನವಾದುದು, ಕವಿ ಇದನ್ನು ವೈರಾಗ್ಯಪ್ರಚೋದನೆಗೆ, ಧರ್ಮಬೋಧನೆಗೆ ಬಳಸಿಕೊಂಡಿದ್ದಾನಾದರೂ ಇದನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯವಿದೆ. ಮಾನವ ಸ್ವಭಾವದ ಸಂಕೀರ್ಣತೆಯ ಅರಿವು, ಸ್ವಾರಸ್ಯಪೂರ್ಣವೂ ಸಂಕ್ಷಿಪ್ತವೂ ಆದ ನಿರೂಪಣೆ, ಸರಳ ಸಮುಚಿತವಾದ ಅಲಂಕಾರಗಳು, ದೇಸಿಯ ಬೆಡಗು ಬಿನ್ನಾಣಗಳು ಮೊದಲಾದ ಗುಣಗಳಿಂದ ಕೂಡಿರುವ ಯಶೋಧರಚರಿತೆಯು ಕನ್ನಡದಲ್ಲಿ ಧರ್ಮ ಮತ್ತು ಕಾವ್ಯಧರ್ಮಗಳ ಸಮನ್ವಯಕ್ಕೆ ಒಳ್ಳೆಯ ನಿದರ್ಶನವಾಗಿದೆ.

VTU Draft Copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

1. ಕನ್ನಡದಲ್ಲಿ ರತ್ನತ್ರಯರನ್ನು ಮೊದಲ ಬಾರಿಗೆ ಹೆಸರಿಸಿದವರು ಯಾರು?

    1. ಪಂಪ
    2. ರನ್ನ
    3. ಪೊನ್ನ
    4. ಜನ್ನ

2. ರನ್ನನ ಗುರುಗಳು ಯಾರು?

    1. ನಾಗಚಂದ್ರರು
    2. ಗುರು ಆಚಾರ್ಯ
    3. ಅಜಿತಸೇನಾಚಾರ್ಯ
    4. ಅಜಿತಪುರಾಣ

3. ರನ್ನನ ಆಶ್ರಯದಾತ ಯಾರು?

    1. ಅರಿಕೇಸರಿ
    2. ವೀರಬಲ್ಲಾಳ
    3. ಅತ್ತಿಮಬ್ಬೆ
    4. ಸತ್ಯಾಶ್ರಯ

4. ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಆಸ್ಥಾನದಲ್ಲಿದ್ದ ಖ್ಯಾತ ಸಾಹಿತಿ ಯಾರು?

    1. ನಾಗಚಂದ್ರ
    2. ರನ್ನ
    3. ಜನ್ನ
    4. ಪೊನ್ನ

5. ಉಭಯ ಚಕ್ರವರ್ತಿ ಮತ್ತು ಕವಿಚಕ್ರವರ್ತಿ ಎಂಬ ಬಿರುದಗಳನ್ನು ಹೊಂದಿದ್ದ ಕನ್ನಡದ ಕವಿ ಯಾರು?

21KSS27 Draft Copy
VTU BSc ಸಾಹಿತ್ಯ ಸಿಂಚನ

1. ಪಂಪ

2. ನಾಗವರ್ಮ

3. ಪೊನ್ನ

4. ನಾಗಚಂದ್ರ

6. ಅಭಿನವ ಪಂಪ ಎಂಬ ಬಿರುದನ್ನು ಪಡೆದ ಕವಿ ಯಾರು?

1. ಒಂದನೇ ನಾಗವರ್ಮ

2. ಎರಡನೇ ನಾಗವರ್ಮ

3. ನಾಗಚಂದ್ರ

4. ನಯಸೇನ

7. ದುರ್ಗಸಿಂಹನು ಈ ಕೆಳಗಿನ ಯಾವ ಕೃತಿಯನ್ನು ರಚಿಸಿದ್ದಾನೆ?

1. ಅಜಿತನಾಥಪುರಾಣ

2. ಪಂಪರಾಮಾಯಣ

3. ಧರ್ಮಾಮೃತ

4. ಕರ್ಣಾಟಕ ಪಂಚತಂತ್ರ

8. ಕರ್ನಾಟಕದ ಶ್ರವಣಬೆಳಗೊಳದಲ್ಲಿರುವ ಏಕಶಿಲಾ ಪ್ರತಿಮೆ ಬಾಹುಬಲಿ ಗೊಮ್ಮಟೇಶ್ವರನನ್ನು ನಿರ್ಮಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

1. ಎರಡನೇ ನಾಗವರ್ಮ

2. ಚಾವುಂಡರಾಯ

3. ಅಜಿತ ತೀರ್ಥಂಕರ

4. ಉಭಯ ಚಕ್ರವರ್ತಿ

9. ಅಭಯಮತಿ ಮತ್ತು ಅಭಯರುಚಿ ಪಾತ್ರಗಳು ಯಾವ ಕೃತಿಯಲ್ಲಿ ಮೂಡಿಬಂದಿವೆ?

1. ಮಲ್ಲಿನಾಥ ಪುರಾಣ

2. ಯಶೋಧರ ಚರಿತೆ

3. ಅನಂತನಾಥ ಪುರಾಣ

4. ಸಾಹಸಭೀಮವಿಜಯ

21KSS27 Draft Copy
VTU BSc ಸಾಹಿತ್ಯ ಸಿಂಚನ

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ‘ ರನ್ನನು ರಚಿಸಿರುವ ಪ್ರಮುಖ ಕೃತಿಗಳು ಯಾವುವು?
2. ಪೊನ್ನನು ರಚಿಸಿರುವ ಕೃತಿಗಳನ್ನು ಹೆಸರಿಸಿ.
3. ನಯಸೇನನ ಧರ್ಮಾಮೃತ' ಕುರಿತು ಬರೆಯಿರಿ?
4. ನಾಗ ಚಂದ್ರನಿಗೆ ಅಭಿನವ ಪಂಪ ಎಂದು ಏಕೆ ಕರೆಯಲಾಗುತ್ತದೆ?
5. ಕನ್ನಡದ ಮೊಟ್ಟಮೊದಲ ಛಂದೋಗ್ರಂಥ ಯಾವುದು ಮತ್ತು ಇದನ್ನು ರಚಿಸಿದವರು ಯಾರು?
6. ರನ್ನನ ಅಜಿತಪುರಾಣ ಮತ್ತು ಸಾಹಸಭೀಮವಿಜಯ ಈ ಕೃತಿಗಳ ಮಧ್ಯದಲ್ಲಿರುವ ವ್ಯತ್ಯಾಸವನ್ನು ತಿಳಿಸಿ?
7. ಕನ್ನಡದಲ್ಲಿ ವಿಡಂಬನಾ ಕವಿ ಎಂದು ಯಾರನ್ನು ಗುರುತಿಸಲಾಗುತ್ತದೆ?
8. ತ್ರಿಷಷ್ಠಿ ಲಕ್ಷಣ ಮಹಾಪುರಾಣ ಗ್ರಂಥವನ್ನು ರಚಿಸಿದವರು ಯಾರು?
9. ಜನ್ನನು ರಚಿಸಿರುವ ಪ್ರಮುಖ ಕೃತಿಗಳು ಯಾವುವು?
10. ಜನ್ನನ ಎರಡು ಕಾವ್ಯಗಳ ಪ್ರಮುಖ ವಿಷಯವೇನು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ರನ್ನನ ಸಾಹಸಭೀಮವಿಜಯ ಕುರಿತು ಬರೆಯಿರಿ.
2. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ವಾಲ್ಮೀಕಿ ರಾಮಾಯಣಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ವಿವರಿಸಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ - ಐದು

# ನಡುಗನ್ನಡ ಸಾಹಿತ್ಯ - ವಚನ ಸಾಹಿತ್ಯ / ಬಸವ ಯುಗ

21KSS27 Draft Copy

## ವಚನ ಸಾಹಿತ್ಯದ ಬೆಳವಣಿಗೆ :

ಸುಮಾರು 12 ನೆಯ ಶತಮಾನದಿಂದ ಆಧುನಿಕ ಕನ್ನಡ ಸಾಹಿತ್ಯದವರೆಗೆ ವಿಶಾಲವಾಗಿ ವ್ಯಾಪ್ತಿಯನ್ನು ವ್ಯಾಪಿಸಿಕೊಂಡು ತನ್ನದೇ ಆದ ವಿಶಿಷ್ಟ ಮತ್ತು ವಿಭಿನ್ನ ರೀತಿಯ ಸಾಹಿತ್ಯ ಸೃಷ್ಟಿಗೆ ನಾಂದಿಯನ್ನು ಹಾಡಿದ ಸಾಹಿತ್ಯದ ಕಾಲಘಟ್ಟವೇ ನಡುಗನ್ನಡ ಸಾಹಿತ್ಯ. ವಚನ ಸಾಹಿತ್ಯ ಚಳುವಳಿಯ ನೇತಾರರಾದ ಬಸವಣ್ಣನಿಂದ ಯುಗದ ಖ್ಯಾತ ಕವಿ ಕುಮಾರವ್ಯಾಸನವರೆಗೆ ಅತ್ಯಂತ ಮೌಲ್ಯವುಳ್ಳ ಶ್ರೀಮಂತ ಸಾಹಿತ್ಯವು (ಸಮಾಜದ ಕಟ್ಟಕಡೆಯ ವ್ಯಕ್ತಿಯು ತನ್ನನ್ನು ತಾನು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದರ ಮುಖಾಂತರ) ಕನ್ನಡದಲ್ಲಿ ರಚನೆಯಾಗಿದೆ. ಈ ಯುಗವು ಹಲವಾರು ಅಂಶಗಳ ದೃಷ್ಟಿಯಿಂದ ವೈವಿಧ್ಯಮಯವಾಗಿದ್ದು ಮತ್ತು ವಿಶಿಷ್ಟತೆಯಿಂದ ಕೂಡಿದೆ. ಕನ್ನಡ ಸಾಹಿತ್ಯ ಪರಂಪರೆಯ ಮೇಲೆ ಆಳವಾದ ಪ್ರಭಾವವನ್ನು ಬೀರಿದ ಯುಗವಿದು. ಈ ಯುಗದಲ್ಲಿ ಆಧ್ಯಾತ್ಮಿಕ ತೇಜಸ್ಸು, ಧಾರ್ಮಿಕ ಶ್ರದ್ಧೆ, ವೈಚಾರಿಕತೆ ಮತ್ತು ಸಾಮಾಜಿಕ ಕ್ರಾಂತಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಭವವನ್ನು ಹೊಂದಿದಂತಹ ಸಾಹಿತಿಗಳಿಂದ ಕನ್ನಡ ಸಾಹಿತ್ಯ ರಚನೆಯಾಗಿದೆ.

## ನಡುಗನ್ನಡ ( ಮಧ್ಯಕಾಲೀನ) ಸಾಹಿತ್ಯದ ಗುಣಲಕ್ಷಣಗಳು:

## ವಚನ ಸಾಹಿತ್ಯದ ಪ್ರಮುಖ ರೂಪರೇಷೆಗಳು:

1. ಕನ್ನಡ ಸಾಹಿತ್ಯವು ಮಾರ್ಗ ಪರಂಪರೆಯಿಂದ ದೇಸಿ ಪರಂಪರೆಗೆ ಸಂಕ್ರಮಣವನ್ನು ತಂದ ಯುಗವು ಇದಾಗಿದೆ.

2. ನಡುಗನ್ನಡ ಕಾಲಘಟ್ಟದ ಸಾಹಿತ್ಯವು ವಿಶಿಷ್ಟವಾದ ದೇಸಿ ಪರಂಪರೆಯಿಂದ ಕೂಡಿದ್ದು, ವಿಷಯ ಸ್ವಾತಂತ್ರ್ಯ, ಛಂದಸ್ಸು, ಭಾಷೆಯ ಬಳಕೆ, ವ್ಯಾಕರಣದ ಅನುಸರಣೆ, ಭಾಷೆಯ ಸರಳತೆ, ಶ್ರೀಸಾಮಾನ್ಯನಿಗೂ ಅರ್ಥವಾಗುವ ರೀತಿಯಲ್ಲಿ ಸಾಹಿತ್ಯ ರಚನೆಯಾಗಿದೆ.
3. ವಚನ ಸಾಹಿತ್ಯದ ಉದಯ, ವಚನ ಸಾಹಿತ್ಯವು ನಡುಗನ್ನಡ ಸಾಹಿತ್ಯ ಕಾಲಘಟ್ಟದ ಪ್ರಥಮ ವೈಶಿಷ್ಟ್ಯವಾಗಿದೆ. ಇಲ್ಲಿ ಶಿವಶರಣರು ತಮ್ಮ ಅಂತರಂಗದ ಅನುಭವಕ್ಕೆ ಕನ್ನಡಿಯನ್ನು ಹಿಡಿದಿದ್ದಾರೆ, ಬದುಕಿನ ವಿಚಾರಗಳು ಮತ್ತು ಜೀವನ ಮೌಲ್ಯಗಳಿಗೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ. ಸಮಾಜದ ನೀತಿ ನಿಯಮಗಳು, ಬದುಕಿನ ನೀತಿ, ಮತ, ತತ್ವಗಳು ಹಾಗೂ ಅನುಭವಗಳು ಈ ಸಾಹಿತ್ಯದಲ್ಲಿ ¸ÁÜನ ಪಡೆದುಕೊಂಡಿವೆ.
4. ಸಾಹಿತ್ಯವು ಮುಖ್ಯವಾದ ಪ್ರಕಾರಗಳಾದ ವಚನ ಸಾಹಿತ್ಯ, ರಗಳೆ, ಸಾಂಗತ್ಯ, ಷಟ್ಪದಿ, ಚಂಪೂ ಮತ್ತು ದೇಸಿ ಸಾಹಿತ್ಯ ಪರಂಪರೆ, ದಾಸ ಸಾಹಿತ್ಯ ಮತ್ತು ಕೀರ್ತನೆಗಳು, ತ್ರಿಪದಿ, ತತ್ವಪದಗಳು ಮತ್ತು ಜಾನಪದ ಸಾಹಿತ್ಯ. ನಡುಗನ್ನಡ ಕಾಲಘಟ್ಟದ ಸಾಹಿತ್ಯ ಮತ್ತು ಸಾಹಿತ್ಯದ ರಚನೆಯು ಜೈನ, ಹಿಂದೂ ಹಾಗೂ ಜಾತ್ಯತೀತ, ಅಂಶಗಳನ್ನೊಳಗೊಂಡಿದೆ. ವೈಜ್ಞಾನಿಕ ಮತ್ತು ವೈಚಾರಿಕ ಕಾಯಕ ತತ್ತ್ವ ಮತ್ತು ಸಾಮಾಜಿಕ ಸಮಾನತೆ, ಜನರನ್ನು ವೈಚಾರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಜಾಗೃತಗೊಳಿಸುವ ವಿಷಯಗಳ ಬೋಧನೆಗಳ ಮೇಲೆ ಅವಲಂಬಿತವಾಗಿದೆ.
5. ಹಲವಾರು ಗ್ರಂಥಗಳ ವಿಷಯವು ವೀರಶೈವ ಕವಿಗಳಲ್ಲಿ ಶಿವ ಲೀಲೆಗಳು, ಶಿವ ಶರಣರ ಜೀವನ ಚರಿತ್ರೆಗಳು ಮತ್ತು ಆಧ್ಯಾತ್ಮ, ಲೌಕಿಕ ಮತ್ತು ಅಲೌಕಿಕ ನೆಲೆಗಟ್ಟಿನಲ್ಲಿ ರಚನೆಯಾದವು. ಅದೇ ರೀತಿ ಜೈನರಲ್ಲಿ ತೀರ್ಥಂಕರರ ಪುರಾಣಗಳು, ಬ್ರಾಹ್ಮಣರಲ್ಲಿ ವಿಷ್ಣು ಪುರಾಣ ಗ್ರಂಥಗಳ ರಚನೆಗೆ ವಿಷಯಗಳಾದವು.
6. ಕನ್ನಡ ಭಾಷೆಯ ಬಳಕೆಯ ಶೈಲಿಯ ವಿಷಯಕ್ಕೆ ಬಂದರೆ ಹಳೆಗನ್ನಡ ಬರವಣಿಗೆಯ ಶೈಲಿಯಿಂದ ನಡುಗನ್ನಡಕ್ಕೆ ತಿರುಗಿತು. ಮುಂದುವರೆಯುತ್ತಾ ಹೊಸಗನ್ನಡ ಭಾಷಾ ಬೆಳವಣಿಗೆಯ ಪರಿವರ್ತನೆಯನ್ನು ಪ್ರಾಯೋಗಿಕವಾಗಿ, ವಚನ ಸಾಹಿತ್ಯದಿಂದ ಹಿಡಿದು ರಗಳೆ, ಷಟ್ಪದಿ, ಸಾಂಗತ್ಯ ಕೀರ್ತನೆಗಳು, ಜಾನಪದ ಮತ್ತು ತತ್ತ್ವಪದ ಸಾಹಿತ್ಯದ ಕಡೆಗೆ ಭಾಷಾ ಪರಿವರ್ತನೆಯಾಗಿ ಶ್ರೀಸಾಮಾನ್ಯನಿಗೂ ಕನ್ನಡ ಭಾಷೆ ಸುಲಭವಾಗಿ ಅರ್ಥೈಸಿಕೊಳ್ಳಲು ಮತ್ತು ಬಳಸಲು ಸಾಧ್ಯವಾಗಲಾರಂಭಿಸಿತು.

## ವಚನ ಸಾಹಿತ್ಯದ ಪ್ರಮುಖ ಲಕ್ಷಣಗಳು :

1. ಪುರುಷ ಪ್ರಧಾನವಾಗಿದ್ದ ಕನ್ನಡ ಸಾಹಿತ್ಯರಚನೆಯಲ್ಲಿ ಸ್ತ್ರೀಯರು ಸಹ ಪಾಲ್ಗೊಳ್ಳಲು ಅವಕಾಶ ಪ್ರಾರಂಭವಾಯಿತು. ಸಾಹಿತ್ಯರಚನೆ ಯಲ್ಲಿದ್ದ ಲಿಂಗ ತಾರತಮ್ಯ ದೂರವಾಯಿತು.
2. ವಚನ ಸಾಹಿತ್ಯ ಸರಳವಾದ ಮತ್ತು ಸುಲಭವಾದ ಆಡುಮಾತಿನ ದಾಟಿಯಲ್ಲಿ ರಚನೆಯಾಗ ತೊಡಗಿದ್ದರಿಂದ ಬಹುಬೇಗನೆ ಜನಾಕರ್ಷಣೆಗೆ ಒಳಗಾಯಿತು.
3. ರಾಜಾಶ್ರಯ ಮತ್ತು ನಿಷ್ಠೆಯ ಹಂಗನ್ನು ತೊರೆದು ಸ್ವತಂತ್ರವಾಗಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಸಾಹಿತ್ಯ ರಚಿಸಲು ಅವಕಾಶ ದೊರೆಯಿತು.
4. ಚಂಪು ಮಾರ್ಗ ಪರಂಪರೆಯಿಂದ ದೇಸಿ ಸಾಹಿತ್ಯ ಪರಂಪರೆಯ ಕಡೆಗೆ ಸಾಹಿತ್ಯರಚನೆಯು ವಾಲಿತು.
5. ವಚನ ಸಾಹಿತ್ಯ ಚಳುವಳಿಯಲ್ಲಿ ಅಂದಿನ ಸಮಾಜದ ವಿವಿಧ ವರ್ಗಗಳಿಂದ ಬಂದ ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ ಎಂಬ ಹೆಸರುಗಳು ಅವರುಗಳು ಮಾಡುತ್ತಿದ್ದ ಕಾಯಕ ಮತ್ತು ಅವರು ಪ್ರತಿನಿಧಿಸುತ್ತಿದ್ದ ಸಾಮಾಜಿಕ ಸ್ತರಗಳನ್ನು ಸೂಚಿಸುತ್ತವೆ.
6. ವಚನಕಾರರುಗಳು ರಚಿಸಿದ ವಚನಗಳು ಅವರು ಮಾಡುತ್ತಿದ್ದ ಕಾಯಕ ಮತ್ತು ಬದುಕಿನ ಶೈಲಿ, ಸಾಮಾಜಿಕ ನೆರೆಹೊರೆಯ ಸನ್ನಿವೇಶಗಳೇ ಸಾಹಿತ್ಯದಲ್ಲಿ ಅರ್ಥ ಸ್ವರೂಪವನ್ನು ಪಡೆದುಕೊಂಡಿವೆ.
7. ಅಂತರಂಗದ ಆಧ್ಯಾತ್ಮಿಕ ಅನುಭವಗಳನ್ನು, ವೇದಾಂತಗಳನ್ನು ಮತ್ತು ಅತ್ಯಂತ ಗಂಭೀರವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ಸಂಸ್ಕೃತದಲ್ಲಿ ಮಾತ್ರ ವ್ಯಕ್ತಪಡಿಸಲು ಸಾಧ್ಯ ಎನ್ನುವ ನಂಬಿಕೆಯನ್ನು ವಚನ ಸಾಹಿತ್ಯವು ಬದಲಾಯಿಸಿತು.
8. ಪ್ರತಿಯೊಬ್ಬ ವಚನಕಾರನು ವಚನದ ಕೊನೆಯಲ್ಲಿ ಅಂಕಿತ ನಾಮಗಳಿಂದ ವಚನದ ವಿಷಯವನ್ನು ಕೊನೆಗೊಳಿಸುವುದು ವಿಶೇಷವಾಗಿದೆ.
9. ಸಮಾಜದ ಅಂಕುಡೊಂಕುಗಳನ್ನು ತಿದ್ದುವುದು, ವಿಶ್ಲೇಷಿಸುವುದು, ಸಮಾಜದ ವಿಡಂಬನೆ ಮತ್ತು ಸಾಮಾಜಿಕ ಜಾಗೃತಿ ವಚನಗಳ ವಿಶೇಷ ಲಕ್ಷಣವಾಗಿದೆ.
10. ವಚನಗಳು ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು. ವಚನ ಸಾಹಿತ್ಯದ ಕಾಲವನ್ನು ಸ್ವತಂತ್ರ ಯುಗ ಎಂದು ಅನೇಕರು ಕರೆದಿದ್ದಾರೆ.
11. ಈ ಕಾಲಘಟ್ಟದ ವಚನಸಾಹಿತ್ಯವು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸ್ವತಂತ್ರವಾಗಿ ಮತ್ತು ನಿರ್ಭೀತಿಯಿಂದ ರಚನೆಗೊಂಡಿರುವುದು ಗಮನಿಸುತ್ತೇವೆ.

VTU BSc ಸಾಹಿತ್ಯ ಸಿಂಚನ 21KSS27 Draft Copy

12. ಯಾವ ಸಾಹಿತ್ಯ ನಿರ್ಭೀತಿಯಿಂದ ರಚನೆ ಗೊಳ್ಳುತ್ತದೆ ಅದು ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ, ಜನರ ಬದುಕಿಗೆ ಹತ್ತಿರವಾಗಿ, ಶ್ರೀಸಾಮಾನ್ಯರ ಆಶೋತ್ತರಗಳನ್ನು ಮತ್ತು ಬದುಕಿನ ಭಾವನೆಗಳನ್ನು ಸಮಾಜಕ್ಕೆ ಕೈಗನ್ನಡಿಯಾಗಿ ತಿಳಿಸುತ್ತದೆ

- ಇಂತಹ ಕಾರ್ಯವು ವಚನ ಸಾಹಿತ್ಯ ಚಳುವಳಿಯಿಂದ ಆಗಿದೆ.

21KSS27 Draft copy

## ಪ್ರಮುಖ ವಚನಕಾರರು:

ವಚನ ಸಾಹಿತ್ಯದ ಶ್ರೀಮಂತಿಕೆಗೆ ನೂರಾರು ಜನ ಶರಣ ಮತ್ತು ಶರಣೆಯರು ಶ್ರಮಿಸಿದ್ದಾರೆ. ತಮ್ಮ ವಚನಗಳಲ್ಲಿ ತಮ್ಮದೇ ಆದ ಅಂಕಿತನಾಮಗಳನ್ನು ಬಳಸಿದ್ದಾರೆ.

**ವಚನಕಾರರ ಹೆಸರು ಮತ್ತು ಅಂಕಿತನಾಮ:**

VTU BSc ಸಾಹಿತ್ಯ ಸಿಂಚನ

ಜೇಡರದಾಸಿಮಯ್ಯ - ರಾಮನಾಥ

ಅಲ್ಲಮಪ್ರಭು - ಗುಹೇಶ್ವರ

ಅಕ್ಕಮಹಾದೇವಿ -ಚನ್ನಮಲ್ಲಿಕಾರ್ಜುನ

ಬಸವಣ್ಣ-ಕೂಡಲ ಸಂಗಮದೇವ

ಮುಕ್ತಾಯಕ್ಕ- ಅಜಗಣ್ಣ

ಚೆನ್ನಬಸವಣ್ಣ - ಕೂಡಲ ಚೆನ್ನಸಂಗಯ್ಯ

ಅಂಬಿಗರ ಚೌಡಯ್ಯ-ಅಂಬಿಗರ ಚೌಡಯ್ಯ

ಮಡಿವಾಳ ಮಾಚಯ್ಯ-ಕಲಿದೇವರದೇವ

ಗಂಗಾಂಬಿಕೆ-ಗಂಗಾಪ್ರಿಯ ಕೂಡಲ ಸಂಗಮದೇವ

ನೀಲಾಂಬಿಕೆ/ನೀಲಲೋಚನೆಸಂಗಯ್ಯ

ಆದಯ್ಯ ಸೌರಾಷ್ಟ್ರ ಸೋಮೇಶ್ವರ

ಡೋಹಾರ ಕಕ್ಕಯ್ಯ- ಅಭಿನವ ಮಲ್ಲಿಕಾರ್ಜುನ

ಮೋಳಿಗೆ ಮಾರಯ್ಯ- ನಿಃಕಳಂಕ ಮಲ್ಲಿಕಾರ್ಜುನ

ಸೊನ್ನಲಿಗೆ ಸಿದ್ದರಾಮ-ಕಪಿಲಸಿದ್ಧ ಮಲ್ಲಿಕಾರ್ಜುನ

ಮಧುವಯ್ಯ- ಅರ್ಕೇಶ್ವರಲಿಂಗ

ಅಮುಗೆ ರಾಯಮ್ಮ- ಅಮುಗೇಶ್ವರ

ನೀಲಮ್ಮ-ಬಸವ

ಅಕ್ಕಮ್ಮ- ರಾಮೇಶ್ವರ ಲಿಂಗ

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ- ಭೀಮೇಶ್ವರಾ ಸೂಳೆ ಸಂಕವ್ವ- ನಿರ್ಲಜ್ಜೇಶ್ವರ

ವೀರಮ್ಮ- ಶಾಂತೇಶ್ವರ ಪ್ರಭುವೇ

VTU BSc ಸಾಹಿತ್ಯ ಸಿಂಚನ 21KSS27 Draft Copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1. ವಚನ ಸಾಹಿತ್ಯವು ……………………… ಪರಂಪರೆಯಿಂದ ದೇಸಿ ಪರಂಪರೆಯ ಕಡೆ ರಚನೆಯಾಗಲು ಆರಂಭಿಸಿತು.

    1. ಮಾರ್ಗ
    2. ದೇಸಿ
    3. ಷಟ್ಪದಿ
    4. ತ್ರಿಪದಿ

2. ವಚನ ಸಾಹಿತ್ಯದ ಯುಗವನ್ನು……………………. ಯುಗದ ಸಾಹಿತ್ಯವೆಂದು ಗುರುತಿಸಲಾಗುತ್ತದೆ.

    1. ಪಂಪ
    2. ಸ್ವತಂತ್ರ
    3. ವೇದಪೂರ್ವ
    4. ಪಂಪ ಪೂರ್ವ

3. ನಡುಗನ್ನಡ ಸಾಹಿತ್ಯದ ಉಗಮವು…………………….. ದೊಂದಿಗೆ ಪ್ರಾರಂಭವಾಗುತ್ತದೆ.

    1. ವಚನ ಸಾಹಿತ್ಯ
    2. ತ್ರಿಪದಿ ಸಾಹಿತ್ಯ
    3. ರಗಳೆ ಪ್ರಕಾರದ ಸಾಹಿತ್ಯ
    4. ಷಟ್ಪದಿ ಸಾಹಿತ್ಯ

4. ವಚನ ಎಂದರೇನು?

    1. ಸಾಹಿತ್ಯ
    2. ಪ್ರಮಾಣ
    3. ಕೆಲಸ
    4. ಕಾಯಕ

5. ಕಾಯಕವೇ ಕೈಲಾಸವೆಂಬುದು ಯಾವ ಸಾಹಿತ್ಯದ ಮೂಲಮಂತ್ರವಾಗಿದೆ?

21KSS27 Draft Copy
VTU BSc ಸಾಹಿತ್ಯ ಸಿಂಚನ

1. ದಾಸ ಸಾಹಿತ್ಯ
2. ತ್ರಿಪದಿ ಸಾಹಿತ್ಯ
3. ವಚನ ಸಾಹಿತ್ಯ
4. ಜನಪದ ಸಾಹಿತ್ಯ

6. ಕನ್ನಡದ ಮೊದಲ ಕವಯತ್ರಿ/ ವಚನಕಾರ್ತಿ ಯಾರು?

1. ಅಕ್ಕಮಹಾದೇವಿ
2. ಆಯ್ದಕ್ಕಿ ಲಕ್ಕಮ್ಮ
3. ನೀಲಾಂಬಿಕೆ
4. ಮುಕ್ತಾಯಕ್ಕ

7. ರಾಜಾಶ್ರಯವನ್ನು ತೊರೆದು ಸ್ವತಂತ್ರವಾಗಿ ಸಾಹಿತ್ಯರಚನೆಗೆ ನಿಂತ ಸಾಹಿತ್ಯ ಪ್ರಕಾರ (ಸಾಹಿತ್ಯ ರಚನೆಕಾರರು ಗಳು ಯಾರು) ಯಾವುದು?

1. ವಚನ ಸಾಹಿತ್ಯ
2. ಶಾಸನ ಸಾಹಿತ್ಯ
3. ಸಂಸ್ಕೃತ ಸಾಹಿತ್ಯ
4. ಕನ್ನಡ ಸಾಹಿತ್ಯ

8. ವಚನಗಾರ್ತಿ ಗಂಗಾಂಬಿಕಯವರ ವಚನಗಳ ಅಂಕಿತನಾಮ ಯಾವುದು?

1. ಗಂಗಾಪ್ರಿಯ ಕೂಡಲಸಂಗಮದೇವ
2. ಚನ್ನಮಲ್ಲಿಕಾರ್ಜುನ
3. ಕಲಿದೇವರದೇವ
4. ಅಭಿನವ ಮಲ್ಲಿಕಾರ್ಜುನ

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ವಚನ ಸಾಹಿತ್ಯವು ಪ್ರಾರಂಭವಾದ ಕಾಲಘಟ್ಟದ ಸನ್ನಿವೇಶ ಯಾವ ರೀತಿ ಇತ್ತು?
2. ವಚನ ಸಾಹಿತ್ಯ ಚಳುವಳಿಯಲ್ಲಿ ಬಸವಣ್ಣನವರ ಕೊಡುಗೆ ಏನು?
3. ವಚನ ಸಾಹಿತ್ಯದಲ್ಲಿನ ಕನ್ನಡ ಭಾಷಾ ಬಳಕೆಯಲ್ಲಿನ ವಿಶೇಷತೆ ಕುರಿತು ಬರೆಯಿರಿ?

21KSS27 Draft Copy
VTU BSc ಸಾಹಿತ್ಯ ಸಿಂಚನ

4. ವಚನ ಸಾಹಿತ್ಯದ ಮೂಲ ಆಶಯವು ಯಾವುದಾಗಿದೆ?

5. ಪಂಪಯುಗದ ಕನ್ನಡ ಸಾಹಿತ್ಯಕ್ಕೂ ಮತ್ತು ವಚನ ಸಾಹಿತ್ಯಕ್ಕೂ ಇರುವ ಮೂಲಭೂತ ವ್ಯತ್ಯಾಸವೇನು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ**.

1. ವಚನ ಸಾಹಿತ್ಯ ಚಳುವಳಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ..

2. ಪಂಪ ಪೂರ್ವ ಯುಗದ ಕನ್ನಡ ಸಾಹಿತ್ಯಕ್ಕೂ ಮತ್ತು ವಚನ ಸಾಹಿತ್ಯಕ್ಕೂ ಸಾಹಿತ್ಯ ರಚನೆಯಲ್ಲಿ ಕಂಡುಬರುವ ವ್ಯತ್ಯಾಸಗಳು ಯಾವುವು?.

3. ಪ್ರಮುಖ ವಚನಕಾರರು ಮತ್ತು ಅವರು ವಚನ ರಚನೆಯಲ್ಲಿ ಬಳಸಿರುವ ಅಂಕಿತನಾಮಗಳ ಹೆಸರುಗಳನ್ನು ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ವಚನಗಳು:

ಶರಣ ಚಳುವಳಿಗೆ ಪ್ರೇರಕಶಕ್ತಿಯಾಗಿ ನಿಂತ ಮಹಾಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ ವಿವಿಧ ವೃತ್ತಿಗಳಿಗೆ ಸೇರಿದ ನೂರಾರು ಕಾಯಕಜೀವಿಗಳು ಒಂದುಗೂಡಿದರು. ಸಮಾಜದಲ್ಲಿ ವೈಚಾರಿಕತೆ ಮತ್ತು ಸಮಾನತೆಯನ್ನು ತರಬೇಕೆಂದು ಹಂಬಲಿಸುತ್ತಿದ್ದ ಶರಣರ ತಂಡಗಳು ತಮ್ಮ ಅನುಭವದ ಜ್ಞಾನವನ್ನು ಸಾಮೂಹಿಕವಾಗಿ ಬಿತ್ತರಿಸುತ್ತಾ ಬಂದರು. ಅಂಧಕಾರದಲ್ಲಿ ಮುಳುಗಿದ್ದ ಸಮಾಜಕ್ಕೆ ಅರಿವು ಮತ್ತು ವಿವೇಕದ ಬೆಳಕನ್ನು ತೋರಿಸಿದ್ದು ವಚನ ಸಾಹಿತ್ಯ ಮತ್ತು ವಚನಕಾರರು. ವಚನ ಸಾಹಿತ್ಯ ಚಳುವಳಿಯಲ್ಲಿ ನೂರಾರು ಜನರು ಸಾಹಿತ್ಯ ರಚನೆ ಮಾಡಿದ್ದರೂ ಸಾಂಕೇತಿಕವಾಗಿ ಇಲ್ಲಿ ಕೆಲವು ವಚನಕಾರರುಗಳ ವಚನಗಳನ್ನು ಅಧ್ಯಯನದ ದೃಷ್ಟಿಯಿಂದ ಮತ್ತು ಸಾಮಾಜಿಕ ಅರಿವನ್ನು ಮೂಡಿಸುವ ಸಲುವಾಗಿ ನೀಡಲಾಗಿದೆ.

## ಜೇಡರ ದಾಸಿಮಯ್ಯ [ದೇವರ ದಾಸಿಮಯ್ಯ]:

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ

ಇರುಳೆಲ್ಲಾ ನಡೆದನಾ ಸುಂಕಕಂಜಿ

ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು

ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ.

**ವಚನದ ತಾತ್ಪರ್ಯ:** ವ್ಯಕ್ತಿಯು ಮನಸ್ಸಿನಲ್ಲಿ ಕೆಟ್ಟ ಉದ್ದೇಶವನ್ನು ಹೊಂದಿ, ಹೊರನೋಟಕ್ಕೆ ದೇವರಲ್ಲಿ ನಂಬಿಕೆಯನ್ನು ಹೊಂದಿದವನಂತೆ ನಟಿಸುತ್ತಾ, ಜನರನ್ನು ಮತ್ತು ಸಮಾಜವನ್ನು ವಂಚಿಸುವ ವ್ಯಕ್ತಿಯು ಕಟ್ಟಕಡೆಗೆ ಜೀವನದಲ್ಲಿ ಏನನ್ನೂ ಗಳಿಸಲಾಗದೆ, ತನ್ನಲ್ಲಿರುವುದನ್ನೂ ಕಳೆದುಕೊಳ್ಳುತ್ತಾನೆ. ಕೊನೆಯಲ್ಲಿ ಒಳಿತನ್ನು ಮಾಡಲಾಗದೆ, ಅತ್ತ ಕೆಟ್ಟದ್ದನ್ನು ಬಿಡಲಾಗದೆ, ಅತ್ತಿತ್ತ ತುಯ್ದಾಡುವ ಚಂಚಲ ಮನಸ್ಸಿನ ವ್ಯಕ್ತಿಯು ಜೀವನದಲ್ಲಿ ಏನನ್ನೂ ಪಡೆಯಲಾಗದೆ, ತನಗೆ ತಾನೆ ಕೇಡನ್ನು ಬಗೆದುಕೊಳ್ಳುತ್ತಾನೆ/ಹಾನಿಯನ್ನು ಮಾಡಿಕೊಳ್ಳುತ್ತಾನೆ.

## ಅಲ್ಲಮ ಪ್ರಭು :

**ಹೆಣ್ಣಿಗಾಗಿ ಸತ್ತವರು ಕೋಟಿ**

**ಮಣ್ಣಿಗಾಗಿ ಸತ್ತವರು ಕೋಟಿ**

ಹೊನ್ನಿಗಾಗಿ ಸತ್ತವರು ಕೋಟಿ

ಗುಹೇಶ್ವರಾ, ನಿಮಗಾಗಿ ಸತ್ತವರನಾರನೂ ಕಾಣೆ!

**ವಚನದ ತಾತ್ವರ್ಯ:** ಈ ವಚನದಲ್ಲಿ ಅಲ್ಲಮಪ್ರಭುಗಳು, ಜಗತ್ತಿನಲ್ಲಿ ಸಂಭವಿಸಿರುವ ಅಹಿತಕರ ಘಟನೆಗಳು ಮತ್ತು ಹೋರಾಟಗಳು ಆಸೆ ಮತ್ತು ಆಮಿಷಕ್ಕಾಗಿ ನಡೆದಿವೆ. ಸಾಂಕೇತಿಕವಾಗಿ ಹೇಳುವುದಾದರೆ, ಹೆಣ್ಣಿಗಾಗಿ ನಡೆದ ರಾಮ-ರಾವಣರ ಯುದ್ಧ, ಮಣ್ಣಿಗಾಗಿ ನೆಡೆದ ಕುರುಕ್ಷೇತ್ರ ಯುದ್ಧ, ಹೊನ್ನಿಗಾಗಿ ನೆಡೆದ ಅಶೋಕನ ಕಳಿಂಗ ಯುದ್ಧವನ್ನು ಉದಾಹರಣೆ ನೀಡಿ, ದೇವರಿಗಾಗಿ ಯಾರೂ ಜೀವ ನೀಡಲು ಸಿದ್ಧರಿಲ್ಲದ, ಮಾನವನ ಸ್ವಾರ್ಥವನ್ನು ಎತ್ತಿ ತೋರಿಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಆತ್ಮಸಾಕ್ಷಾತ್ಕಾರಕ್ಕೆ ಮತ್ತು ಆತ್ಮ ಮನೋಬಲವನ್ನು ಹೆಚ್ಚಿಸಿಕೊಳ್ಳಲು ದೈವತ್ವವನ್ನು ಮತ್ತು ಆಧ್ಯಾತ್ಮಿಕ ಬದುಕಿನಲ್ಲಿ ನಂಬಿಕೆಯನ್ನು ಇಡಬೇಕು. ನೀವು ನಂಬಿರುವ ದೇವರಲ್ಲಿ ತಲ್ಲೀನರಾದರು ಮಾತ್ರ ಸಾಕ್ಷಾತ್ಕಾರವನ್ನು ಕಂಡುಕೊಳ್ಳಬಹುದು ಎಂದು ಹೇಳಿದ್ದಾರೆ.

## ಬಸವಣ್ಣ:

ಕರಿ ಘನ ಅಂಕುಶ ಕಿರಿದೆನ್ನಬಹುದೆ ಬಾರದಯ್ಯಾ,

ಗಿರಿ ಘನ ವಜ್ರ ಕಿರಿದೆನ್ನಬಹುದೆ? ಬಾರದಯ್ಯ,

ತಮಂದ ಘನ ಜ್ಯೋತಿ ಕಿರಿದೆನ್ನಬಹುದೆ ಬಾರದಯ್ಯಾ,

ಮರಹು ಘನ ನಿಮ್ಮ ನೆನೆವ ಮನ ಕಿರಿದೆನ್ನಬಹುದೆ? ಬಾರದಯ್ಯ

ಕೂಡಲಸಂಗಮದೇವಾ ॥

**ವಚನದ ತಾತ್ವರ್ಯ:** ಇಲ್ಲಿ ಬಸವಣ್ಣನವರು ಬಲ ಮತ್ತು ದುರ್ಬಲ ಎಂದು ಭಾವಿಸಿರುವ ಕೆಲವು ವಸ್ತುಗಳ ಬಗ್ಗೆ ನಮಗೆ ಇರುವ ತಪ್ಪು ತಿಳಿವಳಿಕೆಯನ್ನು ಕೆಲವು ನಿದರ್ಶನಗಳ ಮೂಲಕ ಹೇಳುತ್ತಾರೆ. ಮೊದಲನೆಯದು ದಿನ ನಿತ್ಯದ ಘಟನೆ, ಮತ್ತೊಂದು ಪೌರಾಣಿಕ ಹಿನ್ನೆಲೆಯಿಂದ ಮತ್ತು ಇನ್ನೊಂದು ಭೌತಿಕ ತತ್ತ್ವವುಳ್ಳ ನಿದರ್ಶನ. ಆನೆ ಗಾತ್ರದಲ್ಲಿ ದೊಡ್ಡದು ಮತ್ತು ಬಲಶಾಲಿ ಕೂಡ, ಆದರೆ ಅಂತ ಆನೆಯನ್ನು ಅದರ ಮಾವುತ ಒಂದು ಅಂಕುಶದಿಂದ(ಸಣ್ಣ ಸಲಾಕೆ)ಅದನ್ನು ಹಿಡಿದಿಟ್ಟುಕೊಳ್ಳುತ್ತಾನೆ. ಅದೇ ರೀತಿ ಒಂದು ಪರ್ವತ ಕೂಡ ಬಹಳ ದೊಡ್ಡದಾಗಿ ಕಾಣುತ್ತದೆ,ಪುರಾಣದ ಪ್ರಕಾರ ಇಂದ್ರ ತನ್ನ ವಜ್ರಾಯುಧದಿಂದ ಪರ್ವತವನ್ನು ನಾಶ ಮಾಡುತ್ತಾನೆ.ಇನ್ನು ಕತ್ತಲು ಬಹಳ ಘೋರವಾಗಿ ಕಂಡರೂ ಒಂದು ಸಣ್ಣ ಬೆಳಕಿನ ಕಿಡಿ ಅದನ್ನು ಮುಚ್ಚಬಲ್ಲದು. ಆದ್ದರಿಂದ ವಸ್ತುವಿನ ಗಾತ್ರದ ಮೂಲಕ ಅದರ ದುರ್ಬಲತೆಯನ್ನು ಅಳೆಯಬಾರದು ಎಂದು ಹೇಳುತ್ತಾ ಮನುಷ್ಯನ ಸಹಜ ಗುಣವಾದ ಮರೆಯುವಿಕೆ ಘನವಲ್ಲ,ಬದಲಾಗಿ ದೇವರನ್ನು ಕಂಡುಕೊಳ್ಳಲು ಶಿವನ ಸ್ವರೂಪವಾದ ಕೂಡಲಸಂಗಮದೇವನನ್ನು ನೆನೆಯುವುದು ಮತ್ತು ಧ್ಯಾನಿಸುವುದೇ ಘನ ಎಂದು ಹೇಳುತ್ತಾರೆ.

## ಅಕ್ಕಮಹಾದೇವಿ:

ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು,

ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು,

ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವನು,

ಇವರ ಮಾತೆಲ್ಲವೂ ಸಹಜವೇ,

ನರಕ ಸಂಸಾರದಲ್ಲಿ ಹೊದಕುಳಿಗೊಳ್ಳುತ್ತ (ದು:ಖ, ನೋವು)

ಶಿವನಿಲ್ಲ,ಮುಕ್ತಿಯಿಲ್ಲ,ಹುಸಿಯೆಂದಡೆ,

ನರಕದಲ್ಲಿಕ್ಕದೆ ಬಿಡುವನೇ ಚನ್ನಮಲ್ಲಿಕಾರ್ಜುನ !!

**ವಚನದ ತಾತ್ಪರ್ಯ:** ಈ ವಚನದಲ್ಲಿ ಅಕ್ಕಮಹಾದೇವಿಯು ಮನುಷ್ಯ ತನ್ನ ಅಸಹಾಯಕತೆ ಮತ್ತು ತನ್ನ ಸಂಕಟದಲ್ಲಿ ಬೇರೆಯವರನ್ನು ಹೇಗೆ ದೂಷಿಸುತ್ತಾನೆ ಎಂದು ಕೆಲವು ನಿದರ್ಶನಗಳ ಮೂಲಕ ಹೇಳುತ್ತಾರೆ. ಗೂಬೆಗೆ ಹಗಲಿನಲ್ಲಿ ಕಣ್ಣು ಕಾಣದ್ದರಿಂದ ಸೂರ್ಯನನ್ನು ಬಯ್ಯುತ್ತದೆ, ಅದೇ ರೀತಿ ಕಾಗೆಯು ರಾತ್ರಿ ಸಮಯದಲ್ಲಿ ಚಂದ್ರನನ್ನು ಬಯ್ಯುತ್ತದೆ. ಕುರುಡ ತನ್ನ ಪ್ರತಿಬಿಂಬ ಕನ್ನಡಿಯಲ್ಲಿ ಕಾಣದ್ದಕ್ಕೆ ಕನ್ನಡಿಯನ್ನೇ ಬಯ್ಯುತ್ತಾನೆ. ಇದು ಪ್ರತಿಯೊಬ್ಬ ಅಸಹಾಯಕನ ಸಹಜ ಮಾತು ಎಂದು ಹೇಳುತ್ತಾ ಇದು ಸಂಸಾರದಲ್ಲಿ ನರಕವು ಹೊರಳಾಡುವಂತೆ ದೂಷಿಸುವುದು ಕೂಡ ಎಂದು ಹೇಳುತ್ತಾರೆ.

ಇಲ್ಲಿ ಶಿವನಿಲ್ಲ ಅಂದರೆ ತನಗಿರುವ ಶಕ್ತಿಯ ಬಗ್ಗೆ ನಂಬಿಕೆ ಮತ್ತು ಆತ್ಮ ವಿಶ್ವಾಸ ಇಲ್ಲದೆ ಬೇರೆಯದನ್ನು ಅಪೇಕ್ಷಿಸುವ ಪರಿ. ಮುಕ್ತಿಯಿಲ್ಲ ಅಂದರೆ ಇಂಥ ಕಷ್ಟಗಳು ತನಗೆ ಮಾತ್ರ ಇರುವುದು ಎಂದು ಭಾವಿಸಿ ಸದಾ ಇನ್ನೊಬ್ಬರನ್ನು ದೂರುತ್ತಿರುವುದು. ತನಗಿರುವ ಅಗಾಧ ಶಕ್ತಿಯನ್ನು ಉಪಯೋಗಿಸಿಕೊಳ್ಳದೆ ಅನ್ಯರನ್ನು ದೂಷಿಸಿದರೆ ಅಂಥವರನ್ನು ಚನ್ನಮಲ್ಲಿಕಾರ್ಜುನ ನರಕಕ್ಕೆ ತಳ್ಳುತ್ತಾನೆ. ಅಂದರೆ ಅವರು ಯಾವಾಗಲೂ ಕಷ್ಟವನ್ನು ಅನುಭವಿಸುತ್ತಾರೆ ಎಂದರ್ಥ. ತಮಗೆ ಲಭ್ಯವಿರುವ ಶಕ್ತಿಯನ್ನು ಸದ್ವಿನಿಯೋಗ ಮಾಡಿಕೊಂಡು ಒಳ್ಳೆ ರೀತಿಯಲ್ಲಿ ನಡೆದರೆ ಶಿವನನ್ನು ತಲುಪಬಹುದು ಅಂದರೆ ಮುಕ್ತಿಯ ಪಡೆಯಬಹುದು ಎಂದು ಅಕ್ಕ ಹೇಳುತ್ತಾರೆ.

## ಆಯ್ದಕ್ಕಿ ಮಾರಯ್ಯ:

ಕಾಯಕದಲ್ಲಿ ನಿರತನಾದಡೆ

ಗುರು ದರ್ಶನವಾದಡೂ ಮರೆಯಬೇಕು,

ಲಿಂಗ ಪೂಜೆಯಾದಡೂ ಮರೆಯಬೇಕು,

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು

ಕಾಯಕವೆ ಕೈಲಾಸವಾದ ಕಾರಣ

ಅಮರೇಶ್ವರ ಲಿಂಗವಾಯಿತ್ತಾದಡು ಕಾಯಕದೊಳಗು.

**ವಚನದ ತಾತ್ಪರ್ಯ:** ಕಾಯಕಕ್ಕೆ ಮಹತ್ವ ಕೊಡುವ ಈ ವಚನದಲ್ಲಿ ಆಯ್ದಕ್ಕಿ ಮಾರಯ್ಯ, ಗುರು, ಲಿಂಗ, ಜಂಗಮ ಎಂಬ ತ್ರಿವಿಧಕ್ಕಿಂತ ಕಾಯಕವೇ ಶ್ರೇಷ್ಠ ಎಂದು ಬಿಂಬಿಸುತ್ತಾನೆ. ಕಾಯಕದಲ್ಲಿ ನಿರತನಾಗಿರುವವನಿಗೆ ಬೇರೆ ಇನ್ನೇನು ಕಾಣಬಾರದು ಎಂದು ಹೇಳುತ್ತಾನೆ. ತನ್ನ ಗುರು ಬಂದರೂ ಕೂಡ, ತನ್ನ ಕಾಯಕಕ್ಕೆ ತೊಡಕಾಗಬಾರದು. ಶರಣರಿಗೆ ಗುರುವಿನ ದರ್ಶನ ಮಂಗಳಕರವಾದದ್ದು, ಆದರೂ ಇಲ್ಲಿ ಗುರುವಿಗಿಂತ ಕಾಯಕಕ್ಕೆ ಪ್ರಾಮುಖ್ಯತೆ ಕೊಡುತ್ತಾನೆ ಮಾರಯ್ಯ.

ಅದೇ ರೀತಿ ,ಲಿಂಗ ಪೂಜೆ ಸಮಯ ಆದರೂ ಕೂಡ ತನ್ನ ಕಾರ್ಯ ಮೊದಲು ಮುಗಿಸುವುದು ಲೇಸು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. ತಾನು ಕೆಲಸದಲ್ಲಿ ನಿರತನಾಗಿದ್ದಾಗ ಜಂಗಮರಿಗೆ ಕಾಣಿಕೆ ಅರ್ಪಿಸುವುದು ಕೂಡ ತರವಲ್ಲ, ಅದಕ್ಕಿಂತ ಅವನ ಕಾಯಕ ಮುಖ್ಯ ಎನ್ನುತ್ತಾನೆ. ಈ ವಚನದಲ್ಲಿ ಮಾರಯ್ಯ ಕಾಯಕ ಯೋಗಿಯ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಅಲ್ಲದೆ, ಹೊಲದಲ್ಲಿ ಅಕ್ಕಿ ಆಯುವ ತನ್ನ ವೃತ್ತಿಯಲ್ಲಿ ತಾನು ಕೈಲಾಸವನ್ನು ಕಾಣುತ್ತೇನೆ ಎಂದು ಹೇಳುತ್ತಾನೆ. ಇಲ್ಲಿ ತನ್ನ ಕಾಯಕದಿಂದ ವ್ಯಕ್ತಿಯೊಬ್ಬ ದೇವರನ್ನು ಮತ್ತು ದೇವರ ಅಸ್ತಿತ್ವವನ್ನು ಅನುಭವಿಸಬಹುದು ಮತ್ತು ತನ್ನ ವೃತ್ತಿಯಿಂದ ದೇವರನ್ನು ಕಂಡುಕೊಳ್ಳಬಹುದು ಎನ್ನುತ್ತಾನೆ. ಈ ವಚನ ಶರಣರು ಕಾಯಕಕ್ಕೆ ನೀಡಿದ ಮಹತ್ವವನ್ನು ಸಾರುತ್ತದೆ.

## ಅಂಬಿಗರ ಚೌಡಯ್ಯ :

ಬಡತನಕ್ಕೆ **ಉಂಬುವ ಚಿಂತೆ**

ಉಣಲಾದರೆ ಉಡುವ ಚಿಂತೆ

ಉಡಲಾದರೆ ಇಡುವ ಚಿಂತೆ ಇಡಲಾದರೆ ಹೆಂಡಿರ ಚಿಂತೆ

ಹೆಂಡಿರಾದರೆ ಮಕ್ಕಳ ಚಿಂತೆ ಮಕ್ಕಳಾದರೆ ಬದುಕಿನ ಚಿಂತೆ

ಬದುಕಾದರೆ ಕೇಡಿನ ಚಿಂತೆ ಕೇಡಾದರೆ ಮರಣದ ಚಿಂತೆ

ಇಂತೀ ಹಲವು **ಚಿಂತೆಯಲ್ಲಿ ಇರುವರನ್ನು ಕಂಡೆನು**

**ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆ** ವೇದಾಂತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

**ವಚನದ ತಾತ್ಪರ್ಯ:** ಈ ವಚನದಿಂದ ಯಾವ ಮನೆಯೂ ಚಿಂತೆಯಿಂದ ಮತ್ತು ಸಮಸ್ಯೆಗಳಿಂದ ಬಿಡುಗಡೆ ಆಗಿಲ್ಲವೆಂಬ ಮಾತು ಸ್ಪಷ್ಟವಾಗುತ್ತದೆ. ನಮ್ಮ ಮನೆಯಲ್ಲಿ ಅಂತಹುದೇನು ನಡೆದಿಲ್ಲ ಎಂದು ಬೋರ್ಡು ಹಾಕುವ ಸ್ಥಿತಿಯಲ್ಲಿ ಇಂದು ಯಾವ ಮನೆಯೂ ಇಲ್ಲ. ಅಂಬಿಗರ ಚೌಡಯ್ಯನ ವಚನಗಳು ಚಾಟಿಯೇಟನ್ನು ಕೊಟ್ಟು ಹೊಡೆದೆಬ್ಬಿಸುವ ಚುಚ್ಚು ಮಾತಿನ ಬಿಚ್ಚು ಹೃದಯದ ಅನುಭವದ ಕೆಚ್ಚಿನ ಅಮರವಾಣಿಯ ಸಚ್ಚೆಯಂತಿದೆ ನುಡಿದಂತೆ ನಡೆದು ನಡೆದಂತೆ ನುಡಿದ ಧೀರ ಶರಣ. ಸಮಾಜ ವಿಮರ್ಶೆ, ವ್ಯಕ್ತಿ ಟೀಕೆ, ಮೂಢ ನಂಬಿಕೆಯನ್ನೇ ತೆಗಳದೆ ಅವುಗಳನ್ನು ಬೆರಳು ಮಾಡಿ ತೋರಿಸಿ ತಾನು ಪರಿಶುದ್ಧನಾಗಿ ಸಿದ್ಧ ಶುದ್ಧ ಬಾಳನ್ನು ಬಾಳಿ ಬೆಳಗಿಸಿ ಕೊಂಡವನು. ಬೇವು ತಿಂದವನು ಬಹಳ ಕಾಲ ಬದುಕುತ್ತಾನೆ. ಕಹಿ ಉಂಡವನು ಜೀವನದಲ್ಲಿ ಅಜರಾಮರನಾಗುತ್ತಾನೆ ಎಂದು ಹೇಳುವ ಗಟ್ಟಿತನದ ವ್ಯಕ್ತಿ ಅಂಬಿಗರ ಚೌಡಯ್ಯ.

## ವಚನ ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಕಾಯಕ ತತ್ತ್ವ :

ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯದ ಕಾಲವನ್ನು ಸಂಕ್ರಮಣ ಕಾಲ ಎಂದು ಕರೆಯಲಾಗುತ್ತದೆ. ಕಾರಣ ಜಡ್ಡುಗಟ್ಟಿದ ಮತ್ತು ಸಾಮಾಜಿಕ ಅಸಮಾನತೆ ತಾಂಡವವಾಡುತ್ತಿದ್ದ ಕಾಲಘಟ್ಟದಲ್ಲಿ ಸಮಾಜವನ್ನು ಪ್ರಶ್ನಿಸಿದ ಮತ್ತು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿ ಯಶಸ್ವಿಯಾದ ಕಾಲಘಟ್ಟವದು. ವಚನ ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಕಾಯಕ ತತ್ತ್ವಗಳು ಮೂಲ ವಿಷಯಗಳಾಗಿದ್ದವು. ವಚನಕಾರರು ವಿಮರ್ಶಕರು, ಸಾಮಾಜಿಕ ಜಾಗೃತಿಯನ್ನು ಉಂಟುಮಾಡುವವರು, ಅಸಮಾನತೆಯ ವಿರುದ್ಧ ಧ್ವನಿಯೆತ್ತಿದವರು ಹಾಗೂ ಮಾನವತೆಯ ಪ್ರತಿಪಾದಕರಾಗಿದ್ದರು. ಯಾವುದೇ ಭ್ರಮೆಗೆ ಒಳಗಾಗುವವರು ಆಗಿರಲಿಲ್ಲ. ವೈಚಾರಿಕತೆಯ ದೃಷ್ಟಿಯಿಂದ ಪರಂಪರಾಗತವಾಗಿ ಅರ್ಥವಿಲ್ಲದ ಮತ್ತು ಮೌಲ್ಯ ರಹಿತವಾದ ವಿಚಾರಗಳನ್ನು ವಿಮರ್ಶಿಸಿ ಬದಲಾವಣೆಗೆ ಪ್ರಯತ್ನಿಸಿದ ಕಾಲವಿದು.

ನಾವು ಮಾಡುವ ಕಾಯಕ/ ಕೆಲಸದಲ್ಲಿ ಮೇಲು-ಕೀಳು ಎಂಬುದು ಇಲ್ಲ. "ಆವ ಕಾಯಕ ಮಾಡಿದೊಡೆ ಒಂದೇ ಕಾಯಕ" ಎಂದು ಗಂಗಮ್ಮ ಹೇಳಿದಂತೆ ಕಾಯಕದಲ್ಲಿ ಮೇಲು-ಕೀಳಿಲ್ಲ. ಕಾಯಕದ ಮಹತ್ವವನ್ನು ತಿಳಿದುಕೊಂಡ ಶರಣೆ ಕಾಳವ್ವೆಯ ಈ ವಚನವನ್ನು ಗಮನಿಸಿ:

> ಕೃತ್ಯ ಕಾಯವಿಲ್ಲದವರು ಭಕ್ತರಲ್ಲ,
>
> ನಿಂದಿಸಿಕೊಂಬ ಪ್ರಸಾದ ಕುನ್ನಿಯ ಪ್ರಸಾದ
>
> ಅವರು ತ್ರಿವಿಧಕ್ಕೆ ಇಚ್ಚೆಸರು

ಅಲ್ಲಿ ನಿಂದಿಸಿ ಅವರ ಬಿಟ್ಟಿಲ್ಲ,

ಅವರ ಹಿಂದೆ ಕೊಂಡುದು ಅವರ ಮಲ ಮೂತ್ರ

ತೂಬುರದ ಕೊಳ್ಳಿಯಂತೆ ಉರಿವಾತ ಭಕ್ತನೆ ?

ಕಾಯಕವೇ ಕೈಲಾಸ ಎಂಬ ಕಾಯಕ ತತ್ತ್ವದ ಪ್ರೇರಣೆಯಿಂದ ಶಿವಶರಣೆಯರು ಅನೇಕ ಕಾಯಕಗಳನ್ನು ಕೈಗೆತ್ತಿಕೊಂಡರು, ಉದಾಹರಣೆಗೆ: ಆಯ್ದಕ್ಕಿ ಲಕ್ಕಮ್ಮ ಬಿದ್ದ ಅಕ್ಕಿಗಳನ್ನು ಆಯ್ದು ತರುವ ಕಾಯಕ, ಮೋಳಿಗೆ ಮಹಾದೇವಿ ಕಟ್ಟಿಗೆ ಹೊತ್ತು ತರುವ ಕಾಯಕ, ರೇಮ್ಮವ್ವೆ ಕದಿರಿನಿಂದ ನೂಲು ತೆಗೆಯುವುದು, ನಿಂಬವ್ವೆ ನೀರು ಹೊರುವ ಮೊದಲಾದ ಕಾಯಕಗಳನ್ನು ಮಾಡಿ ತಮ್ಮ ಬಾಳಬದುಕನ್ನು ಸಾರ್ಥಕ ಮಾಡಿಕೊಂಡರು, ಸ್ತ್ರೀ ಅವಲಂಬಿತಳಲ್ಲ ಅನ್ನುವುದನ್ನು ತೋರಿಸಿ ಕೊಟ್ಟು, ಕಾಯಕ ತತ್ತ್ವದ ಮೂಲಕ ಆರ್ಥಿಕ ಸ್ವಾತಂತ್ರ್ಯ ಅನುಭವಿಸಿದರು ಪ್ರಮುಖ ಶಿವಶರಣೆಯರು.

ನೀರು ಕಂಡಲ್ಲಿ ಮುಳುಗುವರಯ್ಯ

ಮರವ ಕಂಡಲ್ಲಿ ಸುತ್ತುವರಯ್ಯ

ಬತ್ತುವ ಜಲವ ಒಣಗುವ ಮರವ

ಮೆಚ್ಚಿದವರು ನಿಮ್ಮನೆತ್ತಬಲ್ಲರು

ಕೂಡಲ ಸಂಗಮದೇವಾ

ಮೌಢ್ಯ ಮತ್ತು ಅರ್ಥವಿಲ್ಲದ ಆಚರಣೆಗಳಿಂದ ಸಮಾಜವು ಸುಧಾರಣೆಯಾಗಬೇಕು. ಧಾರ್ಮಿಕ ಸುಧಾರಣೆಯಾಗಬೇಕು. ಮೂಢನಂಬಿಕೆಗಳು, ಅಂಧಃ ಶ್ರದ್ಧೆಗಳು, ಕಂದಾಚಾರಗಳು ನಿವಾರಣೆಯಾಗಬೇಕು ಎಂದು ಬಸವಣ್ಣನವರು ಹೇಳುತ್ತಾರೆ.

ಕಲ್ಲು ನಾಗರ ಕಂಡಡೆ ಹಾಲನೆರೆಯೆಂಬರು

ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ

ಉಂಬ ಜಂಗಮ ಬಂದಡೆ ನಡೆಯಂಬರು

ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರು

ಈ ವಚನದಲ್ಲಿ ಮನುಷ್ಯನ ಮಾನಸಿಕ ಸ್ಥಿತಿ ಮತ್ತು ದ್ವಂದ್ವದ ವಿಚಾರಗಳನ್ನು ತಿಳಿಸುತ್ತಾ ಬಸವಣ್ಣನು ಕೆಳವರ್ಗದ ಮತ್ತು ಮೇಲ್ವರ್ಗದ ಮೌಢ್ಯ ದೈವಾರಾಧನೆಗಳನ್ನು ವಿರೋಧಿಸಿದ್ದಾರೆ. ಅದರ ಬದಲಾಗಿ ಇಷ್ಟಲಿಂಗಾರಾಧನೆಗೆ ಕರೆ ನೀಡಿದನು. ತಮ್ಮ ಆಧ್ಯಾತ್ಮಿಕ ಬದುಕಿಗೆ ಕಾಯಕವೆನ್ನುವುದು ಮೂಲಭೂತವಾದ ಅರ್ಹತೆಯಾಗಿತ್ತು. "ಶರಣ ಸತಿ-ಲಿಂಗ ಪತಿ" ಎನ್ನುವ ಮಾತನ್ನು ಶರಣರು-ಶರಣೆಯರು ತತ್ವಶಃ ಪಾಲಿಸಿದರು.

ವಚನ ಸಾಹಿತ್ಯದಲ್ಲಿ ಎಲ್ಲಾ ಶಿವಶರಣರುಗಳು ಧರ್ಮ ಜಾತಿ ಲಿಂಗ ಭೇದವಿಲ್ಲದಂತೆ ಮಹಿಳೆಯನ್ನು ತಾಯಿ, ಅಕ್ಕ, ಮನುಕುಲ ಶ್ರೇಷ್ಠವೆಂದು ಗೌರವಿಸಿದ್ದಾರೆ. ಬಸವಣ್ಣನವರು **"ಎನ್ನ ತಾಯಿ ನಿಂಬವ್ವೆ ನೀರನೆರೆದುಂಬಳು, ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು"** ಎಂದು ದಲಿತ ಮಹಿಳೆ ನನ್ನ ತಾಯಿ, ಅಕ್ಕ ಎಂದು ಕರೆದಿದ್ದಾರೆ. **"ಪರವಧುವನು ಮಹಾದೇವಿಯೆಂಬೆ"** ಎನ್ನುವ ಮಾತುಗಳಲ್ಲಿ ಮಹಿಳೆಗೆ ನೀಡಿದ ಗೌರವವನ್ನು ಕಾಣಬಹುದು. ಶರಣರ ವಚನಗಳಲ್ಲಿ **"ಮಹಾದೇವಿಯಕ್ಕನ ಪಾದಕ್ಕೆ ನಮೋ: ನಮೋ: ಎನ್ನುತ್ತಿದ್ದರು"** ಎನ್ನುವ ಮಾತುಗಳನ್ನು ಕಾಣಬಹುದು. ಅವೈಜ್ಞಾನಿಕವಾಗಿ ಮತ್ತು ತಾರತಮ್ಯತೆಯಿಂದ ಕೂಡಿದ ಮಾತು "ಹೆಣ್ಣು ಮಾಯೆಯೆಂಬದನ್ನು" ಶಿವಶರಣರು ನೇರವಾಗಿ ತಿರಸ್ಕರಿಸಿದ್ದಾರೆ.

**ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ,**

**ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ**

**ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ**

**ಮನದ ಮುಂದಣ ಆಸೆಯೆ ಮಾಯ ಕಾಣಾ ಗುಹೇಶ್ವರಾ.**

ಈ ಮೇಲಿನ ವಚನದಲ್ಲಿ ಅಲ್ಲಮಪ್ರಭುಗಳು ಹೆಣ್ಣು ಯಾವುದೇ ಕಾರಣಕ್ಕೂ ಮಾಯೆಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಹನ್ನೆರಡನೆಯ ಶತಮಾನವು ಸಂಕ್ರಮಣ ಕಾಲವೆಂದು ಹೇಳುವುದಕ್ಕೆ ಕಲ್ಯಾಣದ ಅನುಭವ ಮಂಟಪದಲ್ಲಿ ಘಟನೆಗಳು ಮತ್ತು ಇದರ ಪ್ರೇರಣೆಯಿಂದ ಕನ್ನಡನಾಡಿನಾದ್ಯಂತ ಸಂಭವಿಸಿದ ಸಾಮಾಜಿಕ ಬದಲಾವಣೆಯ ಘಟನೆಗಳು ವರ್ಗಭೇದ, ಲಿಂಗಭೇದ, ಜಾತಿಭೇದ, ಸಂಸ್ಕೃತಿಗಳಭೇದ, ಆಚರಣೆಗಳಲ್ಲಿನ ಭೇದಭಾವಗಳು, ವರ್ಣಭೇದವನ್ನಳಿಸಿ ಸರ್ವರಿಗೂ ಸಮಬಾಳು ಸಮಪಾಲು ಎಂಬ ಸಮಾಜವನ್ನು ನಿರ್ಮಿಸಿದ ಕೀರ್ತಿ ವಚನ ಸಾಹಿತ್ಯ ಚಳುವಳಿಯ ಎಲ್ಲಾ ನೇತಾರರಿಗೆ ಮತ್ತು ಭಾಗವಹಿಸಿದ ಶಿವಶರಣೆಯರಿಗೆ ಸಲ್ಲುತ್ತದೆ. ವಚನ ಸಾಹಿತ್ಯ ಚಳುವಳಿಯು ನಡುಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ವೈಚಾರಿಕತೆ ಮತ್ತು ಕಾಯಕ ತತ್ವಕ್ಕೆ ಮಹತ್ವವನ್ನು ನೀಡಿದ ಸಾಹಿತ್ಯ ಚಳುವಳಿಯ ಪ್ರಮುಖ ಕಾಲಘಟ್ಟ ವಾಗಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1. ವಚನ ಸಾಹಿತ್ಯ ಚಳುವಳಿಗೆ ಪ್ರೇರಕ ಶಕ್ತಿಯಾಗಿ ನಿಂತ ಮಹಾಮಾನವತಾವಾದಿ ಶಿವಶರಣ ಯಾರು?

   1. ಅಲ್ಲಮಪ್ರಭು
   2. ಜೇಡರ ದಾಸಿಮಯ್ಯ

VTU BSc 21KSS27 Draft copy

3. ಅಕ್ಕಮಹಾದೇವಿ

4. ಬಸವಣ್ಣ

2. ರಾಮನಾಥ ಇದು ಯಾರ ವಚನಗಳ ಅಂಕಿತ ನಾಮ?.

1. ಅಲ್ಲಮಪ್ರಭುಗಳು

2. ಜೇಡರ ದಾಸಿಮಯ್ಯ

3. ಚನ್ನಬಸವಣ್ಣ

4. ಅಂಬಿಗರ ಚೌಡಯ್ಯ

3. ಶೂನ್ಯ ಸಂಪಾದನೆಯ ಕೇಂದ್ರಬಿಂದುವಾಗಿದ್ದ ವಚನಕಾರರು ಯಾರು?

1. ಬಸವಣ್ಣ

2. ಅಲ್ಲಮಪ್ರಭುಗಳು

3. ಜೇಡರ ದಾಸಿಮಯ್ಯ

4. ಚನ್ನಬಸವಣ್ಣ

4. ಬಸವಣ್ಣನವರು ಯಾರ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು?

1. ಸತ್ಯಾಶ್ರಯ

2. ಅರಿಕೇಸರಿ

3. ಬಿಜ್ಜಳ

4. ವೀರಬಲ್ಲಾಳ

5. ಕಾಯಕ ತತ್ವಕ್ಕೆ ಹೆಚ್ಚು ಮಹತ್ವವನ್ನು ನೀಡಿ 'ಕಾಯಕವೇ ಕೈಲಾಸ' ಎಂಬ ವಾಕ್ಯವನ್ನು ಬಳಸಿದ ವಚನಕಾರ ಯಾರು?

1. ಆಯ್ದಕ್ಕಿ ಲಕ್ಕಮ್ಮ

2. ಆಯ್ದಕ್ಕಿ ಮಾರಯ್ಯ

3. ಅಂಬಿಗರ ಚೌಡಯ್ಯ

4. ಮಡಿವಾಳ ಮಾಚಯ್ಯ

6. ನೀರು ಕಂಡಲ್ಲಿ ಮುಳುಗುವರಯ್ಯ - ಈ ವಚನವನ್ನು ರಚಿಸಿರುವವರು ಯಾರು?

1. ಅಕ್ಕಮಹಾದೇವಿ

21KSS27 Draft Copy
VTU BSc ಸಾಹಿತ್ಯ ಸಿಂಚನ

2. ಆಯ್ದಕ್ಕಿ ಲಕ್ಕಮ್ಮ

3. ನೀಲಾಂಬಿಕೆ

4. ಬಸವಣ್ಣ

7. ಹೆಣ್ಣು ಮಾಯೆಯೆಂಬರು - ಈ ವಚನದ ರಚನೆಕಾರರು ಯಾರು?

1. ಅಕ್ಕಮಹಾದೇವಿ

2. ಆಯ್ದಕ್ಕಿ ಲಕ್ಕಮ್ಮ

3. ಅಲ್ಲಮಪ್ರಭು

4. ಬಸವಣ್ಣ

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ನೀರು ಕಂಡಲ್ಲಿ ಮುಳುಗುವರಯ್ಯ - ಈ ವಚನದ ತಾತ್ಪರ್ಯವನ್ನು ತಿಳಿಸಿರಿ?

2. ಉಳ್ಳವರು ಶಿವಾಲಯ ಮಾಡಿಹರು - ಈ ವಚನದ ಮೂಲ ಸಂದೇಶವೇನು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ವಚನ ಸಾಹಿತ್ಯ ಚಳುವಳಿಯಲ್ಲಿ ಸಮಾಜಕ್ಕೆ ಮಾರ್ಗದರ್ಶನವಾಗಿ ರಚನೆಯಾದ ವೈಚಾರಿಕತೆಯ ಮತ್ತು ಸಾಮಾಜಿಕ ವಿಶ್ಲೇಷಣೆಯ ವಚನಗಳ ಕುರಿತು ಬರೆಯಿರಿ

2. ವಚನ ಸಾಹಿತ್ಯ ಚಳುವಳಿಯಲ್ಲಿ ಕಾಯಕ ತತ್ವಕ್ಕೆ ನೀಡಿದ ಮಹತ್ವವನ್ನು ವಿವರಿಸಿ ?.

3. ಸಾಮಾಜಿಕ ಅಸಮಾನತೆಯನ್ನು / ಲಿಂಗ ಭೇದವನ್ನು ಮರೆತು ಮಹಿಳಾ ಸ್ವಾತಂತ್ರ್ಯಕ್ಕಾಗಿ ರಚನೆಯಾದ ವಚನಗಳ ಕುರಿತು ವಿವರಿಸಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

## ಅಧ್ಯಾಯ - ಆರು

# ಕುಮಾರವ್ಯಾಸ ಯುಗ ಮತ್ತು ಸಾಹಿತ್ಯದ ಇತರೆ ರೂಪಗಳು:

---

ನಡುಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯ ಚಳುವಳಿ ಮೊದಲು ಪ್ರಾರಂಭವಾಯಿತು. ತದನಂತರ ವಚನ ಸಾಹಿತ್ಯ ರಚನೆಯಿಂದ ಮತ್ತು ವಚನಸಾಹಿತ್ಯವು ಸಮಾಜ ಮತ್ತು ಸಾಹಿತ್ಯ ರಚನೆಯ ಮೇಲೆ ಬೀರಿದ ಪ್ರಭಾವದಿಂದಾಗಿ ವಚನ ಸಾಹಿತ್ಯಕ್ಕೆ ಹೊಂದಿಕೊಂಡಂತೆ ರಗಳೆ, ವಾರ್ಧಕ ಷಟ್ಪದಿ, ಭಾಮಿನಿ ಷಟ್ಪದಿ, ಕಂದಪದ್ಯ, ಸಾಂಗತ್ಯ, ತ್ರಿಪದಿ, ಕೀರ್ತನೆಗಳು, ಜಾನಪದ ಸಾಹಿತ್ಯ ಮತ್ತು ತತ್ವಪದಗಳು, ಕನ್ನಡದ ಸೂಫಿ ಪಂಥ ಮುಂತಾದ ಸಾಹಿತ್ಯ ರಚನೆಯ ಪ್ರಕಾರಗಳು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂದವು. .

## ರಗಳೆ:

ಆದಿಕವಿ ಪಂಪ, ರನ್ನ ಪೊನ್ನ ಇವರುಗಳು ಸಹ ಚಂಪೂ ಕೃತಿಗಳಲ್ಲಿ ಅಪರೂಪವಾಗಿ ರಗಳೆಯ ಮಾದರಿಯನ್ನು ಸಾಹಿತ್ಯ ರಚನೆಯಲ್ಲಿ ಬಳಸಿದ್ದಾರೆ. ಅಧಿಕೃತವಾಗಿ ಮತ್ತು ಸಾಹಿತ್ಯ ರಚನೆಯ ಪ್ರಕಾರದಲ್ಲಿ ಕನ್ನಡ ಸಾಹಿತ್ಯಕ್ಕೆ ಮೊಟ್ಟಮೊದಲ ಬಾರಿಗೆ ರಗಳೆಯ ಪರಿಚಯ ಮಾಡಿಸಿದವನು ಶಿವಕವಿ ಎಂಬ ಬಿರುದಾಂಕಿತನಾದ ಹರಿಹರ. ನಡುಗನ್ನಡ ಸಾಹಿತ್ಯವು ಹೊಸತನವನ್ನು ರೂಡಿಸಿಕೊಂಡು ಬಳಕೆಯಾದ ಸಾಹಿತ್ಯದ ಪ್ರಕಾರವಾಗಿದೆ. ನಾಗವರ್ಮನು ತನ್ನ ಕೃತಿ ಛಂದೋಂಬುಧಿ ಯಲ್ಲಿ ರಗಳೆಯ ಲಕ್ಷಣಗಳನ್ನು ಈ ರೀತಿಯಾಗಿ ಹೇಳಿದ್ದಾನೆ: ರಗಳೆಯೂ ಉತ್ಸಾಹ, ಮಂದಾನಿಲ ಮತ್ತು ಲಲಿತ ರಗಳೆಗಳ ಪ್ರಭೇದಗಳಲ್ಲಿ 3, 4, 5 ಮಾತ್ರೆಯ ಗಣ ನಿಯಮಗಳು ಬರುತ್ತವೆ. ಜೋಡಿ ಪದದಿಂದ ಕೂಡಿ ಸಮಾನವಾಗಿರುತ್ತವೆ ಎಂದಿದ್ದಾನೆ. ಹರಿಹರನು ರಗಳೆಯಲ್ಲಿ ತನ್ನ ಕೃತಿಗಳನ್ನು ಬರೆದಿರುವುದು ವಿಶೇಷವಾಗಿದೆ. ಆದುದರಿಂದ ಈತನನ್ನು ರಗಳೆಯ ಕವಿ ಎಂದು ಗುರುತಿಸಲಾಗುತ್ತದೆ. ರಾಷ್ಟ್ರಕವಿ ಕುವೆಂಪುರವರು ಅವರ ಮಹಾಗ್ರಂಥ ಶ್ರೀ ರಾಮಾಯಣ ದರ್ಶನಂ ಕೃತಿಯ ರಚನೆಯಲ್ಲಿ ಸರಳರಗಳೆಯ ಪ್ರಕಾರವನ್ನು ಬಳಸಿರುವುದನ್ನು ಕಾಣುತ್ತೇವೆ.

## ಷಟ್ಪದಿ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಟ್ಪದಿ ಪ್ರಕಾರದ ಸಾಹಿತ್ಯರಚನೆಯು ದೇಸಿ ಛಂದೋಪ್ರಕಾರವಾಗಿದೆ. ಷಟ್ಪದಿ ಸಾಹಿತ್ಯ ಪ್ರಕಾರದ ಬಗ್ಗೆ ನಾಗವರ್ಮನಲ್ಲಿ ಮೊದಲ ಬಾರಿಗೆ ನೋಡುತ್ತೇವೆ. ಷಟ್ಪದಿ ಎಂದರೆ ಆರು ಸಾಲುಗಳ ಪದ್ಯ ಎಂದರ್ಥ, ಇಲ್ಲಿ 1,2 ಮತ್ತು 4,5 ಸಾಲುಗಳು ಚಿಕ್ಕದಾಗಿರುತ್ತವೆ ಹಾಗೂ ಮೂರು ಮತ್ತು ನಾಲ್ಕನೆಯ ಸಾಲುಗಳು ದೊಡ್ಡದಾಗಿರುತ್ತವೆ. ಎರಡು ಸಾಲುಗಳಲ್ಲಿ ಗುರು ಕಡ್ಡಾಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದೇ ಪ್ರಕಾರದಲ್ಲಿ ಸಾಹಿತ್ಯ ರಚನೆ ಮಾಡಿರುವುದು ಕವಿ ರಾಘವಾಂಕ, ಈತನನ್ನು

VTU BSc ಸಾಹಿತ್ಯ ಸಿಂಚನ 21KSS27 Draft Copy

ಷಟ್ಪದಿಯ ಬ್ರಹ್ಮ ಎಂದು ಕರೆಯಲಾಗುತ್ತದೆ. ಈತನು ಷಟ್ಪದಿಯ ಪ್ರಕಾರವನ್ನು ಪ್ರಧಾನವಾಗಿಟ್ಟುಕೊಂಡು ಕಾವ್ಯ ರಚಿಸಿದ್ದಾನೆ. ಮುಂದುವರೆದು ಷಟ್ಪದಿ ಪ್ರಕಾರದಲ್ಲಿ ಉತ್ಕೃಷ್ಟವಾದ ಸಾಹಿತ್ಯವನ್ನು ಕುಮಾರವ್ಯಾಸ ಕವಿಯು ಕರ್ನಾಟ ಭಾರತ ಕಥಾಮಂಜರಿ ಕೃತಿಯಲ್ಲಿ ಬಳಸಿದ್ದಾನೆ.

## ಸಾಂಗತ್ಯ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಾಂಗತ್ಯ ಪ್ರಕಾರದ ಸಾಹಿತ್ಯ ರಚನೆಯು ದೇಸಿ ಛಂದೋ ಪ್ರಕಾರದ ಜೊತೆಗೆ ಹಾಡುಗಬ್ಬವು ಸಹ ಆಗಿದೆ. ಸಾಂಗತ್ಯದ ಪ್ರಕಾರವನ್ನು ಮೊದಲ ಬಾರಿಗೆ ದೇವರಾಜನ ಸೊಬಗಿನ ಸೋನೆ ಎಂಬ ಕೃತಿಯಲ್ಲಿ ಬಳಸಲ್ಪಟ್ಟಿರುವುದನ್ನು ಕಾಣುತ್ತೇವೆ. ಸಾಂಗತ್ಯದ ಪ್ರಕಾರವು ತ್ರಿಪದಿಗಿಂತ ಹೆಚ್ಚು ಜನಪ್ರಿಯವಾದದ್ದು ಮತ್ತು ಕವಿಗಳಿಗೆ ಪ್ರಿಯವಾದ ಸಾಹಿತ್ಯದ ರೂಪವಾಗಿದೆ. ಕವಿ ರತ್ನಾಕರವರ್ಣಿ ಸಾಂಗತ್ಯದ ಪ್ರಕಾರದಲ್ಲಿ ತನ್ನ ಮಹಾಕಾವ್ಯವಾದ ಭರತೇಶ ವೈಭವವನ್ನು ರಚಿಸಿದ್ದಾನೆ.

VTU BSc ಸಾಹಿತ್ಯ ಸಿಂಚನ 21KSS27 Draft copy

**ಹರಿಹರ:** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರನನ್ನು ನೂತನ ಯುಗ ಪ್ರವರ್ತಕ ಮತ್ತು ಶಿವಕವಿ ಎಂದು ಗುರುತಿಸಲಾಗಿದೆ.

೧೨ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಶೈವಕವಿ.. ಹರಿಹರನು ಕೆಲವು ಕಾಲ ನರಸಿಂಹ ಬಲ್ಲಾಳ ರಾಜನಲ್ಲಿ ಕರಣಿಕನಾಗಿದ್ದನು. ಹುಟ್ಟಿದ್ದು ಶ್ರೀ ಕ್ಷೇತ್ರ ಹಂಪೆಯಲ್ಲಿ. ಈತನ ಆರಾಧ್ಯ ದೈವ ಹಂಪೆಯ ಶ್ರೀ ವಿರೂಪಾಕ್ಷ. ಹರಿಹರನು ಮಾಯಿ ದೇವರೆಂಬ ಗುರುಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ ತದನಂತರ ಉದ್ಯೋಗಕ್ಕಾಗಿ ಹೊಯ್ಸಳರ ರಾಜ ಎರಡನೇ ನರಸಿಂಹ ಬಲ್ಲಾಳನಲ್ಲಿ ಕರಣಿಕನಾಗಿದ್ದನು. ನಂತರ ಆಧ್ಯಾತ್ಮಿಕ ಒಲುಮೆಯಿಂದಾಗಿ ತನ್ನ ವೃತ್ತಿಯನ್ನು ತ್ಯಜಿಸಿ ಶಿವನೇ ತನ್ನ ಸರ್ವಸ್ವವೆಂದು, ಶಿವಶರಣರ ಸಂಕುಲವೇ ತನ್ನ ಬಂಧು-ಬಳಗ ಎಂದು ಭಾವಿಸಿಕೊಂಡು ವಿರೂಪಾಕ್ಷನ ಪೂಜೆ ಮತ್ತು ಸತ್ಕಾರ್ಯಗಳಲ್ಲಿ ಮಗ್ನನಾಗಿದ್ದನು. ಹಂಪೆಯನ್ನು ತನ್ನ ಸಾಹಿತ್ಯರಚನೆಯ ಕ್ಷೇತ್ರವನ್ನಾಗಿಸಿಕೊಂಡು ಪಂಪಾಶತಕ, ರಕ್ಷಾಶತಕ, ಗಿರಿಜಾ ಕಲ್ಯಾಣ, ಶಿವ ಶರಣರ ರಗಳೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ರಗಳೆಯ ಕಾವ್ಯ ಪ್ರಕಾರವನ್ನು ಜೀವಂತಗೊಳಿಸಿ "ರಗಳೆ ಕವಿ" ಎಂಬ ಬಿರುದನ್ನು ಪಡೆದಿದ್ದಾನೆ. ಈತನು ಬರೆದಿರುವ ಗಿರಿಜಾ ಕಲ್ಯಾಣ ಚಂಪೂ ಕೃತಿಯಾಗಿದೆ. ಈ ಕೃತಿಯಲ್ಲಿ ಶಿವ ಪುರಾಣಕ್ಕೆ ಸಂಬಂಧಿಸಿದ ವಿಚಾರಗಳು ಬಂದಿದ್ದು ಮನ್ಮಥನ ಸಂಹಾರ, ರತಿ ವಿಲಾಸ, ಯಜ್ಞಯಾಗಾದಿಗಳು, ಮತ್ತು ಕಥೆಯ ನಾಯಕಿ ಗಿರಿಜೆಯ ಬಾಳಿನ ಕಥೆಯು ಪ್ರಧಾನವಾಗಿದ್ದು ಶಿವನ ಪಾತ್ರವು ಸಹ ಕಥಾ ನಾಯಕಿಯ ಪಾತ್ರ ಪೋಷಣೆಗೆ ಸಹಕಾರಿಯಾಗಿ ಮೂಡಿಬಂದಿರುವುದು ಈ ಕಥೆಯ ವಿಶೇಷ ವಿಷಯವಾಗಿದೆ. ಗಿರಿಜಾ ಕಲ್ಯಾಣವು ಒಂದು ಸುಂದರವಾದ ಕೃತಿಯಾಗಿದ್ದರು ಹರಿಹರನನ್ನು ಯುಗಪುರುಷನ ಪಟ್ಟಕ್ಕೆ ಏರಿಸಿರುವುದು ಆತನು ಬರೆದ

ಶಿವಶರಣರ ರಗಳೆಗಳು ಮತ್ತು ಹರಿಹರನ ರಗಳೆಗಳನ್ನು ಸ್ಥೂಲವಾಗಿ ಕಥನಾತ್ಮಕ ಮತ್ತು ಭಾವಗೀತೆಯ ಅಂಶಗಳನ್ನು ಒಳಗೊಂಡಿರುವ ಎರಡು ಪಂಗಡಗಳಾಗಿ ವಿಂಗಡಿಸಬಹುದಾಗಿದೆ. ಕಥೆಗಳಲ್ಲಿ ಪುರಾತನ ಮತ್ತು ನೂತನ ಶಿವಶರಣರ ಕಥೆಗಳು ಬರುತ್ತವೆ. ಭಾವಗೀತೆಯ ಶೈಲಿಯ ರಗಳೆಗಳಲ್ಲಿ ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ ಮಹಿಮೆಯ ರಗಳೆಗಳು ವಸ್ತುನಿಷ್ಠ ಆಧಾರವಾಗಿವೆ. ಈತನ ರಗಳೆಗಳಲ್ಲಿ ನಂಬಿಯಣ್ಣನ ರಗಳೆ, ಮಹಾದೇವಿಯಕ್ಕನ ರಗಳೆ, ಪ್ರಭುದೇವರ ರಗಳೆ ಮತ್ತು ಬಸವರಾಜದೇವರ ರಗಳೆ ಪ್ರಮುಖವಾದವುಗಳು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಸ ಕಾವ್ಯಪರಂಪರೆಯನ್ನು ನಿರ್ಮಿಸಿ ಆಧ್ಯಾತ್ಮಿಕ ಮತ್ತು ಧಾರ್ಮಿಕ ಕೃತಿಗಳನ್ನು ರಚಿಸಿದ ಹರಿಹರನನ್ನು ಭಕ್ತಿಯ ಕವಿ ಎಂದು ಸಹ ಗುರುತಿಸಲಾಗುತ್ತದೆ.

21KSS27 Draft Copy

## ರಾಘವಾಂಕ:

ರಾಘವಾಂಕನು ಹರಿಹರನ ಸೋದರಳಿಯ. ಹರಿಹರನಂತೆ ರಾಘವಾಂಕನೂ ಸಹ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ನೂತನ ಯುಗಪ್ರವರ್ತಕರೆಂದು ಹೆಸರಾಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಷಟ್ಪದೀ ಪ್ರಕಾರವನ್ನು ಪ್ರವರ್ತನಗೊಳಿಸಿದ ಕೀರ್ತಿ ರಾಘವಾಂಕನಿಗೆ ಸಲ್ಲುತ್ತದೆ. ಆದುದರಿಂದ ರಾಘವಾಂಕನನ್ನು **ಷಟ್ಪದಿ ಬ್ರಹ್ಮ** ಎಂದು ಕರೆಯಲಾಗುತ್ತದೆ. ಈತನು ಕನ್ನಡದ ಅತ್ಯಂತ ಸ್ವತಂತ್ರ ಮನೋಧರ್ಮದ ಪ್ರಯೋಗಶೀಲನಾದ ವೀರಶೈವ ಕವಿ. **ಹರಿಶ್ಚಂದ್ರಕಾವ್ಯ** ಎಂಬ ಕಾವ್ಯದ ಕರ್ತೃ. ಈತನ ಜೀವನ ಹಾಗೂ ಕೃತಿಗಳು ಇವನ ಅನಂತರದ ಕೆಲವು ಕವಿಗಳಿಗೆ ಕುತೂಹಲದ, ಗೌರವದ ವಿಷಯಗಳಾಗಿದ್ದವು.

ರಾಘವಾಂಕನು ಹಂಪೆಯಲ್ಲಿ ಹುಟ್ಟಿ ಬೆಳೆದವನು. ಶಿವಕವಿ ಹರಿಹರ ಇವನ ಸೋದರ ಮಾವ ಮತ್ತು ಗುರು. ಆತನು ದೀಕ್ಷಾಗುರು, ಕಾವ್ಯಗುರುವೂ ಆಗಿದ್ದಾರೆ. ಹರಿಹರನಂತೆ ರಾಘವಾಂಕನೂ ಹಂಪೆಯ ವಿರೂಪಾಕ್ಷನ ಪರಮಭಕ್ತ. ರಾಘವಾಂಕನು ತಾನು ಹರಿಹರನ ವರಸುತ ಎಂದು ಹೇಳಿಕೊಂಡಿದ್ದಾನೆ. **'ಉಭಯಕವಿ ಕಮಲರವಿ'** ಬಿರುದಾಂಕಿತನಾಗಿದ್ದ ಈತ ಹರಿಶ್ಚಂದ್ರಕಾವ್ಯವನ್ನು ರಚಿಸಿ ಪಂಪಾಪುರದ ದೇವರಾಜನ ಸಭೆಯಲ್ಲಿ ಅದನ್ನು ಓದಿ ವಿದ್ವಾಂಸರನ್ನು ರಾಜನನ್ನೂ ಮೆಚ್ಚಿಸಿದ್ದನು. ತದನಂತರ ರಾಜ ಇವನಿಗೆ **'ಕವಿಶರಭಭೇರುಂಡ'** ಎಂಬ ವಾದದ ಪೆಂಡೆಯವನ್ನು ಕೊಟ್ಟು ಸನ್ಮಾನಿಸುತ್ತಾನೆ. ರಾಜಸಭೆಯಲ್ಲಿ ಹೀಗೆ ಮೆಚ್ಚುಗೆಗೊಂಡ ಹರಿಶ್ಚಂದ್ರಕಾವ್ಯವನ್ನು ರಾಘವಾಂಕ ಹೊನ್ನ ಹರಿವಾಣದಲ್ಲಿರಿಸಿ ತಂದು ತನ್ನ ಗುರುವು ಮಾವನೂ ಆದ ಹರಿಹರನ ಮುಂದಿರಿಸಿ ಅವನ ಆಶೀರ್ವಾದಗಳನ್ನು ಪಡೆಯಲು ಮುಂದಾದಾಗ, **ಆತ ಮೆಚ್ಚಲೊಲ್ಲದೆ , ನರಸ್ತುತಿ ಮಾಡಿದ ತಪ್ಪಿಗಾಗಿ ರಾಘವಾಂಕನ ಹಲ್ಲುಗಳನ್ನು ಮುರಿದ.** ಅನಂತರ ಶೈವ ಕೃತಿ ಪಂಚಕಗಳನ್ನು ರಚಿಸಿ ಮರಳಿ ತನ್ನ ಹಲ್ಲುಗಳನ್ನು ಪಡೆಯುತ್ತಾನೆ ಎಂಬ ದಂತ ಕಥೆ ಇದೆ.

ಕನ್ನಡ ಸಾಹಿತ್ಯದಲ್ಲಿ ರಾಘವಾಂಕ ಪ್ರಧಾನವಾಗಿ ಪ್ರಯೋಗಶೀಲನಾದ ಸ್ವತಂತ್ರ ಮನೋಧರ್ಮದ ಕವಿ. **'ಜನ ಬದುಕಬೇಕೆಂದು ಕಾವ್ಯಮುಖದಿಂಪೇಳ್ದನನಪೇಕ್ಷೆಯಿಂದ'** ಎಂಬುದು ಇವನ ಕಾವ್ಯೋದ್ದೇಶವಾಗಿತ್ತು.

## ರಾಘವಾಂಕನ ಕಾವ್ಯಗಳು:

ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭ ಚರಿತೆ ಮತ್ತು ಹರಿಹರ ಮಹತ್ವ ಇವುಗಳಲ್ಲಿ ಮೊದಲು ನಾಲ್ಕು ಪ್ರಕಟವಾಗಿದೆ.ಶರಭ ಚಾರಿತ್ರ ಹಾಗೂ ಹರಿಹರ ಮಹತ್ವ ಇನ್ನೂ ದೊರೆತಿಲ್ಲ.ಇದೂ ಅಲ್ಲದೆ "ದೇವಾಂಗ ದಾಮಯ್ಯನ ಪುರಾಣ"ಎಂಬ ಸಾಹಿತ್ಯ ಗ್ರಂಥವೊಂದು ದೊರಕಿದೆ.

**ಹರಿಶ್ಚಂದ್ರಕಾವ್ಯ:** ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದ ಕೃತಿಯಾದ **ಹರಿಶ್ಚಂದ್ರಕಾವ್ಯವು** ರಾಘವಾಂಕನ ಲೌಕಿಕ ಸಂಪ್ರದಾಯದ ಅತ್ಯುತ್ತಮವಾದ ಕೃತಿಯಾಗಿದೆ. ಸಂಸ್ಕೃತದ ಚಂಡಕೌಶಿಕ ನಾಟಕದಿಂದ ಪ್ರೇರಣೆಯನ್ನು ಪಡೆದು ರಚನೆಯಾದ ಕೃತಿಯಿದು. ರಾಘವಾಂಕನಿಗಿಂತ ಹಿಂದಿನ ಎಲ್ಲ ಆಕರಗಳೊಡನೆ ಇದರ ಸಂವಿಧಾನವನ್ನು ಹೋಲಿಸಿದರೆ ಭಾರತೀಯ ಸಾಹಿತ್ಯದಲ್ಲಿಯೇ ಕಾಣದೊರೆಯದ ನೂತನ ಸನ್ನಿವೇಶಸೃಷ್ಟಿ , ಕೃತಿಬಂಧೆ ಇಲ್ಲಿದೆ. **'ಹರನೆಂಬುದೇ ಸತ್ಯ ಸತ್ಯವೆಂಬುದೇ ಹರನು'** ಎನ್ನುವ ತತ್ವವನ್ನು ಜೀವನಕ್ಕೆ ಅಳವಡಿಸಿ ಬದುಕಿದ ಸತ್ಯಸಾಧಕ ಹರಿಶ್ಚಂದ್ರನ ಕರುಣಾದ್ಭುತವಾದ ಕಥೆಯೇ ಹರಿಶ್ಚಂದ್ರಕಾವ್ಯ. ಇದರಲ್ಲಿ ಹದಿನಾಲ್ಕು ಸ್ಥಳಗಳಿದ್ದು **ವಾರ್ಧಕ ಷಟ್ಪದಿಯಲ್ಲಿ** ರಚಿತವಾಗಿದೆ. ಹರಿಶ್ಚಂದ್ರನ ಪಾತ್ರ ಸತ್ಯ ಸಾಕ್ಷಾತ್ಕಾರಕ್ಕಾಗಿ ನಿರಂತರವೂ ಹೋರಾಡುವ ಆದರ್ಶಾಭೀಪ್ಸೆಯ ಪ್ರತಿಮೆಯಾಗಿದೆ. ಈ ಕಾವ್ಯದಲ್ಲಿ ಬರುವ ಚಂದ್ರಮತಿಯ ಪುತ್ರ ವಿಲಾಪ ಸನ್ನಿವೇಶವು ಕನ್ನಡ ಸಾಹಿತ್ಯದ ಅಪರೂಪದ ಮತ್ತು ಮನಕಲುಕುವ ಸನ್ನಿವೇಶವಾಗಿದೆ.  ಈ ಕೃತಿಯನ್ನು ರಾಘವಾಂಕನ ಮಹಾಕಾವ್ಯವೆಂದು ಹೇಳಲಾಗಿದೆ.

VTU BSc ಸಾಹಿತ್ಯ

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1.ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರಗಳೆ ಕವಿ ಎಂದು ಪ್ರಸಿದ್ಧರಾದ ಕವಿ ಯಾರು?

1. ಹರಿಹರ
2. ರಾಘವಾಂಕ
3. ಸತ್ಯ ಹರಿಶ್ಚಂದ್ರ
4. ಕುಮಾರವ್ಯಾಸ

2. ಉಭಯಕವಿ ಕಮಲರವಿ ಎಂಬ ಬಿರುದಾಂಕಿತ ಕನ್ನಡದ ಸಾಹಿತಿ ಯಾರು?.

1. ಲಕ್ಷ್ಮೀಶ
2. ರಾಘವಾಂಕ
3. ರತ್ನಾಕರವರ್ಣಿ
4. ಕುಮಾರವ್ಯಾಸ

3. ಷಟ್ಪದಿ ಪ್ರಕಾರದಲ್ಲಿ ಸಾಹಿತ್ಯ ರಚನೆಯನ್ನು ಮಾಡಿದ ಮೊದಲ ಕನ್ನಡದ ಕವಿ ಯಾರು?

1. ಬಸವಣ್ಣ
2. ಹರಿಹರ
3. ರಾಘವಾಂಕ
4. ಪಂಪ

4.ಗಿರಿಜಾ ಕಲ್ಯಾಣ ಯಾವ ಪ್ರಕಾರದ ಕೃತಿಯಾಗಿದೆ?

1. ಚಂಪೂ
2. ವಚನ
3. ರಗಳೆ
4. ಷಟ್ಪದಿ

5. ಹರಿಶ್ಚಂದ್ರ ಕಾವ್ಯ ಕೃತಿಯನ್ನು ರಚಿಸಿದವರು ಯಾರು?

1. ಹರಿಹರ
2. ರಾಘವಾಂಕ
3. ರತ್ನಾಕರವರ್ಣಿ
4. ಕುಮಾರವ್ಯಾಸ

6. ಯುಗಪ್ರವರ್ತಕ ಕವಿ ಎಂದು ಯಾರನ್ನು ಕರೆಯಲಾಗುತ್ತದೆ?

1. ಹರಿಹರ
2. ಅಲ್ಲಮಪ್ರಭು
3. ಲಕ್ಷ್ಮೀಶ

VTU BSc ಸಾಹಿತ್ಯ ಸಿಂಚನ 21KSS27 Draft Copy

4. ಕುಮಾರವ್ಯಾಸ

7. ಷಟ್ಪದಿ ಬ್ರಹ್ಮ ಎಂದು ಬಿರುದಾಂಕಿತ ಕವಿ ಯಾರು?

1. ಹರಿಹರ
2. ರಾಘವಾಂಕ
3. ಕೇಶಿರಾಜ
4. ನಾಗಚಂದ್ರ

8. ಸಾಂಗತ್ಯ ಪ್ರಕಾರದಲ್ಲಿ ಕನ್ನಡ ಸಾಹಿತ್ಯವನ್ನು ರಚಿಸಿದ ಕವಿ ಯಾರು?

1. ರತ್ನಾಕರವರ್ಣಿ
2. ಲಕ್ಷ್ಮೀಶ
3. ಕೇಶಿರಾಜ
4. ಕುಮಾರವ್ಯಾಸ

**ಒಂದು ಅಥವಾ ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಹರಿಹರ ಕವಿಯ ರಾಜಾಶ್ರಯದ ಕುರಿತು ಬರೆಯಿರಿ?
2. ರಾಘವಾಂಕನಿಗೆ ಹರಿಹರನು ರಾಜಾಶ್ರಯದ ವಿಷಯ ಕುರಿತು ತಿಳಿಸಿದ ವಿಷಯವೇನು?
3. ಸಾಂಗತ್ಯ ಪ್ರಕಾರದಲ್ಲಿ ಸಾಹಿತ್ಯವನ್ನು ರಚಿಸಿ ಪ್ರಚಾರ ಪಡಿಸಿದವರು ಯಾರು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಹರಿಹರನು ಬರೆದಿರುವ ಕೃತಿಗಳನ್ನು ಹೆಸರಿಸಿ.
2. ಕವಿ ರಾಘವಾಂಕನ ಕುರಿತು ಬರೆಯಿರಿ?.

21KSS27 Draft Copy
VTU BSc ಸಾಹಿತ್ಯ ಸಿಂಚನ

# ಕುಮಾರವ್ಯಾಸ ( ಗದುಗಿನ ನಾರಾಯಣಪ್ಪ):

**ರೂಪಕ ಸಾಮ್ರಾಜ್ಯ ಚಕ್ರವರ್ತಿ** ಎಂದೇ ಖ್ಯಾತಿ ಪಡೆದಿರುವ ಕುಮಾರವ್ಯಾಸನ ಪ್ರತಿಭೆಗೆ ಕನ್ನಡಿಯಾಗಿ ರಾಷ್ಟ್ರಕವಿ ಕುವೆಂಪುರವರ ನುಡಿಗಳು::

**"ಕುಮಾರ ವ್ಯಾಸನು ಹಾಡಿದನೆಂದರೆ**

**ಕಲಿಯುಗ ದ್ವಾಪರವಾಗುವುದು**

**ಭಾರತ ಕಣ್ಣಲಿ ಕುಣಿವುದು! ಮೈಯಲಿ**

**ಮಿಂಚಿನ ಹೊಳೆ ತುಳುಕಾಡುವುದು!"**

ಕುಮಾರವ್ಯಾಸನ ಕಾಲವನ್ನು ಕ್ರಿಸ್ತಶಕ ಸುಮಾರು 1410 ಎಂದು ಗುರುತಿಸಿದ್ದಾರೆ. ಕ್ರಿ.ಶ. ೧೫೦೦ ರಲ್ಲಿದ್ದ 'ತೊರವೆ ರಾಮಾಯಣ' ಬರೆದ ಕುಮಾರ ವಾಲ್ಮೀಕಿ ಅಥವಾ ತೊರವೆ ನರಹರಿ ಮತ್ತು 'ಕೃಷ್ಣರಾಯ ಭಾರತ' ಬರೆದ ತಿಮ್ಮಣ್ಣ ಕವಿ ಕುಮಾರವ್ಯಾಸನನ್ನು ಹೊಗಳಿರುವುದರಿಂದ ಕುಮಾರವ್ಯಾಸನು ಆ ಕಾಲಕ್ಕಿಂತ ಹಿಂದಿನವನೆಂದು ಸಿದ್ಧವಾಗಿದೆ. ಕುಮಾರವ್ಯಾಸನ ಮೂಲ ಹೆಸರು ನಾರಾಯಣಪ್ಪ. "ಗದುಗಿನ ನಾರಾಯಣಪ್ಪ" ಎಂದು ಸಾಮಾನ್ಯವಾಗಿ ಕುಮಾರವ್ಯಾಸನನ್ನು ಗುರುತಿಸಲಾಗುತ್ತದೆ. ಈತನ ಕಾವ್ಯ ನಾಮ ಕುಮಾರವ್ಯಾಸ. ವ್ಯಾಸ ಮಹಾಕವಿಯ ಸಂಸ್ಕೃತ ಮಹಾಭಾರತದ ಅತ್ಯzÀÄãತ ಕನ್ನಡ ರೂಪವನ್ನು ರಚಿಸಿದ್ದರಿಂದ, ವ್ಯಾಸ ಮಹಾಕವಿಯ ಮಾನಸಪುತ್ರ ತಾನೆನ್ನುವ ವಿನೀತ ಭಾವದಿಂದ ನಾರಣಪ್ಪ ಕುಮಾರ ವ್ಯಾಸನಾಗಿದ್ದಾನೆ. ಈ ಹೆಸರು ಕುಮಾರವ್ಯಾಸನಿಗೆ ಅನ್ವರ್ಥವಾಗಿದೆ. ಕುಮಾರವ್ಯಾಸನು ಗದುಗಿನ ವೀರನಾರಾಯಣ ದೇಗುಲದಲ್ಲಿನ ಕಂಬದ ಅಡಿಯಲ್ಲೇ ಗದುಗಿನ ಭಾರತವನ್ನು ರಚಿಸಿ ಓದುತ್ತಿದ್ದ ಎಂಬ ಪ್ರತೀತಿಯು ಇದೆ. ಗದುಗಿನ ವೀರನಾರಾಯಣ ಕುಮಾರವ್ಯಾಸನ ಆರಾಧ್ಯ ದೈವ. ಮಾರ್ಗ ಪರಂಪರೆಯಲ್ಲಿ ಪಂಪ ಮಹಾಕವಿಯಾದರೆ, ಷಟ್ಪದಿ **(ಭಾಮಿನಿ ಷಟ್ಪದಿ)** ಪರಂಪರೆಯಲ್ಲಿ ಕುಮಾರವ್ಯಾಸ ಅತ್ಯುನ್ನತ ಕವಿಯಾಗಿದ್ದಾನೆ. "**ಕರ್ಣಾಟ ಭಾರತ ಕಥಾಮಂಜರಿ / ಕುಮಾರವ್ಯಾಸ ಭಾರತ**"ವು ಈತನು ರಚಿಸಿರುವ ಶ್ರೇಷ್ಠ ಕೃತಿಯಾಗಿದೆ. ಪಂಪನ ನಂತರ ಕನ್ನಡ ಸಾಹಿತ್ಯಕ್ಕೆ ಸಮಗ್ರ ಮಹಾಭಾರತವನ್ನು ಭಾಮಿನಿ ಷಟ್ಪದಿಯಲ್ಲಿ ಪರಿಚಯಿಸಿದ ಕೃತಿಯಾಗಿದೆ. ಕುಮಾರವ್ಯಾಸನು ತನ್ನ ಕರ್ಣಾಟ ಭಾರತ ಕಥಾಮಂಜರಿ ಯಲ್ಲಿ **"ತಿಳಿಯಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತೆ"** ಎಂದು ಹೇಳುವ ಮೂಲಕ ಕೃಷ್ಣನನ್ನು ಕಥೆಯ ನಾಯಕನನ್ನಾಗಿ ಮಾಡಿಕೊಂಡು ಭಕ್ತಿಯ ಸಂಭ್ರಮ ಮತ್ತು ತೈಲದಲ್ಲಿ ಮುಳುಗಿ ಹೊಗಿದ್ದಾನೆ. ವೀರ ರಸವನ್ನೇ ಪ್ರಧಾನ ರಸವನ್ನಾಗಿ ಮಾಡಿಕೊಂಡು

ರಚನೆ ಮಾಡಿದ ಕೃತಿಯಿದು. ಈ ಎಲ್ಲಾ ಅಂಶಗಳಿಂದಾಗಿ ಕುಮಾರವ್ಯಾಸನನ್ನು **ರೂಪಕ ಸಾಮ್ರಾಜ್ಯ ಚಕ್ರವರ್ತಿ** ಎಂಬ ಬಿರುದಿನಿಂದ ಗುರುತಿಸಲಾಗುತ್ತದೆ.

## ಕರ್ಣಾಟ ಭಾರತ ಕಥಾಮಂಜರಿ:

ಕುಮಾರವ್ಯಾಸನ ಅತ್ಯಂತ ಹೆಚ್ಚು ಪ್ರಸಿ¢Þಯನ್ನು ಪಡೆದಿರುವ ಕೃತಿ **"ಕರ್ಣಾಟ ಭಾರತ ಕಥಾಮಂಜರಿ"**. ಇದಕ್ಕೆ ಗದುಗಿನ **ಭಾರತ, ಕನ್ನಡ ಭಾರತ, ಕುಮಾರವ್ಯಾಸ ಭಾರತ** ಎಂದೂ ಸಹ ಹೆಸರುಗಳಿವೆ. ಮಹಾಕವಿ ವ್ಯಾಸರ ಸಂಸ್ಕೃತ ಮಹಾಭಾರತದ ಕನ್ನಡಾನುವಾದ ಎನ್ನಬಹುದು. ಆದರೆ ಇಲ್ಲಿ ಕೇವಲ ಅನುವಾದವಾಗಿ ಉಳಿಸದೆ ಕುಮಾರವ್ಯಾಸ ತನ್ನ ಕಾವ್ಯಸಾಮರ್ಥ್ಯವನ್ನು ಈ ಕೃತಿಯಲ್ಲಿ ಸಂಪೂರ್ಣವಾಗಿ ಧಾರೆಯೆರೆದಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಮೇರುಕೃತಿಯಾಗಿ ಪರಿಗಣಿತವಾಗಿರುವ ಕನ್ನಡ ಭಾರತ, ಸಂಸ್ಕೃತ ಮಹಾಭಾರತದ ಮೊದಲ ಹತ್ತು ಪರ್ವಗಳು ೧೪೭ ಸಂಧಿ, ೮೨೪೪ ಪದ್ಯಗಳನ್ನು ಒಳಗೊಂಡಿದೆ. ಕುಮಾರವ್ಯಾಸ ಭಾರತವು ಸಂಪೂರ್ಣವಾಗಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ.

**ಅರಸುಗಳಿಗಿದು ವೀರ ದ್ವಿಜರಿಗೆ**
**ಪರಮ ವೇದದ ಸಾರ ಯೋಗೀ**
**ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ ||**
**ವಿರಹಿಗಳ ಶೃಂಗಾರ ವಿದ್ಯಾ**
**ಪರಿಣತರಲಂಕಾರ ಕಾವ್ಯಕೆ**
**ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ||**

ಈ ಮಹಾಕಾವ್ಯವು ರಾಜರಿಗೆ ಕ್ಷತ್ರಿಯಧರ್ಮವನ್ನು ತಿಳಿಸಿದರೆ, ಬ್ರಾಹ್ಮಣರಿಗೆ ವೇದದ ಸಾರವನ್ನು ತಿಳಿಸಿ, ಆತ್ಮಜ್ಞಾನಿಗಳಿಗೆ ಆತ್ಮತತ್ವದ ವಿಚಾರವನ್ನು, ಮಂತ್ರಿಗಳಿಗೆ ಬುದ್ಧಿದಾಯಕ, ವಿರಹಿಗಳಿಗೆ ಶೃಂಗಾರರಸ ಭರಿತವಾಗಿ, ವಿದ್ವಾಂಸರಿಗೆ ಅಲಂಕಾರ ಪ್ರಬೋಧಕವಾಗಿರುವ ಈ ಕಾವ್ಯ ಕಾವ್ಯಗಳಿಗೆ ಗುರುವಾಗಿದೆ.

ಕುಮಾರವ್ಯಾಸನ ರೂಪಕಗಳ ವೈವಿಧ್ಯತೆ ಮತ್ತು ಆಳವಾದ ಜ್ಞಾನವು ಅಪಾರವಾದದ್ದು. ಈ ಕಾರಣದಿಂದಾಗಿ ಕುಮಾರವ್ಯಾಸನ ಹೆಸರು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದೇ ಖ್ಯಾತಿ ಪಡೆದಿದೆ.

VTU BSc ಸಾಹಿತ್ಯ ಸಿಂಚನ

ಈ ಪದ್ಯವನ್ನು ಗಮನಿಸಿ:

**"ಬವರವಾದರೆ ಹರನ ವದನಕೆ ಬೆವರ ತಹೆನು" (ಅಭಿಮನ್ಯುವಿನ ವೀರೋಕ್ತಿ!)**

**"ಜವನ ಮೀಸೆಯ ಮುರಿದನೋ" (ಉತ್ತರನ ಪೌರುಷದಲ್ಲಿ)**

**"ಅರಿವಿನ ಸೆರಗು ಹಾರಿತು"**

ಈ ಪದ್ಯದಲ್ಲಿ ರೂಪಕಗಳೊಂದಿಗೆ ಕುಮಾರವ್ಯಾಸನ ಇನ್ನೊಂದು ಸಾಮರ್ಥ್ಯ ಮಾನವಪ್ರಕೃತಿಯ ವರ್ಣನೆಯನ್ನು ಕಾಣಬಹುದು. ಕುಮಾರವ್ಯಾಸನ ಪಾತ್ರಗಳು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟ. ಅವನ ಎಲ್ಲ ಪಾತ್ರಗಳು ಅವರವರದೇ ರೀತಿಯಲ್ಲಿ ಮಾತನಾಡುತ್ತಾರೆ, ಬೈಯುತ್ತಾರೆ, ನಗುತ್ತಾರೆ, ಹಾಗೂ ಅಳುತ್ತಾರೆ ಸಹ. ಕುಮಾರವ್ಯಾಸ ಅಷ್ಟೇ ಆಳವಾದ ದೈವಭಕ್ತ ಸಹ. ಶ್ರೀ ಕೃಷ್ಣನ ವರ್ಣನೆ ಅವನ ಕಾವ್ಯರಚನೆಯ ಮೂಲೋದ್ದೇಶಗಳಲ್ಲಿ ಒಂದು. **("ತಿಳಿಯ ಹೇಳುವೆ ಕೃಷ್ಣ ಕಥೆಯನು")** ಅವನ ಮಹಾಭಾರತ ಕಥೆ ಕೃಷ್ಣನ ಸುತ್ತಲೂ ಸುತ್ತುತ್ತದೆ. ಕುಮಾರವ್ಯಾಸ ಕೃಷ್ಣನ ಭಕ್ತ. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಹತ್ತರ (ಗದಾಪರ್ವ) ವರೆಗೆ ಬರೆದು ದುರ್ಯೋಧನನ ಅವಸಾನದ ನಂತರ, ಕುಮಾರವ್ಯಾಸನು ಮುಂದೆ ಸಂಕ್ಷಿಪ್ತವಾಗಿ, ಶ್ರೀಕೃಷ್ಣನು ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಮಾಡಿಸಿ ದ್ವಾರಕೆಗೆ ಹಿಂದಿರುಗುವವರೆಗೆ ಬರೆದಿದ್ದಾನೆ.

**ಭಾರತದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ ಮತ್ತು ಸ್ತೋತ್ರಗಳು, ದೇವಾನುದೇವತೆಗಳ ಶ್ಲೋಕಗಳ ವಿಶ್ಲೇಷಣೆ ಮತ್ತು ವಿವರಣೆಯನ್ನು ಅದ್ಭುತವಾಗಿ ಕನ್ನಡಿಗರಿಗೆ ಸಾಹಿತ್ಯದ ಮುಖಾಂತರ ಅರ್ಥೈಸಿರುವ ಕೀರ್ತಿ ಮಹಾಕವಿ ಕುಮಾರವ್ಯಾಸರವರಿಗೆ ಸಲ್ಲುತ್ತದೆ.** ಉದಾಹರಣೆಗೆ ಗಣೇಶ/ ವಿಘ್ನೇಶ್ವರನ ಸ್ತೋತ್ರ, ಗೌರಿ ಸ್ತೋತ್ರ, ಲಕ್ಷ್ಮಿ ಸ್ತೋತ್ರ, , ಶಾರದೆಯ ಸ್ತೋತ್ರ, ವಿಷ್ಣು ಸ್ತೋತ್ರ, ಶ್ರೀರಾಮ ಪ್ರಾರ್ಥನೆ, ಕೃಷ್ಣ ಪ್ರಾರ್ಥನೆ ಮೊದಲಾದ ಹಲವಾರು ಸ್ತೋತ್ರಗಳು **/ ಶ್ಲೋಕಗಳ ವಿವರಣೆಯನ್ನು ಕಾಣುತ್ತೇವೆ.** ಕುಮಾರವ್ಯಾಸನು ತನ್ನ ಕಥನದ ನಾಯಕ ಮತ್ತು ಆರಾಧ್ಯ ದೇವನಾದ ಕೃಷ್ಣನನ್ನು ಅದ್ಭುತವಾಗಿ ಒಗಟಿನಲ್ಲಿ ವರ್ಣಿಸಿದ್ದಾನೆ. ಅದನ್ನು ಈ ಕೆಳಗಿನ ಸಾಲುಗಳಲ್ಲಿ ವಿವರಿಸಿರುವುದನ್ನು ಕಾಣಬಹುದು:

**ವೇದ ಪುರುಷನ ಸುತನ ಸುತನ ಸ**

**ಹೋದರನ ಹೆಮ್ಮಗನ ಮಗನ ತ**

**ಓದರಿಯ ಮಾತುಳನ ರೂಪನನತುಳ ಭುಜಬಲದಿ**

**ಕಾದಿ ಗೆಲಿದನಣ್ಣನವ್ವೆಯ**

**ನಾದಿನಿಯ ಜಠರದಲಿ ಜನಿಸಿದ**

ನಾದಿ ಮೂರುತಿ ಸಲಹೋ ಗದುಗಿನ ವೀರನಾರಯಣ

ಈ ಮೇಲಿನ ಅಂಶಗಳನ್ನು ಗಮನಿಸಿದಾಗ, ಕುಮಾರವ್ಯಾಸನು ಭಕ್ತಿಯನ್ನು ಸಾಹಿತ್ಯದ ಮುಖಾಂತರ ಉಣಬಡಿಸಿದ ಕವಿ, ಭಾಷಾ ಪ್ರಾವೀಣ್ಯತೆಯನ್ನು ಹೊಂದಿದಂತಹ ಮಹಾಕವಿ, ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸ್ತುತ ಸನ್ನಿವೇಶದವರೆಗೆ ಪ್ರತಿಯೊಬ್ಬರಿಗೂ ದಾರಿದೀಪ ಮತ್ತು ಮಾರ್ಗದರ್ಶಕವಾಗಿರುವ ಸಾಹಿತ್ಯವನ್ನು ರಚಿಸಿದ ಕನ್ನಡದ ಶ್ರೇಷ್ಠ ಕವಿಯಾಗಿದ್ದಾರೆ.

# ಲಕ್ಷ್ಮೀಶ ( ಜೈಮಿನಿ ಭಾರತ):

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜೈಮಿನಿ ಭಾರತ ಎಂಬ ಶ್ರೇಷ್ಠ ಕೃತಿಯನ್ನು ರಚಿಸಿದ ವಾರ್ಧಕ ಷಟ್ಪದಿಯ ಅದ್ವಿತೀಯ ಕನ್ನಡದ ಕವಿ ಲಕ್ಷ್ಮೀಶ. ಈತನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈತನ ಕಾಲವನ್ನು ಕ್ರಿಸ್ತಶಕ ಸುಮಾರು 1520 ಎಂದು ಗುರುತಿಸಲಾಗಿದೆ. ಕುಮಾರವ್ಯಾಸನು ರೂಪಕ ಸಾಮ್ರಾಜ್ಯ ಚಕ್ರವರ್ತಿಯಾದರೆ ಕವಿ ಲಕ್ಷ್ಮೀಶ ಉಪಮಾಲೋಲ ಎಂದು ಕರೆಯಲ್ಪಟ್ಟಿದ್ದಾನೆ. ಕರ್ನಾಟ ಕವಿಚೂತವನ ಚೈತ್ರ ಮತ್ತು ಉಪಮಾಲೋಲ ಎಂಬ ಬಿರುದಾಂಕಿತ ಕವಿ ಇವನು. ಇವನು ತನ್ನ ಕಾವ್ಯರಚನೆಯನ್ನು ಇಷ್ಟದೇವತೆ ಲಕ್ಷ್ಮೀ ರಮಣ ಸ್ವಾಮಿಯ ಅಂಕಿತದಲ್ಲಿ ರಚಿಸಿದ್ದಾನೆ.

ಕುಮಾರವ್ಯಾಸನು ಪೂರ್ವಭಾರತದ 10 ಪರ್ವಗಳನ್ನು ಕನ್ನಡದಲ್ಲಿ ರಚಿಸಿದ್ದಾನೆ. ತದನಂತರ ತಿಮ್ಮಣ್ಣ ಕವಿಯು ಉತ್ತರ ಭಾರತವನ್ನು ಬರೆದು ಅನುವಾದಿಸಿದ್ದಾನೆ, ಮುಂದುವರೆದು ಉತ್ತರೋತ್ತರ ಭಾರತ ಎನ್ನ ಬಹುದಾದ ಜೈಮಿನಿ ಭಾರತವನ್ನು ಕನ್ನಡದಲ್ಲಿ ಲಕ್ಷ್ಮೀಶನು ರಚಿಸಿದ್ದಾನೆ. ಲಕ್ಷ್ಮೀಶನ ಜೈಮಿನಿ ಭಾರತವು ಸಂಸ್ಕೃತದ ಜೈಮಿನಿ ಭಾರತದ ಸಂಗ್ರಹ ರೂಪವಾದ ಕನ್ನಡದ ಅನುವಾದವಾಗಿದೆ.

**ಜೈಮಿನಿ ಭಾರತ** : ಜೈಮಿನಿ ಭಾರತದಲ್ಲಿ ಅರ್ಜುನ ನಾಯಕನಲ್ಲ ಶ್ರೀಕೃಷ್ಣನೆ ಪ್ರಧಾನ ನಾಯಕ. ವೀರ ರಸವೆ ಪ್ರಧಾನವಾಗಿದೆ. ವಾರ್ಧಕ ಷಟ್ಪದಿಯ ಜೈಮಿನಿ ಭಾರತವು ಪಾಂಡವರ ಕಥೆಯನ್ನು ಹೆಚ್ಚು ಒಳಗೊಂಡಿದೆ. ಜೈಮಿನಿ ಭಾರತವನ್ನು ಒಂದು ಕಥೆ ಎನ್ನುವುದಕ್ಕೆ ಬದಲಾಗಿ ಹಲವಾರು ಕಥೆಗಳ ಸಂಗ್ರಹ ಎಂದು ಕರೆಯಬಹುದು. ಇದರಲ್ಲಿ ಕಥೆಯೇ ಕತೆಗಿಂತ ಭಾಗವತ ದೃಷ್ಟಿಯ ಏಕತೆ ವಿಶೇಷವಾಗಿ ಕಂಡುಬರುತ್ತದೆ. ಉಪಮೆ ರೂಪಕಗಳ ಮನೋಹರತೆಯಿಂದ ಚಿತ್ರಿಸಲಾಗಿದೆ. ಇಲ್ಲಿ ಮಹಾಭಾರತದ ಅಶ್ವಮೇಧ ಪರ್ವದ ಕಥೆಯನ್ನು ಹೇಳಿದ್ದಾನೆ. ಇದರಲ್ಲಿ ವೀರ ರಸ ಪ್ರಧಾನವಾಗಿದ್ದು, ಭಕ್ತಿ ಮತ್ತು ಶೃಂಗಾರ ವರ್ಣನೆಗಳನ್ನು ಒಳಗೊಂಡಿದೆ. ಜೈಮಿನಿ ಭಾರತವು ಒಂದು ಕಥೆ ಎನ್ನುವುದಕ್ಕಿಂತ ಕಥಾಸಂಗ್ರಹವೆನ್ನಲು ಯೋಗ್ಯವಾಗಿದೆ. ಕಾವ್ಯದಲ್ಲಿ ಪಾಂಡವರ ಕಥೆ ಆನುಷಂಗಿಕವಾಗಿದ್ದು ಕೃಷ್ಣನ ಪಾರಮ್ಯ ಅಥವಾ ಹೆಚ್ಚುಗಾರಿಕೆಗೆ ಹೆಚ್ಚಿನ ಮಹತ್ವ ನೀಡಿರುವುದರಿಂದ ಇದನ್ನು ಕೃಷ್ಣಭಕ್ತರ ಕಥಾಗುಚ್ಛವಾಗಿ ಕವಿ ನಿರೂಪಿಸಿದ್ದಾನೆ.

"**ಅಶ್ವಮೇಧಯಾಗ'** ಎಂದರೆ ಚಕ್ರವರ್ತಿ/ರಾಜನಾದವನು ತನ್ನ ಪ್ರಾಬಲ್ಯವನ್ನು ತೋರಿಸಲು ಮತ್ತು ಪುಣ್ಯ ಸಂಪಾದನೆಗಾಗಿ ಅಥವಾ ಯಾವುದೋ ದೋಷ ಪರಿಹಾರಾರ್ಥವಾಗಿ ವಿಧಿಪೂರ್ವಕವಾಗಿ ಮಾಡುವ ಒಂದು ಯಜ್ಞ. ಇದರಲ್ಲಿ ಕೊನೆಗೆ ಯಜ್ಞಕ್ಕೆ ಬಲಿಕೊಡುವ ಒಂದು ಲಕ್ಷಣವಾದ ಕುದುರೆಯನ್ನು, ಅದು ಒಂದು ವರ್ಷ ಮನಬಂದಂತೆ ದೇಶ ಸುತ್ತಲು ಬಿಡುವರು. ಅದರ ಹಣೆಯ ಮೇಲೆ, "ಶಕ್ತಿಯಿದ್ದವರು

ಇದನ್ನು ಕಟ್ಟಿ ಬೆಂಗಾವಲಿನವರೊಡನೆ ಯುದ್ಧಮಾಡುವುದು, ಇಲ್ಲವೆ ಶರಣಾಗಿ ಕಪ್ಪ ಕೊಡುವುದು" ಎಂದು ಬಯಲಾಗಿರುತ್ತದೆ. ರಸಗರ್ಭಿತವಾದ ಈ ಉದ್ಗ್ರಂಥವನ್ನು ಮೂವತ್ನಾಲ್ಕು ಸಂಧಿಗಳಾಗಿ ವಿಭಾಗಿಸಿ ಜನರ ಮನಮೆಚ್ಚುವಂತೆ ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ.

## ರತ್ನಾಕರವರ್ಣಿ ( ಭರತೇಶ ವೈಭವ):

ಕನ್ನಡದ ಶ್ರೇಷ್ಠ ಸಾಂಗತ್ಯ ಕವಿ **ರತ್ನಾಕರವರ್ಣಿ.** ಈತನ ತಂದೆಯ ಹೆಸರು ದೇವರಾಜ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಈತನ ಜನ್ಮಸ್ಥಳ. ರತ್ನಾಕರವರ್ಣಿಯು ವಿಜಯನಗರದ ಅರಸರ ಸಾಮಂತ ರಾಜನಾದ ಕಾರ್ಕಳದ ಭೈರರಾಜನ ಆಸ್ಥಾನದಲ್ಲಿದ್ದ ಕವಿ. ಈತನ ದೀಕ್ಷಾಗುರು ಚಾರುಕೀರ್ತಿ ಆಚಾರ್ಯ ಮೋಕ್ಷ ಗುರು ಹಂಸನಾಥ. ಈತನಿಗೆ ಇದ್ದ ಬಿರುದುಗಳು ಶೃಂಗಾರಕವಿ ,ರತ್ನಾಕರ ಸಿದ್ಧ. ಕನ್ನಡದ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದ ಈತನು ಭರತೇಶವೈಭವ, ತ್ರಿಲೋಕಶತಕ, ರತ್ನಾಕರಾಧೀಶ್ವರ ಶತಕ, ಅಪರಾಜಿತೇಶ್ವರಶತಕ ಎಂಬ ಗ್ರಂಥಗಳನ್ನು ರಚಿಸಿದ್ದಾನೆ.

ರತ್ನಾಕರನು ತನ್ನ ಕೀರ್ತನೆಯೊಂದರಲ್ಲಿಈ ಕೆಳಗಿನಂತೆ ಕರ್ಮವನ್ನು ಕುರಿತು ಹೇಳುತ್ತಾನೆ:

**"ಕರ್ಮವೇ ಬಲ್ಲಿತಲ್ಲ ಜಿನ ಧರ್ಮವನುಳಿದೆನ್ನನೀಪರಿ ಹುಚ್ಚುಮಾಡಿತಲ್ಲ**

**ಕರ್ಮವಶದಿ ಕಾರ್ಗತ್ತಲೆ ಕವಿದೆನ್ನ ಚರ್ಮಕ್ಕೆ ಲಿಂಗವು ಬಿತ್ತಲ್ಲ**

**ನಿರ್ಮಲ ಶ್ರೀಜಿನಧರ್ಮದೊಳಿದ್ದೆನ್ನ ಈ ಮೈ ಹುಚ್ಚು ಮಾಡಿತಲ್ಲ"** .

ರತ್ನಾಕರನು ಸಂಪ್ರದಾಯಗಳಿಗೆ ಶರಣಾದವನಲ್ಲ; ಸಂಸಾರ ಸುಖವನ್ನು ನಿರಾಕರಿಸಬೇಕೆಂದು ಸಂದೇಶ ನೀಡಿದವನಲ್ಲ; ಉಂಡರೇನು ಉಟ್ಟರೇನು ಅಬಲೆಯರೊಡನೆ ಕೂಡಿದರೇನು-ಎಂದು ನೇರವಾಗಿ ಪ್ರಶ್ನಿಸಿದವನು; ಯಾವುದಕ್ಕೆ ಆದರೂ ಒಂದು ಇತಿಮಿತಿ ಇರಬೇಕೆಂದವನು. ವಸ್ತುವಿನ ಆಯ್ಕೆಯಲ್ಲಿ, ನಿರ್ವಹಣೆಯಲ್ಲಿ, ಛಂದಸ್ಸಿನಲ್ಲಿ, ನಿರೂಪಣೆಯಲ್ಲಿ ಯಾದೃaÒಕವಾಗಿ ನಡೆದ ಮೇರು ವ್ಯಕ್ತಿತ್ವದ ಕವಿ ಇವನು. ರೂಢಿ ನೀತಿ ರಿವಾಜುಗಳಲ್ಲಿ ಅರ್ಥಹೀನತೆಯಿದ್ದಾಗ ಮುಲಾಜಿಲ್ಲದೆ ಕಿತ್ತೆಸೆದು ಸರಿಕಂಡ ದಾರಿಯಲ್ಲಿ ವೈಜ್ಞಾನಿಕವಾಗಿ ಮತ್ತು ವೈಚಾರಿಕತೆಯಲ್ಲಿ ಬದುಕಿದ ಕವಿ ರತ್ನಾಕರವರ್ಣಿ.

**ಭರತೇಶ ವೈಭವ:** ಕನ್ನಡ ಸಾಹಿತ್ಯ ಚರಿತ್ರೆಯ ಪ್ರಕಾರಗಳಲ್ಲಿ ಒಂದಾದ ಸಾಂಗತ್ಯ ರೂಪದಲ್ಲಿ ಕವಿ ರತ್ನಾಕರವರ್ಣಿಯಿಂದ ರಚಿಸಲ್ಪಟ್ಟ ಕನ್ನಡದ ಮೇರುಕೃತಿಯೇ '**ಭರತೇಶ ವೈಭವ**'. ಈ ಕೃತಿಯಲ್ಲಿ ಆದಿತೀರ್ಥಂಕರ ವೃಷಭನಾಥನ ಮಗ, ಭರತ ಈ ಕಾವ್ಯದ ಪ್ರಮುಖ ನಾಯಕನಾಗಿದ್ದಾನೆ. ಈ ಕಾವ್ಯದಲ್ಲಿ ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿವಿಜಯ, ಮೋಕ್ಷವಿಜಯ ಎನ್ನುವ ಐದು ಸಂಧಿಗಳಿದ್ದು ಒಟ್ಟು ಹತ್ತುಸಾವಿರ ಪದ್ಯಗಳಿವೆ.

ಭರತನು ಆದಿ ತೀರ್ಥಂಕರರ ಹಿರಿಯ ಮಗನಾಗಿದ್ದು, ಈತನು ತನ್ನ ೯೬ ಸಾವಿರ ರಾಣಿಯರ ಜೊತೆಯಲ್ಲಿ ಭೋಗಜೀವನದ ಉನ್ಮಾದದಲ್ಲಿ ನಿರತನಾಗಿದ್ದ. ಈತನ ಆಯುಧಾಗಾರದಲ್ಲಿ ಪವಿತ್ರ ಚಕ್ರರತ್ನವೊಂದು ಉದಯಿಸಿ , ದಿಗ್ವಿಜಯಕ್ಕೆ ಹೊರಡಲು ಸೂಚಿಸುತ್ತದೆ. ಭರತ ವಿಜಯಯಾತ್ರೆ ಮಾಡುತ್ತ ತನ್ನ ತಮ್ಮ ಬಾಹುಬಲಿಯ ರಾಜಧಾನಿ ಪೌದನಪುರಕ್ಕೆ ಬರುತ್ತಾನೆ. ಚಕ್ರರತ್ನ ಅಲ್ಲಿ ನಿಲ್ಲುತ್ತದೆ. ಬಾಹುಬಲಿ ಅಣ್ಣನೊಡನೆ ಹೋರಾಡುತ್ತಾನೆ. ಭರತ ಬಾಹುಬಲಿಯ ಮನಸ್ಸನ್ನು ಒಲಿಸುತ್ತಾನೆ. ಬಾಹುಬಲಿ ವಿರಕ್ತನಾಗಿ ಜಿನದೀಕ್ಷೆ ಪಡೆದು ತಪಸ್ಸಿಗೆ ತೆರಳುತ್ತಾನೆ. ತನ್ನ ರಾಜಧಾನಿಗೆ ಮರಳಿದ ಭರತ ತಾನೂ ವಿರಕ್ತನಾಗಿ ತಪಸ್ಸಿಗೆ ತೆರಳಿ ಮೋಕ್ಷ ಸಂಪಾದಿಸುತ್ತಾನೆ. ಇದು ಸಂಪೂರ್ಣ ಭರತೇಶವೈಭವ ಕಥೆಯ ತಾತ್ಪರ್ಯ ಮತ್ತು ಸಾರಾಂಶವಾಗಿದೆ. ಭರತೇಶವೈಭವ ೮೦ ಸಂಧಿಗಳು ಹಾಗೂ 10,000 ಪದ್ಯರಾಶಿಯನ್ನುಳ್ಳ ಸಾಂಗತ್ಯ ಕಾವ್ಯ.

## ಕೇಶಿರಾಜ (ಶಬ್ದಮಣಿ ದರ್ಪಣಂ) :

ಕೇಶಿರಾಜನ ಕಾಲ ಸುಮಾರು ಕ್ರಿ.ಶ.೧೨೬೦ ಎಂದು ಹಲವಾರು ವಿದ್ವಾಂಸರುಗಳು ಗುರುತಿಸಿದ್ದಾರೆ. ಈತನು ಜನ್ನನ ಸೋದರಳಿಯ. ಹಳಗನ್ನಡ ವ್ಯಾಕರಣವನ್ನು ವಿವರಿಸುವ ಶಬ್ದಮಣಿದರ್ಪಣ ಈತನ ಪ್ರಖ್ಯಾತ ಕೃತಿಯಾಗಿದೆ.

ಕೇಶಿರಾಜನ "ಶಬ್ದಮಣಿದರ್ಪಣ"ವು ಸಮಗ್ರವೂ ಸ್ವಾರಸ್ಯವೂ ಆದ ಉತ್ತಮ ವ್ಯಾಕರಣ ಗ್ರಂಥ. ಇಡೀ ಕೃತಿ ಕಂದಪದ್ಯಗಳ ರೂಪದಲ್ಲಿದ್ದು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಇಲ್ಲಿ ಅಧ್ಯಾಯಗಳಿಗೆ ಪ್ರಕರಣ ಎಂದು ಕರೆಯಲಾಗುತ್ತದೆ. ಕಂದಪದ್ಯಗಳಿಗೆ 'ಸೂತ್ರ'ವೆಂದೂ, ಗದ್ಯರೂಪದ ವಿವರಣೆಗೆ 'ವೃತ್ತಿ'ಯೆಂದೂ, ವ್ಯಾಕರಣದ ಉದಾಹರಣೆಗಳಿಗೆ 'ಪ್ರಯೋಗ'ವೆಂದು ಕರೆದಿದ್ದಾನೆ, ತನ್ನ ಗ್ರಂಥಕ್ಕೆ ೨ನೇ ನಾಗವರ್ಮನ "ಶಬ್ದಸ್ಮೃತಿ ಮತ್ತು ಕಾವ್ಯಾವಲೋಕನ" ಗ್ರಂಥಗಳ 'ಸೂತ್ರ', 'ವೃತ್ತಿ' ಮತ್ತು 'ಪ್ರಯೋಗ'ಗಳನ್ನು ಕೇಶಿರಾಜನು ಆಧರಿಸಿರುವುದು ಕಂಡುಬರುತ್ತದೆ.

"ಶಬ್ದಮಣಿದರ್ಪಣ"ವು ೧೩ನೇ ಶತಮಾನಕ್ಕೆ ಮೊದಲು ಹಳಗನ್ನಡ ಭಾಷಾಸ್ಥಿತಿಗತಿಗಳು ಹೇಗಿದ್ದುವೆಂಬುದನ್ನು ಸವಿಸ್ತಾರವಾಗಿ, ಸಪ್ರಮಾಣ ವಿವೇಚನೆಯಿಂದ ವರ್ಣಿಸುತ್ತದೆ. ಇದರೊಳಗೆ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಹೆಸರಿನ ಎಂಟು ಪ್ರಕರಣಗಳಿವೆ. ಪೂರ್ವಕವಿಗಳ ಪ್ರಯೋಗಗಳನ್ನು ಯಥೋಚಿತವಾಗಿ ಉದಾಹರಿಸುವ ಕ್ರಮವನ್ನು ಇಲ್ಲಿ ಅನುಸರಿಸಲಾಗಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1.ಕರ್ಣಾಟ ಭಾರತ ಕಥಾಮಂಜರಿ ಕೃತಿಯ ಕರ್ತೃ ಯಾರು?

1. ಹರಿಹರ
2. ರಾಘವಾಂಕ
3. ಸತ್ಯ ಹರಿಶ್ಚಂದ್ರ
4. ಕುಮಾರವ್ಯಾಸ

2. ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರಯುಗವಾಗುವುದು ಎಂದು ಯಾವ ಕನ್ನಡದ ಆಧುನಿಕ ಕವಿ ಕುಮಾರವ್ಯಾಸನನ್ನು ಹೊಗಳಿದ್ದಾರೆ?

1. ಕುವೆಂಪು
2. ದಾರಾ ಬೇಂದ್ರೆ
3. ಶಿವರಾಮ ಕಾರಂತ
4. ಗೋಪಾಲಕೃಷ್ಣ ಅಡಿಗ

3. ಕರ್ಣಾಟ ಭಾರತ ಕಥಾಮಂಜರಿ ಯಾವ ಷಟ್ಪದಿ ಪ್ರಕಾರದಲ್ಲಿ ರಚನೆಯಾಗಿದೆ?

1. ಭಾಮಿನಿ
2. ವಾರ್ಧಕ
3. ಲಲಿತ
4. ಆಧುನಿಕ

4. ಕವಿ ಲಕ್ಷ್ಮೀಶನಿಗೆ ಇದ್ದ ಬಿರುದು ಯಾವುದು?

1. ಉಭಯಕವಿ
2. ಕವಿ ಬೇರುಂಡ
3. ಆದಿಕವಿ
4. ಕವಿಚೂತವನ ಚೈತ್ರ

VTU BSc ಸಾಹಿತ್ಯ ಸಿಂಚನ 21KSS27 Draft copy

5. ಜೈಮಿನಿ ಭಾರತವು ಯಾವ ಷಟ್ಪದಿಯಲ್ಲಿ ರಚನೆಯಾಗಿರುವ ಕೃತಿ?

1. ಭಾಮಿನಿ
2. ವಾರ್ಧಕ
3. ಲಲಿತ
4. ಆಧುನಿಕ

6. ಕುಮಾರವ್ಯಾಸನು ರೂಪಕ ಚಕ್ರವರ್ತಿ ಆದರೆ ಕವಿ ಲಕ್ಷ್ಮೀಶನು …………...?

1. ರತ್ನತ್ರಯ
2. ಶಿವಕವಿ
3. ರಗಳೆಯ ಕವಿ
4. ಉಪಮಾಲೋಲ

7. ರತ್ನಾಕರವರ್ಣಿಯು ………………….. ಪ್ರಕಾರ ಕವಿ?

1. ಷಟ್ಪದಿ
2. ರಗಳೆ
3. ಸಾಂಗತ್ಯ
4. ಚಂಪೂ

8. ಸಾಂಗತ್ಯ ಪ್ರಕಾರದಲ್ಲಿ ಕನ್ನಡ ಸಾಹಿತ್ಯವನ್ನು ರಚಿಸಿದ ಕವಿ ಯಾರು?

1. ರತ್ನಾಕರವರ್ಣಿ
2. ಲಕ್ಷ್ಮೀಶ
3. ಕೇಶಿರಾಜ
4. ಕುಮಾರವ್ಯಾಸ

21KSS27 Draft Copy
VTU BSc ಸಾಹಿತ್ಯ ಸಿಂಚನ

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಶಬ್ದಮಣಿದರ್ಪಣಂ ಕೃತಿಯನ್ನು ರಚಿಸಿದವರು ಯಾರು?
2. ಶೃಂಗಾರ ಕವಿ ಎಂದು ಬಿರುದಾಂಕಿತ ಕವಿ ಯಾರು ಮತ್ತು ಆತನು ರಚಿಸಿದ ಕೃತಿಯನ್ನು ಹೆಸರಿಸಿ?
3. ಭರತೇಶವೈಭವ ಕೃತಿಯ ಮೂಲ ಆಶಯವೇನು?
4. ಕರ್ಣಾಟ ಭಾರತ ಕಥಾಮಂಜರಿ ಕೃತಿಯು ಯಾವ ಮೂಲ ಅಂಶಗಳನ್ನು ಪ್ರಸ್ತುತಪಡಿಸಿದೆ?
5. ಕುಮಾರವ್ಯಾಸ ಕವಿಯನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದು ಏಕೆ ಕರೆಯಲಾಗುತ್ತದೆ?
6. ಕೇಶಿರಾಜನ ಶಬ್ದಮಣಿದರ್ಪಣಂ ಈ ಕೃತಿಯ ವೈಶಿಷ್ಟತೆಯನ್ನು ತಿಳಿಸಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಕೃತಿಯು ಭಕ್ತಿಪ್ರಧಾನವಾದ ಕೃತಿಯಾಗಿದೆ, ವಿವರಿಸಿ.
2. ಲಕ್ಷ್ಮೀಶನ ಜೈಮಿನಿ ಭಾರತ ಮತ್ತು ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಕೃತಿಗಳಿಗಿರುವ ವ್ಯತ್ಯಾಸಗಳೇನು?.
3. ರತ್ನಾಕರವರ್ಣಿಯ ಭರತೇಶ ವೈಭವದ ಸಾರಾಂಶವನ್ನು ಬರೆಯಿರಿ.

21KSS27 Draft Copy
VTU BSc ಸಾಹಿತ್ಯ ಸಿಂಚನ

# ಅಧ್ಯಾಯ - ಏಳು

# ದಾಸ ಸಾಹಿತ್ಯ / ಕೀರ್ತನೆಗಳು:

## ಪರಿಚಯ:

**ಹರಿದಾಸ** ಭಕ್ತಿ ಚಳುವಳಿಯು ಭಾರತದ ಸಾಂಸ್ಕೃತಿಕ ಇತಿಹಾಸಕ್ಕೆ ಒಂದು ಮಹತ್ವದ ತಿರುವು ನೀಡಿತು. ಆರು ಶತಮಾನಗಳ ಅವಧಿಯಲ್ಲಿ ಹಲವು ಸಂತರು ಹಾಗು ಯೊಗಿಗಳು ದಕ್ಷಿಣ ಭಾರತ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಸಂಸ್ಕಾರ, ತತ್ತ್ವ ಹಾಗೂ ಕಲೆಯನ್ನು ಉತ್ತಮ ರೀತಿಯಲ್ಲಿ ರೂಪಗೊಳಿಸುವಲ್ಲಿ ಸಹಾಯ ಮಾಡಿದ್ದಾರೆ, ಅವರು ಸಾಕಷ್ಟು ಧಾರ್ಮಿಕ ಪ್ರಭಾವವನ್ನು ಜನ ಸಮೂಹ ಹಾಗೂ ದಕ್ಷಿಣ ಭಾರತವನ್ನು ಆಳಿದ ರಾಜ್ಯಗಳ ಮೇಲೆ ಬೀರಿದರು. ಈ ಚಳುವಳಿಯನ್ನು ಪ್ರಾರಂಭಿಸಿದ್ದು *ಹರಿದಾಸರು* ಹಾಗೂ ಸ್ಪಷ್ಟ ಆಕಾರ ಪಡೆದದ್ದು ೧೩ನೆಯ- ೧೪ನೆಯ ಶತಮಾನದ ಕಾಲಮಾನದಲ್ಲಿ, ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಹಾಗೂ ಅದರ ಮುನ್ನ. ಈ ಚಳುವಳಿಯ ಮುಖ್ಯ ಗುರಿ ಮಧ್ವಾಚಾರ್ಯರ ದ್ವೈತ ತತ್ತ್ವಶಾಸ್ತ್ರವನ್ನು ಜನಸಾಮಾನ್ಯರಲ್ಲಿ *ದಾಸ ಸಾಹಿತ್ಯ* (ಭಗವಂತನ ಸೇವಕರ ಸಾಹಿತ್ಯ)ದ ಮಾಧ್ಯಮದಲ್ಲಿ ಪ್ರಸರಿಸುವುದು ಆಗಿತ್ತು. ಈ ಚಳವಳಿ ಕನ್ನಡನಾಡಿನಲ್ಲಿ ಆರಂಭವಾಗಿ ನಂತರ ದಕ್ಷಿಣ ಭಾರತದ ಬೇರೆಡೆ ಹಬ್ಬಿದರೂ, ಇದು ಮುಂಚಿನ ಭಕ್ತಿ ಚಳುವಳಿಗಳಾದ ಬಸವಣ್ಣನವರು ೧೨ನೆಯ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ನಡೆಸಿದ್ದ ವೀರಶೈವ ಚಳುವಳಿ (ಕನ್ನಡದ ವಚನ ಸಾಹಿತ್ಯ ) ಹಾಗು ತಮಿಳು ನಾಡಿನ ಆಳ್ವಾರ್ ಸಂತರ ೧೦ನೆಯ ಶತಮಾನದ ಚಳುವಳಿಗಳ ಫಲ. ಮುಂದೆ ವಲ್ಲಭಾಚಾರ್ಯ ಗುಜರಾತ್‌ನಲ್ಲಿ ಹಾಗೂ ಗುರು ಚೈತನ್ಯ ಮಹಾಪ್ರಭು ಮಧ್ವಾಚಾರ್ಯರ ಬೋಧನೆಗಳಿಂದ ಪ್ರಭಾವಿತರಾದರು. ಅವರ ಭಕ್ತರು ವಿಶ್ವಾದ್ಯಂತ ಇಸ್ಕಾನ್(ISKCON) ಚಳುವಳಿ ಶುರುಮಾಡಿದರು. ಹರಿದಾಸ ಚಳುವಳಿ ಕನ್ನಡ ಭಕ್ತಿ ಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದೆ.

ಆದಿದೈವವನ್ನು ನೆನೆದು ದೇವರ ವಿಚಾರಗಳನ್ನು ಮತ್ತು ಸಮಾಜಕ್ಕೆ ಮಾರ್ಗದರ್ಶನವನ್ನು, ವೈಚಾರಿಕತೆಯ ವಿಚಾರಗಳನ್ನು ಮಾರ್ಮಿಕವಾಗಿ ಹೇಳುತ್ತಾ, ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರು. ಜನ ಸಾಮಾನ್ಯರೆಲ್ಲರಿಗೂ ಅರ್ಥವಾಗುವಂತೆ ತಿಳಿಸಲು ದಾಸ ಶ್ರೇಷ್ಠರು ಆದ ಹರಿದಾಸ, ಶ್ರೀಪಾದರಾಯರು, ವ್ಯಾಸರು, ಪುರಂದರದಾಸರು ಮತ್ತು ಕನಕದಾಸರು ಮತ್ತು ಇನ್ನೂ ಅನೇಕ ಶ್ರೇಷ್ಠ ದಾಸರು ಕಟ್ಟಿದ ಹಾಡುಗಳೇ ಕೀರ್ತನೆಗಳು. ಕೀರ್ತನೆಯ ಸಾಹಿತ್ಯ ಪ್ರಕಾರದಲ್ಲಿ ಪಲ್ಲವಿ, ಅನುಪಲ್ಲವಿ ಹಾಗೂ ನಾಲ್ಕು

ಪಾದಗಳನ್ನು ಬಳಸುವುದು ಕೀರ್ತನೆಗಳ ರಚನೆಯ ಲಕ್ಷಣವಾಗಿದೆ. ಕರ್ನಾಟಕ ಸಂಗೀತದ ಉದಯಕ್ಕೆ ಕಾರಣರಾದ ಪುರಂದರದಾಸರನ್ನು ಕರ್ನಾಟಕ ಸಂಗೀತದ ಪಿತಾಮಹ ಎಂದು ಕರೆಯಲಾಗುತ್ತದೆ.

## ಪುರಂದರದಾಸರು:

ಕೀರ್ತನೆ ಸಾಹಿತ್ಯದಲ್ಲಿ ಪುರಂದರದಾಸರದು ಬಹುದೊಡ್ಡ ಕೊಡುಗೆ. **ಕರ್ನಾಟಕ ಸಂಗೀತಕ್ಕೆ ಇವರ ಕೊಡುಗೆ ಅಗಾಧ ಇವರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆಯಲಾಗುತ್ತದೆ. ದಾಸರೆಂದರೆ ಪುರಂದರದಾಸರಯ್ಯ ಎಂಬುದಾಗಿ ವ್ಯಾಸರಾಯರಿಂದಲೆ ಮೆಚ್ಚುಗೆ ಪಡೆದಂತಹ ದಾಸ ಶ್ರೇಷ್ಠರು.** ಇವರ ಕೀರ್ತನೆಗಳು ಆಧ್ಯಾತ್ಮದ ಜೊತೆ ಸಾಮಾಜಿಕ ಕಳಕಳಿಯನ್ನು ಸಾರುವಂತಹವುಗಳಾಗಿವೆ. ಕೀರ್ತನೆಗಳು. ದಾಸಸಾಹಿತ್ಯದಲ್ಲಿ ಶ್ರೇಷ್ಠರಾದ ಶ್ರೀ ಪುರಂದರದಾಸರು ತಮ್ಮ ಧ್ಯಾನ, ಭಕ್ತಿ, ಮಡಿ-ಮೈಲಿಗೆ, ಮಡಿವಂತಿಕೆ, ಪೂಜೆ-ಪುರಸ್ಕಾರಗಳಲ್ಲಿ ನಾವು ತೋರುವ ಡಾಂಭಿಕ ಭಕ್ತಿಯ ವಿವಿಧ ಬಗೆಗಳನ್ನು ನಿದರ್ಶನಗಳ ಮುಖಾಂತರ ವಿವರಿಸಿದ್ದಾರೆ.

21KSS27 Draft Copy

### ಪುರಂದರದಾಸರ ಕೀರ್ತನೆಗಳ ಆಶಯ::

**'ಮಾನವ ಜನ್ಮ ದೊಡ್ಡದು | ಇದನು ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' 'ದಾಳಿ ಬರುವ ಮುನ್ನಾ ಧರ್ಮ ಗಳಿಸೊ||'**

ಎಂದು ಉಪದೇಶಿಸಿದ್ದಾರೆ. ಹಾಗಾದರೆ ಧರ್ಮವನ್ನು ಗಳಿಸುವುದು ಹೇಗೆ? ವ್ಯಕ್ತಿಯ ಉದ್ಧಾರ ಹೇಗೆ? ಎನ್ನುವ ಪ್ರಶ್ನೆ ಬಂದರೆ, ಇದಕ್ಕಾಗಿ ಪರಮಾತ್ಮನನ್ನು ನಂಬಿ, ಎಲ್ಲವನ್ನೂ ಅವನಿಗೆ ಅರ್ಪಿಸಬೇಕು. ಆತನನ್ನು ನಂಬಿ ಕೆಟ್ಟವರಿಲ್ಲ ಎಂದು ನಂಬಿರುವ ದಾಸರು **'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ ನಂಬದೇ ಕೆಟ್ಟರೆ ಕೆಡಲಿ|'** ಎಂದು ಹಾಡಿರುವ ದಾಸರು ಈ ನಂಬಿಕೆ ಅಥವಾ ಭಕ್ತಿಯ ಸಾಧನಗಳಲ್ಲಿ ಅತ್ಯಂತ ಮಹತ್ವದ್ದು. ಭಗವಂತನ ನಾಮಸ್ಮರಣೆಯನ್ನು ನಿರಂತರವಾಗಿ ಮಾಡುತ್ತಿರಬೇಕೆಂದು ಈ ಪದ್ಯದಲ್ಲಿ ಹೀಗೆ ತಿಳಿಸುತ್ತಿದ್ದಾರೆ **'ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣಾ ಎನಬಾರದೇ'** ಎಂದ ದಾಸರು ಪುನಃ ತಮ್ಮ ಒಂದು ಹಾಡಿನಲ್ಲಿ **'ನಾರಾಯಣ ನಿನ್ನ ನಾಮದ ಸ್ಮರಣೆಯ ಸಾರಾಮೃತವೆನ್ನ ನಾಲಿಗೆಗೆ ಬರಲಿ |'** ಎಂದಿದ್ದಾರೆ. ಹಾಗೂ **'ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲ ಒಂದಿದ್ದರೆ ಸಾಕೋ |'** ಎಂದು ವ್ಯಕ್ತಿಗಿಂತ ನಾಮವೇ ಶ್ರೇಷ್ಠವೆಂದು ಪ್ರತಿಪಾದಿಸಿದ್ದಾರೆ. ಡಾಂಭಿಕ ಭಕ್ತಿಯನ್ನು ಕಟುವಾಗಿ ಟೀಕಿಸುವ ದಾಸರು ಲೋಕದ ಡಾಂಭಿಕತೆಯನ್ನು, ಆತ್ಮವಂಚನೆಯನ್ನು ಕಂಡು ನಗುತ್ತಾ, ಅದನ್ನು ವಿಡಂಬಿಸುತ್ತಾ **'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ |'** ಎಂದು ಹಾಡಿ, ಧರ್ಮದ ಬಾಹ್ಯ ಆಚರಣೆಗಿಂತ ಅಂತಃಕರಣ ಶುದ್ಧಿ ಮತ್ತು ಸದಾಚಾರಗಳು ತುಂಬಿರಬೇಕೆಂದು ಸ್ಪಷ್ಟಪಡಿಸಿದ್ದಾರೆ.

## ಮಾನವ ಧರ್ಮ:

ವಿಶಾಲವಾದ ಮಾನವ ಧರ್ಮವನ್ನು ಸುಂದರವಾಗಿ ಬೋಧಿಸಿದ್ದಾರೆ. ಅತ್ಯುZÀÒವಾದ ಪ್ರೀತಿ, ತತ್ತ್ವದ, ಅಹಿಂಸಾಧರ್ಮದ ಬೋಧೆಯನ್ನು ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ '**ಧರ್ಮವೇ ಜಯವೆಂಬ ದಿವ್ಯಮಂತ್ರ**' ಎನ್ನುವ ಪದದಲ್ಲಿ ತಿಳಿಸಿದ್ದಾರೆ. ಅಲ್ಲದೇ

**'ವಿಷವಿಕ್ಕಿದವಗೆ ಷಡ್ರಸವನೀಯಲುಬೇಕು |**
**ದ್ವೇಷ ಮಾಡಿದವನ ಪೋಷಿಸಲುಬೇಕು |**
**ಮೋಸ ಮಾಡಿದವನ ಹೆಸರು ಮಗನಿಗಿಡಬೇಕು |**
**ಹುಸಿಯಾಡಿ ಕೆಡಿಸುವವನ ಹಾಡಿ ಹರಸಲುಬೇಕು ||'**

ಎಂದು ಹಾಡಿರುವ ದಾಸರು ದ್ವೇಷಕ್ಕೆ ಪ್ರತಿಯಾಗಿ ಪ್ರೀತಿ, ವಿಷಕ್ಕೆ ಪ್ರತಿಯಾಗಿ ಅಮೃತ ಇವುಗಳನ್ನು ನೀಡುವುದೇ ಉದಾತ್ತವಾದ ಮಾನವ ಧರ್ಮ ಎಂದು ಜನತೆಗೆ ದಿವ್ಯಸಂದೇಶವನ್ನು ನೀಡಿದ್ದಾರೆ.

## ಅದರಿಂದೇನು ಫಲ ಇದರಿಂದೇನು ಫಲ:

**ಅದರಿಂದೇನು ಫಲ ಇದರಿಂದೇನು ಫಲ, ನಮ್ಮ**
**ಪುರಂದರ ವಿಠಲನ ನಾಮವ ನೆನೆಯದೆ ||ಪ||**
**ಹೃದಯ ಕಮಲವನು ತೊಳೆಯಲಾರದೆ ವ್ಯರ್ಥ**
**ಉದಯಾಸ್ತಮಾನ ನೀರೊಳು ಮುಳುಗುವರು**
**ಅದಗಿಂತ ಸರ್ವದಾ ನೀರೊಳಗಿರುತಿಪ್ಪ**
**ಮುದಿಕಪ್ಪೆ ಮಾಡಿದ ತಪ್ಪೇನಯ್ಯ**
**ಹಲವು ಕಾಲ ಕಲ್ಲು ನೀರೊಳಗಿದ್ದರೇನು**
**ಬಲು ನೆನೆದಮೃತಶಿಲೆಯಾಗುವುದೆ**
**ಕರದಲಿ ಜಪ ಮಾಲೆ ಮಣಿಗಳನೆಣಿಸುತ**
**ಪರನಿಂದೆ ಬಾಯಲಿ ಮಾಡುವರಯ್ಯ**

**ಕೀರ್ತನೆಯ ತಾತ್ಪರ್ಯ:** ಹೃದಯದಲ್ಲಿರುವ ಕಲ್ಮಶವನ್ನು ತೊಳೆಯಲಾರದವನು ದೇವರ ಪೂಜೆಗೆಂದು ಸೂರ್ಯೋದಯಕ್ಕಿಂತ ಮೊದಲು ನೀರಿನಲ್ಲಿ ಮುಳುಗಿದರೆ ಏನು ಪ್ರಯೋಜನವಾಗುವುದಿಲ್ಲ. ಕಾರಣ ನಾವು ಸದಾ ನೀರಿನೊಳಗೆ ಇರುವ ಕಪ್ಪೆಯನ್ನು ಮುಟ್ಟುವುದಿಲ್ಲ, ಅದನ್ನು ಮೈಲಿಗೆಯೆಂದು ದೂರ ಇಡುತ್ತೇವೆ. ಹಲವು ಕಾಲ ಕಲ್ಲು ನೀರೊಳಗಿದ್ದರೆ ನೆನೆದು ಅಮೃತಶಿಲೆ ಆಗುವುದೇ? ಅದೇ ರೀತಿ ಮನದಲ್ಲಿ ಜಪಮಾಲೆಯನ್ನು ಎಣಿಸುತ್ತಾ ಪರರ ನಿಂದನೆ ಮಾಡಿದರೆ ಮನಸ್ಸು ಶಾಂತವಾಗುವುದೇ?, ಆದುದರಿಂದ

VTU BSc ಸಾ

ಯಾವುದೇ ಕೆಲಸವನ್ನು ಮಾಡಿದರೆ ಅಂತಹ ಕೆಲಸವನ್ನು ದೇವರ ಮೇಲಿನ ಭಕ್ತಿಯಿಂದ ಶಾಂತಚಿತ್ತರಾಗಿ ನಮ್ಮ ಕಾರ್ಯವನ್ನು ಮಾಡಬೇಕು ಇಲ್ಲದಿದ್ದರೆ ನಾವು ಮಾಡುವ ಎಲ್ಲಾ ಕೆಲಸಗಳು ಬೂಟಾಟಿಕೆ ಡಾಂಭಿಕ ಭಕ್ತಿಯ ಪ್ರದರ್ಶನ, ಅರ್ಥವಿಲ್ಲದ ಮಡಿ-ಮೈಲಿಗೆಗಳು ಆಗುತ್ತವೆ ಎಂಬ ವಿಷಯಗಳನ್ನು ವಿವಿಧ ನಿದರ್ಶನಗಳ ಮುಖಾಂತರ ಪುರಂದರದಾಸರು ವಿವರಿಸಿದ್ದಾರೆ.

## ಕನಕ ದಾಸರ ಕೀರ್ತನೆಗಳ ಆಶಯ:

**ಕನಕದಾಸರು** [ಮೂಲ ಹೆಸರು -ತಿಮ್ಮಪ್ಪನಾಯಕ] (1508-1606) ಕರ್ನಾಟಕದಲ್ಲಿ ೧೫-೧೬ ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಕೆಳವರ್ಗದಿಂದ ಬಂದು ಭಕ್ತಿ, ವೈಚಾರಿಕತೆ, ಸಮಾನತೆ, ಸಹಬಾಳ್ವೆ ಮತ್ತು ಸಮಾಜಕ್ಕೆ ಮಾರ್ಗದರ್ಶನವನ್ನು ಮಾಡಿದ ಶ್ರೇಷ್ಠ ದಾಸರಾಗಿದ್ದಾರೆ.ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು, ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿzÁÞAತಗಳಿಗೆ ಕಾಣಿಕೆಯನ್ನಿತ್ತವರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು **ಶ್ರೀ ವ್ಯಾಸರಾಯ**ರ ಮೆಚ್ಚಿನ ಶಿಷ್ಯರು. ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರ ಕೀರ್ತನೆಗಳ ಅಂಕಿತನಾಮ ಕಾಗಿನೆಲೆಯ ಆದಿಕೇಶವರಾಯ ಎಂಬುದಾಗಿದೆ.

ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ.

### ಕನಕದಾಸರ ಪ್ರಮುಖ ಕೃತಿಗಳು ಮತ್ತು ಮೂಲ ಸಾರಾಂಶ:

**ಮೊಹನತರಂಗಿಣಿ:** ಮೊಹನತರಂಗಿಣಿಯಲ್ಲಿ ಕನಕದಾಸರು ಕೃಷ್ಣಚರಿತ್ರೆಯನ್ನು ಹೇಳುತ್ತಾ ತಮ್ಮ ಅಧಿರಾಜ ಕೃಷ್ಣದೇವರಾಯನನ್ನೇ ಕೃಷ್ಣನಿಗೆ ಹೋಲಿಸುತ್ತಾರೆ. ಅವರ ದ್ವಾರಕಾಪುರಿ ಸ್ವಯಂ ವಿಜಯನಗರವೇ ಆಗಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಮೋಹನತರಂಗಿಣಿ ಅಥವಾ ಕೃಷ್ಣಚರಿತೆ ಎಂಬ ಈ ಕಾವ್ಯದಲ್ಲಿ ಕನಕದಾಸರ ಸಮಕಾಲೀನ ಜೀವನ ಚಿತ್ರಗಳು ಹಾಗೂ ಪೌರಾಣಿಕ ಕಥೆಗಳು ಅಚ್ಚಗನ್ನಡದಲ್ಲಿ ನಿರೂಪಿತವಾಗಿವೆ.

**ನಳಚರಿತ್ರೆ :** ಮಹಾಭಾರತದಂತಹ ಮಹಾಕಾವ್ಯಕ್ಕೆ ಪ್ರೇರಣೆಯಾದ ಉಜ್ವಲ ಆರ್ಯೇತರ ಪ್ರೇಮಕಥೆ ನಳ ದಮಯಂತಿಯರ ಕಥೆ. ೧೩ನೇ ಶತಮಾನದ ನಳ ಚಂಪೂವಿಗಿಂತ ಈ ನಳಚರಿತ್ರೆ ಹೃದಯಸ್ಪರ್ಶಿಯಾದ ಚಿತ್ರಣಗಳಿಂದ ಚಿರಂತನ ಪ್ರೇಮದ ಕಥನದಿಂದ ಅಶ್ಲೀಲತೆಯ ಸೋಂಕಿಲ್ಲದ ಶೃಂಗಾರ ವರ್ಣನೆಯಿಂದ ಶೋಭಿಸುತ್ತಾ ಇಂದಿಗೂ ಅತ್ಯಂತ ಜನಪ್ರಿಯವಾಗಿದೆ.

**ರಾಮಧಾನ್ಯ ಚರಿತೆ :** ಈ ಕೃತಿಯಲ್ಲಿ ಧನಿಕರ ಆಹಾರಧಾನ್ಯ ಅಕ್ಕಿ ಹಾಗೂ ಕೆಳವರ್ಗದವರ ಆಹಾರಧಾನ್ಯವೆಂದು ಪರಿಭಾವಿಸಲಾಗಿರುವ ರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನ ಔನ್ನತ್ಯವನ್ನು ಸಾಬೀತು ಪಡಿಸುತ್ತದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತದೆ ಎಂಬುದನ್ನು ನಿರೂಪಿಸಲಾಗಿದೆ. ಒಂದು ರೀತಿಯಲ್ಲಿ ರಾಮಧಾನ್ಯಚರಿತ್ರೆ ಇಂದಿನ ಬಂಡಾಯ ಸಾಹಿತ್ಯದ ಬೇರು, ನವ್ಯೋತ್ತರದ ಕನ್ನಡ ಸಾಹಿತ್ಯದ ಸೂರು ಆಗಿರುವಂತೆ ಕಂಡುಬರುತ್ತದೆ.

**ಹರಿಭಕ್ತಿಸಾರ:** ಹರಿಭಕ್ತಿಸಾರ ೧೧೦ ಭಕ್ತಿಪದ್ಯಗಳಿರುವ ಗ್ರಂಥ. ಭಾಮಿನೀ ಷಟ್ಪದಿಯಲ್ಲಿ ಸರಳಗನ್ನಡದಲ್ಲಿ ರಚಿತವಾಗಿರುವ ಈ ಗ್ರಂಥ ಕನ್ನಡದ ಭಗವದ್ಗೀತೆಯಂತಿದೆ.

## ಕನಕದಾಸರ ಕೀರ್ತನೆಗಳು ಮತ್ತು ಆಶಯ:

ಕನಕದಾಸರು ಕೀರ್ತನೆಗಳ ಮುಖಾಂತರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಮೇರು ವ್ಯಕ್ತಿತ್ವದ ದಾಸ ಸಾಹಿತಿಯಾಗಿ ಕಂಡುಬರುತ್ತಾರೆ. ಇವರು ೩೧೬ ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ ಧಣಿಯಾಗಿ, ಇನಿಯನಾಗಿ, ಅಣೋರಣೀಯನಾಗಿ, ಮಹತೋಮಹೀಮನಾಗಿ ಅವರು ಕಂಡಿದ್ದಾರೆ. **'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ** 'ಎಂದು ಕರೆದು ನೆಲೆ ನಿಲ್ಲಿಸಿಕೊಂಡ ಅನುಭಾವ ಅವರದು. ಒಳಗಣ್ಣಿನಿಂದ ಅವನ ಕಂಡು- **'ಕಂಡೆ ನಾ ತಂಡ ತಂಡ ಹಿಂಡು ದೈವ ಪ್ರಚಂಡ ರಿಪು ಗಂಡ ಉದ್ಧಂಡ ನರಸಿಂಹನ'** ಎಂದು ಸಂತೋಷಪಟ್ಟಿದ್ದಾರೆ. '**ಎಲ್ಲಿ ನೋಡಿದರಲ್ಲಿ ರಾಮ**' ಎಂಬ ಅನುಭೂತಿಯಲ್ಲಿ ಹರಿಯನ್ನು ಕಂಡ ಬಳಿಕ **'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು'** ಎಂಬ ಧನ್ಯತಾಭಾವ. **'ದಾಸದಾಸರ ಮನೆಯ ದಾಸಿಯರ ಮಗ ಮಂಕುದಾಸ ಮರುಳುದಾಸ ನರಜನ್ಮಹುಳು ಪರಮಪಾಪಿ'** ಎಂದು ಕರೆದುಕೊಂಡಿದ್ದ ಅವರು ಜೀವ ಮಾಗಿ ಹಣ್ಣಾದಂತೆ ಪರಮಾತ್ಮನ ಸಾಕ್ಷಾತ್ಕಾರವಾದಂತೆ **'ಆತನೊಲಿದ ಮೇಲೆ ಇನ್ಯಾತರ ಕುಲವಯ್ಯಾ'** ಎಂದುಕೊಳ್ಳುತ್ತಾರೆ.

## ತಲ್ಲಣಿಸದಿರು ಕಂಡ್ಯ ತಾಳು ಮನವೇ:

**ತಲ್ಲಣಿಸದಿರು ಕಂಡ್ಯ ತಾಳು ಮನವೆ**
**ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ**

**ಬೆಟ್ಟದ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ**
**ಕಟ್ಟೆಯನ್ನು ಕಟ್ಟಿ ನೀರೆರೆದವರು ಯಾರೊ**
**ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದ ಮೇಲೆ**

ಗಟ್ಟ್ಯಾಗಿ ಸಲಹುವನು ಇದಕೆ ಸಂಶಯ ಬೇಡ

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ

ಅಡಿಗಡಿಗಡಿಗೆ ಆಹಾರವಿತ್ತವರು ಯಾರೊ

ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ

ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ

ಅಲ್ಲಲ್ಲಿಗೆ ಆಹಾರವಿತ್ತವರು ಯಾರೊ

ಬಲ್ಲಿದನು ಕಾಗಿನೆಲೆಯಾದಿಕೇಶವರಾಯ

ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

21KSS27 Draft copy

**ಕೀರ್ತನೆಯ ತಾತ್ಪರ್ಯ:** ಈ ಕೀರ್ತನೆಯಲ್ಲಿ ಕನಕದಾಸರು ಮನಸ್ಸಿನ ಆಳದಲ್ಲಿ ಮನೆಮಾಡಿರುವ ಗೊಂದಲಗಳಿಗೆ ಉತ್ತರಗಳನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಬೆಟ್ಟದ ತುದಿಯಲ್ಲಿ ಹುಟ್ಟಿದ ಗಿಡ-ಮರಗಳಿಗೆ ಯಾರು ಕಟ್ಟೆ ಕಟ್ಟಿ ನೀರನ್ನು ಹಾಕುವುದಿಲ್ಲ. ಬದಲಾಗಿ ಅವುಗಳು ಬದುಕುವ ಮಾರ್ಗ ದೈವ ಸೃಷ್ಟಿ. ಅಡವಿಯೊಳಗೆ ಅಡಗಿರುವ ಪ್ರಾಣಿ-ಪಕ್ಷಿಗಳಿಗೆ ಆಹಾರವನ್ನು ನೀಡುವುದು ಪ್ರಕೃತಿಯ ಮಧ್ಯದಲ್ಲಿ ನಡೆಯುವ ಯಶೋಗಾಥೆಗಳಾಗಿವೆ. ಸೃಷ್ಟಿಕರ್ತನು ಎಲ್ಲಾ ಜೀವಿಗಳನ್ನು ಸಲಹುವಂತೆ ನಿಮ್ಮನ್ನು ಸಹ ಸಲಹುತ್ತಾನೆ ಎಂಬ ಭರವಸೆ ಇರಲಿ ಎಂದಿದ್ದಾರೆ.

VTU BSc ಸಾಹಿತ್ಯ ಸಿಂಚನ

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1. ಕರ್ನಾಟಕ ಸಂಗೀತ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?

    1. ವೇದವ್ಯಾಸರು
    2. ಪುರಂದರದಾಸರು
    3. ಕನಕದಾಸರು
    4. ಶ್ರೀಪಾದರಾಯರು

3. ದಾಸರೆಂದರೆ ಪುರಂದರದಾಸರಯ್ಯ ಎಂದು ಪುರಂದರದಾಸರನ್ನು ಹೊಗಳಿದವರು ಯಾರು?

    1. ವ್ಯಾಸರಾಯರು
    2. ಪುರಂದರದಾಸರು
    3. ಕನಕದಾಸರು
    4. ವಾದಿರಾಜರು

4. ಕನಕದಾಸರ ಕೀರ್ತನೆಗಳ ಅಂಕಿತನಾಮ ಯಾವುದು?

    1. ಆದಿಕೇಶವ
    2. ಶ್ರೀ ವ್ಯಾಸ
    3. ಚನ್ನಕೇಶವ
    4. ಶ್ರೀಕೃಷ್ಣ ಪರಮಾತ್ಮ

5. ಪುರಂದರ ವಿಠಲ ಎಂಬ ಅಂಕಿತನಾಮದಲ್ಲಿ ಕೀರ್ತನೆಗಳನ್ನು ರಚಿಸಿದವರು ಯಾರು?

    1. ವ್ಯಾಸರಾಯರು
    2. ಪುರಂದರದಾಸರು
    3. ಕನಕದಾಸರು
    4. ವಾದಿರಾಜರು

6. ಅಕ್ಕಿ ಮತ್ತು ರಾಗಿಯ ಮಧ್ಯದ ಸಂಭಾಷಣೆಯನ್ನು ಯಾವ ಕಾವ್ಯದಲ್ಲಿ ಕಾಣುತ್ತೇವೆ?

    1. ರಾಮಧಾನ್ಯ ಚರಿತ್ರೆ
    2. ಮೋಹನತರಂಗಿಣಿ
    3. ನಳಚರಿತ್ರೆ

21KSS27 Draft Copy
VTU BSc ಸಾಹಿತ್ಯ ಸಿಂಚನ

4. ಹರಿಭಕ್ತಿಸಾರ

7. ಕುಲಕುಲವೆಂದು ಹೊಡೆದಾಡದಿರಿ ಕುಲದ ನೆಲೆಯನೇನಾದರೂ ಬಲ್ಲಿರಾ ಎಂಬ ಕೀರ್ತನೆಯನ್ನು ರಚಿಸಿದವರು ಯಾರು?

1. ವ್ಯಾಸರಾಯರು
2. ಪುರಂದರದಾಸರು
3. ಕನಕದಾಸರು
4. ಹರಿದಾಸರು

8. ದಾಸ ಸಾಹಿತ್ಯ ಪರಂಪರೆಯ ಅಶ್ವಿನಿ ದೇವತೆಗಳು ಎಂದು ಯಾರನ್ನು ಕರೆಯಲಾಗುತ್ತದೆ?

1. ಹರಿದಾಸರು ಮತ್ತು ನರಹರಿ ತೀರ್ಥರು
2. ವ್ಯಾಸರಾಯರು ಮತ್ತು ವಾದಿರಾಜರು
3. ಶ್ರೀಪಾದರಾಯರು ಮತ್ತು ಶ್ರೀ ದಾಸರು
4. ಕನಕದಾಸರು ಮತ್ತು ಪುರಂದರದಾಸರು

21KSS27 Draft Copy

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಕನಕದಾಸರ ಪ್ರಮುಖ ಕೃತಿಗಳನ್ನು ಹೆಸರಿಸಿ?
2. ಈಸಬೇಕು ಇದ್ದು ಜಯಿಸಬೇಕು - ಪುರಂದರದಾಸರ ಈ ಮಾತಿನ ತಾತ್ಪರ್ಯವನ್ನು ಬರೆಯಿರಿ.
3. ಕನಕದಾಸರ ಮೋಹನ ತರಂಗಿಣಿ ಈ ಕೃತಿಯ ಮೂಲ ಸಾರಾಂಶವೇನು?
4. ಕನಕದಾಸರ ನಳಚರಿತ್ರೆ ಈ ಕೃತಿಯು ಯಾವ ಅಂಶಗಳನ್ನು ತಿಳಿಸುತ್ತದೆ?
5. ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ದಾಸಶ್ರೇಷ್ಠರುಗಳ ಹೆಸರುಗಳನ್ನು ಬರೆಯಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಪುರಂದರದಾಸರ ಕೀರ್ತನೆ **ಅದರಿಂದೇನು ಫಲ ಇದರಿಂದೇನು ಫಲ** ಇದರ ತಾತ್ಪರ್ಯವನ್ನು ಬರೆಯಿರಿ.
2. ಕನಕದಾಸರ ಕೀರ್ತನೆ **ತಲ್ಲಣಸಿದಿರು ಕಂಡ್ಯ ತಾಳು ಮನವೆ** ಇದರ ಸಾರಾಂಶ ಮತ್ತು ತಾತ್ಪರ್ಯವನ್ನು ಬರೆಯಿರಿ.

VTU BSc ಸಾಹಿತ್ಯ ಸಿಂಚನ

## ಅಧ್ಯಾಯ - ಎಂಟು

# ಇತರೆ ಸಾಹಿತ್ಯದ ಪ್ರಕಾರಗಳು :

## ತ್ರಿಪದಿ (ಸರ್ವಜ್ಞ), ಜನಪದ ಸಾಹಿತ್ಯ ಮತ್ತು ತತ್ತ್ವ ಪದಗಳು

VTU 21KSS27 Draft copy

### ತ್ರಿಪದಿ:

ತ್ರಿಪದಿ ಅಂದರೆ ಮೂರು ಸಾಲಿನ ಪದ್ಯ, ಇದು ಅಚ್ಚಗನ್ನಡ ದೇಸೀಮಟ್ಟಿನ ಛಂದಸ್ಸಾಗಿದೆ. ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಕಪ್ಪೆ ಅರಭಟ್ಟನ ಬಾದಾಮಿ ಶಾಸನದಲ್ಲಿ ತ್ರಿಪದಿಯನ್ನು ಕಾಣುತ್ತೇವೆ. ಕವಿರಾಜಮಾರ್ಗದಲ್ಲಿ ಬೆದಂಡೆ, ಚಿತ್ತಾಣಕ್ಕೆ ಹತ್ತಿರವಾದ ಮಾದರಿ ಇದು. ಇದರಲ್ಲಿ ಹಲವಾರು ಪ್ರಭೇದಗಳಿದ್ದರೂ ಅಂಶಗಣ ಆಧಾರಿತ ತ್ರಿಪದಿಗಳೇ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ತ್ರಿಪದಿಗಳ ಲಕ್ಷಣವನ್ನು ಮೊದಲ ಬಾರಿಗೆ ತಿಳಿಸಿದವನು ನಾಗವರ್ಮ. ತ್ರಿಪದಿ ಪ್ರಕಾರದ ಸಾಹಿತ್ಯ ರಚನೆಯನ್ನು ರನ್ನ, ಜನ್ನ, ನೇಮಿಚಂದ್ರ, ಅಕ್ಕಮಹಾದೇವಿ ಮೊದಲಾದವರುಗಳಲ್ಲಿ ಕಾಣಬಹುದು, ಆದರೆ ಸರ್ವಜ್ಞನು ಹೆಚ್ಚಾಗಿ ತ್ರಿಪದಿ ಪ್ರಕಾರವನ್ನೇ ತನ್ನ ಸಾಹಿತ್ಯ ರಚನೆಯಲ್ಲಿ ಬಳಸಿರುವುದನ್ನು ಕಾಣುತ್ತೇವೆ.

ತ್ರಿಪದಿಯ ಇತಿಹಾಸದಲ್ಲಿ ಮೊಟ್ಟಮೊದಲ ರಚನೆ ಸಿಗುವುದು ಬಾದಾಮಿಯ ಶಾಸನದಲ್ಲಿರುವ ಕಪ್ಪೆಅರಭಟ್ಟನ ಶಾಸನದಲ್ಲಿ :

ಸಾಧುಗೆ| ಸಾಧು ಮಾ|ಧುರ್ಯನ್ಗೆ| ಮಾಧುರ್ಯಂ|

ಬಾಧಿಪ್ಪ|ಕಲಿಗೆ | ಕಲಿಯುಗ|ವಿಪರೀತನ್|

ಮಾಧವ|ನೀತನ್|ಪೆಱನಲ್ಲ||

### ಸರ್ವಜ್ಞನ ತ್ರಿಪದಿಗಳು:

ಸರ್ವಜ್ಞನು ಕನ್ನಡದ ತ್ರಿಪದಿ ಸಾಹಿತ್ಯದ ಪ್ರಮುಖ ಕವಿ. ಸರ್ವಜ್ಞ ಎಂಬುದು ಈತನ ಕಾವ್ಯನಾಮ. ಸರ್ವಜ್ಞನ ತ್ರಿಪದಿಗಳು ತಮ್ಮ ಸರಳತೆ ಮತ್ತು ಪ್ರಾಸಬzÀÞತೆಯಿಂದ ಜನಪ್ರಿಯವಾಗಿವೆ. ಈ ತ್ರಿಪದಿಗಳು ಮುಖ್ಯವಾಗಿ ನೈತಿಕ, ಆದರ್ಶದ ಬದುಕು ಮತ್ತು ಸಾಮಾಜಿಕ

ಜೀವನಕ್ಕೆ ಮಾರ್ಗದರ್ಶನ, ಬದುಕಿನ ಮೌಲ್ಯಗಳು ಮತ್ತು ಬದುಕಿಗೆ ನೈತಿಕ ಸ್ಥೈರ್ಯವನ್ನು ತುಂಬುವಂತಹ ಅಂಶಗಳು, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಕುರಿತು ರಚಿಸಲ್ಪಟ್ಟಿವೆ. ಸರ್ವಜ್ಞನ ತ್ರಿಪದಿಗಳಲ್ಲಿ ಒಂದು ವಿಷ್ಣುಗಣಕ್ಕೆ ಬದಲಾಗಿ ೫ ಮಾತ್ರೆಗಳ ಒಂದುಗಣವೂ ಹಾಗೆಯೆ ಒಂದು ಬ್ರಹ್ಮ ಗಣಕ್ಕೆ ಬದಲಾಗಿ ಮೂರು ಅಥವಾ ನಾಲ್ಕು ಮಾತ್ರೆಗಳ ಒಂದು ಗಣವೂ ಬರುತ್ತದೆ.

ಕವಿ ಶ್ರೇಷ್ಠ, ತ್ರಿಪದಿ ಸಾಹಿತ್ಯದ ಪ್ರಮುಖ ಸಾಹಿತಿ ಸರ್ವಜ್ಞನ ತ್ರಿಪದಿಗಳನ್ನು ಈ ಕೆಳಗೆ ನೀಡಲಾಗಿದೆ:

**ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರು**
**ಗೋರ್ಕಲ್ಲಮೇಲೆ ಮಳೆಗರೆದರೆ**
**ಕಲ್ಲು ನೀರುಕುಡಿವುದೆ ಸರ್ವಜ್ಞ॥**

**ಅರಿತಂಗೆ ಅರವತ್ತು । ಮರೆತಂಗೆ ಮೂವತ್ತು ।**
**ಬರೆವಂಗೆ ರಾಜ್ಯ ಸರಿಪಾಲು । ಹಾರುವನು ।**
**ಬರೆಯದೇ ಕೆಟ್ಟ ಸರ್ವಜ್ಞ ॥**

**ವಿದ್ಯೆವುಳ್ಳನ ಮುಖವು । ಮುದ್ದು ಬರುವಂತಿಕ್ಕು ।**
**ವಿದ್ಯವಿಲ್ಲದನ ಬರಿಮುಖವು ಹಾಳೂರ ।**
**ಹದ್ದಿನಂತಿಕ್ಕು ಸರ್ವಜ್ಞ ॥**

**ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ ?**
**ಜಾತಿ - ವಿಜಾತಿ ಏನಬೇಡ, ದೇವನೊಲಿ**
**ದಾತನೆ ಜಾತಾ , ಸರ್ವಜ್ಞ॥**

**ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು**
**ಸುಡುವಗ್ನಿಯೊಂದೇ ಇರುತಿರಲು, ಕುಲಗೋತ್ರ**
**ನಡುವೆಯೆತ್ತಣದು ಸರ್ವಜ್ಞ॥**

**ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯ ಮೇಲು**

21KSS27 Draft Copy VTU BSc ಸಾಹಿತ್ಯ ಸಿಂಚನ

ಮೇಟಿಯಿಂ ರಾಟಿ ನಡೆದುದಲ್ಲದ, ದೇಶ

ದಾಟವೇ ಕೆಡಗು, ಸರ್ವಜ್ಞ॥

ಎಲುವಿನ ಕಾಯಕ್ಕೆ । ಸಲೆ ಚರ್ಮವನು ಹೊದಿಸಿ

ಮಲ-ಮೂತ್ರ-ಕ್ರಿಮಿಯು ಒಳಗಿರ್ಪ - ದೇಹಕ್ಕೆ

ಕುಲವಾವುದಯ್ಯ ಸರ್ವಜ್ಞ॥

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ

ಕೊಟ್ಟಿದ್ದು ಕೆಟ್ಟಿತೆನಬೇಡ, ಮುಂದೆ

ಕಟ್ಟಿಹುದು ಬುತ್ತಿ, ಸರ್ವಜ್ಞ॥

21KSS27 Draft copy

## ಜನಪದ ಸಾಹಿತ್ಯ:

ಕನ್ನಡದ ಜನಪದ ಸಾಹಿತ್ಯವೂ ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳ. ಅದರಲ್ಲಿ ಹಲವು ಪ್ರಕಾರಗಳಿವೆ-ಗಾದೆ, ಒಗಟು, ಒಡಪು, ಕಥೆ, ಗೀತೆ, ಕಥನಗೀತೆ ಪ್ರಮುಖವಾಗಿವೆ. ಇಡೀ ಜಗತ್ತಿನ ಸಾಹಿತ್ಯದ ಮೂಲವನ್ನೆಲ್ಲ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಅದುದರಿಂದ, ಬಿ.ಎಂ.ಶ್ರೀ ರವರು ಜಾನಪದ ಸಾಹಿತ್ಯವನ್ನು 'ಜನವಾಣಿ ಬೇರು; ಕವಿವಾಣಿ ಹೂವು' ಎಂದು ಕರೆದಿದ್ದಾರೆ.

'ಜಾನಪದ' ಎನ್ನುವ ಪದ ಇಂಗ್ಲೀಷಿನಲ್ಲಿ Folklore ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. Folklore ಎನ್ನುವುದು Folk & Lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಂಯೋಗದಿಂದ ಕೂಡಿದೆ. Folk ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂತಲೂ, Lore ಜ್ಞಾನ ಎಂತಲೂ ಇದೆ. ಜನಪದ ಜ್ಞಾನ ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು ಜಾನಪದ ಎಂಬ ಶಬ್ದವನ್ನು ಬಳಸಿದ್ದಾರೆ. ಜನರುಗಳ / ಜನಪದರ ಜ್ಞಾನವೇ ಜನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ ಈ ಎಲ್ಲವನ್ನು ಒಳಗೊಂಡಿದ್ದನ್ನು ಜಾನಪದವೆಂದು ಹೇಳಬಹುದು. ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ-ತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜಾನಪದ.

ಭಾರತ ದೇಶದಲ್ಲೇ ನಮ್ಮ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ), ನಾಟಕ (ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ. ಜನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ.

## ಜಾನಪದ ಸಾಹಿತ್ಯದ ಪ್ರಮುಖ ಲಕ್ಷಣಗಳು:

ಪರಂಪರಾಗತ ಅನುಭವ ಜ್ಞಾನವನ್ನು ಹೊಂದಿರುವ ಮೌಖಿಕ ಪರಂಪರೆಯ ಜಾನಪದದ ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬುದು.

- ಕಂಠಸ್ಥ ಸಂಪ್ರದಾಯ ( ಬಾಯಿಂದ ಬಾಯಿಗೆ ಬಂದ ಮೌಕಿಕ ಸಾಹಿತ್ಯ)
- ಸಾಮೂಹಿಕ ಪುನರ್ ಸೃಷ್ಠಿ ಮತ್ತು ವ್ಯಾಪಕತೆ
- ಸಜೀವವಾದದ್ದು ಮತ್ತು ಪರಂಪರೆಯಿಂದ ಕೂಡಿದ್ದು
- ಸರಳತೆ, ಸ್ಪಷ್ಟತೆ ಮತ್ತು ಪರಿವರ್ತನಾ ಶೀಲತೆ
- ಜಾನಪದ ಸಂಸ್ಕ್ರತಿಯ ಒಂದು ಭಾಗ
- ಜಾನಪದ ಸರ್ವ ಸಾಮಾನ್ಯ ಬಳಕೆ
- ಎಲ್ಲರ ಸಾಮಾನ್ಯ ಒಪ್ಪಿಗೆಯಾಗಿದೆ
- ಜನಪ್ರಿಯ ಪರಂಪರೆಗಳ ಭಂಡಾರ

VTU

## ಜನಪದ ತ್ರಿಪದಿಗಳು:

ಹೆಂಡತಿ ಗಂಡನ ವಿಷಯದಲ್ಲಿ ಸಿಟ್ಟು ಬಂದರೂ ಅದನ್ನು ತೋರಿಸದೇ-

"ನಕ್ಕರೆ ನಗಲೆವ್ವ ನಗಿ ಮುಖದಿ ಕ್ಯಾದಿಗಿ

**ನಾ ಮುಚ್ಚಿ ಮುಡಿವ ಪರಿಮಳದ| ಆ ಹೂವ**

**ಅವಳೊಂದು ಗಳಿಗೆ ಮುಡಿಯಲಿ"**

ಎಂದು ತನ್ನ ಗಂಡನ ಬಗ್ಗೆ ಅಸೂಯೆ ಏಕೆ ಎನ್ನುವ ಭಾವದಲ್ಲಿ ಈ ರೀತಿ ಹೇಳುವಳು.

" **ಅಂಗಿಯ ಮ್ಯಾಲಂಗಿ ಛಂದೇನೋ ನನರಾಯ**

**ರಂಭೀಯ ಮ್ಯಾಲ ಪ್ರತಿರಂಭಿ | ಬಂದಾರ**

**ಛಂದೇನೋ ರಾಯ ಮನಿಯಾಗ"**

ತಾನೇ ರಂಭೆ, ಊರ್ವಶಿ ಎಂಬುದನ್ನು ಒತ್ತಿ ಹೇಳುತ್ತ ರಂಭಿಯ ಮ್ಯಾಗ ಪ್ರತಿರಂಭಿ ಏಕೆ ಎನ್ನುವಳು. ಗಂಡನನ್ನು ಸರಿ ದಾರಿಗೆ ತರಲು ಪ್ರೀತಿ ಮೇಲು ಎಂಬುದನ್ನು ತಿಳಿಸುವಳು.

ಪ್ರತಿಯೊಂದು ಹೆಣ್ಣಿಗೂ ತಾನು ಹುಟ್ಟಿ ಬೆಳೆದು ಆಡಿದ ತವರಿಗೆ ಹೆಸರು ತರಬೇಕೆಂಬ ಆಸೆ ಇದ್ದೇ ಇರುತ್ತದೆ.

**"ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾಗಿ**

**ನಾ ಹುಟ್ಟಿ ಮನೆಗೆ ಎರವಾದೆ| ಹಡೆದವ್ವ**

**ನೀ ಕೊಟ್ಟ ಮನೆಗೆ ಹೆಸರಾದೆ"**

ಆದುದರಿಂದ ಅವಳು ಈ ರೀತಿ ಬಾಳಲು ಅಪೇಕ್ಷಿಸುತ್ತಾಳೆ.

ತಾಯಿಗೆ ತನ್ನ ಕಂದನು ಚೆನ್ನಾಗಿ ರೂಪುಗೊಳ್ಳುವ ಚಿಂತಯಿಂದ ಅವಳು ಮಗುವಿಗೆ ಹಾರೈಕೆಯ ಸಂದೇಶವನ್ನು ಈ ರೀತಿ ನೀಡುತ್ತಾಳೆ –

**" ಆಚಾರಕ್ಕರಸಾಗು ನೀತಿಗೆ ಪ್ರಭುವಾಗು**

**ಮಾತಿನಲಿ ಚೂಡಾಮಣಿಯಾಗು| ನನಕಂದ**

**ಜ್ಯೋತಿಯೆ ಆಗು ಜಗಕೆಲ್ಲ" .**

21KSS27 Draft Copy ಸಾಹಿತ್ಯ ಸಿಂಚನ

# ತತ್ತ್ವ ಪದ:

'ತತ್ತ್ವ' ಎಂದರೆ ಸಿzÁÞAತ, ಪರಮಾತ್ಮ, ನಿಜಸ್ಥಿತಿ ಎಂದರ್ಥವಾಗುತ್ತದೆ. ತತ್ತ್ವಜ್ಞಾನವನ್ನು ಬ್ರಹ್ಮಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು' 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ, ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ತ್ವಪದ ಎನ್ನುತ್ತಾರೆ. "ತತ್ತ್ವಪದ"ದಲ್ಲಿ ತತ್ತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ" ತತ್ತ್ವ ವಸ್ತುವಾದರೆ, 'ಪದ 'ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನೂ ಸಮನ್ವಯಗೊಳಿಸಿಕೊಂಡಿರುವ 'ತತ್ತ್ವಪದ ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ. ತತ್ತ್ವಪದಗಳು ಬಹುಸಂಸ್ಕೃತಿಯನ್ನು ಪ್ರತಿಪಾದನೆ ಮಾಡಿವೆ. ತತ್ತ್ವಪದಗಳನ್ನು ಭಜನೆ ಪದಗಳೆಂದೂ, ಅನುಭಾವ ಪದಗಳೆಂದೂ ಕರೆಯುತ್ತಾರೆ. ಈ ಪದಗಳನ್ನು ಭಜನೆಗಳ ಮೂಲಕ ಅಭಿವ್ಯಕ್ತಿಸಲು ಪ್ರಾರಂಭಿಸಿದಾಗ ಇವುಗಳಿಗೆ ಭಜನೆ ಪದಗಳೆಂದು ಹೆಸರು ಬಂದಂತೆ ಕಾಣುತ್ತದೆ.

ತತ್ತ್ವಪದಕಾರರು ತಾವು ದಿನನಿತ್ಯದ ಬದುಕಲ್ಲಿ ಕಂಡುಂಡ ಹತ್ತುಹಲವು ನೋವು ನಲಿವು, ಸಾಮಾಜಿಕ ಅನಿಷ್ಟ, ಮನುಷ್ಯ ವಿರೋಧಿ ನಿಲುವುಗಳನ್ನು, ಪ್ರಭುತ್ವದ ಅನಾಚಾರಗಳನ್ನು ಮುಲಾಜುಗಳಿಗೆ ಎಡೆ ಮಾಡಿಕೊಡದೆ ಪದಗಳ ಮೂಲಕ ಜಾಡಿಸಿ, ಹಾಡಿ ಪ್ರತಿಭಟಿಸಿದ್ದಾರೆ. ತತ್ತ್ವಪದ ಜಾತಿ, ಮತ, ಧರ್ಮ ಮತ್ತು ಅವುಗಳ ಆಚರಣೆ ಕುರಿತು ವಸ್ತುನಿಷ್ಠ ನಿರಾಕರಣೆ ತೋರುವ ಪ್ರತಿಭಟನಾ ಕಾವ್ಯದ ಸಿಡಿಮದ್ದಿನ ನುಡಿಗಟ್ಟುಗಳು. ಇವತ್ತಿಗೂ ಅಮವಾಸ್ಯೆಯ ಕತ್ತಲು, ಹೆಣದ ಸಾನಿಧ್ಯ, ಊರಾಚೆಯ ಗವಿ, ಗುಡಿ, ಗುಂಡಾರ, ಗುಡಿಸಲು, ಗುಂಪು, ಕೊಂಪೆಗಳಲ್ಲಿ ಅನುರಣಿಸುವ ಹಾಡುಗಳೇ/ ಗದ್ಯಗೀತೆಗಳೇ ತತ್ತ್ವಪದಗಳು / ತತ್ತ್ವಪದ ಸಾಹಿತ್ಯ.

# ಶಿಶುನಾಳ ಶರೀಫರು:

ಶಿಶುನಾಳ ಶರೀಫರು ಕನ್ನಡ ಸಾಹಿತ್ಯ ತತ್ವಪದಗಳ ರೂವಾರಿ. ಗೋವಿಂದಭಟ್ಟರು ಇವರ ಗುರುಗಳು. ಯಾವುದೇ ಮತದ ಬಗ್ಗೆ ಮೂಢನಂಬಿಕೆ ಇಲ್ಲದ ಈ ಗುರುಗಳು ಶರೀಫರಿಗೆ ತುಂಬಾ ಮೆಚ್ಚುಗೆಯಾದರು. ಗುರುಶಿಷ್ಯರಿಬ್ಬರೂ ಮಸೀದಿಗಳಿಗೆ, ದೇವಾಲಯಗಳಿಗೆ ಸಂದರ್ಶನಕ್ಕಾಗಿ ಹೊರಟರು. ಶರೀಫರು ಅನೇಕ ಹಾಡುಗಳನ್ನು ರಚಿಸಿ ಹಾಡಿದರು. ಈ ಗುರುಗಳ ಜೊತೆಗೆ ನವಲಗುಂದದ ನಾಗಲಿಂಗಮತಿ ಮತ್ತು ಗಂಗೆಯ ಮಡಿವಾಳಪ್ಪ ಎಂಬುವರು ಸಹ ಶರೀಫರ ಮೇಲೆ ಹೆಚ್ಚಿನ ಪರಿಣಾಮ ಬೀರಿದರು.

ಕನ್ನಡ ಸಂಸ್ಕೃತಿಯ ಸರ್ವಧರ್ಮಸಹಿಷ್ಣುಭಾವ ಮತ್ತು ಆಧ್ಯಾತ್ಮಿಕ ಪರಂಪರೆಯ ಸರ್ವಸಮನ್ವಯ ಅನುಭಾವ ಸಂಪತ್ತನ್ನು ಅರಗಿಸಿಕೊಂಡು ಇವರು ರಚಿಸಿದ ಅನುಭವ ಪದಗಳು ಆಪ್ತವಾದ ಕಳಕಳಿಗೆ ನೆಲೆಯಾಗಿವೆ. ಶರೀಫರು ಹಾಡಿದ ಪದಗಳು ಧಾರವಾಡ ಜಿಲ್ಲೆಯ ಆಡುಭಾಷೆಯ ಶೈಲಿಯಲ್ಲಿವೆ. ಈ ಪದಗಳಲ್ಲಿ ಕೆಲವು ದೇವತಾಸ್ತುತಿಯ ಪದಗಳಾದರೆ, ಇನ್ನು ಕೆಲವು ಪದಗಳು ತತ್ತ್ವಬೋಧನೆಯ ಪದಗಳಾಗಿವೆ. ಕಳಸದ ಗುರುಗೋವಿಂದ ಭಟ್ಟರು, ಅಂಕಲಗಿಯ ಅಡವಿ ಸ್ವಾಮಿಗಳು, ಗರಗದ ಮಡಿವಾಳಪ್ಪನವರು, ನವಿಲುಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳು ಮುಂತಾದ ಸಮಕಾಲೀನ ಸಾಧುಸತ್ಪುರುಷರ ಸಾನ್ನಿಧ್ಯ, ಸಂಸರ್ಗಗಳಿಂದ ಅನುಭಾವಿಯಾಗಿ ಮಾಗಿದರು.

ಜೀವನದಲ್ಲಿ ಮನುಷ್ಯ ಜೀವ ಮಾಡುವ ತಪ್ಪುಗಳನ್ನು, ಯೋಚಿಸುವ ರೀತಿಯನ್ನು ಯಾವುದೋ ಒಂದು ಸನ್ನಿವೇಶಕ್ಕೆ ಹೋಲಿಸಿ ಹಾಡಿನಿಂದ ವಿವರಿಸುವುದು. ಆ ಹಾಡನ್ನು ನೇರ ಅರ್ಥದಲ್ಲಿ ಕೇಳಿದರೆ ವಿಚಿತ್ರವೆನಿಸುವುದು ಆದರೆ ಅದರ ತಿರುಳು ಅರಿತು ಜೀವನಕ್ಕೆ ಹೊಲಿಸಿದರೆ ಅದರ ಅರ್ಥ ಹೊರ ಹೊಮ್ಮುವುದನ್ನು ಶಿಶುನಾಳ ಶರೀಫರ ತತ್ತ್ವಪದಗಳಲ್ಲಿ ಕಾಣುತ್ತೆವೆ. ಶರೀಫರು ತಮಗೆ ಸರಿಯಾಗಿ ಕಂಡದ್ದನ್ನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದರು. ಆದರೆ, ಅವರದು ಮಾತೃಹೃದಯ. ಕರುಣೆ, ಮೈತ್ರಿ ಸ್ವಭಾವ ಅವರ ಅಂತರಂಗದಲ್ಲಿ ಸದಾ ನೆಲೆಯಾಗಿರುತ್ತಿತ್ತು. ಶರೀಫರು ಲೋಕಹಿತಕ್ಕಾಗಿ ಬದುಕಿದರು.

ಸಾಹಿತ್ಯ ಸಿಂಚನ

## ಶಿಶುನಾಳ ಶರೀಫರ ತತ್ತ್ವಪದಗಳು:

ಇವರ ಜನಪ್ರಿಯ ತತ್ತ್ವಪದ '**ಕೋಡಗನ ಕೋಳಿ ನುಂಗಿತ್ತಾ**' ಎನ್ನುವ ಪದ್ಯದಲ್ಲಿ; ಕೋಡಗ ಎಂದರೆ ಮಂಗ-ಮರ್ಕಟ; ಚಂಚಲ ಮನಸ್ಸು. ಕೋಳಿ ಇಲ್ಲಿ ಬೆಳಗಿನ ಸೂಚನೆ. ಕೋಳಿ ಕೂಗಿದರೆ ಸೂರ್ಯೋದಯ; ಬೆಳಗಾಗುವುದು ಎಂದರೆ ವಿವೇಕ ಮೂಡುವುದು ಎಂದು ಅರ್ಥ. ಅದು ಆದಾಗ ಚಂಚಲ ಮನಸ್ಸು ಅದರಲ್ಲಿ ಕರಗಿಹೋಗುವುದು - ಇದು ಕೋಳಿ ಕೋಡಗನನ್ನು ನುಂಗುವುದು. ವೇದಾಂತದಲ್ಲಿ ಮನಸ್ಸನ್ನು ಮರ್ಕಟಕ್ಕೆ ಹಾಗು ಜ್ಞಾನೋದಯವನ್ನು ಸೂರ್ಯೋದಯಕ್ಕೆ ಹೋಲಿಸುವರು- ಇಲ್ಲಿ ಸೂರ್ಯೋದಯ ಸೂಚಿಸುವ ಕೋಳಿಗೆ ಹೋಲಿಸಿದೆ ; ಜ್ಞಾನೋದಯವಾದಾಗ ಮನಸ್ಸು ಲಯವಾಗಿ ಹೋಗುವುದು. ಅದು ಕೋಳಿ ಕೋಡಗನನ್ನು ನುಂಗಿದಂತೆ. ಪ್ರತಿಮೆಗಳನ್ನು ಬಳಸುವುದರ ಮುಖಾಂತರ ಸಂದೇಶವನ್ನು ನೀಡಿದ್ದಾರೆ. ಈ ಪದ್ಯವು ಶರೀಫರ ಒಗಟಿನ ಪದ್ಯವಾಗಿದೆ. ಇದನ್ನು ಸರಳೀಕರಿಸಿ ಹೇಳುವುದಾದರೆ, ಸಂಸಾರವೆಂಬ ವೃಕ್ಷಕ್ಕೆ ವಿಷಯಗಳು ಟೊಂಗೆಗಳಿದ್ದಂತೆ. ಮನಸ್ಸೆಂಬ ಮಂಗವು ಸಂಸಾರದಲ್ಲಿ ವಿಷಯದಿಂದ ವಿಷಯಕ್ಕೆ ಹಾರುತ್ತ ಸುಖಪಡುತ್ತದೆ ಎಂಬುದು ಈ ಮಾತಿನ ತಾತ್ಪರ್ಯ.

## ಕೋಡಗನ ಕೋಳಿ ನುಂಗಿತ್ತಾ:

ಕೋಡಗನ ಕೋಳಿ ನುಂಗಿತ್ತಾ|

ನೋಡವ್ವ ತಂಗಿ ಕೋಡಗನ ಕೋಳಿ ನುಂಗಿತ್ತಾ||ಪಲ್ಲ||

ಆಡು ಆನೆಯ ನುಂಗಿ

ಗೋಡೆ ಸುಣ್ಣವ ನುಂಗಿ

ಆಡಲು ಬಂದ ಪಾತರದವಳ ಮದ್ದಲಿ ನುಂಗಿತ್ತಾ||೧||

ಕೋಡಗನ ಕೋಳಿ ನುಂಗಿತ್ತಾ||

ಒಳ್ಳು ಒನಕಿಯ ನುಂಗಿ

ಕಲ್ಲು ಗೂಟವ ನುಂಗಿ (ಬೀಸುವ)

ಮೆಲ್ಲಲು ಬಂದ ಮುದುಕಿಯ ನೆಲ್ಲು ನುಂಗಿತ್ತಾ ||೨||(ಕುಟ್ಟಲಿಕೆ ಬಂದ ಮುದುಕಿಯ ನೊಣವು)

ಕೋಡಗನ ಕೋಳಿ ನುಂಗಿತ್ತಾ||

ಹಗ್ಗ ಮಗ್ಗವ ನುಂಗಿ

ಮಗ್ಗವ ಲಾಳಿ ನುಂಗಿ

ಮಗ್ಗದಲಿರುವ ಅಣ್ಣನನ್ನ ಮಣಿಯು ನುಂಗಿತ್ತಾ||೩||

ಕೋಡಗನ ಕೋಳಿ ನುಂಗಿತ್ತಾ||

ಎತ್ತು ಜತ್ತಗಿ ನುಂಗಿ

ಬತ್ತ ಬಾನವ ನುಂಗಿ

ಮುಕ್ಕಟ ತಿರುವೊ ಅಣ್ಣನ ಮೇಳಿ ನುಂಗಿತ್ತಾ||೪||

21KSS27 Draft Copy
ಸಾಹಿತ್ಯ ಸಿಂಚನ

ಕೋಡಗನ ಕೋಳಿ ನುಂಗಿತ್ತಾ||

ಗುಡ್ಡ ಗಂವ್ವರ ನುಂಗಿ (ಗವಿಯನು)

ಗಂವ್ವರ ಇರಿವೆಯ ನುಂಗಿ

ಗುರುಗೋವಿಂದನ ಪಾದ ನನ್ನನೆ ನುಂಗಿತ್ತಾ||ಜ||

(ಗೋವಿಂದಗುರುವಿನ ಪಾದ ನನ್ನನೆ ನುಂಗಿತ್ತಾ||ಜ||)

ಕೋಡಗನ ಕೋಳಿ ನುಂಗಿತ್ತಾ||

VTU BSc ಸಾಹಿತ್ಯ ಸಿಂಚನ 21KSS27 Draft Copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ತ್ರಿಪದಿ ಎಂದರೆ?

    1. ಎರಡು ಸಾಲಿನ ಪದ್ಯ
    2. ಮೂರು ಸಾಲಿನ ಪದ್ಯ
    3. ಐದು ಸಾಲಿನ ಪದ್ಯ
    4. ಆರು ಸಾಲಿನ ಪದ್ಯ

2. ಕರ್ನಾಟಕದ ತ್ರಿಪದಿಗಳ ಬ್ರಹ್ಮ ಎಂದು ಯಾರನ್ನು ಕರೆಯಲಾಗುತ್ತದೆ?

    1. ಪಂಪ
    2. ಬಸವಣ್ಣ
    3. ಹರಿಹರ
    4. ಸರ್ವಜ್ಞ

3. ಕನ್ನಡ ಸಾಹಿತ್ಯದಲ್ಲಿ ತ್ರಿಪದಿಗಳ ಬಳಕೆಯನ್ನು ಯಾವ ಶಾಸನದಲ್ಲಿ ಮೊದಲಬಾರಿಗೆ ಕಾಣುತ್ತೇವೆ?

    1. ಹಲ್ಮಿಡಿ ಶಿಲಾಶಾಸನ
    2. ಕಪ್ಪೆ ಅರಭಟ್ಟನ ಶಾಸನ
    3. ಬೇಲೂರು ಶಾಸನ
    4. ಪಟ್ಟದಕಲ್ಲು ಶಾಸನ

4. ಬಿಎಂಶ್ರೀ ರವರು ಜನಪದ ಸಾಹಿತ್ಯವನ್ನು ಏನೆಂದು ಕರೆದಿದ್ದಾರೆ?

    1. ಜನವಾಣಿ ಬೇರು
    2. ಜಾನಪದ ಸಾಹಿತ್ಯ
    3. ಜಗತ್ತಿನ ಸಾಹಿತ್ಯ
    4. ಶ್ರೇಷ್ಠ ಸಾಹಿತ್ಯ

5. ಕಂಠಸ್ಥ ಸಂಪ್ರದಾಯದೊಂದಿಗೆ ಪ್ರಚಲಿತದಲ್ಲಿರುವ ಸಾಹಿತ್ಯದ ಪ್ರಕಾರ ಯಾವುದು?

21KSS27 Draft Copy
VTU BSc ಸಾಹಿತ್ಯ ಸಿಂಚನ

1. ತ್ರಿಪದಿ ಸಾಹಿತ್ಯ
2. ಜಾನಪದ ಸಾಹಿತ್ಯ
3. ರಾಘವಾಂಕನ ಸಾಹಿತ್ಯ
4. ಹರಿಹರನ ಸಾಹಿತ್ಯ

6. ಪರಮಾತ್ಮನಿಗೆ ಸಂಬಂಧಿಸಿದ ವಿಷಯಗಳನ್ನು / ಸಿದ್ಧಾಂತಗಳನ್ನು ಹಾಡಿನ ಮೂಲಕ ಅಭಿವ್ಯಕ್ತಪಡಿಸುವ ಸಾಹಿತ್ಯದ ಪ್ರಕಾರಕ್ಕೆ ಏನೆಂದು ಕರೆಯುತ್ತಾರೆ?

1. ಜಾನಪದ ಸಾಹಿತ್ಯ
2. ತ್ರಿಪದಿ ಸಾಹಿತ್ಯ
3. ತತ್ತ್ವಪದ ಸಾಹಿತ್ಯ
4. ವಚನ ಸಾಹಿತ್ಯ

7. ಕರ್ನಾಟಕದ ತತ್ತ್ವಪದ ಸಾಹಿತ್ಯದ ರುವಾರಿಗಳು ಎಂದು ಯಾರನ್ನು ಕರೆಯಲಾಗುತ್ತದೆ?

1. ವ್ಯಾಸರಾಯರು
2. ಶಿಶುನಾಳ ಶರೀಫರು
3. ಕನಕದಾಸರು
4. ಪುರಂದರದಾಸರು

8. ಅತ್ತ ಇತ್ತ ಹರಿದಾಡುವ ಮನಸಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ತತ್ತ್ವಪದವನ್ನು ರಚಿಸಿದ ಸಂತ ಯಾರು?

1. ವ್ಯಾಸರಾಯರು
2. ಶಿಶುನಾಳ ಶರೀಫರು
3. ಕನಕದಾಸರು
4. ಪುರಂದರದಾಸರು

**ಒಂದು ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1. ಜಾನಪದ ಸಾಹಿತ್ಯ ಎಂದರೇನು?
2. ತ್ರಿಪದಿ ಸಾಹಿತ್ಯ ಎಂದರೇನು?

21KSS27 Draft Copy
VTU BSc ಸಾಹಿತ್ಯ ಸಿಂಚನ

3. ಕನ್ನಡ ಸಾಹಿತ್ಯದಲ್ಲಿ ತ್ರಿಪದಿ ಪ್ರಕಾರದ ಸಾಹಿತ್ಯವನ್ನು ರಚಿಸಿದ ಪ್ರಮುಖರು ಯಾರು?

4. ತತ್ತ್ವ ಪದ ಸಾಹಿತ್ಯದ ಕುರಿತು ಬರೆಯಿರಿ?

5. ಕರ್ನಾಟಕದ ಪ್ರಮುಖ ತತ್ತ್ವಪದಗಳ ರಚನೆಕಾರರುಗಳ ಹೆಸರುಗಳನ್ನು ಬರೆಯಿರಿ?

**.ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

೧. ಸಂತ ಶಿಶುನಾಳ ಶರೀಫರ "ಕೋಡಗನ ಕೋಳಿ ನುಂಗಿತ್ತಾ" ಈ ತತ್ತ್ವಪದದ ಭಾವಾರ್ಥ ವನ್ನು ಬರೆಯಿರಿ.

೨. ಜಾನಪದ ಸಾಹಿತ್ಯದ ಪ್ರಮುಖ ಲಕ್ಷಣಗಳನ್ನು ವಿವರಿಸಿ..

3. ಸರ್ವಜ್ಞನ ಯಾವುದಾದರೂ ಮೂರು ತ್ರಿಪದಿಗಳ ಸಾರಾಂಶಗಳನ್ನು ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ - ಒಂಬತ್ತು

# ಮಹಿಳಾ ಸಾಹಿತ್ಯ :

## ಹೆಳವನಕಟ್ಟೆ ಗಿರಿಯಮ್ಮ ಮತ್ತು ಸಂಚಿಹೊನ್ನಮ್ಮ

---

### ಹೆಳವನಕಟ್ಟೆ ಗಿರಿಯಮ್ಮ:

ಹೆಳವನಕಟ್ಟೆ ಗಿರಿಯಮ್ಮ **ಕ್ರಿ.ಶ.೧೭೫೦ರ** ಕಾಲಘಟ್ಟದಲ್ಲಿ ಜೀವಿಸಿದ್ದಳು. ನರಹರಿತೀರ್ಥರಿಂದ ಪ್ರಾರಂಭವಾದ ದಾಸಸಾಹಿತ್ಯದ ಪ್ರಾಚೀನ ಪರಂಪರೆ ಹೆಳವನಕಟ್ಟೆ ಗಿರಿಯಮ್ಮನವರೆಗೆ ನಡೆದುಕೊಂಡು ಬಂದಿತೆಂದು ಹೇಳಬಹುದು. **ಹರಿದಾಸ ಸಾಹಿತ್ಯಕ್ಕೆ ಗಿರಿಯಮ್ಮನ ಕೊಡುಗೆ ಅಪಾರವಾದುದ್ದಾಗಿದೆ. ಚಂದ್ರಹಾಸ ಕಥೆ, ಸೀತಾ ಕಲ್ಯಾಣ, ಉದ್ದಾಳಕನ ಕಥೆ ಇವರು ರಚಿಸಿರುವ ಖಂಡ ಕಾವ್ಯಗಳು.** ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಶೈಲಿ ಅವಳ ಕಾವ್ಯಗಳಲ್ಲಿ ಎದ್ದು ಕಾಣುತ್ತದೆ. ಗಿರಿಯಮ್ಮ ರಚಿಸಿರುವ ಬಹುತೇಕ ಹಾಡುಗಳು ನಿತ್ಯ ನಿರ್ಮಲ ಪರಮಾನಂದ ಹೃದಯೇ ಎಂದು ಅಂತ್ಯಗೊಳ್ಳುತ್ತವೆ. ಗಿರಿಯಮ್ಮನ ಹಾಡುಗಳು ವಿಶೇಷವಾಗಿ ಮಹಿಳೆಯರಲ್ಲಿ ಪ್ರಚಲಿತವಾಗಿವೆ.

ಗಿರಿಯಮ್ಮನ ಆಧ್ಯಾತ್ಮಿಕ ಮತ್ತು ಸಾಹಿತ್ಯದ ಬದುಕಿನಲ್ಲಿ ಅನೇಕ ಐತಿಹ್ಯಗಳು ಪ್ರಖ್ಯಾತವಾಗಿವೆ. ಪ್ರತಿದಿನವೂ ಶ್ರೀ ಹರಿಯ ದಶಾವತಾರಗಳನ್ನು ರಂಗವಲ್ಲಿ ಬಿಡಿಸುತ್ತಿದ್ದಳು ಎಂದು ಶ್ರೀ ಹರಿ ಪ್ರತ್ಯಕ್ಷನಾಗಿ ನರ್ತನ ಮಾಡುತ್ತಿದ್ದನಂತೆ, ಅದನ್ನು ನೋಡಿ ಭಾವಪರವಶಳಾಗಿ ಭಕ್ತಿ ಹಾಡುಗಳನ್ನು ರಚಿಸುತ್ತಿದ್ದಳು. ಒಂದು ದಿನ ಮಂತ್ರಾಲಯದ ಸ್ವಾಮಿಜಿಯವರು ಒಮ್ಮೆ ಗಿರಿಯಮ್ಮನ ಗ್ರಾಮಕ್ಕೆ ಭೇಟಿ ನೀಡಿ ಮೂಲರಾಮದೇವರ ಪೂಜೆ ಮಾಡುತ್ತಿದ್ದ ಸಮಯದಲ್ಲಿ ಗಿರಿಯಮ್ಮನ ಭಾವಾವೇಶದ ಕಿರ್ತನೆಯಿಂದಾಗಿ ಆ ಊರ ಮುಖಂಡನ ಮಗನಿಗೆ ಕಣ್ಣು ಬಂದಿತು ಎಂದೂ, ಇದರಿಂದ ಸಂತೃಪ್ತನಾದ ನಾಯಕ ಹೇರಳವಾದ ಹೊನ್ನು ದಾನ ಮಾಡಿದನು ಅದನ್ನುಗಿರಿಯಮ್ಮ ದೇವಾಲಯ ಕಟ್ಟಿಸಲು ಬಳಸಿಕೊಂಡಳು ಎಂಬುದನ್ನು ಕಾಣಬಹುದು.

### ಸಂಚಿಯ ಹೊನ್ನಮ್ಮ (ಹದಿಬದೆಯ ಧರ್ಮ) :

12ನೆಯ ಶತಮಾನದ ಪ್ರಮುಖ ವಚನಗಾರ್ತಿಯರಾದ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ನೀಲಾಂಬಿಕೆ ಮೊದಲಾದವರುಗಳನ್ನು ಬಿಟ್ಟರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಂತರ ಎದ್ದು ಕಾಣುವ ಮೇರು ವ್ಯಕ್ತಿತ್ವದ ಕವಯತ್ರಿ ಎಂದರೆ ಸಂಚಿ ಹೊನ್ನಮ್ಮ. ಇವಳು ಸುಮಾರು ಕ್ರಿ.ಶ.೧೬೮೦ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ (ಕ್ರಿ.ಶ.೧೬೭೩-೧೭೦೪) ಸಂಚಿಯ ಊಳಿಗದಲ್ಲಿ ಇದ್ದ ಮಹಿಳೆ. ಈಕೆ ಮೈಸೂರು ಜಿಲ್ಲೆಯ ಯಳಂದೂರಿನಲ್ಲಿ ಹುಟ್ಟಿದವಳು. ಇದೆ ಸ್ಥಳಕ್ಕೆ ಸೇರಿದ್ದ **ಚಿಕ್ಕದೇವರಾಜರ ಪಟ್ಟದರಸಿಯಾಗಿದ್ದ ದೇವರಾಜಮ್ಮಣ್ಣಿ**ಯ ಬಾಲ್ಯ ಸ್ನೇಹಿತೆಯಾಗಿದ್ದಳು.

ಹೊನ್ನಮ್ಮನಿಗೆ 'ಸಂಚಿಯ ಹೊನ್ನಮ್ಮ' ಎನ್ನುವುದು ಪೂರ್ತಿಯಾದ ಹೆಸರು. **ಸಂಚಿ ಎಂದರೆ ಚೀಲ;** ಹೊನ್ನಮ್ಮ ಎಲೆಯಡಕೆಯ ಚೀಲವನ್ನು ಹಿಡಿದು, ಅರಮನೆಯಲ್ಲಿ ರಾಜ - ರಾಣಿಯರ ಸಮೀಪವರ್ತಿಯಾಗಿ ಕೆಲಸ ಮಾಡಿಕೊಂಡಿದ್ದವಳು. ಅರಮನೆಯ ಊಳಿಗದ ಹೆಣ್ಣಾದ ಇವಳು ಅರಮನೆಯ ಗುರುಗಳು ಮತ್ತು ವಿದ್ವಾಂಸರಾದ **ಸಿಂಗರಾರ್ಯರಿಂದ (ಕನ್ನಡದ ಮೊಟ್ಟ ಮೊದಲ ನಾಟಕವಾದ "ಮಿತ್ರಾವಿಂದ ಗೋವಿಂದದ ಕರ್ತೃ**) ಹೊನ್ನಮ್ಮ ಕನ್ನಡ, ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿ, **'ಸರಸ ಸಾಹಿತ್ಯದ ಅಧಿದೇವತೆ'** ಎಂದು ತನ್ನ ಗುರುವಿನಿಂದಲೇ ಹೊಗಳಿಸಿಕೊಂಡಿದ್ದಾಳೆ. ನಂತರ ಚಿಕದೇವರಾಜ ಒಡೆಯರ ಆಶಯದಂತೆ, ತನ್ನ ಒಡತಿಯ ಆಣತಿಗನುಸಾರವಾಗಿ ,ಗುರುವಿನ ಪ್ರೊತ್ಸಾಹದಿಂದ ಹೊನ್ನಮ್ಮ 'ಹದಿಬದೆಯ ಧರ್ಮ'ವನ್ನು ರಚಿಸಿದ್ದಾಳೆ. ಇದು ಅವಳ ಬೌದ್ಧಿಕ ತಳಹದಿಗೆ ಹಿಡಿದ ಕೈಗನ್ನಡಿಯಾಗಿದೆ. ಅಲ್ಲದೆ ಹೆಣ್ಣಿನ ಬಗ್ಗೆ ಅಂದಿನ ಸಮಾಜ ತಳೆದಿದ್ದ ಮಲತಾಯಿ ಧೋರಣೆ, ಅಸಮಾನತೆಯನ್ನು ತೀಕ್ಷ್ಣವಾಗಿ ಖಂಡಿಸಿರುವಳು. ತಾನು ರಚಿಸಿದ ಕೃತಿ ಹದಿಬದೆಯ ಧರ್ಮದ ಬಗ್ಗೆ ತಾನೇ ಆತ್ಮವಿಶ್ವಾಸದ ಮಾತುಗಳನ್ನು ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

## ಹದಿಬದೆಯ ಧರ್ಮ:

ಸಂಚಿ ಹೊನ್ನಮ್ಮಳ ಕೃತಿ "**ಹದಿಬದೆಯ ಧರ್ಮ**"ವು ಕನ್ನಡ ಸಾಹಿತ್ಯದ ಒಂದು ಅನನ್ಯ ಪಾತಿವ್ರತ ಗ್ರಂಥವಾಗಿದೆ ಮತ್ತು ಇದೊಂದು **ಸಾಂಗತ್ಯ ಪ್ರಕಾರ**ದಲ್ಲಿ ರಚಿಸಲ್ಪಟ್ಟಿರುವ ಕೃತಿಯು ಸಹ ಆಗಿದೆ. ಇದು ಬರೀ ಕಾವ್ಯವಲ್ಲ ಮಾನಿನಿಯ ಧರ್ಮಬೋದಿನಿ. ಇಲ್ಲಿ ಬರುವ ಹೆಣ್ಣು -ಯಜಮಾನಿಯಾಗಿ, ತಾಯಿಯಾಗಿ, ಗೃಹಿಣಿಯಾಗಿ, ಹೆಂಡತಿಯಾಗಿ, ಅಕ್ಕನಾಗಿ, ತಂಗಿಯಾಗಿ, ಅತ್ತೆಯಾಗಿ, ಅತ್ತಿಗೆಯಾಗಿ, ಓರಗಿತ್ತಿಯಾಗಿ, ನಾದಿನಿಯಾಗಿ ಹೀಗೆ ವೈವಿಧ್ಯಮಯ ಪಾತ್ರಗಳಲ್ಲಿ ಆಕೆ ಹೇಗೆಲ್ಲ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಸಂಕ್ಷಿಪ್ತ ವಿವರಣೆ ಇದೆ. 'ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು' ಎಂಬ ತ್ರಿಪದಿಗಳ ಬ್ರಹ್ಮ, ಲೋಕಜ್ಞಾನಿ ಸರ್ವಜ್ಞನ ಮಾತಿನಂತೆ, ಸಂಸಾರಿಯಾದ ಹೆಣ್ಣಿನ ವಿವಿಧ ಮುಖಗಳ ಅನಾವರಣ, ಸುಖ ಸಂಸಾರವನ್ನು ಬಯಸುವ ಹೆಣ್ಣು-ಗಂಡುಗಳ ಮನಃಸ್ಥಿತಿ ಹೇಗಿರಬೇಕೆಂಬುದನ್ನು ವಿವರಿಸಲಾಗಿದೆ. ಹದಿಬದೆಯ ಧರ್ಮದಲ್ಲಿ ಪ್ರಮುಖವಾಗಿ ಒಂಬತ್ತು ಸಂಧಿಗಳಿವೆ.

ಹದಿಬದೆಯ ಧರ್ಮದಲ್ಲಿ **'ಸನಾತನ ಪದ್ಧತಿ'** ಎದ್ದು ಕಾಣುತ್ತದೆ. ಆಕೆಯ ದೃಷ್ಟಿಯಲ್ಲಿ ಹೆಣ್ಣು ಗೃಹದೇವತೆ. ಹೊನ್ನಮ್ಮ ಹೆಣ್ಣಿನ ಸ್ವಭಾವ ವೈಶಿಷ್ಟತೆಯೊಂದಿಗೆ ಅವಳ ಪ್ರತಿ ವರ್ತನೆಯನ್ನೂ ಎಳೆ ಎಳೆಯಾಗಿ ಬಿಡಿಸಿಟ್ಟು, ಹದಿಬದೆಯ ಧರ್ಮವನ್ನು ಸರಳವಾಗಿ, ಸುಂದರವಾಗಿ, ಮನೋಹರವಾಗಿ ಸಮಾಜ ಮತ್ತು ಸಂಸಾರದ ಕಣ್ಣು ಮತ್ತು ಆಸರೆಯಾಗಿರುವ ಹೆಣ್ಣಿಗೆ ಮಾರ್ಗದರ್ಶನ ಕೃತಿಯಾಗಿ ರಚಿಸಿದ್ದಾಳೆ.

Draft Copy

# ಆಧುನಿಕ ಪೂರ್ವ ಕನ್ನಡ ಸಾಹಿತ್ಯ :

## ಕೆಂಪುನಾರಾಯಣ (ಮುದ್ರಾಮಂಜೂಷ) :

ಕೆಂಪು ನಾರಾಯಣ ಮುದ್ರಾಮಂಜೂಷವೆಂಬ ಪ್ರಸಿದ್ಧ ಕನ್ನಡದ ಗದ್ಯ ಗ್ರಂಥದ ಕರ್ತೃ. ಮೈಸೂರು ಸಂಸ್ಥಾನವನ್ನು ಆಳಿದ **ಮುಮ್ಮಡಿ ಕೃಷ್ಣರಾಜ ಒಡೆಯರ** ಆಶ್ರಿತನಾಗಿದ್ದ ಈತ ಹೊಯ್ಸಳ ಕರ್ಣಾಟಕ ಪಂಗಡಕ್ಕೆ ಸೇರಿದ ಸ್ಮಾರ್ತ ಬ್ರಾಹ್ಮಣ. ಹದಿನೆಂಟು ಆಶಯಗಳನ್ನುಳ್ಳ ಮುದ್ರಾಮಂಜೂಷವೆಂಬ ಗದ್ಯ ಗ್ರಂಥ ಇವನ ಏಕೈಕ ಕೃತಿಯಾಗಿದೆ. 1823ರಲ್ಲಿ ಈ ಗ್ರಂಥ ರಚಿತವಾಯಿತೆಂದು ಕವಿ ಕೆಂಪುನಾರಾಯಣನ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ.

**ಮುದ್ರಾಮಂಜೂಷ** ಕೆಂಪುನಾರಾಯಣನು ಬರೆದ ಕೃತಿ. ಇದು ನಡುಗನ್ನಡದಲ್ಲಿದೆ. ಮುದ್ರಾರಾಕ್ಷಸ, ಮುದ್ರಾಮಂಜೂಷ, ಚಂದ್ರಗುಪ್ತಚಾಣಕ್ಯರಚರಿತ್ರೆ-ಎಂದು ಬೇರೆ ಬೇರೆ ಹೆಸರುಗಳುಳ್ಳ ವಿಶಾಕದತ್ತ ರಚಿಸಿದ ಮುದ್ರಾರಾಕ್ಷಸ ಸಂಸ್ಕೃತ ನಾಟಕದ ಅನುವಾದವೇ ಈ ಗ್ರಂಥ. **ಮಗಧ ದೇಶದ ಅರಸರಾದ ನವನಂದರನ್ನು, ಅವರ ದಾಯಾದಿಯಾದ ಚಂದ್ರಗುಪ್ತ ಮೌರ್ಯ ದಂಡನೀತಿಶಾಸ್ತ್ರದಲ್ಲಿ ಪ್ರವೀಣನಾದ ಚಾಣಕ್ಯನೆಂಬ ಬ್ರಾಹ್ಮಣನ ಸಹಾಯದಿಂದ ಸಂಹರಿಸಿ, ಪಾಟಲೀಪುತ್ರದ ಸಿಂಹಾಸನವನ್ನು ಏರಿದ ಐತಿಹಾಸಿಕ ವೃತ್ತಾಂತವೇ ಮುದ್ರಾಮಂಜೂಷದ ಕಥಾವಸ್ತು.** ಚಾಣಕ್ಯನು ನವನಂದರನ್ನು ಸೋಲಿಸಿ, ಅವರ ಮಂತ್ರಿಯಾಗಿದ್ದ ರಾಕ್ಷಸನು ಹೂಡಿದ ತಂತ್ರಗಳೆಲ್ಲವನ್ನೂ ಭಂಗಗೊಳಿಸಿ, ಕಡೆಗೆ ಆ ರಾಕ್ಷಸನನ್ನೇ ಚಂದ್ರಗುಪ್ತನ ಮಂತ್ರಿಯಾಗಿ ನೇಮಕ ಮಾಡಿ ತಪಸ್ಸಿಗೆ ತೆರಳುವುದನ್ನು ಸೊಗಸಾಗಿ ಈ ಕೃತಿಯಲ್ಲಿ ಚಿತ್ರಿಸಲಾಗಿದೆ.

ಧಾರ್ಮಿಕ ಕಾವ್ಯಗಳಿಂದ ದಟ್ಟೈಸಿ ಹೋಗಿರುವ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ, ಶೃಂಗಾರ ಅದ್ಭುತಗಳಿಂದ ರಚಿತವಾದ, ಭಾರತದ ಒಂದು ಪ್ರಧಾನ ರಾಜ್ಯದ ಏಳುಬೀಳಿನ ಲೌಕಿಕ ಕಥೆಯನ್ನು ನಡುನಡುವೆ ವಿಪುಲವಾಗಿ ರಾಜನೀತಿಯನ್ನು ತಂದರೂ ಪಾತ್ರಪೋಷಣೆಗೆ ಭಂಗ ಬರದಂತೆ, ಕಥಾಸರಣಿ ಕೆಡದಂತೆ ಆಕರ್ಷಕವಾಗಿ ನಿರೂಪಿಸಿರುವುದೇ ಕೆಂಪುನಾರಾಯಣನ ಹಿರಿಮೆ. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಬೀಳದಿದ್ದಾಗ ರಚಿತವಾದ ಮೊಟ್ಟಮೊದಲನೆಯ ಕಾದಂಬರಿ ಮುದ್ರಾಮಂಜೂಷವೆಂದು

ಧಾರಾಳವಾಗಿ ಹೇಳಬಹುದು. ಕವಿ ತನ್ನ ಕಾಲದ ಹಿಂದೂ ಸಂಪ್ರದಾಯಗಳ ಉಲ್ಲೇಖನವನ್ನು ಗ್ರಂಥದುದ್ದಕ್ಕೂ ಮಾಡಿದ್ದಾನೆ. ಕವಿಯ ಶೈಲಿ ಈ ಮೊದಲೇ ಹೇಳಿದಂತೆ ಹಳಗನ್ನಡ ಪ್ರತ್ಯಯ ಮತ್ತು ಸಂಸ್ಕೃತ ಶಬ್ದಗಳಿಂದ ಕೂಡಿದ್ದರೂ ವಿಶೇಷವಾಗಿ ತಿಳಿಗನ್ನಡ ಶಬ್ದಗಳನ್ನು ಬಳಸಿರುವುದರಿಂದ ಗ್ರಾಹ್ಯವಾಗಿದ್ದು, ಮುಂಬರಲಿರುವ ಹೊಸಗನ್ನಡ ಶೈಲಿಗೆ ನಾಂದಿಯಾಗಿದೆ.

## ಮುದ್ದಣ (೧೮೭೦-೧೯೦೧):

ಕನ್ನಡ ನವೋದಯದ **ಮುಂಗೋಳಿ** ಎಂದು ಪ್ರಸಿದ್ಧರಾದ **ಮುದ್ದಣ ಇವರು** ಕನ್ನಡ ಸಾಹಿತ್ಯಲೋಕದಲ್ಲಿ **ಮಹಾಕವಿ** ಎಂದು ಖ್ಯಾತಿಪಡೆದ ಕವಿ ಮತ್ತು ಸಾಹಿತಿಯಾಗಿದ್ದಾರೆ. ಮುದ್ದಣ ಅವರ ಮೂಲ ಹೆಸರು **ಲಕ್ಷ್ಮೀನಾರಣಪ್ಪ**. ಇವರ ಹುಟ್ಟೂರು ನಂದಳಿಕೆಯಾದ್ದರಿಂದ **ನಂದಳಿಕೆ ಲಕ್ಷ್ಮೀನಾರಣಪ್ಪ** ಎಂಬ ಹೆಸರು ಕೂಡ ಇವರಿಗಿದೆ. **ರತ್ನಾವತಿ ಕಲ್ಯಾಣ**, **ಶ್ರೀರಾಮ ಪಟ್ಟಾಭಿಷೇಕ**, **ಅದ್ಭುತ ರಾಮಾಯಣ** ಮತ್ತು **ಶ್ರೀ ರಾಮಾಶ್ವಮೇಧ ಇವುಗಳು** ಮುದ್ದಣ ಅವರು ಬರೆದಿರುವ ಕೆಲವು ಮುಖ್ಯವಾದ ಕೃತಿಗಳು. ಅನಾರೋಗ್ಯ ಮತ್ತು ಬಡತನದಿಂದ ಬಳಲಿದ ಮುದ್ದಣ, ಕಿರಿಯ ವಯಸ್ಸಿಗೆ ಇಹಲೋಕ ಯಾತ್ರೆ ಮುಗಿಸಿದರು. ಮುದ್ದಣನವರ ಜೀವಿತಾವಧಿಯು ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಕಡಿಮೆ. ಇವರು ಇನ್ನೂ ಸ್ವಲ್ಪಕಾಲ ಜೀವಿಸಿದ್ದರೆ ಕನ್ನಡ ಸಾಹಿತ್ಯ ಲೋಕವು ಹಲವಾರು ವಿಭಿನ್ನ ಸಾಹಿತ್ಯದ ಪ್ರಕಾರಗಳನ್ನು ನೋಡುತ್ತಿತ್ತು ಮತ್ತು ಹೊಸಗನ್ನಡ ಸಾಹಿತ್ಯ ಚರಿತ್ರೆಯು ಇವರ ಬರಹದಿಂದ ಹೆಚ್ಚಿನ ಪ್ರಭಾವಕ್ಕೆ ಒಳಗಾಗುತ್ತಿತ್ತು. **'ಓರ್ವ ಕನ್ನಡಿಗ', 'ಚಕ್ರಧಾರಿ', 'ರಂಗಭಟ್ಟನಾತ್ಮಜ', 'ಲಕ್ಷ್ಮೀನಾರಾಯಣ'** ಎಂಬ ಹೆಸರಿನಿಂದ ಮುದ್ದಣ್ಣ ಕೃತಿ ರಚನೆ ಮಾಡಿದ್ದಾರೆ. ಕಾವ್ಯ/ ಸಾಹಿತ್ಯ ರಚನೆಯ ಕುರಿತು ಮಾತನಾಡುತ್ತಾ **"ನೀರಿಳಿಯದ ಗಂಟಲಲ್ಲಿ ಕಡುಬುನ್ನು ತುರುಕಿದಂತೆ"** ಸಾಹಿತ್ಯದ ರಚನೆ ಜನವಿಮುಖವಾಗಬಾರದು ಎಂಬುದು ಈತನ ಸ್ಪಷ್ಟ ಅಭಿಪ್ರಾಯವಾಗಿದೆ.

**ಮುದ್ದಣನ ಪ್ರಮುಖ ಕೃತಿಗಳು:**:

- ರತ್ನಾವತಿ ಕಲ್ಯಾಣ
- ಕುಮಾರ ವಿಜಯ(ಯಕ್ಷಗಾನ ಪ್ರಸಂಗ)
- ಶ್ರೀರಾಮ ಪಟ್ಟಾಭಿಷೇಕಂ(ವಾರ್ಧಕ ಷಟ್ಪದಿ ಕಾವ್ಯ)
- ಅzÀÄãತ ರಾಮಾಯಣಂ(ಗದ್ಯ)
- ಶ್ರೀರಾಮಾಶ್ವಮೇಧಂ(ಗದ್ಯ)
- ಗೋದಾವರಿ(ಅಪೂರ್ಣ ಕಾದಂಬರಿ)
- ಜೋಜೋ(ಪ್ರಬಂಧ)

ಮುದ್ದಣನು 'ರಾಮಾಶ್ವಮೇಧ' ಕೃತಿಯನ್ನು ರಚಿಸುವಾಗ ಯಾವ ರೀತಿಯಲ್ಲಿ ಕಾವ್ಯವನ್ನು ರಚಿಸಲಿ **'ಪದ್ಯದಲ್ಲೋ ಗದ್ಯದಲ್ಲೋ'** ಎಂದಾಗ ಕೂಡಲೇ ಅವನಿಗೆ ಹೊಳೆದದ್ದು, ಅದನ್ನು ಈ ರೀತಿ ವಿವರಿಸುತ್ತಾನೆ `**ಪದ್ಯಂ ವದ್ಯಂ ಗದ್ಯಂ ಹೃದ್ಯಂ; ಹೃದ್ಯಮಪ್ಪ ಗದ್ಯದೊಳ್ ಪೇಳ್ವುದು'** ಎಂದು ಮುಂದೆ ಕವಿ ನಿರ್ಧರಿಸಿದನು ಎಂಬುದನ್ನು ಗಮನಿಸಬಹುದು. ಹೆಬ್ಬಾರರ ಪ್ರೇರಣೆಯಿಂದ ಈ ನಿರ್ಧಾರಕ್ಕೆ ಬಂದು ಅದರಂತೆ ರಾಮಪಟ್ಟಾಭಿಷೇಕದ ಮುಂದಣ ಕಥೆಯನ್ನು **ಶ್ರೀ ರಾಮಾಶ್ವಮೇಧ** ಎಂಬ ಹೆಸರಿನಲ್ಲಿ ಗದ್ಯದಲ್ಲಿ **ಬರೆಯುತ್ತಾನೆ. ಜೈಮಿನಿ ಭಾರತದ ಹೃದ್ಯವಾದ ಸೀತಾಪರಿತ್ಯಾಗದ ಕಥೆಯನ್ನು ರಾಮನ ಅಶ್ವಮೇಧ ವೃತ್ತಾಂತವನ್ನು** ಸುಂದರವಾಗಿ ಗದ್ಯದಲ್ಲಿ ಹೇಳಿದನು. ಆ ಕಾದಂಬರಿಯ ಕಥೆಯ ಸಂವಾದದ ಸ್ವಾರಸ್ಯವನ್ನು ಗ್ರಹಿಸಿ ಮುದ್ದಣ-ಮನೋರಮೆಯರ ಅಪೂರ್ವವಾದ ಸರಸ ಸಲ್ಲಾಪವನ್ನು ಕಥೆಯಲ್ಲಿ ಬಳಸಿಕೊಂಡು ಕಥೆ ಹೇಳಿದನು. **'ಎಡೆ ಎಡೆಯಲ್ಲಿ ಸಕ್ಕದ ಕನ್ನಡ ನಲ್ನುಡಿ**'ಯನ್ನು ಮೆರೆಯಲು ತಿರುಳ್ಗನ್ನಡದಲ್ಲಿ ಈ ಕಥೆ ಬರೆದನು. ಈ ಗ್ರಂಥವೂ ಮೈಸೂರಿನ ಕಾವ್ಯಕಲಾನಿಧಿಯವರಿಂದ ೧೯೧೧ರಲ್ಲಿ ಬೆಳಕಿಗೆ ಬಂದಿತು. ಮುದ್ದಣ-ಮನೋರಮೆಯರ ಸರಸ ಸಲ್ಲಾಪ ಸಂವಾದದ ವಾಕ್ಯಗಳು ಹೆಚ್ಚು ಜನಪ್ರಿಯವಾಗಿವೆ. ಮುದ್ದಣ ಮನೋರಮೆಯರ ನಡುವಿನ ಪ್ರೀತಿ-ವಾತ್ಸಲ್ಯದ ಮತ್ತು ಸರಸ ಸಲ್ಲಾಪದ ಸಂವಾದವು ತೀಕ್ಷ್ಣವಾದ ವಿಮರ್ಶೆ, ವ್ಯಂಗ್ಯ ವಿಡಂಬನೆ ಮತ್ತು ಆತ್ಮೀಯ ಸಂಭಾಷಣೆಗಳಿಂದ ಈ ಕಾವ್ಯ ಕನ್ನಡ ಭಾಷೆಯ ಹಿರಿಮೆಗೂ ಕನ್ನಡಿ ಹಿಡಿಯುತ್ತದೆ.

VTU BSc ಸಾಹಿತ್ಯ ಸಿಂಚನ

## ಅಭ್ಯಾಸಕ್ಕಾಗಿ ಚಟುವಟಿಕೆಗಳು;

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.**

1.ಚಂದ್ರಹಾಸ ಕಥೆಯ ಕರ್ತೃ ಯಾರು?

1. ಸಂಚಿಹೊನ್ನಮ್ಮ
2. ಹೆಳವನಕಟ್ಟೆ ಗಿರಿಯಮ್ಮ
3. ಕೆಂಪುನಾರಾಯಣ
4. ತಿರುಮಲಾರ್ಯ

2. ಸಂಚಿ ಎಂದರೇನು?

1. ಚೀಲ
2. ಕೊಡ
3. ಮಾತ್ರೆ
4. ಮನೆ

3. ಸಂಚಿಹೊನ್ನಮ್ಮನ ಗುರುಗಳು ಯಾರು?

1. ಕೆಂಪು ನಾರಾಯಣ
2. ಪುರಂದರದಾಸರು
3. ಸಿಂಗರಾರ್ಯ
4. ಮನೋರಮೆ

4. 'ಸರಸ ಸಾಹಿತ್ಯದ ಅಧಿದೇವತೆ' ಎಂದು ಯಾರನ್ನು ಕರೆಯಲಾಗುತ್ತದೆ?

1. ದೇವರಾಜ ಅಮ್ಮಣಿ
2. ಮುಕ್ತಾಯಕ್ಕ
3. ಅಕ್ಕಮಹಾದೇವಿ

21KSS27 Draft Copy
VTU BSc ಸಾಹಿತ್ಯ ಸಿಂಚನ

4. ಸಂಚಿ ಹೊನ್ನಮ್ಮ

5. ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಸಾಹಿತ್ಯ ರಚಿಸಿದ ಸಾಹಿತಿ ಯಾರು?

1. ಕನಕದಾಸರು
2. ಕೆಂಪು ನಾರಾಯಣ
3. ಮುದ್ದಣ
4. ಸಂಚಿ ಹೊನ್ನಮ್ಮ

6. ಕನ್ನಡ ಸಾಹಿತ್ಯದ ನವೋದಯದ ಮುಂಗೋಳಿ ಎಂದು ಯಾರನ್ನು ಕರೆಯಲಾಗುತ್ತದೆ?

1. ಕನಕದಾಸರು
2. ಮುದ್ದಣ
3. ಕೆಂಪುನಾರಾಯಣ
4. ಚಿಕ್ಕದೇವರಾಜ ಒಡೆಯರ್

7. ಪದ್ಯಂ ವದ್ಯಂ ಗದ್ಯಂ - ಹೃದ್ಯಂ ಎಂದ ಕೂಡಲೇ ನೆನಪಾಗುವ ಕನ್ನಡದ ಶ್ರೇಷ್ಠ ಕವಿ ಯಾರು?

1. ವ್ಯಾಸರಾಯರು
2. ಶಿಶುನಾಳ ಶರೀಫರು
3. ಮುದ್ದಣ
4. ಸರ್ವಜ್ಞ

8. ಕನ್ನಡದ ಮೊಟ್ಟ ಮೊದಲ ನಾಟಕ ಮಿತ್ರವಿಂದಾ ಗೋವಿಂದ ಇದನ್ನು ರಚಿಸಿದವರು ಯಾರು?

1. ತಿರುಮಲಾರ್ಯ
2. ಮುಮ್ಮಡಿ ರಾಯರು
3. ಸಿಂಗರಾರ್ಯ
4. ವಿಷ್ಣುರಾಯರು

VTU BSc ಸಾಹಿತ್ಯ ಸಿಂಚನ 21KSS27 Draft Copy

**ಒಂದು ಅಥವಾ ಅಥವಾ ಎರಡು ವಾಕ್ಯಗಳಲ್ಲಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

1 ಹೆಳವನಕಟ್ಟೆ ಗಿರಿಯಮ್ಮನವರು ರಚಿಸಿರುವ ಕೃತಿಗಳು ಯಾವುವು?

2. ಹೊನ್ನಮ್ಮಳನ್ನು ಸಂಚಿಹೊನ್ನಮ್ಮ ಎಂದು ಏಕೆ ಕರೆಯಲಾಗುತ್ತದೆ?

3. ಮುದ್ದಣ್ಣನ ಪ್ರಮುಖ ಕೃತಿಗಳು ಯಾವುವು?

4. ಕೆಂಪು ನಾರಾಯಣನ ಮುದ್ರಾಮಂಜೂಷದ ಕಥಾವಸ್ತು ಯಾವುದು?

5. ಮುದ್ದಣನು ಬೇರೆ ಯಾವ ಯಾವ ಹೆಸರುಗಳಿಂದ ಕಾವ್ಯವನ್ನು ರಚಿಸಿದ್ದಾನೆ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಸಂಚಿ ಹೊನ್ನಮ್ಮಳ ಮೇರುಕೃತಿ "ಹದಿಬದೆಯ ಧರ್ಮ" ಈ ಕೃತಿಯ ಮೂಲ ಸಾರಾಂಶವನ್ನು ಬರೆಯಿರಿ.

2. ಮುದ್ದಣನವರು ಕನ್ನಡ ಸಾಹಿತ್ಯ ಚರಿತ್ರೆಗೆ ನೀಡಿರುವ ಕೊಡುಗೆಗಳನ್ನು ವಿವರಿಸಿ..

3. ಕೆಂಪು ನಾರಾಯಣನ "ಮುದ್ರಾಮಂಜೂಷ" ಈ ಕೃತಿಯ ಮುಖ್ಯ ಸಾರಾಂಶವನ್ನು ಬರೆಯಿರಿ.

VTU BSc ಸಿಂಚನ 21KSS27 Draft Copy

## ಅಧ್ಯಾಯ – ಹತ್ತು

# ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಚರಿತ್ರೆಯ ಒಂದು ಅವಲೋಕನ :

---

## ಹಳೆಗನ್ನಡ ಸಾಹಿತ್ಯ ಚರಿತ್ರೆಯ ಅವಲೋಕನ:

ಕ್ರಿಸ್ತಪೂರ್ವದ ಹಲವಾರು ಘಟನೆಗಳು ಮತ್ತು ನಾಗರಿಕತೆಗಳ ಅಧ್ಯಯನದಲ್ಲಿ, ರಾಮಾಯಣ-ಮಹಾಭಾರತದಂತಹ ಮಹಾಕಾವ್ಯಗಳಲ್ಲಿ, ಜಗತ್ತಿನ ವಿವಿಧ ದೇಶಗಳ ಗ್ರಂಥಗಳಲ್ಲಿ ಮತ್ತು ಕ್ರಿಸ್ತಶಕ 450 ರಲ್ಲಿ ದೊರೆಯುವ ಹಲ್ಮಿಡಿ ಶಿಲಾಶಾಸನದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಸುಗಮ ಮತ್ತು ಕನ್ನಡ ಭಾಷೆಯ ಬಳಕೆಯ ಪ್ರಚಲಿತತೆಯನ್ನು ಕಾಣುತ್ತೇವೆ. ಕನ್ನಡ ಸಾಹಿತ್ಯ ಚರಿತ್ರೆಯುನ್ನು ಪಂಪ ಪೂರ್ವ ಯುಗದಲ್ಲಿಯೇ ಕವಿರಾಜಮಾರ್ಗ ಮತ್ತು ವಡ್ಡಾರಾಧನೆ ಈ ಕೃತಿಗಳಲ್ಲಿ ಸಾಹಿತ್ಯದ ಶ್ರೇಷ್ಠತೆಯನ್ನು ಕಾಣುತ್ತೇವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೇ ಶತಮಾನದಿಂದ ಸುಮಾರು ಹನ್ನೆರಡನೇ ಶತಮಾನದವರೆಗಿನ ಕಾಲಘಟ್ಟವನ್ನು **ಹಳೆಗನ್ನಡ** ಎಂದು ಗುರುತಿಸಬಹುದು. ಈ ಕಾಲದ ಸಾಹಿತ್ಯ ಮುಖ್ಯವಾಗಿ ಜೈನ ಧರ್ಮವನ್ನು ಅವಲಂಬಿಸಿದೆ. ಕನ್ನಡ ಚರಿತ್ರೆಯ ಈ ಘಟ್ಟಕ್ಕೆ **ಆದಿ-ಕಾವ್ಯ** ಎಂದೂ ಸಹ ಕರೆಯಬಹುದು. ಈ ಕಾಲದ ಅತಿ ಪ್ರಸಿzÀÞ ಕವಿಯೆಂದರೆ ಪಂಪ. ಪಂಪನ ವಿಕ್ರಮಾರ್ಜುನ ವಿಜಯ ಅಥವಾ **ಪಂಪ ಭಾರತ** ಇಂದಿಗೂ ಮೇರು ಕೃತಿಯೆಂದು ಪರಿಗಣಿತವಾಗಿದೆ. ಪಂಪ ಭಾರತ ಮತ್ತು **ಆದಿಪುರಾಣ**ದ ಮೂಲಕ ಪಂಪ ಕನ್ನಡ ಕಾವ್ಯಪರಂಪರೆಯ ದಿಗ್ಗಜರಲ್ಲಿ ಒಬ್ಬನಾಗಿದ್ದಾನೆ. ಪಂಪ ಭಾರತ ಸಂಸ್ಕೃತ ಮಹಾಭಾರತದ ಕನ್ನಡ ರೂಪಾಂತರ. ತನ್ನ ಮಾನವತಾವಾದ ಹಾಗೂ ಗಂಭೀರ ಲೇಖನ ಶೈಲಿಯ ಮೂಲಕ ಕನ್ನಡದ ಅತ್ಯಂತ ಪ್ರಭಾವಶಾಲಿ ಲೇಖಕರಲ್ಲಿ ಒಬ್ಬನಾಗಿದ್ದಾನೆ.' **ಮಾನವ ಕುಲ ತಾನೊಂದೇ ವಲಂ**' ಎಂದು ವಿಶ್ವಮಾನವ ತತ್ವವನ್ನು ಸಾರಿದ ಜಗದ ಕವಿ ಪಂಪ. ಇದೇ ಕಾಲದ ಇನ್ನೊಬ್ಬ ಪ್ರಮುಖ ಲೇಖಕನೆಂದರೆ **ಶಾಂತಿನಾಥ ಪುರಾಣ**ವನ್ನು ರಚಿಸಿದ ಪೊನ್ನ. ಈ ಕಾಲದ ಮತ್ತೊಬ್ಬ ಹೆಸರಾಂತ ಕವಿ **ರನ್ನ**. ರನ್ನನ ಪ್ರಮುಖ ಕೃತಿಗಳು ಜೈನ ಧರ್ಮೀಯವಾದ **ಅಜಿತ ತೀರ್ಥಂಕರ ಪುರಾಣ** ಮತ್ತು ಗದಾಯುದ್ಧಂ ಅಥವಾ **ಸಾಹಸಭೀಮ ವಿಜಯ**. ಇದು ಇಡೀ

ಮಹಾಭಾರತದ ಒಂದು ಸಿಂಹಾವಲೋಕನದ ಸಮದೃಷ್ಟಿಯನ್ನು ಕಾಣಬಹುದಾಗಿದೆ. ಮಹಾಭಾರತ ಯುದ್ಧದ ಕೊನೆಯ ದಿನದ ಸ್ಥಿತಿಯಾಗಿದ್ದರೂ ಸಿಂಹಾವಲೋಕನ ಕ್ರಮದಲ್ಲಿ ಸಂಪೂರ್ಣ ಮಹಾಭಾರತವನ್ನು ಪರಿಶೀಲಿಸುತ್ತದೆ. ಛಂದಸ್ಸಿನ ದೃಷ್ಟಿಯಿಂದ ಈ ಕಾಲದ ಕಾವ್ಯ ಚಂಪೂ ಶೈಲಿಯಲ್ಲಿದೆ (ಒಂದು ರೀತಿಯ ಗದ್ಯ ಮಿಶ್ರಿತ ಪದ್ಯ). ಹಳೆಗನ್ನಡ ಸಾಹಿತ್ಯವು ಜಗತ್ತಿನ ಇಂಗ್ಲಿಷ್ ಸಾಹಿತ್ಯಕಿಂತ ಐದು ನೂರು ವರ್ಷಗಳ ಹಿಂದೆಯೇ ಅತ್ಯುತ್ತಮ ಸ್ಥಿತಿಯಲ್ಲಿ ಇತ್ತು ಎಂದು ದಾಖಲೆಗಳ ಸಮೇತ ರುಜುವಾತಾಗಿದೆ. ಇದಕ್ಕೆ ಸಾಕ್ಷಿ ಇಂದು ಭಾರತ ಸರ್ಕಾರವು ಅಂತರರಾಷ್ಟ್ರೀಯ ಸಂಸ್ಥೆ ಯುನೆಸ್ಕೋದ ಮಾನದಂಡಗಳ ಪ್ರಕಾರ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿರುವುದು.

## ನಡುಗನ್ನಡ ಸಾಹಿತ್ಯ ಚರಿತ್ರೆಯ ಅವಲೋಕನ :

ಕನ್ನಡ ಸಾಹಿತ್ಯದ ಕಾಲಘಟ್ಟಗಳಲ್ಲಿ ನಡುಗನ್ನಡ ಸಾಹಿತ್ಯವು ವಿಶೇಷ ಕಾಲಘಟ್ಟವಾಗಿತ್ತು ಈ ಅವಧಿಯಲ್ಲಿ ಅನೇಕ ಹೊಸ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬಂದವು. ಇವುಗಳಲ್ಲಿ ಮುಖ್ಯವಾದವು ವಚನ, ರಗಳೆ, ಷಟ್ಪದಿ, ಸಾಂಗತ್ಯ ಮತ್ತು ದೇಸಿ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಕೀರ್ತನೆಗಳು, ಜಾನಪದ ಸಾಹಿತ್ಯ ಮತ್ತು ತತ್ವ ಪದಗಳು. ಈ ಕಾಲದ ಸಾಹಿತ್ಯ ಜೈನ, ಹಿಂದೂ ಹಾಗೂ ಜಾತ್ಯತೀತ ಬೋಧನೆಗಳ ಮೇಲೆ ಆಧಾರಿತವಾಗಿದೆ. ಈ ಕಾಲಘಟ್ಟದ ಪ್ರಮುಖ ಸಾಹಿತ್ಯ ರಚನೆಕಾರರುಗಳೆಂದರೆ ಬಸವಣ್ಣನ ನೇತೃತ್ವದ ವಚನ ಸಾಹಿತ್ಯ ಪರಂಪರೆ, ಹರಿಹರ ಮತ್ತು ರಾಘವಾಂಕ, ಕುಮಾರವ್ಯಾಸ, ಪುರಂದರದಾಸರು ಮತ್ತು ಕನಕದಾಸರು, ಸರ್ವಜ್ಞ ಮತ್ತು ಸಂತ ಶಿಶುನಾಳ ಶರೀಫರು ಮೊದಲಾದವರಿದ್ದಾರೆ. ಇವರುಗಳು ತಮ್ಮದೇ ಶೈಲಿಯಲ್ಲಿ ಕನ್ನಡ ಸಾಹಿತ್ಯದ ದಾರಿಯನ್ನು ಬೆಳಗಿದವರು.

**ವಚನ**ಗಳು ಎಂದು ಸಾಮಾನ್ಯವಾಗಿ ಕರೆಯಲಾಗುವ ಶರಣರ ವಚನಗಳು ಮುಕ್ತ ಛಂದಸ್ಸಿನಲ್ಲಿವೆ. ಜೇಡರ ದಾಸಿಮಯ್ಯ, ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಅಂಬಿಗರ ಚೌಡಯ್ಯ ಮಾದರ ಚನ್ನಯ್ಯ, ಮಡಿವಾಳ ಮಾಚಿದೇವರು ಮೊದಲಾದವರು ವಚನಗಳನ್ನು ರಚಿಸಿದ್ದಾರೆ. ಶರಣರ ನಂತರದ ಕವಿಯಾದ ಸರ್ವಜ್ಞನ ವಚನಗಳು ಮಾತ್ರ ತ್ರಿಪದಿಯಲ್ಲಿವೆ. ವಚನಗಳು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗೆಗಿನ ಯೋಚನಾಧಾರೆಗಳು. ಇನ್ನೂ ಮುಖ್ಯವಾಗಿ, ವಚನ ಸಾಹಿತ್ಯ ಅಂದಿನ ಸಾಮಾಜಿಕ ಕ್ರಾಂತಿಯ ಪ್ರಕ್ರಿಯೆಗೆ ಕನ್ನಡಿ ಹಿಡಿಯುತ್ತದೆ. ಬಸವಣ್ಣನವರಿಂದ ಆರಂಭವಾದ ಈ ಕ್ರಾಂತಿ ಜಾತಿ, ಮತ, ಧರ್ಮಗಳ ಕುರಿತು ಮರು-ಪರಿಶೀಲನೆಗೆ ದಾರಿ ಮಾಡಿಕೊಟ್ಟಿತು. ವಚನ ಸಾಹಿತ್ಯದಿಂದ ಬಂದ ಮುಖ್ಯ ಬೋಧನೆಗಳೆಂದರೆ **ಕಾಯಕವೇ ಕೈಲಾಸ** ಮತ್ತು ಅಧ್ಯಾತ್ಮಿಕತೆಯ ಬಗ್ಗೆ ಹೊಸ ನೋಟ.

ಹರಿಹರ ತನ್ನ ಶೈವ ಮತ್ತು ವೀರಶೈವ ಕೃತಿಗಳ ಮೂಲಕ ರಗಳೆ ಸಾಹಿತ್ಯವನ್ನು ಬಳಕೆಗೆ ತಂದನು. ರಾಘವಾಂಕ ತನ್ನ ಆರು ಕೃತಿಗಳ ಮೂಲಕ ಷಟ್ಪದಿ ಛಂದಸ್ಸನ್ನು ಜನಪ್ರಿಯಗೊಳಿಸಿದನು. ಅವನ ಮುಖ್ಯ ಕೃತಿ **ಹರಿಶ್ಚಂದ್ರ ಕಾವ್ಯ**, ಪೌರಾಣಿಕ ಪಾತ್ರವಾದ ಹರಿಶ್ಚಂದ್ರನ ಜೀವನವನ್ನು ಕುರಿತದ್ದು. ಈ ಕೃತಿ ಸಹ ತನ್ನ ತೀವ್ರವಾದ ಮಾನವತಾವಾದಕ್ಕೆ ಪ್ರಸಿzÀÞವಾಗಿದೆ. ಇದೇ ಕಾಲದ ಇನ್ನೊಬ್ಬ ಪ್ರಸಿದ್ಧ ಜೈನ ಕವಿ ಜನ್ನ. ತನ್ನ ಕೃತಿಗಳಾದ **ಯಶೋಧರ ಚರಿತೆ** ಮತ್ತು **ಅನಂಥನಾಥ ಪುರಾಣ**ಗಳ ಮೂಲಕ ಜೈನ ಸಂಪ್ರದಾಯದ ಬಗ್ಗೆ ಬರೆದನು. ಇದೇ ಕಾಲದ ಕನ್ನಡ ವ್ಯಾಕರಣದ ಬಗೆಗಿನ ಮುಖ್ಯ ಕೃತಿ ಕೇಶಿರಾಜನ **ಶಬ್ದಮಣಿದರ್ಪಣ**. ಕುಮಾರವ್ಯಾಸನ **"ಕರ್ಣಾಟ ಭಾರತ ಕಥಾಮಂಜರಿ",** ಕನಕದಾಸರ **"ರಾಮಧಾನ್ಯ ಚರಿತ್ರೆ"** ಇನ್ನೂ ಅನೇಕ ಗ್ರಂಥಗಳು ಮತ್ತು ಸಾಹಿತ್ಯದ ಪ್ರಕಾರಗಳು ಮತ್ತು ಸಾಹಿತ್ಯ ರಚನೆಕಾರರುಗಳು ವಿವಿಧ ಪ್ರಕಾರಗಳ ಮುಖಾಂತರ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಈ ಕಾಲಘಟ್ಟದ ಸಾಹಿತ್ಯವು ಹನ್ನೆರಡನೆಯ ಶತಮಾನದಿಂದ 19ನೇ ಶತಮಾನದವರೆಗೆ ಸುದೀರ್ಘ ಅವಧಿಯ ಕಾಲಘಟ್ಟವಾಗಿದೆ. ಕುಮಾರವ್ಯಾಸ ಪ್ರಾಯಶಃ ಕನ್ನಡದ ಅತ್ಯಂತ ಪ್ರಸಿದ್ಧ ಕವಿ. **ಕರ್ಣಾಟ ಭಾರತ ಕಥಾಮಂಜರಿ** ಈತನ ಮೇರುಕೃತಿ. ಇದು ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಅತ್ಯದ್ಭುತ ಶೈಲಿಯಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಅದು ಕೇವಲ ರೂಪಾಂತರವಲ್ಲ ; ಅನೇಕ ಕವಿ ಸಮಯದಿಂದ ಕೂಡಿದ್ದು, ಸ್ವಂತ ಕೃತಿಯೆಂಬಂತೆ ರಚಿಸಿದ್ದಾನೆ . ಈ ಕೃತಿ ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಮಾನ್ಯತೆ ಪಡೆದ ಕೃತಿಯಾಗಿದೆ.

ದಾಸ ಸಾಹಿತ್ಯ (ಭಕ್ತಿ ಸಾಹಿತ್ಯ) ೧೫ನೇ ಶತಮಾನದಲ್ಲಿ ಆರಂಭಗೊಂಡ ಭಕ್ತಿ ಪಂಥದ ಹರಿದಾಸರಿಂದ ವಿರಚಿತವಾದದ್ದು. ಈ ಪದ್ಯಗಳಿಗೆ ಸಾಮಾನ್ಯವಾಗಿ 'ಪದ' ಗಳೆಂದು ಹೆಸರು. ಇವು ಭಗವಂತನಲ್ಲಿ ಒಂದಾಗ ಬಯಸುವ ಭಕ್ತನ ಭಾವವನ್ನು ಪ್ರತಿಬಿಂಬಿಸುತ್ತವೆ. ಈ ಸಾಹಿತ್ಯ ಸಂಗೀತದೊಂದಿಗೂ ನಿಲುಕಿದೆ. ದಾಸ ಸಾಹಿತ್ಯ ಸಂಗೀತ ಪದ್ಧತಿಗಳಲ್ಲೊಂದಾದ ಕರ್ನಾಟಕ ಸಂಗೀತಕ್ಕೆ ಬುನಾದಿಯಾಗಿದೆ. ದಾಸರ ಪದಗಳಿಗೆ ದೇವರನಾಮಗಳೆಂದೂ ಹೆಸರು. ಈ ಪ್ರಕಾರದ ಮುಖ್ಯ ಕನ್ನಡ ಕವಿಗಳೆಂದರೆ **ಪುರಂದರದಾಸ ಮತ್ತು ಕನಕದಾಸ**. ಇವರನ್ನು ದಾಸ ಸಾಹಿತ್ಯದ ಅಶ್ವಿನಿದೇವತೆಗಳೆಂದು ಕರೆಯಲಾಗಿದೆ. ಮುಂದುವರೆದು ಜಾನಪದ ಸಾಹಿತ್ಯ, ತ್ರಿಪದಿ ಸಾಹಿತ್ಯ, ಕೀರ್ತನೆ ಸಾಹಿತ್ಯ ಮತ್ತು ತತ್ವಪದಗಳು, **ಕನ್ನಡದ ಸೂಫಿ ಪಂಥದ** ಸಾಹಿತ್ಯ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. 19ನೇ ಶತಮಾನದ ಅಂತ್ಯದಲ್ಲಿ **ಮುದ್ದಣ**ನು ರಚಿಸಿದ ಸಾಹಿತ್ಯವು ಹೊಸಗನ್ನಡ ಸಾಹಿತ್ಯಕ್ಕೆ ಮುನ್ನುಡಿಯಾಗಿದೆ. ಮುದ್ದಣನನ್ನು **ಹೊಸಗನ್ನಡದ ಮುಂಗೋಳಿ** ಎಂದು ಕರೆಯಲಾಗುತ್ತದೆ.

## ಕನ್ನಡ ಸಾಹಿತ್ಯದ ವೈಶಿಷ್ಟ್ಯತೆ:

ಕನ್ನಡ ಸಾಹಿತ್ಯವು ಸಾವಿರಾರು ಸಾಹಿತ್ಯ ರಚನೆಕಾರರುಗಳನ್ನು ಹೊಂದಿದ್ದು , ಇವರುಗಳು ಕನ್ನಡ ಸಾಹಿತ್ಯಕ್ಕೆ ಮತ್ತು ಕನ್ನಡ ಸಂಸ್ಕೃತಿಗೆ ಸಾವಿರಾರು ಗ್ರಂಥಗಳನ್ನು ರಚನೆ ಮಾಡುವುದರ ಮುಖಾಂತರ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಪ್ರಾಚೀನ ಸಂಪತ್ಭರಿತವಾದ ಪರಂಪರೆ ಇರುವುದು ಚಾರಿತ್ರಿಕ ಸತ್ಯವಾಗಿದೆ. ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ಪ್ರಭಾವಕ್ಕೆ ಪ್ರಾರಂಭದಲ್ಲಿ ಒಳಗಾಗಿದ್ದರು, ತದನಂತರ ವಿಕಾಸವನ್ನು ಹೊಂದುತ್ತಾ ವಿಶಿಷ್ಟ ಸಾಹಿತ್ಯ ಪರಂಪರೆಯಾಗಿ ಮೂಡಿಬಂದಿದೆ. ಕನ್ನಡ ಸಾಹಿತ್ಯದ ಪ್ರಾರಂಭ ಕಾರ್ಯವನ್ನು ಮಾಡಿದ ಶ್ರೇಯಸ್ಸು ಜನಮತಕ್ಕೆ ಸಲ್ಲುತ್ತದೆ. ಹನ್ನೆರಡನೆಯ ಶತಮಾನದ ನಂತರ ನವೀನ ಶಕ್ತಿಯಾಗಿ ವಚನ ಸಾಹಿತ್ಯದ ರಚನೆಯೊಂದಿಗೆ ಕನ್ನಡ ಸಾಹಿತ್ಯವು ಸ್ವತಂತ್ರವಾಗಿ ಬೆಳೆದಿದೆ. ದಕ್ಷಿಣ ಭಾರತದ ಹಲವಾರು ಭಾಷೆಗಳ ಸಾಹಿತ್ಯದಂತೆ ಆಶ್ರಿತ ಸಾಹಿತ್ಯವಾಗದೆ ಕನ್ನಡವು ಸ್ವತಂತ್ರ ಪರಂಪರೆಯನ್ನು ಬೆಳೆಸಿಕೊಂಡು ಯಶಸ್ಸನ್ನು ಸಾಧಿಸಿದ ಸಾಹಿತ್ಯ ಪರಂಪರೆ ಕನ್ನಡ ಸಾಹಿತ್ಯವಾಗಿದೆ.

ದಾರ್ಶನಿಕ ಮತ್ತು ತಾತ್ವಿಕ ವೈವಿಧ್ಯತೆಯನ್ನು ಪಡೆದ ಕನ್ನಡ ಸಾಹಿತ್ಯವು ಗ್ರಂಥಗಳ ವಿಷಯ, ಗ್ರಂಥಗಳ ಸಾಹಿತ್ಯದ ಪ್ರಕಾರ, ವ್ಯಾಕರಣ ಶೈಲಿ, ಛಂದಸ್ಸು ಮತ್ತು ಅಲಂಕಾರ ಈ ಅಂಶಗಳಲ್ಲಿ ವಿವಿಧವಾಗಿದ್ದು ವಿಶಿಷ್ಟತೆಯನ್ನು ಹೊಂದಿದೆ. ಮಾರ್ಗ ಪರಂಪರೆಯಿಂದ ಅಚ್ಚಕನ್ನಡದ ದೇಸಿ ಪರಂಪರೆಯವರೆಗೆ ವಿವಿಧ ರೂಪದ ಸಾಹಿತ್ಯದ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ಮೂಡಿ ಬಂದಿದೆ. ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ಶತಕ, ಕೀರ್ತನೆಗಳು, ದಾಸ ಸಾಹಿತ್ಯ, ತತ್ವಪದಗಳು, ತ್ರಿಪದಿ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯದ ಉಗಮವಾಗಿದೆ. ಕನ್ನಡ ಸಾಹಿತ್ಯವು ವಿಷಯಗಳ ನಿರೂಪಣೆಯಲ್ಲಿ ಎಷ್ಟೇ ವೈವಿಧ್ಯವಿದ್ದರೂ ಕಾಲಘಟ್ಟದ ಜ್ಞಾನ, ಪರಂಪರೆ ಮತ್ತು ಕನ್ನಡನಾಡಿನ ಸಂಸ್ಕೃತಿಗೆ ಕೈಗನ್ನಡಿಯಾಗಿ ಮೂಡಿಬಂದಿದೆ.

ಜಗತ್ತಿನ ಎಲ್ಲ ಸಾಹಿತ್ಯಗಳನ್ನು ಕನ್ನಡ ಸಾಹಿತ್ಯದ ಎದುರು ನೋಡಿದರೆ ಕನ್ನಡ ಸಾಹಿತ್ಯವು ತನ್ನ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ವಿಶಿಷ್ಟವಾಗಿದ್ದು, ಜಾಗತಿಕ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಿದೆ. ಈ ಎಲ್ಲ ಕಾರಣಗಳಿಂದಾಗಿ ಭಾರತ ಸರಕಾರವು ಜಗತ್ತಿನ ಕೆಲವೇ ಶಾಸ್ತ್ರೀಯ ಭಾಷೆಗಳ ಪಟ್ಟಿಗೆ ಅಂತರಾಷ್ಟ್ರೀಯ ಸಂಸ್ಥೆ ಯುನೆಸ್ಕೋದ ಭಾಷೆಯ ಇತಿಹಾಸ ಮತ್ತು ಪರಂಪರೆಯ ಮಾನದಂಡಗಳ ಅನುಸಾರ ಕನ್ನಡ ಭಾಷೆಯನ್ನು ಶಾಸ್ತ್ರೀಯ ಭಾಷೆಯೆಂದು ಘೋಷಿಸಿದೆ. ಇದು ಕನ್ನಡ ಭಾಷೆಗೆ ಸಂದಿರುವ ವಿಶೇಷ ಗೌರವವಾಗಿದೆ.

VTU BSc ಸಾಹಿತ್ಯ ಸಿಂಚನ 21KSS27 Draft Copy

# Part - II

21KSS27 Draft copy
VTU BSc ಸಾಹಿತ್ಯ ಸಿಂಚನ

## ಅಧ್ಯಾಯ - 1

# ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಭಾವಗಳು ಮತ್ತು ಪ್ರೇರಣೆಗಳು

VTU BSc - 21KSS27 Draft Copy

"ಇಪ್ಪತ್ತನೆಯ ಶತಮಾನವು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದ ಸುವರ್ಣಯುಗ. ಏಕೆಂದರೆ ಈ ಕಾಲದಲ್ಲಿ ಕಂಡಷ್ಟು ವೈವಿಧ್ಯತೆಯನ್ನೂ, ಬೆಳವಣಿಗೆಗಳನ್ನೂ ಕನ್ನಡಕಾವ್ಯ, ಕಾದಂಬರಿ, ನಾಟಕ, ಕಥೆ, ಪ್ರಬಂಧ, ಪ್ರಗತಿಶೀಲ ಸಾಹಿತ್ಯ, ವಿವಿಧ ಪ್ರಕಾರದ / ಪಂಥದ ಸಾಹಿತ್ಯ ಯಾವ ಕಾಲದಲ್ಲೂ ಕಂಡಿರಲಿಲ್ಲ. ಈ ಕಾಲದಲ್ಲೂ, ಮಹಾಕಾವ್ಯಗಳು, ಶೃಂಗಾರ ಕಾವ್ಯಗಳು, ದೀರ್ಘ ಕಥಾ ಕವನಗಳು, ಭಾವಗೀತೆಗಳು, ಹೊಸ ಛಂದಸ್ಸಿನ (ಸಾನೆಟ್) ಕವನ-ಗದ್ಯ-ಕಾವ್ಯಗಳು, ಗೀತೆಗಳು (ಕೆಲವು ಸಿನೇಮಾದ ಗೀತೆಗಳೂ ಉತ್ತಮ ಸಾಹಿತ್ಯ ಹೊಂದಿವೆ), ಹನಿಗವನಗಳು, ಕಗ್ಗಗಳು, ಚುಟುಕುಗಳು, ಗೀತ ನಾಟಕಗಳು ರಚನೆಯಾಗಿವೆ."

# ಅಧ್ಯಾಯ - 1

# ==============================ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಭಾವಗಳು ಮತ್ತು ಪ್ರೇರಣೆಗಳು :

## ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಾರಂಭ :

ಅತ್ಯಂತ ಪ್ರಾಚೀನ ಕಾಲಘಟ್ಟದಿಂದ 19ನೇ ಶತಮಾನದ ಕೊನೆಯ ಹಂತದವರೆಗೆ ವಿವಿಧ ಹಂತಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯು ತನ್ನ ಭಾಷಾ ಮತ್ತು ಸಂಸ್ಕೃತಿಯ ಪರಂಪರೆಯ ಉಚ್ಛ್ರಾಯ ಸ್ಥಿತಿಯನ್ನು ಅನುಭವಿಸಿತ್ತು. ಕನ್ನಡ ಸಾಹಿತ್ಯವು ಶ್ರೇಷ್ಠ ಕವಿ ಪರಂಪರೆಯೊಂದಿಗೆ ಜಾಗತಿಕ ಸಾಹಿತ್ಯದಲ್ಲಿ ಎತ್ತರದ ಸ್ಥಾನದಲ್ಲಿ ಗುರುತಿಸಲ್ಪಟ್ಟಿದೆ. ಕನ್ನಡವು ಪ್ರಾಚೀನ ವೈಶಿಷ್ಟತೆಯೊಂದಿಗೆ ಹಲ್ಮಿಡಿ ಶಿಲಾಶಾಸನದಿಂದ ಪ್ರಾರಂಭವಾಗಿ ಕವಿರಾಜಮಾರ್ಗದ ಮಾರ್ಗದರ್ಶನದೊಂದಿಗೆ ಪಂಪಯುಗ, ಬಸವಯುಗ ( ವಚನ ಸಾಹಿತ್ಯ ಚಳುವಳಿ), ಹರಿದಾಸ ಪರಂಪರೆ, ಕುಮಾರವ್ಯಾಸ ಯುಗ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ, ತ್ರಿಪದಿ ಸಾಹಿತ್ಯ ಮತ್ತು ತತ್ತ್ವ ಪದಗಳು, ಮಹಿಳಾ ಸಾಹಿತ್ಯ, ನಡುಗನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಆಯಾಮಗಳನ್ನು ಮತ್ತು ಪ್ರಕಾರಗಳನ್ನು ಸಾಹಿತ್ಯ ಸಿಂಚನ ಭಾಗ - 1 ಈ ಕಾರ್ಯಪಠ್ಯಪುಸ್ತಕದಲ್ಲಿ ಸಂಪೂರ್ಣವಾಗಿ ಅಧ್ಯಯನ ಮಾಡಿದ್ದೇವೆ.

## ಹೊಸಗನ್ನಡ ಸಾಹಿತ್ಯದ ಕಾಲವು ಅರುಣೋದಯ ಕಾಲ:

19ನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಪಾರವಾದ ಬದಲಾವಣೆಗಳು ಕಂಡುಬರುವುದನ್ನು ಕಾಣುತ್ತೇವೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯು ಹಲವಾರು ಮಾರ್ಪಾಡುಗಳನ್ನು ಆಧುನಿಕ ಜಗತ್ತಿನ ಸಂಪರ್ಕದಿಂದಾಗಿ ಪ್ರಭಾವಿತಗೊಂಡಿದೆ. ಇಂಗ್ಲಿಷ್ ಭಾಷೆ, ಆಧುನಿಕ ಶಿಕ್ಷಣದ ಕ್ರಮಗಳು, ಸಾಹಿತ್ಯದ ಪ್ರಭಾವ ಮತ್ತು ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವ ಮತ್ತು ಪ್ರೇರಣೆ, ಮುಂದುವರೆದು ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಈ ಚಳುವಳಿ ಹಲವಾರು ಹೊಸ ವಿಷಯಗಳನ್ನು ಮತ್ತು ಸಾಮಾಜಿಕ ಬದಲಾವಣೆಗಳನ್ನು ಹುಟ್ಟುಹಾಕಿತು. ಈ ಎಲ್ಲಾ ಬದಲಾವಣೆಗಳೊಂದಿಗೆ ಹೊಸಗನ್ನಡ ಸಾಹಿತ್ಯ ಚರಿತ್ರೆಯು ನವಚೈತನ್ಯದೊಂದಿಗೆ ಪ್ರಾರಂಭವಾಗುವುದನ್ನು ಕಾಣುತ್ತೇವೆ.

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ¥ÀgÀA¥ÀgÉ¬ÄAzÀ §AzÀ «ZÁgÀUÀ¼À eÉÆvÉUÉ £À«Ã£À ಆಚಾರ ಮತ್ತು ವಿಚಾರಗಳು ಸಾಗರೋಪಾದಿಯಲ್ಲಿ ಪರಿಚಯವಾಗುವುದನ್ನು ನೋಡುತ್ತೇವೆ. ಅನೇಕ ಕ್ರಾಂತಿಕಾರಿ ವಿಚಾರಗಳು ಪ್ರವರ್ಧಮಾನಕ್ಕೆ ಬರುತ್ತವೆ. ಸಹಸ್ರಾರು ವರ್ಷಗಳ ಜಡತ್ವದಿಂದ ಆಚೆ ಬಂದು ಹೊಸ ವಿಚಾರಗಳಿಗೆ ಚಾಲನೆ ದೊರೆಯುತ್ತದೆ.

> **"ಸಾಹಿತಿಗಳಲ್ಲಿ ಅಂಧ ನಂಬಿಕೆ ಮತ್ತು ನಡವಳಿಕೆಗಳನ್ನು ಪ್ರಶ್ನಿಸುವಂತಹ ಧೈರ್ಯ ಉಂಟಾಯಿತು. ಹಲವಾರು ಮೌಢ್ಯ ವಿಚಾರಗಳು ಪ್ರಶ್ನಿಸಲ್ಪಟ್ಟು, ಹಾಗೆಯೇ ಪಾಶ್ಚಾತ್ಯರ ಸಂಪರ್ಕ ಮತ್ತು ಇಂಗ್ಲೀಷ್ ಶಿಕ್ಷಣದ ಪರಿಣಾಮವಾಗಿ ಕುಸಿದು ಹೋಗಿದ್ದ ಕೆಲವು ಜೀವನ ಮೌಲ್ಯಗಳು ಪುನರ್ ಸ್ಥಾಪನೆಗೊಂಡವು. ಇಂದು ನಾವು ಯಾವುದನ್ನು ಆಧುನಿಕ ಸಾಹಿತ್ಯ ಎಂದು ಕರೆಯುತ್ತೇವೆಯೋ ಅದು ವಾಸ್ತವವಾಗಿ ಪ್ರಾರಂಭವಾಗಿದ್ದು 19ನೇ ಶತಮಾನದ ಮಧ್ಯದಲ್ಲಿ. ಅಲ್ಲಿಯವರೆಗೆ ಇದ್ದ ಸಾಹಿತ್ಯದ ರಚನೆಯ ಮೂಲ ವಿಚಾರಗಳು ಧರ್ಮ, ದೇವರು, ಪುರಾಣ, ರಾಜಮನೆತನದ ವಿಚಾರಗಳು, ಶ್ರೀಮಂತವರ್ಗದ ವೈಭವೀಕರಣದ ಇತಿಹಾಸ ಮೊದಲಾದ ವಿಷಯಗಳನ್ನು ತೊರೆದು ಹಾಗೆಯೇ ಸಾಹಿತ್ಯವು ರಾಜಾಶ್ರಯದಿಂದ ಮುಕ್ತಿಯನ್ನು ಪಡೆದುಕೊಂಡಿತು. ಮುಂದುವರೆದು, ಮುದ್ರಣ, ಗ್ರಂಥ ಪ್ರಕಟಣೆ ಮತ್ತು ಪ್ರಚಾರದಂತಹ ವಿಷಯಗಳಲ್ಲಿ ಸಾಹಿತ್ಯವು ಸ್ವತಂತ್ರವಾದುದನ್ನು ಕಾಣುತ್ತೇವೆ. ಅನುವಾದ ಸಾಹಿತ್ಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ** ರೂಪುಗೊಳ್ಳಲು **ವಿವಿಧ ಹಂತಗಳಲ್ಲಿ ಕಾಣುತ್ತೇವೆ."**

ಒಟ್ಟಿನಲ್ಲಿ ಕನ್ನಡ ಸಾಹಿತ್ಯವು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದು ಪ್ರಬಲ ಸಾಹಿತ್ಯವಾಗಿ ರೂಪಗೊಳ್ಳಲು 19ನೇ ಶತಮಾನದ ಹಲವಾರು ವಿದ್ಯಮಾನಗಳು ಪ್ರೇರಣೆಯಾದವು.

## ಹೊಸಗನ್ನಡ ಸಾಹಿತ್ಯ gÀZÀ£ÉAiÀÄ ««zsÀ ºÀAvÀUÀ¼ÀÄ:

ಕನ್ನಡ ಸಾಹಿತ್ಯ ಚರಿತ್ರೆಯ ರಚನೆ ಮತ್ತು ಬೆಳವಣಿಗೆ 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಬತ್ತಿಯೆ ಹೋಗುವುದೆನೋ ಎನ್ನುವಷ್ಟು ನೀರಸವಾಯಿತು. ಈ ವೇಳೆಗಾಗಲೇ ಕರ್ನಾಟಕವು ಸಂಪೂರ್ಣವಾಗಿ ಬ್ರಿಟೀಷರ ಆಡಳಿತದ ಹಿಡಿತದಲ್ಲಿತ್ತು. ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡ ಭಾಷೆಯ ಅಭ್ಯಾಸ ಕುಂಠಿತಗೊಂಡಿತು. ಆದರೆ ಅದೇ **ಇಂಗ್ಲಿಷ್ ಭಾಷೆಯ ಸಾಹಿತ್ಯದ ಅಧ್ಯಯನವೇ ಕನ್ನಡದ ಜನರ ಆತ್ಮಾಭಿಮಾನವನ್ನು ಕೆರಳಿಸಿ. ದೇಶಭಾಷೆಗಳ ಅದ್ಭುತ ಸಾಹಿತ್ಯದ ಕ್ರಾಂತಿಗೂ ಮೂಲವಾಯಿತು.** ಇಂಗ್ಲಿಷ್ ಸಾಹಿತ್ಯದಲ್ಲಿನ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ಕನ್ನಡದಲ್ಲಿಯೂ ಅಂಥ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಅಂದಿನ ಸಾಹಿತಿಗಳಲ್ಲಿ ಮೂಡಲಾರಂಭಿಸಿತು.

ಮೊದಲಿಗೆ ಈ ಕಾರ್ಯವು ಅನುವಾದಗಳ ಮೂಲಕ ನಡೆಯಿತು. ಕಾಲಾನುಕ್ರಮದಲ್ಲಿ ಕನ್ನಡ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಗೊಂಡು, ತದನಂತರ ಉತ್ತಮ ಕಾವ್ಯಗಳು ರಚನೆಗೊಳ್ಳಲು ಕಾರಣವಾಯಿತು. ಆಧುನಿಕ ಕನ್ನಡ ಸಾಹಿತ್ಯದ ಆರಂಭದಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದುವು. ಇವರು ಕರ್ನಾಟಕದ ಜನಜೀವನದಲ್ಲಿ ಸಮರಸವಾಗಿ ಬೆರೆತು, ಇಲ್ಲಿನ ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದುದಲ್ಲದೆ, ಕನ್ನಡ ಭಾಷಾಸ್ವರೂಪವನ್ನು ದಿಗ್ದರ್ಶಿಸಬಲ್ಲ ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈಹಾಕಿ ಯಶಸ್ವಿಯಾದರು.

## ಕನ್ನಡ ಭಾಷೆ ಮತ್ತು ಸಾಹಿತ್ಯದ ಚಟುವಟಿಕೆಗಳಲ್ಲಿ ಭಾಗಿಯಾಗಿ ಮೊದಲಿಗರಾದವರು:

ಜಾನ್ಸ್ಯಾಂಡ್, ವಿಲಿಯಂ ರೀವ್, ಕಿಟ್ಟೆಲ್, ಜೀಗ್ಲರ್, ಬಿ.ಎಲ್.ರೈಸ್, ಇ.ಪಿ.ರೈಸ್ ಮೊದಲಾದವರಿಂದ ಕನ್ನಡ ಭಾಷೆಯ ಸಾಹಿತ್ಯಕ್ಕೆ ಆಗಿರುವ ಸೇವೆ ಅಪಾರ. ¥Á¢æUÀ¼À ¥Àæ¨sÁªÀ¢AzÀ ಕನ್ನಡ ಸಾಹಿತ್ಯ PÉëÃvÀæPÉÌ ಹಲವು ಹೊಸ ಮುಖಗಳ ಅಂಕುರಾರ್ಪಣೆUÉ PÁgÀtªÁ¬ÄvÀÄ. ಇವರುಗಳು ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು.

ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ **ಇ.ಪಿ.ರೈಸ್** ಅವರಿಗೆ ಸಲ್ಲುತ್ತದೆ. ಕನ್ನಡ ಶಾಸನಗಳನ್ನು ಕಲೆಹಾಕಿದ ಕೀರ್ತಿ **ಫ್ಲೀಟ್** ಅವರದಾದರೆ, ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನೂ ಎಪಿಗ್ರಾಫಿಯ ಕರ್ನಾಟಕದ 12 ಸಂಪುಟಗಳನ್ನೂ ಹೊರತಂದ ಕೀರ್ತಿ **ಬಿ.ಎಲ್.ರೈಸ್** ಅವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ ನೀಡಿದ **ಕಾಲ್ಡ್ ವೆಲ್ಲರು** ಹಲವು ದೃಷ್ಟಿಗಳಿಂದ ಚಿರಸ್ಮರಣೀಯರು.

ಆಧುನಿಕ ಸಾಹಿತ್ಯದ ಅಂಕುರಾರ್ಪಣೆಗೆ ಮೈಸೂರು ಅರಸರಿಂದ ದೊರೆತ ಸಹಾಯವೂ ಬಹುಮುಖ್ಯವಾದದ್ದು. ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ **ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ**ವನ್ನು ಸ್ಥಾಪಿಸಿ, ತಮ್ಮ ಆಸ್ಥಾನಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ **ಬಸವಪ್ಪಶಾಸ್ತ್ರಿಗಳು** ಶಾಕುಂತಲ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರಗಳನ್ನೂ ಮತ್ತು ಶೂರಸೇನಚರಿತೆ ಎಂಬ ಹೆಸರಿನಿಂದ ಒಥೆಲೊ ಎಂಬ ಇಂಗ್ಲಿಷ್ ನಾಟಕದ ಭಾಷಾಂತರವನ್ನೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟರು. ಚಾಮರಾಜರ ನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಕನ್ನಡದ ಸ್ವರ್ಣಯುಗಕ್ಕೆ ತಳಹದಿ ಹಾಕಿದವರೆಂದು ಹೇಳಬಹುದು. ಇವರು ಹೊಸಗನ್ನಡ ಸಾಹಿತ್ಯದ ನವೋದಯಕ್ಕಾಗಿ ನೀಡಿದ ಎರಡು ಮುಖ್ಯ ಕಾಣಿಕೆಗಳೆಂದರೆ

**ಕನ್ನಡ ಸಾಹಿತ್ಯ ಪರಿಷತ್ತು (1915)** ಮತ್ತು **ಮೈಸೂರು ವಿಶ್ವವಿದ್ಯಾನಿಲಯ (1916)**. ಈ ಎರಡು ಸಂಸ್ಥೆಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ ಮತ್ತು ಶ್ರೇಷ್ಠವಾದದ್ದು.

## ಹೊಸಗನ್ನಡ ಸಾಹಿತ್ಯ ಪ್ರಕಾರಗಳು :

ಹೊಸಗನ್ನಡ ಸಾಹಿತ್ಯ ಚರಿತ್ರೆಯು ವಿವಿಧ ಪ್ರಮುಖ ಕಾಲಘಟ್ಟಗಳಲ್ಲಿ ಗುರುತಿಸಲ್ಪಡುತ್ತದೆ. ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ ಬಂಡಾಯ ಎಂಬ **4 ಹಂತಗಳಲ್ಲಿ** ಪ್ರಮುಖವಾಗಿ ವಿಭಾಗಿಸಲ್ಪಡುತ್ತದೆ. ಪ್ರತಿಯೊಂದು ಹಂತದಲ್ಲಿ ಕನ್ನಡ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ರಚಿಸಲ್ಪಟ್ಟಿದೆ. ಪ್ರತಿಯೊಂದು ಪ್ರಕಾರವು ವಿಶಿಷ್ಟ ಹಿನ್ನೆಲೆಯನ್ನು ಹೊಂದಿದ್ದು ವಿಶೇಷ ಲಕ್ಷಣಗಳೊಂದಿಗೆ ನಾಡಿನ ಸಂಸ್ಕೃತಿ ಮತ್ತು ಆಚಾರ-ವಿಚಾರ, ಸಂಸ್ಕೃತಿಗಳ ವಿಶ್ಲೇಷಣೆ ಮತ್ತು ಪ್ರಸ್ತುತಪಡಿಸುವಿಕೆಯ ರೀತಿಯನ್ನು ನೋಡಬಹುದು. ಪ್ರಮುಖ ಸಾಹಿತ್ಯದ ಪ್ರಕಾರಗಳೆಂದರೆ:

1. ಭಾವಗೀತೆ
2. ಕಥನಕಾವ್ಯ
3. ಮಹಾಕಾವ್ಯ
4. ನಾಟಕ
5. ಕಾದಂಬರಿ
6. ಸಣ್ಣಕಥೆ
7. ಜಾನಪದ
8. ಲಲಿತ ಪ್ರಬಂಧ
9. ಕವಿಚರಿತೆ
10. ಆತ್ಮಚರಿತ್ರೆ
11. ಸಾಹಿತ್ಯ ವಿಮರ್ಶೆ
12. ಪ್ರವಾಸ ಕಥನಗಳು
13. ವಿಜ್ಞಾನ ಮತ್ತು ತಂತ್ರಜ್ಞಾನ ಬರಹಗಳು
14. ಸ್ತ್ರೀ ಸಾಹಿತ್ಯ

VTU BSc ಸಾಹಿತ್ಯ ಸಿಂಚನ 21KSS27 Draft Copy

15. ಮಕ್ಕಳ ಸಾಹಿತ್ಯ

16. ಸಂಶೋಧನೆ

17. ಸಂಪಾದನೆ……. ಮೊದಲಾದ ಪ್ರಕಾರಗಳು.

ಕನ್ನಡ ಸಾಹಿತ್ಯದಲ್ಲಾದ ನವೋದಯ ಕ್ರಾಂತಿ ನಮಗೆ ನಿಚ್ಚಳವಾಗಿ ಕಾಣುವುದು 20ನೆಯ ಶತಮಾನದ ಆದಿಭಾಗದಿಂದ. ಮೊದಲು ಸಾಹಿತ್ಯದ ರಚನೆ ಧರ್ಮವನ್ನು ಕೇಂದ್ರವಾಗಿಟ್ಟುಕೊಂಡು ಅಲೌಕಿಕವಾಗಿತ್ತು. ನವೋದಯ ಸಾಹಿತ್ಯದ ಕಾಲಘಟ್ಟಕ್ಕೆ ವಿಶ್ವವಿಶಾಲವಾದ ಲೌಕಿಕಜ್ಞಾನದ ಸಾಧನೆಯನ್ನು ಹೆಗ್ಗುರಿಯಾಗಿಟ್ಟುಕೊಂಡು ಸಾಹಿತ್ಯ ರಚನೆ ಪ್ರಾರಂಭವಾಯಿತು.

> **"ನಮ್ಮ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು, ಹೊಸತು-ಹಳತು, ನಮ್ಮದು-ಇತರರದು ಎನ್ನದೆ ಎಲ್ಲವನ್ನೂ ಹೊಂದಿಸಿಕೊಂಡು, ಹಾಗೆಯೇ ತನ್ನೊಡನೆ ಸಮನ್ವಯಗೊಳಿಸಿಕೊಂಡ ಆಧುನಿಕ ನವೋದಯ ಸಾಹಿತ್ಯವು ಶ್ರೀಮಂತವಾಯಿತು".**

ಹೊಸ ಕಾವ್ಯದ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ **ಬಿ.ಎಂ.ಶ್ರೀ** ಅವರಿಗೆ ಸಲ್ಲುತ್ತದೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಅವರ **ಇಂಗ್ಲಿಷ್ ಗೀತೆಗಳು** ವಿಶೇಷ ಕೃತಿಯಾಗಿವೆ. ಕುವೆಂಪು ಅವರ **ಶ್ರೀ ರಾಮಾಯಣದರ್ಶನಂ** ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ. **ದ.ರಾ.ಬೇಂದ್ರೆಯವರು** ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ವಿಪುಲವಾಗಿ ಕವನಗಳನ್ನು ಬರೆದಿದ್ದಾರೆ. ಇವರಿಬ್ಬರನ್ನು **ಆಧುನಿಕ ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪಂಥಗಳ ನಿರ್ಮಾತೃಗಳು** ಎಂದು ಗುರುತಿಸಲಾಗಿದೆ. 1950ರಿಂದ ಈಚೆಗೆ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. **ಈ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ವಿ.ಕೃ. ಗೋಕಾಕರಿಗೆ ಸಲ್ಲುತ್ತದೆ.** ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರೆತಿವೆ. ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು ಅತ್ಯಂತ ಪ್ರಮುಖವಾದದ್ದು. ಇವರ ಕವಿತೆಗಳು ಪ್ರತಿಭೆ ಮತ್ತು ಕಲ್ಪನಾಶಕ್ತಿಗೆ ಸಾಕ್ಷಿಗಳಾಗಿವೆ. ಮುಂದುವರೆದು, ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ನಮ್ಮಲ್ಲಿ ಜನಪದದತ್ತ ಆಸಕ್ತಿ ಮೂಡಿ ಜನಪದ ಸಾಹಿತ್ಯ ಸಂಗ್ರಹದ ಕೃಷಿ ಕಳೆದ ಏಳು ದಶಕಗಳ ಹಿಂದಿನಿಂದ ಪ್ರಾರಂಭವಾಯಿತು. ಹಲಸಂಗಿ ಸೋದರರಾದ ರೇವಪ್ಪ, ಮಧುರ ಚೆನ್ನ, ಸಿಂಪಿ ಲಿಂಗಣ್ಣ- ಈ ಮೂವರು ಹೊರತಂದ **"ಗರತಿಯ ಹಾಡು"**ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ. ದೇವನೂರು ಮಹಾದೇವ ಮತ್ತು ಸಿದ್ದಲಿಂಗಯ್ಯ ಇವರುಗಳು ದಲಿತ ಸಾಹಿತ್ಯ ಪರಂಪರೆಗೆ ವಿಶಿಷ್ಟ ಮುನ್ನುಡಿಯನ್ನು ಸಾಹಿತ್ಯರಚನೆಯ ಮುಖಾಂತರ ಬರೆದಿದ್ದಾರೆ. ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಉದಿಸಿದ ಆಧುನಿಕ ಕನ್ನಡ ಸಾಹಿತ್ಯದ ಇನ್ನೊಂದು ವಿಶೇಷ ಪ್ರಕಾರವೆಂದರೆ ಗದ್ಯಸಾಹಿತ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾಣಬರುವ ಎಲ್ಲ ಗದ್ಯಪ್ರಕಾರಗಳೂ - ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ - ಹರಟೆ, ಪ್ರವಾಸ ಸಾಹಿತ್ಯ, ಪತ್ರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ, ಹಾಸ್ಯ ಪ್ರಬಂಧ ಇತ್ಯಾದಿ - ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೆಳೆದು ನಿಂತಿವೆ. **ಆಧುನಿಕ ಕನ್ನಡದ ಗದ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು.** ಈ ಪ್ರಕಾರ ಕನ್ನಡದಲ್ಲಿ 19ನೆಯ ಶತಮಾನದ

ಪೂರ್ವಾರ್ಧದಲ್ಲಿಯೆ ಕಾಣಿಸಿಕೊಂಡಿತಾದರೂ 1930ರಿಂದ ಈಚೆಗೆ ಕಾದಂಬರಿಕಾರರ ಸಂಖ್ಯೆ ಅಪರಿಮಿತವಾಗಿದೆ. ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಕಾದಂಬರಿಯನ್ನು ಬಿಟ್ಟರೆ ಎರಡನೆಯ ಸ್ಥಾನ **ಸಣ್ಣಕಥೆಗೆ** ಸಲ್ಲುತ್ತದೆ. ಈ ಪ್ರಕಾರದಲ್ಲಿ ಕೆಲಸ ಮಾಡಿರುವವರ ಸಂಖ್ಯೆಯೂ ಅಪಾರ. ಈ ಪ್ರಕಾರವನ್ನು ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚದುರಂಗ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಅಶ್ವತ್ಥ, ಅ.ನ.ಕೃ. ಗೌರಮ್ಮ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ, ತೇಜಸ್ವಿ, ಸದಾಶಿವ, ಬಿ. ಶಾಮಸುಂದರ, ದೇವನೂರು ಮಹಾದೇವ, ಮೊಗಳ್ಳಿಗಣೇಶ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

ಶುದ್ಧ ಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ **ಟಿ.ಪಿ. ಕೈಲಾಸಂ** ಅವರಿಗೆ ಸಲ್ಲುತ್ತದೆ. ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ಗದ್ಯ ಬಳಕೆಯಾಗಿರುವ ನಾಟಕಗಳು ವಿಪುಲ ಸಂಖ್ಯೆಯಲ್ಲಿ ಈಗ ಕಾಣಿಸಿಕೊಂಡಿವೆ. ಶ್ರೀರಂಗ, ಕುವೆಂಪು, ಮಾಸ್ತಿ, ಶಿವರಾಮ ಕಾರಂತ, ಪರ್ವತವಾಣಿ, ಪು.ತಿ.ನ., ವಿ.ಸೀತಾರಾಮಯ್ಯ, ಎಚ್.ಕೆ.ರಂಗನಾಥ, ಗಿರೀಶ ಕಾರ್ನಾಡ ಮೊದಲಾದವರು ನಾಟಕಗಳ ಕರ್ತೃಗಳಾಗಿ ಪ್ರಸಿದ್ಧರಾಗಿದ್ದಾರೆ. ಈ ರೀತಿಯಾಗಿ ಕನ್ನಡ ಸಾಹಿತ್ಯ ಚರಿತ್ರೆಯು ಆಧುನಿಕ ಕಾಲಘಟ್ಟದಲ್ಲಿ ಜಾಗತಿಕ ಸಾಹಿತ್ಯದಲ್ಲಿ ವಿಶಿಷ್ಟ ಸಾಹಿತ್ಯವಾಗಿ ಎಲ್ಲ ಪ್ರಕಾರಗಳಲ್ಲಿಯೂ ಉನ್ನತ ಸ್ಥಾನದಲ್ಲಿ ಕಾಣುತ್ತದೆ. ಭಾರತೀಯ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯವು ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಮತ್ತು ಸರಸ್ವತಿ ಸನ್ಮಾನ ಪ್ರಶಸ್ತಿಗಳೊಂದಿಗೆ ಮೇಲುಸ್ತರದಲ್ಲಿ ಎದ್ದು ಕಾಣುತ್ತದೆ. ಕನ್ನಡ ನಾಡು ನುಡಿ ಸಂಸ್ಕೃತಿ ಪರಂಪರೆ ಮತ್ತು ಸಾಹಿತ್ಯವು ಕನ್ನಡಿಗರ ಹೆಮ್ಮೆಯಾಗಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

### ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ಹೊಸಗನ್ನಡ ಸಾಹಿತ್ಯ ಚರಿತ್ರೆಯ ಉದಯಕ್ಕೆ ಪ್ರಮುಖ ಕಾರಣಗಳಾವುವು?
   1. ಪ್ರಾಚೀನ ಸಾಹಿತ್ಯದ ಹಿನ್ನೆಲೆ
   2. ಯುರೋಪಿಯನ್ನರ ಆಳ್ವಿಕೆ
   3. ಇಂಗ್ಲಿಷ್ ಭಾಷೆ ಮತ್ತು ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವ
   4. ಜಾನಪದ ಸಾಹಿತ್ಯ ಮತ್ತು ಹಳೆಗನ್ನಡ ಸಾಹಿತ್ಯ ಚರಿತ್ರೆ
2. ಕನ್ನಡ ಭಾಷೆಗೆ ಇಲ್ಲಿಯವರೆಗೆ ಎಷ್ಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ?
   1. 6
   2. 8

3. 10

4. 5

3. ಹೊಸಗನ್ನಡ ಸಾಹಿತ್ಯ ಚರಿತ್ರೆಯ ಬೆಳವಣಿಗೆಗೆ ಪ್ರಮುಖ ಕಾರಣವೇನೆಂದರೆ?

1. ಬರವಣಿಗೆಯಲ್ಲಿ ಶ್ರೇಷ್ಠತೆ

2. ರಾಜಾಶ್ರಯದಿಂದ ಮುಕ್ತಿ ಮತ್ತು ಸ್ವತಂತ್ರ ಮುದ್ರಣಕ್ಕೆ ಅವಕಾಶ

3. ಹೊಸ ಸಾಹಿತ್ಯದ ಉದಯ

4. ಆಧುನಿಕ ವಿಚಾರಗಳ ಮಂಡನೆ

4. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ ಕೀರ್ತಿ ಇವರಿಗೆ ಸಲ್ಲುತ್ತದೆ?

1. ಇ ಪಿ ರೈಸ್ 2. ಫರ್ಡಿನಾಂಡ್ ಕಿಟೆಲ್

3. ಬಿ ಎಲ್ ರೈಸ್ 4. ಫ್ರಾನ್ಸಿಸ್ ಬೇಕನ್

5. ಅಭಿನವ ಕಾಳಿದಾಸ ಎಂದು ಯಾರನ್ನು ಕರೆಯಲಾಗುತ್ತದೆ?

1. ಬಿಎಂ ಶ್ರೀಕಂಠಯ್ಯನವರು 2. ಬಸವಪ್ಪ ಶಾಸ್ತ್ರಿಗಳು

3. ಶಿವರಾಮ ಕಾರಂತ್ 4. ಪಂಜೆ ಮಂಗೇಶರಾಯರು

6. ಕನ್ನಡದ ಮೊದಲ ಶಿಲಾಶಾಸನ ಯಾವುದು?

1. ಕಪ್ಪೆ ಅರೆಭಟ್ಟನ ಶಿಲಾಶಾಸನ 2. ಶ್ರವಣಬೆಳಗೊಳದ ಶಿಲಾಶಾಸನ

3. ಹಲ್ಮಿಡಿ ಶಿಲಾಶಾಸನ 4. ಪಟ್ಟದಕಲ್ಲು ಶಿಲಾಶಾಸನ

7. ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾದ ವರ್ಷ?

1. 1911

2. 1919

3. 1915

4. 1935

8. ಇಂಗ್ಲಿಷ್ ಗೀತೆಗಳು ಕವನ ಸಂಕಲನದ ರಚನೆಕಾರರು ಯಾರು?

1. ಗೋವಿಂದ ಪೈ 2. ಕುವೆಂಪು

3. ದರಾ ಬೇಂದ್ರೆ 4. ಬಿ ಎಂ ಶ್ರೀಕಂಠಯ್ಯ

9. ನವ್ಯ ಕನ್ನಡ ಸಾಹಿತ್ಯ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

1. ಆ ನ ಕೃಷ್ಣರಾಯರು
2. ವಿ ಕೃ ಗೋಕಾಕ್
3. ಜಿ ಪಿ ರಾಜರತ್ನಂ
4. ಗಿರೀಶ್ ಕಾರ್ನಾಡ್

10. ಆಧುನಿಕ ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ ಗ್ರಂಥ ಯಾವುದು?

1. ಗರತಿಯ ಹಾಡು
2. ಜಾನಪದ ಸಂಗ್ರಹ
3. ಕನ್ನಡ ನುಡಿ ಹಾಡುಗಳು
4. ನುಡಿಸಿರಿ ಪದಗಳು

11. ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ?

1. ರಾಜರತ್ನಂ
2. ಟಿ ಪಿ ಕೈಲಾಸಂ
3. ಗೋವಿಂದ ಪೈ
4. ಗಿರೀಶ್ ಕಾರ್ನಾಡ್

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1 ಹೊಸಗನ್ನಡ ಸಾಹಿತ್ಯ ಚರಿತ್ರೆಯ ಉದಯಕ್ಕೆ ಕಾರಣವಾದ ಎರಡು ಅಂಶಗಳಾವುವು?

2. ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮೈಸೂರು ರಾಜ್ಯದ ಅರಸರ ಕೊಡುಗೆಗಳು ಯಾವುವು?

3. ಕನ್ನಡ ಭಾಷೆಯ ಅಭಿವೃದ್ಧಿಗೆ ಶ್ರಮಿಸಿದ ವಿದೇಶಿ ಹಿನ್ನೆಲೆಯ ಬರಹಗಾರರುಗಳು ಯಾರು?

4 ಕನ್ನಡದ ಮೂರು ರಾಷ್ಟ್ರ ಕವಿಗಳ ಹೆಸರುಗಳನ್ನು ಬರೆಯಿರಿ ?

5. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಹೆಸರುಗಳನ್ನು ಬರೆಯಿರಿ?

6. ನವ್ಯ ಕಾಲದ ಪ್ರಮುಖ ಕನ್ನಡ ಸಾಹಿತಿಗಳ ಹೆಸರು ಗಳನ್ನು ಹೆಸರಿಸಿ?

7 ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕೃತಿಯನ್ನು ಕನ್ನಡ ಸಾಹಿತ್ಯದ ಮೇರುಕೃತಿ ಎಂದು ಕರೆಯಲಾಗುತ್ತದೆ ಇದಕ್ಕೆ ಕಾರಣವೇನು ?

8 ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದ ರಾ ಬೇಂದ್ರೆಯವರ ಸಾಹಿತ್ಯ ಯಾವ ರೀತಿ ವೈವಿಧ್ಯವಾಗಿದೆ ಎಂಬುದನ್ನು ಬರೆಯಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ (ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಹೊಸಗನ್ನಡ ಸಾಹಿತ್ಯ ಕಾಲಘಟ್ಟದ ಸಾಹಿತ್ಯ ಸೃಷ್ಟಿಯ ವಿವಿಧ ಆಯಾಮಗಳನ್ನು ಕುರಿತು ಬರೆಯಿರಿ.

2. ಕನ್ನಡದ ಎಂಟು ಜ್ಞಾನಪೀಠ ಪ್ರಶಸ್ತಿ ಕವಿಗಳು ಮತ್ತು ಅವರ ಕೃತಿಗಳನ್ನು ಹೆಸರಿಸಿ.

3. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯು ಶ್ರೀಮಂತಗೊಳ್ಳಲು ಪ್ರಮುಖ ಕಾರಣಗಳು ಯಾವುವು?.

4. ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಪ್ರಕಾರಗಳ ಹೆಸರುಗಳನ್ನು ಬರೆಯಿರಿ?.

VTU BSc ಸಾ

# ಅಧ್ಯಾಯ - 2

==============================

# ಹೊಸಗನ್ನಡ ಸಾಹಿತ್ಯದ ಪ್ರಕಾರಗಳು

## (ಭಾಗ – 1 ರಿಂದ 4 ರವರೆಗೆ)

- ನವೋದಯ ಸಾಹಿತ್ಯ - ಲಕ್ಷಣಗಳು ಮತ್ತು ಪ್ರೇರಣೆ, ಪ್ರಮುಖ ಕವಿಗಳು ಮತ್ತು ಸಾಹಿತ್ಯದ ಕೊಡುಗೆಗಳು.
- ನವ್ಯ ಸಾಹಿತ್ಯ - ಲಕ್ಷಣಗಳು ಮತ್ತು ಪ್ರೇರಣೆ, ಪ್ರಮುಖ ಕವಿಗಳು ಮತ್ತು ಸಾಹಿತ್ಯದ ಕೊಡುಗೆಗಳು.
- ಬಂಡಾಯ ಮತ್ತು ಪ್ರಗತಿಪರ ಸಾಹಿತ್ಯ - ಲಕ್ಷಣಗಳು ಮತ್ತು ಪ್ರೇರಣೆ, ಪ್ರಮುಖ ಕವಿಗಳು ಮತ್ತು ಸಾಹಿತ್ಯದ ಕೊಡುಗೆಗಳು.
- ದಲಿತ ಸಾಹಿತ್ಯ, ಮಹಿಳಾ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮತ್ತು ಇತ್ತೀಚಿನ ಪ್ರಚಲಿತ ಕನ್ನಡ ಸಾಹಿತ್ಯ - ಲಕ್ಷಣಗಳು ಮತ್ತು ಪ್ರೇರಣೆ, ಪ್ರಮುಖ ಕವಿಗಳು ಮತ್ತು ಸಾಹಿತ್ಯದ ಕೊಡುಗೆಗಳು.

(ಕುವೆಂಪುರವರ "ವಿಶ್ವಮಾನವ ಗೀತೆ", ದಾರಾ ಬೇಂದ್ರೆ ರವರ ನಾದಲೀಲೆಯಿಂದ "ನೀ ಹಿಂಗೆ ನೋಡಬ್ಯಾಡ ನನ್ನ" ಗೀತೆ, ಚಂದ್ರಶೇಖರ ಕಂಬಾರರವರ "ಗುಡುಗುಡು ಗುಮ್ಮ", ಡಿ.ವಿ.ಜಿ ಯವರ ಮಂಕುತಿಮ್ಮನ ಕಗ್ಗ ದಿಂದ ಆಯ್ದು ಪದ್ಯಭಾಗಗಳು, ಡಾ. ಸಿದ್ದಲಿಂಗಯ್ಯ ನವರ "ನನ್ನ ಕವನ", ಎಂ ಗೋಪಾಲಕೃಷ್ಣ ಅಡಿಗ ರವರ ಕವನ "ಭೂತ", ವೈದೇಹಿ ರವರ "ಅಡುಗೆಮನೆಯ ಹುಡುಗಿ").

BSc ಸಾಹಿತ್ಯ ಸಿಂಚನ

# ಅಧ್ಯಾಯ - 2

=============================

# ಹೊಸಗನ್ನಡ ಸಾಹಿತ್ಯದ ಪ್ರಕಾರಗಳು

## ಭಾಗ – 2.1

### ಆಧುನಿಕ ಕನ್ನಡ ಸಾಹಿತ್ಯದ ವೈಶಿಷ್ಟತೆ:

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಸಾಹಿತ್ಯ ಸಾಮಾನ್ಯವಾಗಿ ಪ್ರತಿಭಟನೆಯ ಸಾಹಿತ್ಯವೇ ಆಗಿದೆ. ಪ್ರಮುಖ ಸಾಹಿತ್ಯದ ಪ್ರಕಾರಗಳಾದ : ನವೋದಯ, ನವ್ಯ , ದಲಿತ ಮತ್ತು ಬಂಡಾಯ ಕಾವ್ಯಗಳು ಒಂದು ಆದ ನಂತರ ಮತ್ತೊಂದು ಕ್ರಮವಾಗಿ ಆಯಿತೆಂದು ಹೇಳಲು ಬರುವುದಿಲ್ಲ. ಒಂದರ ಕೊರತೆಯನ್ನು ಇನ್ನೊಂದು ತುಂಬುತ್ತಾ ಕೆಲವೊಮ್ಮೆ ಜೊತೆ ಜೊತೆಯಾಗಿ ಹೊರಹೊಮ್ಮಿವೆ. ಇವು ಒಂದಕ್ಕೊಂದು ಪೂರಕವಾಗಿ ಆಧುನಿಕ ಕನ್ನಡ ಕಾವ್ಯ ಪರಂಪರೆಯನ್ನು ರೂಪಿಸಿದ್ದಾವೆ ಎನ್ನಬಹುದು.

ಈಗಲೂ ನವೋದಯ, ನವ್ಯ, ದಲಿತ ಕಾವ್ಯ, ಬಂಡಾಯ ಇವು ಒಟ್ಟಿಗೆ ಇವೆ. ಈ ಪರಂಪರೆಗೆ ಹಿಂದಿನ ಹಳೆಗನ್ನಡ, ನಡುಗನ್ನಡದ ಒಂದು ಸಾವಿರ ವರ್ಷದ ಕನ್ನಡ ಇತಿಹಾಸದ ಪರಂಪರೆ ಸೇರಿದೆ ಮತ್ತು ಜೊತೆ ಜೊತೆಯಲ್ಲಿಯೇ ಇವೆ. ಪಂಪನ ಚಂಪೂ, ಬಸವಣ್ಣನ ವಚನ, ಕುಮಾರವ್ಯಾಸನ ಷಟ್ಪದಿ, ಸರ್ವಜ್ಞನ ತ್ರಿಪದಿ ಇವೆಲ್ಲವೂ ಇದರೊಡನೆ ಸಂಬಂಧಿಸಿದೆ. ಹೊಸ ಚಿಗುರು, ಹಳೆ ಬೇರು ಎಂಬಂತೆ ಹಳತು ಹೊಸತಕ್ಕೆ ಪೂರಕವಾಗಿದೆ. ಕಾವ್ಯದಲ್ಲಿ ಈ ಪ್ರತಿಭಟನೆಯ ದನಿ ಮೊದಲಿಂದಲೂ ಇದ್ದೇ ಇದೆ.

### ಹೊಸಗನ್ನಡ ಕಾವ್ಯದ ಪ್ರಮುಖ ಕಾಲಘಟ್ಟಗಳು:

ಹೊಸಗನ್ನಡ ಸಾಹಿತ್ಯ ಚರಿತ್ರೆಯು ವಿವಿಧ ಪ್ರಮುಖ ಕಾಲಘಟ್ಟಗಳಲ್ಲಿ ಗುರುತಿಸಲ್ಪಡುತ್ತದೆ. ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ ಬಂಡಾಯ ಎಂಬ **4 ಹಂತಗಳಲ್ಲಿ** ಪ್ರಮುಖವಾಗಿ ವಿಭಾಗಿಸಲ್ಪಡುತ್ತದೆ.

## ಕನ್ನಡದಲ್ಲಿ ನವೋದಯ ಸಾಹಿತ್ಯ ಪರಂಪರೆ :

ಇಪ್ಪತ್ತನೇ ಶತಮಾನದ ಆದಿಯಲ್ಲಿ **ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ** ಕನ್ನಡ ಸಾಹಿತ್ಯವು ಹೊಸ ಹುಟ್ಟನ್ನು ಪಡೆದು ಹಳೆಗನ್ನಡ - ನಡುಗನ್ನಡ ಸಾಹಿತ್ಯಕ್ಕಿಂತ ಬೇರೆಯಾದ ನವೋದಯ ಸಾಹಿತ್ಯವೆಂದು ಹೊಸ ಸಾಹಿತ್ಯ ಪ್ರಕಾರದಲ್ಲಿ ಕಾಣಿಸಿಕೊಂಡಿತು. ಇದು ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಕಾವ್ಯ, ಕವನ, ಭಾವಗೀತೆ, ಹೀಗೆ ವಿವಿಧ ಪ್ರಕಾರಗಳಲ್ಲಿ ಬಹುಬೇಗ ಅಭಿವೃದ್ಧಿ ಪಡೆದು ವಿಪುಲ ಸಾಹಿತ್ಯ ಬೆಳವಣಿಗೆಗೆ ಕಾರಣವಾಯಿತು. ಇದರಲ್ಲಿ ಮುಖ್ಯವಾದ ಕಾವ್ಯ ಪ್ರಕಾರಗಳಲ್ಲಿ, ಭಾವಗೀತೆ, ಕವನ, ಕಗ್ಗ, ವಚನದ ಲಕ್ಷಣದ ಮತ್ತು ರಗಳೆ ಛಂದಸ್ಸಿನ ಸಾನೆಟ್ ಮಾದರಿಯ ಪದ್ಯಗಳು ಮುಖ್ಯವಾದವು.

## ನವೋದಯ ಸಾಹಿತ್ಯದ ಪ್ರಮುಖ ಲಕ್ಷಣಗಳು:_

ನವೋದಯ ಕಾವ್ಯವು ಮುಖ್ಯವಾಗಿ ಭಾವಗಳ ತೀವ್ರತೆಯ ಅಭಿವ್ಯಕ್ತಿಗೆ ಪ್ರಾಮುಖ್ಯತೆ ಕೊಟ್ಟಿತು. ಭಾವುಕತೆ, ಉತ್ಸಾಹ, ಸಮೃದ್ಧಿ ಆ ಕಾವ್ಯಗಳ ಪ್ರಮುಖ ಲಕ್ಷಣ. ಹಿಂದಿನ ಕಾವ್ಯ ಪರಂಪರೆಗೆ ಬೇರೆಯಾದ ಲಕ್ಷಣ, **ಛಂದಸ್ಸು ಮತ್ತು ಶೈಲಿಯಿಂದ ಹೊಸಬಗೆಯ ಕಾವ್ಯದ ಪ್ರಕಾರವಾದ ಭಾವಗೀತೆ, ಕವನಗಳು ೨೦ನೇ ಶತಮಾನದ ಆದಿಯಿಂದ ಇಲ್ಲಿಯವರೆಗೂ ಕಾಲಕ್ಕೆತಕ್ಕಂತೆ ಶೈಲಿ, ಭಾವನೆ, ಚಿಂತನೆ, ಅಭಿವ್ಯಕ್ತಿಗಳಲ್ಲಿ ಬದಲಾವಣೆ** ಹೊಂದುತ್ತಾ ಸಮೃದ್ಧವಾಗಿ ಬೆಳೆಯಿತು.

ನವೋದಯ ಎಂದರೆ ಹೊಸದು ಎಂದರ್ಥ. ನವೋದಯ ಎಂಬ ಪದವು ಇಂಗ್ಲಿಷ್ ನ ರೊಮ್ಯಾಂಟಿಕ್ ಎಂಬ ಪದಕ್ಕೆ ಸಂವಾದಿಯಾಗಿ ಬಳಸಲ್ಪಡುತ್ತದೆ. ಬಿ.ಎಂ.ಶ್ರೀ. ರವರು 1912ರಲ್ಲಿ ಇಂಗ್ಲೀಷ್ ಗೀತೆ ಎಂಬ ಕವನ ಸಂಕಲನವನ್ನು ಬರೆಯುವುದರ ಮುಖಾಂತರ ನವೋದಯದ ಆಚಾರ್ಯ ಪುರುಷರಾದರು. **ಮೊದಲು ನವೋದಯ ಎಂದು ಕರೆದವರು ಕುವೆಂಪು.** ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತಗಳಲ್ಲಿ ಹೆಚ್ಚು ಬೆಳಕು ಕಾಣದೆ ಇದ್ದ ಕನ್ನಡ ಸಾಹಿತ್ಯ, ೧೯ನೇ ಶತಮಾನದ ಕೊನೆಗೆ ಹಾಗು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಹೊಸ ಹುಟ್ಟು ಪಡೆಯಿತು. ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಗೆ ಕಾರಣವಾಯಿತು. **ಈ ಹಂತದಲ್ಲಿ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಶ್ರೇಷ್ಠ ಲೇಖಕರು ಬೆಳಕಿಗೆ ಬಂದರು.** ಈ ಕಾಲದ **ಸಾಹಿತ್ಯ ಪ್ರಕಾರಗಳು ರೊಮ್ಯಾಂಟಿಕ್ ಇಂಗ್ಲಿಷ್ ಕಾವ್ಯ ಮತ್ತು ಗ್ರೀಕ್ ರುದ್ರನಾಟಕಗಳಿಂದ ಪ್ರಭಾವಿತವಾಯಿತು.** ಈ ಘಟ್ಟದ ಬೆಳವಣಿಗೆಯನ್ನು ತಂದವರು ಬಿ.ಎಂ.ಶ್ರೀ, ತಮ್ಮ ಇಂಗ್ಲಿಷ್ ಗೀತಗಳ ಪುಸ್ತಕ ದೊಂದಿಗೆ. ಅನೇಕ ಸುಶಿಕ್ಷಿತ ಕನ್ನಡಿಗರು, ಮುಖ್ಯವಾಗಿ ಶಿಕ್ಷಕ ವೃತ್ತಿಯಲ್ಲಿದ್ದವರು, ತಮ್ಮ ಮಾತೃಭಾಷೆಯಲ್ಲಿ ಬರೆಯುವುದರ ಮಹತ್ವವನ್ನು ಕಂಡು ಕೊಂಡು ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯನ್ನೊದಗಿಸಿದರು. **ಇದಕ್ಕೆ ಉದಾಹರಣೆಯಾಗಿ ಕುವೆಂಪು - ತಮ್ಮ ಒಬ್ಬ ಶಿಕ್ಷಕರಿಂದ (ಬ್ರಿಟಿಷ್ ಮೂಲದವರು) ಕನ್ನಡದಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಮುಂದೆ ರಾಷ್ಟ್ರಕವಿ ಬಿರುದಿಗೆ ಪಾತ್ರರಾದರು.** ಅವರ ಪ್ರಕೃತಿಪ್ರೇಮ,

21KSS27 Draft Copy
VTU BSc ಸಾಹಿತ್ಯ ಸಿಂಚನ

ಮಾನವನ ಉನ್ನತಿಯಲ್ಲಿ ನಂಬಿಕೆ ಮತ್ತು ಪ್ರಕೃತಿ ಮತ್ತು ದೇವರ ಸಮ್ಮಿಶ್ರಣವನ್ನು ಕಾಣುವ ಅವರ ಮನಸ್ಸು ಅವರನ್ನು ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರನ್ನಾಗಿ ಮಾಡಿವೆ. ಅವರ ಅತಿ ಪ್ರಸಿದ್ಧ ಕಾವ್ಯಕೃತಿ ಶ್ರೀ ರಾಮಾಯಣ ದರ್ಶನಂ. ಮತ್ತೋರ್ವ ಸುಪ್ರಸಿದ್ಧ ಕವಿ ಶ್ರೀ ದ.ರಾ.ಬೇಂದ್ರೆ ಇವರ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಮಾರ್ಗದರ್ಶನ ಸಾಹಿತ್ಯವಾಗಿ ಪ್ರೇರಣೆಯಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ನಿಂತಿರುವ ಮತ್ತೊಬ್ಬ ಲೇಖಕರೆಂದರೆ ಶಿವರಾಮ ಕಾರಂತ - ಅತ್ಯಂತ ಬುದ್ಧಿಮತ್ತೆಯ, ಆಳವಾದ ಆದರ್ಶಗಳುಳ್ಳ ವ್ಯಕ್ತಿತ್ವ, ಹಾಗೂ ಅಷ್ಟೇ ಆಳವಾದ ಸಾಮಾಜಿಕ ಕಳಕಳಿಯಿದ್ದ ಲೇಖಕರು. ಅವರ ಶಕ್ತಿಶಾಲಿ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಸಿದ್ಧವಾದವು-ಚೋಮನ ದುಡಿ, ಬೆಟ್ಟದ ಜೀವ, ಮೈಮನಗಳ ಸುಳಿಯಲ್ಲಿ, ಮರಳಿ ಮಣ್ಣಿಗೆ ಮತ್ತು ಮೂಕಜ್ಜಿಯ ಕನಸುಗಳು ಮೊದಲಾದುವು.

Copy

ಬಿ. ಎಂ. ಶ್ರೀ. ರವರ ಇಂಗ್ಲಿಷ್ ಗೀತೆಗಳು ಕವನ ಸಂಕಲದಿಂದ ಆಯ್ದ ಭಾಗ:

**ಕರುಣಾಳು, ಬಾ, ಬೆಳಕೆ,**

**ಮುಸುಕಿದೀ ಮಬ್ಬಿನಲಿ,**

**ಕೈ ಹಿಡಿದು ನಡೆಸೆನ್ನನು.**

**ಇರುಳು ಕತ್ತಲೆಯ ಗವಿ; ಮನೆ ದೂರ;**

**ಕನಿಕರಿಸಿ; ಕೈ ಹಿಡಿದು ನಡೆಸೆನ್ನನು - ಇತ್ಯಾದಿ**

ರಾಷ್ಟ್ರಕವಿ ಕುವೆಂಪು, ದ.ರಾ. ಬೇಂದ್ರೆ, ಕೆ. ಎಸ್. ನರಸಿಂಹಸ್ವಾಮಿ, ಶಿವರಾಮ ಕಾರಂತರು , ತೀ ನಂ ಶ್ರೀಕಂಠಯ್ಯ ನವರು, ಮೂರ್ತಿರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಇನ್ನು ಅನೇಕ ಸಾವಿರಾರು ಪ್ರಸಿದ್ಧ ಕನ್ನಡದ ಸಾಹಿತಿಗಳು ಈ ಕಾಲಘಟ್ಟದಲ್ಲಿ ವಿಶೇಷ ಕೊಡುಗೆಗಳನ್ನು ನೀಡಿ ಕನ್ನಡ ಸಾಹಿತ್ಯವನ್ನು ಶ್ರೇಷ್ಠಗೊಳಿಸಿದ್ದಾರೆ.

## ಕನ್ನಡದಲ್ಲಿ ನವ್ಯಕಾವ್ಯ ಪರಂಪರೆ :

೧೯೪೭ ರ ಭಾರತದ ಸ್ವಾತಂತ್ರ್ಯಾನಂತರ ಕನ್ನಡ ಸಾಹಿತ್ಯದಲ್ಲಿ ಇನ್ನೊಂದು ಹೊಸ ಸಾಹಿತ್ಯ ಪ್ರಕಾರದ ಉಗಮವಾಯಿತು ಅದೇ ನವ್ಯಕಾವ್ಯ ಪರಂಪರೆ. ನವ್ಯ. **ಈ ಪ್ರಕಾರದ ಪಿತಾಮಹರೆಂದರೆ ಗೋಪಾಲಕೃಷ್ಣ ಅಡಿಗರು.** ಭಾಷಾಪ್ರಯೋಗದ ಚಮತ್ಕಾರ ಹಾಗೂ ಕಾವ್ಯತಂತ್ರ ಹೊಸ ಎತ್ತರವನ್ನು ಈ ಪ್ರಕಾರದಲ್ಲಿ ಕಂಡಿತು.

ನವೋದಯ ಕಾವ್ಯದಂತೆ ನವ್ಯಕಾವ್ಯ ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದಲೇ ಹುಟ್ಟಿಕೊಂಡದ್ದು. **ನವ್ಯಕಾವ್ಯ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಗೆ ಸಂವಾದಿಯಾದ ಪದ**. ನವೋದಯ ಕಾವ್ಯಕ್ಕೆ ಆಧುನಿಕ ಕಾವ್ಯ ಎಂಬ ಇನ್ನೊಂದು ಹೆಸರೂ ಬಳಕೆಯಲ್ಲಿ ಇದ್ದಂತಾದ್ದರಿಂದ ಇಂಗ್ಲಿಷಿನ ಮಾಡರ್ನ್ ಪೊಯಿಟ್ರಿಯಿಂದ ಪ್ರೇರಣೆ ಪಡೆದ ಕನ್ನಡ ಕಾವ್ಯವನ್ನು ಆಧುನಿಕ ಕಾವ್ಯ ಎಂದು ಕರೆಯುವಂತಿರಲಿಲ್ಲ. ಆದ್ದರಿಂದ ಅದನ್ನು ಕನ್ನಡದ ಸಂದರ್ಭದಲ್ಲಿ ನವ್ಯಕಾವ್ಯ ಎಂದು ಕರೆಯಬೇಕಾಗಿ ಬಂದಿತೆಂದು ತೋರುತ್ತದೆ. ಕನ್ನಡ ಸಾಹಿತ್ಯ ಪಾಶ್ಚಾತ್ಯ ಆಧುನಿಕ ತಾತ್ವಿಕ

ಚಿಂತನೆಗಳು ಅಸ್ತಿತ್ವವಾದ, ಅಸಂಗತವಾದಗಳನ್ನು ರೂಢಿಸಿಕೊಂಡು ಬೆಳೆಯಿತು. ಪರಕೀಯತೆ, ಸಿನಿಕತನ, ಅನಾಥ ಪ್ರಜ್ಞೆ ಆಧುನಿಕ ಬದುಕಿನ ಒತ್ತಡಗಳ ಶೋಧನೆ ಪ್ರಾರಂಭಗೊಂಡಿತು. ಕವಿಗಳು ರೂಪಕ ಸಂಕೇತ ಮತ್ತು ಪ್ರತಿಮೆಗಳ ಮೂಲಕ ಮಾತನಾಡಲು ಪ್ರಾರಂಭಿಸಿದರು. ನವ್ಯ ಸಾಹಿತ್ಯದಲ್ಲಿ ಪ್ರಜ್ಞಾಪೂರ್ವಕವಾದ ತಂತ್ರದ ಬರಹವು ರೂಢಿಗೆ ಬಂದಿತು.

ನವ್ಯ ಎಂದಕೂಡಲೆ ಎಲ್ಲ ರೀತಿಯಿಂದಲೂ ನವ್ಯ-ನ ಭೂತೋ ನ ಭವಿಷ್ಯತಿ ಎಂದು ಅರ್ಥ ಹಚ್ಚಬೇಕಾಗಿಲ್ಲ ಎಂಬ ಗೋಪಾಲಕೃಷ್ಣ ಅಡಿಗರ ಮಾತನ್ನು ಇಲ್ಲಿ ನೆನೆಯಬಹುದು (ಹೊಸ ಕವಿತೆಯನ್ನು ಕುರಿತು, 1953). **ನವ್ಯಕಾವ್ಯ ಎಂಬ ಕಾವ್ಯ ಪ್ರಕಾರಕ್ಕೆ ಆ ಹೆಸರನ್ನು ಕೊಟ್ಟವರು ವಿ.ಕೃ. ಗೋಕಾಕರು.**

ಗೋಪಾಲಕೃಷ್ಣ ಅಡಿಗರ ಭೂಮಿಗೀತ, ಚಂಡಮದ್ದಳೆ, ವರ್ಧಮಾನ, ಬತ್ತಲಾರದ ಗಂಗೆ ಮತ್ತು ಯು.ಆರ್.ಅನಂತಮೂರ್ತಿಯವರ ಭಾರತೀಪುರ, ಸಂಸ್ಕಾರ ಮುಂತಾದ ಕಾದಂಬರಿಗಳು, ಶಾಂತಿನಾಥ ದೇಸಾಯಿ ಅವರ ವಿಕ್ಷಿಪ್ತ, ಮುಕ್ತಿ ಯಶವಂತ ಚಿತ್ತಾಲರ ಸೆರೆ, ಪಿ. ಲಂಕೇಶ್ ಅವರ ನಿವೃತ್ತರು, ಪೂರ್ಣಚಂದ್ರ ತೇಜಸ್ವಿಯವರ ಅಬಚೂರಿನ ಪೋಸ್ಟಾಫೀಸು, ಆಲನಹಳ್ಳಿ ಕೃಷ್ಣ ಅವರ ಸಂಬಂಧ ಕೃತಿ, ಗಿರೀಶ್ ಕಾರ್ನಾಡ್ ರವರ ಹಯವದನ, ತುಘಲಕ್, ನಾಗಮಂಡಲ ಮತ್ತು ತಲೆದಂಡ ನಾಟಕಗಳು **ನವ್ಯ ಸಾಹಿತ್ಯಕ್ಕೆ ಪ್ರಮುಖ ಕೊಡುಗೆಗಳಾಗಿವೆ.** ಇವುಗಳಲ್ಲದೆ ಇನ್ನು ನೂರಾರು ಶ್ರೇಷ್ಠ ಕನ್ನಡದ ಕವಿಗಳು ಕಾದಂಬರಿಗಳು ನಾಟಕಗಳು ಮತ್ತು ಕಥೆಗಳು ಕವನಗಳನ್ನು ಬರೆಯುವ ಮುಖಾಂತರ ನವ್ಯ ಸಾಹಿತ್ಯ ಪರಂಪರೆಯನ್ನು ವಿಶಿಷ್ಟಗೊಳಿಸಿದ್ದಾರೆ.

## ಕನ್ನಡದಲ್ಲಿ ಪ್ರಗತಿಪರ ( ಪ್ರಗತಿಶೀಲ) ಸಾಹಿತ್ಯ:

ಪ್ರಗತಿಶೀಲ ಅಂದರೆ ಪ್ರಗತಿಪರ ಸಾಹಿತ್ಯವು ಸಾಮಾಜಿಕ ಕ್ರಾಂತಿಯನ್ನು ಸಾಧಿಸಬೇಕು, ಸಾಹಿತ್ಯವು ನೊಂದವರ ಧ್ವನಿಯಾಗಬೇಕು, ವಾಸ್ತವ ಬದುಕಿನ ನೈಜತೆಯ ಚಿತ್ರಣವನ್ನು ನೀಡಬೇಕು ಮತ್ತು ಬಂಡವಾಳಶಾಹಿ ವಿರುದ್ಧ ಜನರನ್ನು ಜಾಗೃತರನ್ನಾಗಿಸಬೇಕು ಹಾಗೂ ಸರ್ವಜನರ ಸಂಸ್ಕೃತಿಯ ರಕ್ಷಣೆಗಾಗಿ **ಅಂತರರಾಷ್ಟ್ರೀಯ ಮಟ್ಟದಲ್ಲಿ ಮ್ಯಾಕ್ಸಿಂ ಗಾರ್ಕಿ, ರೋಮಾರೋಲಾ,** ರಾಷ್ಟ್ರಮಟ್ಟದಲ್ಲಿ **ಇ. ಎಂ. ಫಾಸ್ಟರ್, ಮುಲ್ಕಿ ರಾಜ್ ಆನಂದ್,** ಕನ್ನಡದಲ್ಲಿ ಶ್ರೀರಂಗ, ನಿರಂಜನ, **ವಿ. ಎಂ. ಇನಾಮ್ದಾರ್, ಅ. ನ. ಕೃಷ್ಣರಾಯರು, ಕುಮಾರ ವೆಂಕಣ್ಣ, ಚದುರಂಗ, ಬಸವರಾಜ ಕಟ್ಟಿಮನಿ** ಮೊದಲಾದವರ ಪ್ರಯತ್ನದಿಂದ ಇವರೆಲ್ಲರ ನೇತೃತ್ವದಲ್ಲಿ ಪ್ರಗತಿಶೀಲ ಸಾಹಿತ್ಯ ರಚನೆಯ ಚಳುವಳಿ ಪ್ರಾರಂಭವಾಯಿತು.

VTU BSc

ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯ ಪರಂಪರೆಯ ಹಾದಿಯಲ್ಲಿ ಬಸವರಾಜ ಕಟ್ಟಿಮನಿ ಅವರಿಂದ ಗಿರಿಜಾ ಕಂಡ ಸಿನಿಮಾ, ನಿರಂಜನರ ಕೊನೆಯ ಗಿರಾಕಿ, ಚದುರಂಗರ ಶವದಮನೆ, ಉಯ್ಯಾಲೆ, ವೈಶಾಖ, ತ.ರಾ.ಸು. ಅವರಿಂದ "೦ -೦-೦" ಮತ್ತು ರಕ್ತಕ್ರಾಂತಿ, ಕಂಬನಿಯ ಕುಯಿಲು, ಪಿ ಲಂಕೇಶ್ ಅವರ ಕೋಟಿ, ಬೆಸಗರಹಳ್ಳಿ ರಾಮಣ್ಣನವರ ಗಾಂಧಿ, ಪೂರ್ಣಚಂದ್ರ ತೇಜಸ್ವಿಯವರ ತಬರನ ಕಥೆ, ವ್ಯಾಸರಾಯ ಬಲ್ಲಾಳರ ಕಾಡುಮಲ್ಲಿಗೆ ಮತ್ತು ಬಂಡಾಯ, ಮುಂದುವರೆದು ಆ.ನ.ಕೃಷ್ಣರಾಯರು ಇಂದ ಉದಯರಾಗ, ನಟಸಾರ್ವಭೌಮ, ನಗ್ನ ಸತ್ಯ, ಸಂಜೆಗತ್ತಲು **ಮೊದಲಾದ ಪ್ರಮುಖ ಕೃತಿಗಳು** ರಚಿಸಲ್ಪಟ್ಟವು.

## ಕನ್ನಡದಲ್ಲಿ ದಲಿತ - ಬಂಡಾಯ ಸಾಹಿತ್ಯ ಪರಂಪರೆ :

**ದಲಿತ ಸಾಹಿತ್ಯ:** ಕರ್ನಾಟಕದಲ್ಲಿ ದಲಿತ ಬಂಡಾಯ ಸಾಹಿತ್ಯದ ಹುಟ್ಟಿಗೆ ಆಂಧ್ರದಲ್ಲಿ ನಡೆದ ವೀರಸಂ ಚಳುವಳಿ, ಕರ್ನಾಟಕದ ಬೂಸಾ ಪ್ರಕರಣ, **ಮಹಾರಾಷ್ಟ್ರದಲ್ಲಿ ನಡೆದ ದಲಿತ್ ಪ್ಯಾಂಥರ್ಸ್ ಚಳುವಳಿ ಪ್ರಮುಖ** ಪ್ರೇರಣೆ ಗಳಾಗಿವೆ.

ಸಮಾಜದಲ್ಲಿ ತುಳಿತಕ್ಕೆ ಒಳಗಾಗಿ ನೋವುಗಳನ್ನು ಅನುಭವಿಸಿ, ಕಷ್ಟಕಾರ್ಪಣ್ಯಗಳಲ್ಲಿ ನೊಂದು-ಬೆಂದು ಬದುಕನ್ನು ಕಟ್ಟಿಕೊಂಡ, ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಬಲವಾಗಿ ಸಮಾಜದ ಮೇಲುಸ್ತರದಲ್ಲಿ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಚಿಂತಕರು ಮತ್ತು ದಾರ್ಶನಿಕರ ಬರಹದಿಂದ ಹುಟ್ಟಿಕೊಂಡ ಸಾಹಿತ್ಯ ಪರಂಪರೆ ದಲಿತ-ಬಂಡಾಯ ಸಾಹಿತ್ಯ ಪರಂಪರೆ. ಅವಮಾನದ ಅಕ್ಷರಸ್ಥ ಸಮುದಾಯಗಳು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನು ಊರುಕೇರಿ, ಪ್ರದೇಶದ ಭಾಷೆ, ತಾವು ಅನುಭವಿಸಿದ ನೋವು ನಲಿವುಗಳು, ಸಂಕಷ್ಟಗಳ ಸುರಿಮಳೆಯಿಂದ ಆಚೆ ಬರಲು ಹೆಣಗಾಡುತ್ತಿರುವ ಸನ್ನಿವೇಶಗಳ ಪ್ರಸ್ತುತಪಡಿಸುವಿಕೆಯ ರೂಪದಲ್ಲಿ ದಲಿತ ಸಾಹಿತ್ಯವು ಹುಟ್ಟಿಕೊಂಡಿತು.

**ಕನ್ನಡದಲ್ಲಿ ದಲಿತ ಸಾಹಿತ್ಯವನ್ನು ಮೊದಲು ಗುರುತಿಸುವುದು ದೇವನೂರು ಮಹಾದೇವ ಅವರು ಬರೆದ ಏಳು ಕಥೆಗಳು ದ್ಯಾವನೂರು ಸಂಕಲನದಿಂದ. ಇದು ದಲಿತ ಸಾಹಿತ್ಯಕ್ಕೆ ನಾಂದಿಯಾಯಿತು.** ನಂತರ ಸಿದ್ದಲಿಂಗಯ್ಯನವರ ಕಾವ್ಯವು ಪುರೋಹಿತಶಾಹಿ ಪಟ್ಟಭದ್ರ ವ್ಯವಸ್ಥೆಯನ್ನು ಪ್ರಶ್ನಿಸಿ ಧಿಕ್ಕರಿಸುವುದುನ್ನು ನೋಡುತ್ತೇವೆ. ದಲಿತರ ವಾಸ್ತವ ಜೀವನದ ಬರ್ಬರತೆಯನ್ನು, ಕಷ್ಟಕಾರ್ಪಣ್ಯಗಳನ್ನು, ಇದ್ದದ್ದನ್ನು ಇದ್ದ ಹಾಗೆಯೇ ಹೇಳುತ್ತಾ ಸಮಾಜದ ತುಳಿತಕ್ಕೊಳಗಾದ ವರ್ಗಗಳ ಸಾಮಾಜಿಕ ಚಿತ್ರಣವನ್ನು ದಲಿತ ಸಾಹಿತಿಗಳು ಅನಾವರಣಗೊಳಿಸಿದರು.

**ಸಿದ್ದಲಿಂಗಯ್ಯನವರ ಹೊಲೆ ಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು, ಪಂಚಮ, ಏಕಲವ್ಯ ಕೃತಿಗಳು** ಹಾಗೆಯೇ ಅರವಿಂದ ಮಾಲಗತ್ತಿರವರ ಮೂಕನಿಗೆ ಬಾಯಿ ಬಂದಾಗ,ಕಪ್ಪು ಕಾವ್ಯ ಮುಳ್ಳೂರು ನಾಗರಾಜರ ಧರಣಿ ಮಂಡಲ ಮಧ್ಯದೊಳಗೆ ಮತ್ತು ನೆಲದ ಜೋಗುಳ, ಮನಜ ಅವರ ಕೇಳು ಜಗ ಮಾದಿಗ-ಹೊಲೆಯ, ಮಾಗಿ ಹೀಗೆ ಹಲವಾರು ದಲಿತ ಸಾಹಿತಿಗಳು ಸಾಹಿತ್ಯ ರಚಿಸುವುದರ ಮುಖಾಂತರ ಪ್ರಗತಿಪರ ಸಂಘಟನೆಗಳಲ್ಲಿ ತಮ್ಮನ್ನು ಗುರುತಿಸಿಕೊಂಡು ದಲಿತ ಸಾಹಿತ್ಯ ಮತ್ತು ಸಂಸ್ಕೃತಿಯ ಪರಂಪರೆಯನ್ನು ನಾಡಿನ ಎಲ್ಲ ಜನರಿಗೆ ತಲುಪಿಸುವಂತಹ ಕಾರ್ಯವನ್ನು ಮಾಡಿರುತ್ತಾರೆ. ಮೈಸೂರಿನಲ್ಲಿ ಪ್ರಾರಂಭ ವಾದಂತಹ ಪಂಚಮ ಪತ್ರಿಕೆ ಮುಖಾಂತರ ಹಲವಾರು ಬರಹಗಾರರು ಮುಂಚೂಣಿಗೆ ಬಂದರು.

**ಬಂಡಾಯ ಸಾಹಿತ್ಯ:** ಕರ್ನಾಟಕದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಮತ್ತು ಸಮಾಜಕ್ಕೆ ಕಂಟಕವಾಗಿದ್ದ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಧ್ವನಿಯೆತ್ತಿ ಅವರು ಮಾಡುವ ಸಮಾಜವಿರೋಧಿ ಕೆಲಸಗಳು ಮತ್ತು ಚಿಂತನೆಗಳನ್ನು ವಿರೋಧಿಸುತ್ತಾ ಚಳುವಳಿಯನ್ನು ಸಂಘಟನೆಯ ಮುಖಾಂತರ ಮಾಡಿ ಮತ್ತು ಜನರನ್ನು ಜಾಗೃತಗೊಳಿಸಲು ಸಾಹಿತಿಗಳು ಸಾಹಿತ್ಯ ರಚನೆಯನ್ನು ಮಾಡಿದಂತಹ ಸಾಹಿತ್ಯವನ್ನು ಪ್ರಸ್ತುತ ಸನ್ನಿವೇಶದಲ್ಲಿ ಬಂಡಾಯ ಸಾಹಿತ್ಯ ಎಂದು ಕರೆಯಲಾಗುತ್ತದೆ. **ದಲಿತ ಮತ್ತು ಬಂಡಾಯ ಸಾಹಿತ್ಯವನ್ನು ಒಟ್ಟಾರೆಯಾಗಿ ನವ್ಯೋತ್ತರ ಸಾಹಿತ್ಯ ಎಂದು ಸಹ ಕರೆಯಲಾಗುತ್ತದೆ.** ಬಂಡಾಯ ಸಾಹಿತ್ಯವು ಆರಂಭದಲ್ಲಿ ಸಿಟ್ಟು ನೋವು ಅಪಮಾನಗಳನ್ನು ಪಟ್ಟಭದ್ರ ಹಿತಾಸಕ್ತಿಯ ವ್ಯವಸ್ಥೆಯ ವಿರುದ್ಧ ಹೊರ ಆಕ್ರೋಶವನ್ನು ಹಾಕುವ ಭಾಷೆಯಲ್ಲಿಯೇ ರೂಪಗೊಂಡಿತು. ಬಂಡಾಯ ಸಾಹಿತ್ಯವು ಜಾತಿ, ಲಿಂಗ, ವರ್ಗ, ಭಾಷಾ ಧರ್ಮ ಮೊದಲಾದ ಭೇದಗಳನ್ನು ಸಹಿಸದೆ ಒಳಿತಿಗಾಗಿ ಸಂಘರ್ಷಕ್ಕೆ ಇಳಿಯಿತು. ದಲಿತ ಬಂಡಾಯ ಚಳುವಳಿಯು ಪುರೋಹಿತಶಾಹಿ ಬಂಡವಾಳಶಾಹಿ ವಸಾಹತುಶಾಹಿ ವ್ಯವಸ್ಥೆಗಳನ್ನು ಕಿತ್ತೊಗೆಯುವ ಹೋರಾಟಕ್ಕೆ ಮುನ್ನುಡಿಯನ್ನು ಬರೆಯಿತು.

ಕಾವ್ಯ, ಕಥೆ, ಕಾದಂಬರಿ, ವಿಚಾರಗಳ ವಿಮರ್ಶೆ, ಸಾಮಾಜಿಕ ವಿಷಯಗಳ ಕುರಿತಾದ ಲೇಖನಗಳು, ಧಾರ್ಮಿಕ ಮೌಢ್ಯಗಳ ವಿರುದ್ಧ ಧ್ವನಿಯೆತ್ತಿದ ವಿಚಾರಗಳು, **ಸಮಸಮಾಜದ ನಿರ್ಮಾಣಕ್ಕೆ ಮುನ್ನುಡಿ ಆಗಬಹುದಾದ ವಿಷಯಗಳು ಎಲ್ಲಾ ಪ್ರಕಾರಗಳಲ್ಲೂ ಗಟ್ಟಿ ವಿಷಯಗಳಾಗಿ ಸಾಹಿತ್ಯ ಕೃತಿಗಳು ರಚನೆಯಾದವು. ಬಂಡಾಯ ಸಾಹಿತ್ಯವು ಹಲವಾರು ಸಾಹಿತ್ಯದ ಸಂವೇದನೆಗಳನ್ನು ಹುಟ್ಟುಹಾಕಿದೆ, ಅವುಗಳೆಂದರೆ ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಅಲ್ಪಸಂಖ್ಯಾತ ಸಂವೇದನೆ ಮತ್ತು ವಾಸ್ತವ ಬದುಕಿನಲ್ಲಿ ಎದುರಾಗುತ್ತಿರುವ ಅಸಮಾನತೆಗಳಾದ ಜಾತಿ ಧರ್ಮ ಅಸ್ಪೃಶ್ಯತೆ ಲಿಂಗ ತಾರತಮ್ಯ ಪ್ರಭುತ್ವದ ತಾರತಮ್ಯಗಳು ವರ್ಗ ಸಂಘರ್ಷಗಳನ್ನು ಕುರಿತಾದ ವಿಷಯಗಳು ಪ್ರತಿಭಟನೆಯ ರೂಪದಲ್ಲಿ ಪ್ರಕಟಗೊಂಡಿವೆ.** ಇಂತಹ ಸಾಹಿತ್ಯದ ಪ್ರಕಟಣೆಗಳು ಸಮಾಜವನ್ನು ಎಚ್ಚರಿಸುವಂತಹ ಕಾರ್ಯವನ್ನು ಮಾಡಿವೆ.

ಚಂದ್ರಶೇಖರ್ ಪಾಟೀಲ್, ರಂಜಾನ್ ದರ್ಗಾ, ಚನ್ನಣ್ಣ ವಾಲಿಕರ್, ಬಿ.ಟಿ.ಲಲಿತಾ ನಾಯಕ್, ಸಿದ್ಧಲಿಂಗಯ್ಯ, ಎಲ್ ಹನುಮಂತಯ್ಯ, ಎಸ್ ಜಿ ಸಿದ್ದರಾಮಯ್ಯ, ದೇವನೂರು ಮಹದೇವ, ಕುಂ. ವೀರಭದ್ರಪ್ಪ, ಸಾರಾ ಅಬೂಬಕರ್, ಬಾನು ಮುಷ್ತಾಕ್, ಮಳ್ಳೂರು ನಾಗರಾಜ್, ಎಚ್ ಎಸ್ ಶಿವಪ್ರಕಾಶ್ ಮತ್ತು ಇನ್ನೂ ಅನೇಕ ಶ್ರೇಷ್ಠ ಬರಹಗಾರರು ಮತ್ತು ಸಾಹಿತಿಗಳನ್ನು ಬಂಡಾಯ ಸಾಹಿತ್ಯ

VTU BSc ಸಾಹಿತ್ಯ ಸಿಂಚನ 21KSS27 Draft copy

ಪ್ರಕಾರದಲ್ಲಿ ನೋಡಬಹುದು. ಬೋಳೆವಾರ ಅವರ ದೇವರುಗಳ ರಾಜ್ಯದಲ್ಲಿ ಅಂಕ, ಆಕಾಶಕ್ಕೆ ನೀಲಿ ಪರದೆ, ಕಾಳೇಗೌಡ ನಾಗವಾರ ಅವರ ಕನ್ಯೆಯ ಸ್ನೇಹ, ಬೆಟ್ಟಸಾಲು ಮಳೆ, ಅರವಿಂದ ಅವರಿಂದ ರಚಿಸಲ್ಪಟ್ಟ ಕಾರ್ಯ, ಗೌರ್ಮೆಂಟ್ ಬ್ರಾಹ್ಮಣ, ರಾಜಶೇಖರ ನೀರಮಾನ್ವಿ ಅವರ ಕರ್ಪೂರದ ಕಾಯದಲ್ಲಿ ಮತ್ತು ಚದುರಂಗರವರ ವೈಶಾಖ, ಸಿದ್ದಲಿಂಗಯ್ಯನವರ ಹೊಲೆ ಮಾದಿಗರ ಹಾಡು ಮತ್ತು ಸಾವಿರಾರು ನದಿಗಳು, ಎಸ್ ಜೆ ಸಿದ್ದರಾಮಯ್ಯನವರ ಗಾಲ್ಫ್ ಹುಬ್ಬಿನ ಮೇಲೆ, ರಹಮತ್ ತರೀಕೆರೆ ಅವರಿಂದ ರಚಿಸಲ್ಪಟ್ಟ ಪ್ರತಿಸಂಸ್ಕೃತಿ, ಮರದೊಳಗಣ ಕಿಚ್ಚು, ಬರಗೂರು ರಾಮಚಂದ್ರಪ್ಪ ಅವರ ಬಂಡಾಯ ಸಾಹಿತ್ಯ ಮೀಮಾಂಸೆ ಸಂಸ್ಕೃತಿ - ಉಪಸಂಸ್ಕೃತಿ ಮೊದಲಾದ ಕೃತಿಗಳು ಶ್ರೇಷ್ಠ ಕೃತಿಗಳಾಗಿ ಹೊರಹೊಮ್ಮಿವೆ. ಇದೇ ನಿಟ್ಟಿನಲ್ಲಿ ಇನ್ನು ಹಲವಾರು ಶ್ರೇಷ್ಠ ಸಾಹಿತ್ಯ ರಚನೆಗಳು ಪ್ರಕಟಗೊಂಡಿದ್ದು ಬಂಡಾಯ ಸಾಹಿತ್ಯದ ಮೂಲ ಉದ್ದೇಶದ ಸ್ಥಾಪನೆಗೆ ಕಾರಣೀಭೂತವಾಗಿವೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

1. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಮುಖವಾಗಿ ಎಷ್ಟು ವಿಭಾಗಗಳಾಗಿ ವಿಭಾಗಿಸುತ್ತೆವೆ?

    1. 3
    2. 4
    3. 8
    4. 2

2. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಮೊದಲ ಭಾಗವನ್ನು ನವೋದಯ ಎಂದು ಕರೆದವರು ಯಾರು?

    1. ಕುವೆಂಪು
    2. ದ ರಾ ಬೇಂದ್ರೆ
    3. ಗೋಪಾಲಕೃಷ್ಣ ಅಡಿಗರು
    4. ವಿ ಕೃ ಗೋಕಾಕ್

3. ಶ್ರೀ ರಾಮಾಯಣ ದರ್ಶನಂ ಈ ಕೃತಿಯ ಕರ್ತೃ ಯಾರು?

    1. ಗೋವಿಂದ ಪೈ
    2. ಬಿಎಂ ಶ್ರೀಕಂಠಯ್ಯ
    3. ಕುವೆಂಪು

4. ಬಸವಪ್ಪ ಶಾಸ್ತ್ರಿ

4. ಕರ್ನಾಟಕದ ದಲಿತ ಬಂಡಾಯ ಸಾಹಿತ್ಯದ ಹುಟ್ಟಿಗೆ ಕಾರಣವಾದ ಮಹಾರಾಷ್ಟ್ರದಲ್ಲಿ ನಡೆದ ಪ್ರಮುಖ ಚಳುವಳಿ ಯಾವುದು?

1. ರಾಮಮನೋಹರ ಲೋಹಿಯಾ ಚಳುವಳಿ
2. ದಲಿತ ಪ್ಯಾಂಥರ್ಸ್ ಚಳುವಳಿ
3. ವೀರಸಂ ವಳಿ
4. ಸ್ವತಂತ್ರ ಚಳುವಳಿ

5. ಕರ್ನಾಟಕದಲ್ಲಿ ದಲಿತ ಸಾಹಿತ್ಯ ಚಳುವಳಿಗೆ ಮೂಲ ಪ್ರೇರಣೆ ಯಾವುದು?

1. ದೇವನೂರು ಮಹಾದೇವರವರ ದ್ಯಾವನೂರು ಸಂಕಲನ
2. ಸಿದ್ದಲಿಂಗಯ್ಯನವರ ಊರುಕೇರಿ
3. ಅರವಿಂದ ಮಾಲಗತ್ತಿ ರವರ ಮೂಕನಿಗೆ ಬಾಯಿ ಬಂದಾಗ
4. ಮುಳ್ಳೂರು ನಾಗರಾಜರವರ ಧರಣಿ ಮಂಡಲ ಮಧ್ಯದೊಳಗೆ

6. ಮ್ಯಾಕ್ಸಿಂ ಗಾರ್ಕಿ, ಮುಲ್ಕಿ ರಾಜ್ ಆನಂದ್ ಮತ್ತು ಇ ಎಂ ಫಾಸ್ಟರ್ ಇವರುಗಳು ಯಾರು?

1. ಕನ್ನಡದ ನವೋದಯ ಸಾಹಿತ್ಯಕ್ಕೆ ಪ್ರೇರಣೆಯಾದ ಸಾಹಿತಿಗಳು
2. ಕನ್ನಡದ ನವ್ಯ ಸಾಹಿತ್ಯಕ್ಕೆ ಪ್ರೇರಣೆಯಾದ ಸಾಹಿತಿಗಳು
3. ಕನ್ನಡದ ದಲಿತ ಬಂಡಾಯ ಸಾಹಿತ್ಯಕ್ಕೆ ಪ್ರೇರಣೆಯಾದ ಸಾಹಿತಿಗಳು
4. ಕನ್ನಡದ ಪ್ರಗತಿಪರ ಸಾಹಿತ್ಯಕ್ಕೆ ಪ್ರೇರಣೆಯಾದ ಸಾಹಿತಿಗಳು

7 ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ ಕಾಲದ ಸಾಹಿತ್ಯವನ್ನು ಏನೆಂದು ಕರೆಯಲಾಗುತ್ತದೆ?

1. ಭಾವಗೀತೆಗಳ ಯುಗ
2. ಜಾನಪದ ಗೀತೆಗಳು
3. ಪ್ರಗತಿಪರ ಚಿಂತನೆಗಳ ಯುಗ
4. ನಾಡು-ನುಡಿ-ಸಂಸ್ಕೃತಿಯ ಚಿಂತನೆಗಳ ಯುಗ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

VTU BSc ಸಾಹಿತ್ಯ ಸಿಂಚನ 21KSS27 Draft Copy

1 ಆಧುನಿಕ ಕನ್ನಡ ಸಾಹಿತ್ಯದ ನಾಲ್ಕು ವಿಭಾಗಗಳನ್ನು ಹೆಸರಿಸಿ?

2. ನವೋದಯ ಕಾವ್ಯದ ಪ್ರಮುಖ ಲಕ್ಷಣಗಳನ್ನು ಹೆಸರಿಸಿ ?

3. ಕನ್ನಡದ ಪ್ರಮುಖ ನವ್ಯ ಕಾವ್ಯಪರಂಪರೆಯ ಲೇಖಕರುಗಳ ಹೆಸರುಗಳನ್ನು ಬರೆಯಿರಿ?

4 ಕನ್ನಡದ ಪ್ರಮುಖ ಪ್ರಗತಿಶೀಲ ಸಾಹಿತ್ಯ ಪರಂಪರೆಯ ಲೇಖಕರು ಗಳನ್ನು ಬರೆಯಿರಿ ?

5. ಕನ್ನಡದಲ್ಲಿ ದಲಿತ-ಬಂಡಾಯ ಸಾಹಿತ್ಯ ಪರಂಪರೆಯ ವೈಶಿಷ್ಟತೆ ಏನು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿವರವಾಗಿ ಬರೆಯಿರಿ.

2. ದಲಿತ ಬಂಡಾಯ ಮತ್ತು ಪ್ರಗತಿಶೀಲ ಸಾಹಿತ್ಯದ ಕೊಡುಗೆಗಳನ್ನು ವಿವರಿಸಿ.

3. ಬಿಎಂಶ್ರೀ ರವರು ಬರೆದಿರುವ ಕರುಣಾಳು ಬಾ ಬೆಳಕೆ ಕಾವ್ಯ ಭಾಗದ ಅರ್ಥವನ್ನು ಬರೆಯಿರಿ..

4. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ವೈಶಿಷ್ಟ್ಯತೆಯನ್ನು ಕುರಿತು ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಭಾಗ : 2.2

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಪರಿಚಯ :

### ಕುವೆಂಪು:

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಕನ್ನಡದ ಅಗ್ರಮಾನ್ಯ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮತ್ತು ಚಿಂತಕರಾಗಿದ್ದರು. ಇಪ್ಪತ್ತನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ವರಕವಿ ಬೇಂದ್ರೆಯವರಿಂದ **'ಯುಗದ ಕವಿ ಜಗದ ಕವಿ'** ಎನಿಸಿಕೊಂಡವರು. ವಿಶ್ವಮಾನವ ಸಂದೇಶ ನೀಡಿದವರು. ಕನ್ನಡದ ಎರಡನೆಯ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಸರ್ಕಾರ ಕೊಡಮಾಡುವ 'ಕರ್ನಾಟಕ ರತ್ನ' ಪ್ರಶಸ್ತಿ ಹಾಗೂ 'ಪಂಪ' ಪ್ರಶಸ್ತಿಗಳನ್ನು ಮೊದಲ ಬಾರಿಗೆ ಪಡೆದವರು.

"ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವಾದ ರಾಮಾಯಣವನ್ನು ಆಧರಿಸಿ ಕುವೆಂಪುರವರು ರಚಿಸಿದ ಆಧುನಿಕ ಕನ್ನಡ ಸಾಹಿತ್ಯದ ಮೇರು ಕೃತಿಯಾಗಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ೧೯೬೮ ರಲ್ಲಿ 'ಜ್ಞಾನಪೀಠ ಪ್ರಶಸ್ತಿ'ಯನ್ನು ಕುವೆಂಪುರವರಿಗೆ ತಂದೊದಗಿಸಿದೆ. ಆಧುನಿಕ ಕನ್ನಡ ಸಾಹಿತ್ಯದ ಮಹೋನ್ನತ ಕೃತಿ. ಮಹಾಕಾವ್ಯಗಳ ರಚನೆಯ ಯುಗ ಮುಗಿದೇ ಹೋಯಿತು ಎನ್ನುವಾಗಲೇ ಸೃಷ್ಟಿಯಾದ ಆಧುನಿಕ ಮಹಾಕಾವ್ಯ. ವಾಲ್ಮೀಕಿಯ ಕಥಾ ಹಂದರದ ಮೇಲೆ ಸರ್ವೋದಯ ಸಮನ್ವಯ ತತ್ವಗಳನ್ನು ಪ್ರತಿಪಾದಿಸಿ ರಚಿತವಾದ ಈ ಕೃತಿ ಕುವೆಂಪು ಸೃಜಿಸಿದ ಮಹಾಕೃತಿಯೂ ಹೌದು. 'ಬಹಿರ್ಘಟನೆಯಂ ಪ್ರತಿಕೃತಿಸುವ ಲೌಕಿಕ ಚರಿತ್ರೆ ಮಾತ್ರವಲ್ಲದೆ, ಅಲೌಕಿಕ ನಿತ್ಯ ಸತ್ಯಂಗಳಂ ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನವೂ ಹೌದು. ಹಳೆಯ ಕಥೆ ಹೊಸ ಯುಗಧರ್ಮವನ್ನು ಮೈಗೂಡಿಸಿಕೊಂಡು, ಎಷ್ಟರಮಟ್ಟಿಗೆ ಹೊಸದಾಗಬಹುದು ಎಂಬುದಕ್ಕೆ ಈ ಮಹಾಕಾವ್ಯ ಉಜ್ವಲ ಉದಾಹರಣೆಯಾಗಿದೆ. **ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್' 'ಪ್ಯಾರಡೈಸ್ ರಿಗೇನ್ಡ್' ಆದ ಮೇಲೆ ಯಾವ ಭಾಷೆಯಲ್ಲೇ ಆಗಲಿ ಈ ಪ್ರಮಾಣದ ಒಂದು ಮಹಾಕಾವ್ಯ ಬಂದದ್ದನ್ನು ಕಾಣೆ -ಎಂದು ರಾಷ್ಟ್ರಕವಿ** ಗೋವಿಂದ ಪೈ ಅವರು ಹೇಳಿದ್ದಾರೆ.

### ದ.ರಾ.ಬೇಂದ್ರೆ:

**"ಕುಣಿಯೋಣು ಬಾರಾ ಕುಣಿಯೋಣು ಬಾ", "ಇಳಿದು ಬಾ ತಾಯಿ ಇಳಿದು ಬಾ", "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು",** ಎಂದು ಆರಂಭವಾಗುವ ಕವಿತೆಗಳನ್ನು ಕೇಳದ ಕನ್ನಡಿಗನಿಲ್ಲ. ಉತ್ಸಾಹದ ಚಿಲುಮೆಯನ್ನುಕ್ಕಿಸಬಲ್ಲ, ನೊಂದ ಜೀವಕ್ಕೆ ಸಾಂತ್ವನ ನೀಡಬಲ್ಲ, ಪ್ರೀತಿ ಪ್ರೇಮಗಳನ್ನು ಮೂಡಿಸಬಲ್ಲ ಕವಿತೆಗಳನ್ನು ರಚಿಸಿಕೊಟ್ಟ ವರಕವಿ ಬೇಂದ್ರೆ. **ರಸವೆ ಜನನ, ವಿರಸವೆ ಮರಣ, ಸಮರಸವೆ ಜೀವನ** ಎಂದು ಜೀವನವನ್ನು ಕುರಿತು ಪರಿಣಾಮಕಾರಿಯಾಗಿ ಹೇಳಿದ ಧೀಮಂತ ಕವಿ. ಬೇಂದ್ರೆ. ಕನ್ನಡ ಸಾಹಿತ್ಯದ ನವೋದಯ ಕಾಲ ಘಟ್ಟದ ಪ್ರಮುಖ ಕವಿಯಾದ ದ.ರಾ.ಬೇಂದ್ರೆ ಅವರನ್ನು ಕನ್ನಡದ ವರಕವಿ ಮತ್ತು **ಕರ್ನಾಟಕ ಕವಿ ಕುಲ ತಿಲಕ** ಎಂಬ ಬಿರುದುಗಳಿಂದ ಗುರುತಿಸಲಾಗುತ್ತದೆ. ದಾರ್ಶನಿಕತೆ ಎಂಬುದು ಕವಿ ಬೇಂದ್ರೆಯವರ ಸಾಹಿತ್ಯದ ವೈಶಿಷ್ಟ್ಯತೆಯಾಗಿದೆ. **ಧಾರವಾಡದಲ್ಲಿ ಗೆಳೆಯರ ಗುಂಪು** ಎಂಬ ಸ್ನೇಹಿತರುಗಳ ಸಹಕಾರ ಮತ್ತು ಪ್ರೀತಿ ಸೌಹಾರ್ದತೆಯಿಂದ ಸ್ಥಾಪಿತವಾದ ಸಂಘ ಸಂಸ್ಥೆ ಇದಾಗಿತ್ತು. ಇಂತಹ ಸಂಸ್ಥೆಯಲ್ಲಿ ಹಲವಾರು ಪ್ರತಿಷ್ಠಿತ ಸಾಹಿತ್ಯ ಪ್ರೇಮಿಗಳು ಇದರ ಸದಸ್ಯರುಗಳಾಗಿದ್ದರು. ಇಂತಹ ಎಲ್ಲಾ ಸ್ನೇಹಿತರುಗಳು ದಿನದ ನಿಯಮಿತವಾದ ಸಮಯದಲ್ಲಿ ಒಂದು ಕಡೆ ಕುಳಿತುಕೊಂಡು ಸಾಹಿತ್ಯ ಸಾಮಾಜಿಕ ಮತ್ತು ಸಾಂಸ್ಕೃತಿಕ, ಜೀವನ ಮೌಲ್ಯಗಳು ಆದರ್ಶ ಸಮಾಜ ಮೊದಲಾದ ವಿಷಯಗಳನ್ನು ಚರ್ಚಿಸುತ್ತಿದ್ದರು. ಇಂತಹ ವಿಷಯಗಳ ಚರ್ಚೆಯಲ್ಲಿ ಕೊನೆಯಲ್ಲಿ ಒಂದು ತೀರ್ಮಾನಕ್ಕೆ ಬರುತ್ತಿದ್ದರು. ನಂತರ ಅದನ್ನು ಲೇಖನ ರೂಪದಲ್ಲಿ ಪ್ರಕಟ ಗೊಳಿಸುತ್ತಿದ್ದರು ಅದಕ್ಕೆ ಹೆಸರನ್ನು ಗೆಳೆಯರ ಬಳಗ ಎಂದು ಕೊಡುತ್ತಿದ್ದರು. ಜೀವನ ಮೌಲ್ಯಗಳನ್ನು ಬದುಕಿನ ವಿವಿಧ ಮಜಲುಗಳನ್ನು ಶಬ್ದಗಳಲ್ಲಿ ಸೆರೆಹಿಡಿದು ಸಾಹಿತ್ಯದ ರೂಪವನ್ನು ಕೊಟ್ಟು ಸಾಮಾನ್ಯನಿಗೂ ಅರ್ಥವಾಗುವಂತೆ ಸಾಹಿತ್ಯವನ್ನು ಪರಿಚಯಿಸಿದ ಶಬ್ದಗಾರುಡಿಗ ಅಂಬಿಕಾತನಯದತ್ತ ಎಂದು ಪ್ರತಿಯೊಬ್ಬರಿಗೂ ಕನ್ನಡ ಸಾಹಿತ್ಯಲೋಕದಲ್ಲಿ ಚಿರಪರಿಚಿತರಾಗಿದ್ದಾರೆ. ಸಂಪೂರ್ಣ ಉತ್ತರ ಕರ್ನಾಟಕದ ಭಾಷೆ ಸಾಹಿತ್ಯ ಸಂಸ್ಕೃತಿ ಜೀವನ ವಿಧಾನ ನಾಡಿನ ಮೌಲ್ಯಗಳನ್ನು ಮತ್ತು ಬದುಕಿನ ಕಷ್ಟಕಾರ್ಪಣ್ಯಗಳ ವಿವಿಧ ಮಜಲುಗಳನ್ನು ಬೇಂದ್ರೆಯವರ ಸಾಹಿತ್ಯದಲ್ಲಿ ಕಾಣುತ್ತೇವೆ. ನೋವು-ನಲಿವುಗಳನ್ನು, ಸುಖ ದುಃಖಗಳನ್ನು ಸಮಪ್ರಮಾಣದಲ್ಲಿ ಕಂಡು ಎಲ್ಲರಿಗೂ ಅರ್ಥೈಸಿದ ಶಬ್ದಗಾರುಡಿಗ ಮತ್ತು ಬದುಕಿನ ಮೌಲ್ಯಗಳ ದಾರ್ಶನಿಕ ಬೇಂದ್ರೆ ಅವರಾಗಿದ್ದಾರೆ.

## ಶಿವರಾಮ ಕಾರಂತ:

**ಶಿವರಾಮ ಕಾರಂತ - "ಕಡಲತೀರದ ಭಾರ್ಗವ", "ನಡೆದಾಡುವ ವಿಶ್ವಕೋಶ"** ಎಂದೇ ಖ್ಯಾತರಾಗಿದ್ದ ಕನ್ನಡ ಸಾಹಿತ್ಯ-ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರ. ಆಡುಮುಟ್ಟದ ಸೊಪ್ಪಿಲ್ಲ ಎಂದು ಕನ್ನಡ ನಾಡಿನಲ್ಲಿ ಹೆಸರಾದ ಮಹತ್ತರದ ಸಾಹಿತಿ ಇವರು. ಆದ್ದರಿಂದಾಗಿಯೇ ಕಾರಂತರು ಬರೆಯದ ಸಾಹಿತ್ಯ ಪ್ರಕಾರವೇ ಇಲ್ಲವೆನ್ನಲಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿಲ್ಲದಿದ್ದರೂ, ಅವರ ಸಾಹಿತ್ಯ ಪರಿಶ್ರಮ ಅಪಾರವಾದುದು. ಜ್ಞಾನಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರ, ಎಂಟು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ಗಳನ್ನಿತ್ತು ಪುರಸ್ಕರಿಸಿವೆ. ಒಂದು ಶತಮಾನಕ್ಕೆ ನಾಲ್ಕು ವರ್ಷಗಳಷ್ಟೇ ಕಮ್ಮಿಯಾಗಿ ಬಾಳಿ, ತಮ್ಮ ಜೀವಿತಾವಧಿಯಲ್ಲಿ ಸುಮಾರು ೪೨೭ ಪುಸ್ತಕಗಳನ್ನು ರಚಿಸಿದರು. ಅವುಗಳಲ್ಲಿ

ಕಾದಂಬರಿಗಳು ೪೭. ತಮ್ಮ ೯೬ನೆಯ ವಯಸ್ಸಿನಲ್ಲೂ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು, ಇದು ವಿಶ್ವ ದಾಖಲೆಗೆ ಅರ್ಹವಾಗಿರುವ ಒಂದು ಸಾಧನೆ ಎನ್ನಬಹುದು. ಸಾಹಿತಿಯಾಗಿ ಶಿವರಾಮ ಕಾರಂತರು ಪ್ರಸಿದ್ಧಿಯಾಗಿರುವಂತೆ, ಇತರ ಕ್ಷೇತ್ರಗಳಲ್ಲೂ ಅಪಾರ ಸಾಧನೆ ಮಾಡಿದವರು. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸಿ, ಅದರಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು, ಬ್ಯಾಲೆಯಲ್ಲೂ ಗಂಭೀರ ಪ್ರಯೋಗ ಮತ್ತು ಪ್ರಯತ್ನ ಮಾಡಿದ್ದರು.

ಇವರ ಚಿಂತನೆಗಳನ್ನು ಗಮನಿಸಿದಾಗ ಪ್ರಮುಖವಾಗಿ ಕಂಡು ಬರುವುದು: ನಾನು ದೇವರನ್ನು ನಂಬುವುದಿಲ್ಲ. ಏಕೆಂದರೆ ನಾನು ನೋಡಿಲ್ಲ. ನನಗೆ ಯಾವುದು ಗೊತ್ತಿಲ್ಲವೋ ಅದನ್ನು ನಂಬುವುದಿಲ್ಲ. ರಾಮಕೃಷ್ಣ ಪರಮಹಂಸರು ನಂಬಿದ್ದರು. ಅದನ್ನು ತಪಸ್ಸಿನಿಂದ ಕಂಡುಕೊಂಡರು. ನನಗೆ ರಾಮ ಎಂದರೆ ರಾಜಾ ರವಿವರ್ಮ ಅವರ ಚಿತ್ರ. ಕೃಷ್ಣ ಎಂದರೆ ಗುಬ್ಬಿ ವೀರಣ್ಣನವರ ಕೃಷ್ಣಲೀಲಾ ನೆನಪಿಗೆ ಬರುತ್ತದೆ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾವು ನಂಬಿ ಬಂದಿದ್ದೇವೆ. ಆದರೆ ಆ ರೀತಿ ಆಗಿಲ್ಲ. ನನಗೆ ಅನುಕೂಲವಾದಾಗ ಮಾತ್ರ ದೇವರನ್ನು ನಂಬುತ್ತೇನೆ ಎಂಬುದು ಸರಿಯಲ್ಲ ಎಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುತ್ತಿದ್ದರು. ಇವರ **ಮೂಕಜ್ಜಿಯ ಕನಸುಗಳು ಎಂಬ ಕಾದಂಬರಿಗೆ 1977 ರಲ್ಲಿ ಜ್ಞಾನಪೀಠ** ಪ್ರಶಸ್ತಿ ಲಭಿಸಿತು.

## ಮಾಸ್ತಿ ವೆಂಕಟೇಶ ಅಯ್ಯಂಗಾರರು:

**ಮಾಸ್ತಿ ವೆಂಕಟೇಶ ಅಯ್ಯಂಗಾರರು** ಕನ್ನಡದ ಒಬ್ಬ ಅಪ್ರತಿಮ ಲೇಖಕರು. ಕನ್ನಡ ಸಾಹಿತ್ಯ ಲೋಕದಲ್ಲಿ ಮಾಸ್ತಿ ಎಂದೇ ಖ್ಯಾತರಾಗಿರುವರು. ಇವರು ಶ್ರೀನಿವಾಸ್ ಎಂಬ ಕಾವ್ಯನಾಮದಡಿಯಲ್ಲಿ ಬರೆಯುತ್ತಿದ್ದರು.ಮಾಸ್ತಿ ಕನ್ನಡದ ಆಸ್ತಿ ಎಂದು ಪ್ರಖ್ಯಾತಿ ಹೊಂದಿದರು.ಇವರನ್ನು ಸಣ್ಣ ಕಥೆಗಳ ಅಜ್ಜ / ಕನ್ನಡದ ಸಣ್ಣ ಕಥೆಗಳ ಜನಕ ಎಂದು ಪ್ರಸಿದ್ಧರಾಗಿದ್ದಾರೆ. ಮಾಸ್ತಿ ಕನ್ನಡದ ಆಸ್ತಿ ಎಂದು ಕೂಡ ಜನಪ್ರಿಯರಾಗಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಸಿವಿಲ್ ಸರ್ವಿಸ್ ಅಧಿಕಾರಿಯಾಗಿದ್ದವರು ಅಸಿಸ್ಟೆಂಟ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಗಳಾಗಿ ರಾಜ್ಯಾದ್ಯಂತ ಸೇವೆ ಸಲ್ಲಿಸಿ ಸಾಹಿತ್ಯವನ್ನು ಸೃಷ್ಟಿ ಮಾಡಿದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ರಚಿಸಿದ ಚಿಕವೀರರಾಜೇಂದ್ರ( ಕೊಡಗಿನ ರಾಜಕೀಯ ಇತಿಹಾಸದ ದುರ ವ್ಯವಸ್ಥೆಯ ಚಿತ್ರಣವನ್ನು ಇದರಲ್ಲಿ ಕಾಣಬಹುದು) ಒಂದು ಪ್ರಮುಖ ಕೃತಿಯಾಗಿದೆ. ಇದಕ್ಕೆ **1983 ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ರಂಗನ ಮದುವೆ ಮತ್ತು ಚನ್ನಬಸವನಾಯಕ ಎಂಬ ಐತಿಹಾಸಿಕ ಕಾದಂಬರಿಗಳನ್ನು ಸಹ ಬರೆದಿದ್ದಾರೆ.**

## ವಿನಾಯಕ ಕೃಷ್ಣ ಗೋಕಾಕ್:

ಕನ್ನಡಕ್ಕೆ ಐದನೆಯ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ವಿನಾಯಕ ಕೃಷ್ಣ ಗೋಕಾಕರು ಕನ್ನಡದ ಪ್ರತಿಭಾವಂತ ಕವಿ, ಪಂಡಿತರಾಗಿದ್ದರು. ಕನ್ನಡ-ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಅವರು ಗೋಕಾಕರು ಇದಕ್ಕೂ ಮೊದಲು ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಶತಮಾನದ ಕನ್ನಡ ಲೇಖಕರಲ್ಲಿ ಅಗ್ರಗಣ್ಯರಾಗಿರುವ ವಿ.ಕೃ. ಗೋಕಾಕರು

ಇಂಗ್ಲೀಷಿನಲ್ಲಿ ಅವರು ಬರೆದಿರುವ ಕೃತಿಗಳ ಸಂಖ್ಯೆ ಮೂವತ್ತಕ್ಕೂ ಹೆಚ್ಚು. ಅವರ ಮೊದಲ ಪ್ರಕಟಿತ ಕೃತಿ "ಕಲೋಪಾಸಕರು". ಅವರು ಇಂಗ್ಲೆಂಡಿಗೆ ಸಮುದ್ರದ ಮೂಲಕ ಹೋಗಿ ಬಂದ ಅನುಭವಗಳನ್ನು ಆಧರಿಸಿ ರಚಿಸಿದ "ಸಮುದ್ರ ಗೀತೆಗಳು", "ಸಮುದ್ರದಾಚೆಯಿಂದ"- ಇವು ಮಹತ್ವದ ಕೃತಿಗಳಾಗಿವೆ. ಸಮುದ್ರ ಗೀತೆಗಳು ಕವನ ಸಂಕಲನದಲ್ಲಿರುವ ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು ಎಂಬ ಸಾಲು ತುಂಬ ಪ್ರಸಿದ್ಧವಾಗಿದೆ. **ಭಾರತ ಸಿಂಧು ರಶ್ಮಿ - ವಿನಾಯಕರು ರಚಿಸಿದ ಮಹಾಕಾವ್ಯ. ಹನ್ನೆರಡು ಖಂಡಗಳು, ಮೂವತ್ತೈದು ಸಾವಿರ ಸಾಲುಗಳ ಈ ಮಹಾಕಾವ್ಯ ಋಗ್ವೇದ ಕಾಲದ ಜನಜೀವನವನ್ನು ಕುರಿತದ್ದು. ವಿಶ್ವಾಮಿತ್ರ ಈ ಕಾವ್ಯದ ನಾಯಕ.(ಈ ಕಾವ್ಯಕ್ಕೆ ವಿನಾಯಕ ಕೃಷ್ಣ ಗೋಕಾಕ ರವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.)**

ಸಾಹಿತ್ಯ ಲೋಕದಲ್ಲಿ ಜನಪ್ರಿಯರಾಗಿದ್ದ ಗೋಕಾಕರಿಗೆ ಶ್ರೀಸಾಮಾನ್ಯರ, ಅನಕ್ಷರಸ್ಥರ ವಲಯದಲ್ಲೂ ಜನಪ್ರಿಯರಾಗುವ ಒಂದು ಸುಯೋಗ ಒದಗಿ ಬಂತು. ಕರ್ನಾಟಕ ಸರ್ಕಾರ ೧೯೮೦ ರಲ್ಲಿ ಪ್ರೌಢಶಾಲಾ ವ್ಯಾಸಂಗದಲ್ಲಿ ಭಾಷೆಗಳ ಸ್ಥಾನಮಾನ ಕುರಿತು ವರದಿ ನೀಡಲು ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಈ ಸಮಿತಿ ನೀಡಿದ ವರದಿ ಕನ್ನಡದ ಪರವಾಗಿತ್ತು. ಕನ್ನಡ ಜನತೆ ಮೊದಲ ಬಾರಿಗೆ ಒಕ್ಕೊರಲಿನಿಂದ ಗೋಕಾಕ್ ವರದಿ ಜಾರಿಗೆ ಬರಲಿ ಎಂದು ಸರ್ಕಾರವನ್ನು ಒತ್ತಾಯಿಸಿತು. ಈ ಸಂದರ್ಭದಲ್ಲಿ ನಡೆದ ಕನ್ನಡ ಚಳವಳಿ ಒಂದು ಐತಿಹಾಸಿಕ ದಾಖಲೆಯಾಗಿದೆ. ಕರ್ನಾಟಕದಲ್ಲಿ ಈ ಪ್ರಮಾಣದ ಚಳವಳಿ ಹಿಂದೆಂದೂ ನಡೆದಿರಲಿಲ್ಲ. ಸ್ವಾತಂತ್ರ್ಯ ಹೋರಾಟವಾಗಲೀ, ಕರ್ನಾಟಕ ಏಕೀಕರಣ ಚಳವಳಿಯಾಗಲೀ ಕರ್ನಾಟಕದಲ್ಲಿ ಈ ಪ್ರಮಾಣದಲ್ಲಿ ನಡೆದಿರಲಿಲ್ಲ ಎಂದು ಇತಿಹಾಸಕಾರರು ಹೇಳುತ್ತಾರೆ. ಇದು ಇತಿಹಾಸದಲ್ಲಿ **"ಗೋಕಾಕ್ ಚಳವಳಿ"** ಎಂದೇ ದಾಖಲಾಗಿದೆ. ಈಗ ಇದರ ಫಲವಾಗಿ ಕರ್ನಾಟಕದ ಕನ್ನಡೇತರ ಶಾಲೆಗಳಲ್ಲೂ ಮೂರನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೂ ಒಂದು ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಓದಬೇಕಾಗಿದೆ. ಗೋಕಾಕ್ ಚಳವಳಿ ಕನ್ನಡಿಗರಲ್ಲಿ ಎಚ್ಚರವನ್ನು ಮೂಡಿಸಿದೆ.

## ಯು.ಆರ್.ಅನಂತಮೂರ್ತಿ:

ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರು. ಅವರು ಚಿಂತಕರೂ ವಿಮರ್ಶಕರೂ ಆಗಿ ಪ್ರಸಿದ್ಧರಾಗಿದ್ದವರು. ಇವರನ್ನು ನವ ಚಳುವಳಿಯ ಪ್ರವರ್ತಕರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಇವರ ಸಮಗ್ರ ಸಾಹಿತ್ಯಕ್ಕಾಗಿ ೧೯೯೪ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದರು ,ಕನ್ನಡ ಭಾಷೆಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡಿರುವ ಆರನೇ ಬರಹಗಾರರಾಗಿದ್ದಾರೆ.ಮ್ಯಾನ್ ಬುಕರ್ ಪ್ರಶಸ್ತಿಗೆ ನಾಮನಿರ್ದೇಶಗೊಂಡ ೧೦ ಸಾಹಿತಿಗಳಲ್ಲಿ ಒಬ್ಬರು.**(ಮ್ಯಾನ್-ಬೂಕರ್ ಪ್ರಶಸ್ತಿ** ಇದು ಕಾಮನ್ವೆಲ್ತ್ ರಾಷ್ಟ್ರಗಳ ಅಥವಾ ಐರ್ಲ್ಯಾಂಡ್ ದೇಶದ ನಾಗರಿಕರು ಆಂಗ್ಲ ಭಾಷೆಯಲ್ಲಿ ಬರೆದಿರುವ ದೊಡ್ಡ ಗಾತ್ರದ ಕಾದಂಬರಿಗೆ ಕೊಡಮಾಡುವ ಪ್ರಶಸ್ತಿ. ಇದನ್ನು ಬೂಕರ್ ಪ್ರಶಸ್ತಿಯೆಂತಲೂ ಕರೆಯುತ್ತಾರೆ.). ಕನ್ನಡ ನಾಡು -ನುಡಿ, ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಪದ್ಮಭೂಷಣ ಡಾ.ಯು.ಆರ್.ಅನಂತಮೂರ್ತಿಯವರ ಕೊಡುಗೆ ಅನನ್ಯವಾದುದು. ಸೃಜನಶೀಲ ಚಿಂತಕರು ಎಂದು ಹೆಸರು ಪಡೆದಿರುವವರು

ಡಾ. ಯು. ಆರ್. ಅನಂತಮೂರ್ತಿಗಳು. ತಮ್ಮ ಕೃತಿಗಳ ಮೂಲಕ ನಮ್ಮನ್ನು ನಾವೇ ಒಳಹೊಕ್ಕು ನೋಡುವಂತೆ ಮಾಡುವ, ಸಮಕಾಲೀನ ವಾಸ್ತವ ದ್ವಂದ್ವಗಳಿಗೆ ನಮ್ಮನ್ನು ಕೈಹಿಡಿದು ಕರೆದೊಯ್ಯುವ ಸಂಗಾತಿಯಾಗುತ್ತಾರೆ. ಏಕಕಾಲದಲ್ಲಿ ಒಳಗಿನವರಂತೆ ಆಪ್ತವಾಗಿಯೂ, ಹೊರಗಿನವರಂತೆ ವಿಶ್ಲೇಷಣಾತ್ಮಕ ಸಮಕಾಲೀನ ಸಮಸ್ಯೆಗಳ ಬಗ್ಗೆ ಚಿಂತಿಸುವವರಾಗಿಯೂ ಮೂಡುವ ಅನಂತಮೂರ್ತಿ ಕನ್ನಡಸಂಸ್ಕೃತಿ ಕಂಡ ವಿಶಿಷ್ಟ ಪ್ರತಿಭೆ.

**'ಸಂಸ್ಕಾರ'** ಸನಾತನ ಪರಂಪರೆಯ ಪರಿಕಲ್ಪನೆಯನ್ನು ಸಮಕಾಲೀನಗೊಳಿಸುವ ಒಂದು ಕಾದಂಬರಿ. ಬ್ರಾಹ್ಮಣ್ಯವನ್ನು ಧಿಕ್ಕರಿಸಿದ ಬ್ರಾಹ್ಮಣನೊಬ್ಬನ ಸಾವು, ಆತನ ಶವಸಂಸ್ಕಾರದ ಸಮಸ್ಯೆ ಕಾದಂಬರಿಯ ಕೇಂದ್ರ. ನಂತರ ಅನಂತಮೂರ್ತಿಯವರು 'ಭಾರತೀಪುರ', 'ಅವಸ್ಥೆ' ಹಾಗೂ 'ಭವ' ಕಾದಂಬರಿಗಳನ್ನು ಬರೆದಿದ್ದಾರೆ. ಭಾರತೀಪುರ ಕಾದಂಬರಿ - 'ಒಬ್ಬ ಭಾರತೀಯ ಸೋಷಲಿಸ್ಟ್ ಸುಧಾರಕನ ಕಥೆ. ಆಧುನಿಕ ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದ ಇಂಡಿಯಾದ ತರುಣನೊಬ್ಬನ ತಲ್ಲಣಗಳ ಕಥೆ. ಅವಸ್ಥೆ - 'ಹಿಂದುಳಿದ ಜಾತಿಗಳಿಂದ ಮೇಲೆದ್ದು ಬಂದ ಉತ್ಸಾಹೀ ಪ್ರಾಮಾಣಿಕ ರಾಜಕೀಯ ನಾಯಕನೊಬ್ಬನು ಭ್ರಷ್ಟ ರಾಜಕಾರಣದ ಬಲೆಯಲ್ಲಿ ಸಿಲುಕಿ ಸೋಲುವ ಕಥೆ; ರೈತ ಚಳುವಳಿಯ ರಾಜಕಾರಣದ ಸೋಲಿನ ಕಥೆ.' ಹೀಗೆ ಅನಂತಮೂರ್ತಿಯವರ ಕಾದಂಬರಿಗಳು ಸಮಕಾಲೀನ ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಸೃಜನಶೀಲ ನೆಲೆಯನ್ನು ಚರ್ಚಿಸ ಬಯಸುವ ಮಹತ್ವದ ಪ್ರಯತ್ನಗಳಾಗಿ ಕಾಣಿಸುತ್ತವೆ.

## ಗಿರೀಶ್ ಕಾರ್ನಾಡ್:

**ಗಿರೀಶ್ ಕಾರ್ನಾಡ್** ಭಾರತದ ನಾಟಕಕಾರರು, ಲೇಖಕರು, ರಂಗಕರ್ಮಿ, ಸಿನಿಮಾನಟ,ನಿರ್ದೇಶಕ, ಚಿಂತಕ ಹಾಗೂ ಹೋರಾಟಗಾರರು. ಕತೆ, ವಿಮರ್ಶೆ ಮತ್ತು ತಮ್ಮ ಆತ್ಮಕತೆ 'ಆಡಾಡತ ಆಯುಷ್ಯ'ಗಳನ್ನು ವಿರಳವಾಗಿ ಬರೆದಿದ್ದಾರಾದರೂ ಕನ್ನಡ ಸಾಹಿತ್ಯದಲ್ಲಿ ನಾಟಕ ಕ್ಷೇತ್ರದ ಸಾಹಿತಿ ಎಂದು ಕರೆಯಲ್ಪಡುವ ಗಿರೀಶ್ ಕಾರ್ನಾಡ್, ಕನ್ನಡದಲ್ಲಿ ನಾಟಕ ರಚಿಸುತ್ತಾ ಇತರ ಭಾರತೀಯ ಭಾಷೆಗಳೊಡನೆ ಸಂಪರ್ಕವನ್ನಿಟ್ಟುಕೊಂಡು ನಟರಾಗಿ, ನಿರ್ದೇಶಕರಾಗಿ, ಸಾಂಸ್ಕೃತಿಕ ವಕ್ತಾರರಾಗಿ ಕೆಲಸ ಮಾಡಿದವರು.ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅವರು ತಮ್ಮ ಸಾಹಿತ್ಯ ಮತ್ತು ಇತರ ಕೃತಿಗಳನ್ನು ರಚಿಸಿದ್ದಾರೆ. ವಿದೇಶದಲ್ಲಿದ್ದಾಗಲೇ ಕನ್ನಡ ನಾಟಕಗಳನ್ನು ಬರೆದು ಇಲ್ಲಿಗೆ ಬಂದು ಹೊಸ ನಾಟಕಗಳ ಓದು, ಪ್ರದರ್ಶನಕ್ಕೆ ದಾರಿ ಮಾಡಿಕೊಂಡರು. ಇವರು ಕನ್ನಡವಲ್ಲದೆ ಹಿಂದಿ, ಪಂಜಾಬಿ, ಮರಾಠಿ ಹಾಗೂ ಭಾರತೀಯ ಹಲವು ಭಾಷೆಗಳಿಗೆ ತಮ್ಮ ನಾಟಕಗಳು ಅನುವಾದಗೊಂಡು, ಪ್ರದರ್ಶನಗೊಂಡವು. ಇಂಗ್ಲೆಂಡಿಗೆ ತೆರಳುವ ಮೊದಲೆ ಗಿರೀಶ ಕಾರ್ನಾಡರ ಮೊದಲ ಸಾಹಿತ್ಯ ಕೃತಿ **ಯಯಾತಿ** ನಾಟಕ ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟವಾಯಿತು. ಇಂಗ್ಲೆಂಡಿನಿಂದ ಮರಳಿದ ಬಳಿಕ **ತುಘಲಕ್** ಹಾಗೂ **ಹಯವದನ** ಪ್ರಕಟವಾದವು. ಈ ನಡುವೆ ಪುಣೆ ಫಿಲ್ಮ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕರಾಗಿದ್ದು, ಮತ್ತೆ ಅದನ್ನು ಬಿಟ್ಟು ಮುಂಬಯಿಗೆ ಬಂದ ಕಾರ್ನಾಡರು ಕೆಲವು ಚಲನಚಿತ್ರಗಳಲ್ಲಿ ನಟಿಸಿದರು. ರಚಿತವಾದ ಅವರ ನಾಟಕಗಳು-**ಅಂಜು ಮಲ್ಲಿಗೆ**,

**ನಾಗಮಂಡಲ**, **ತಲೆದಂಡ** ಹಾಗೂ **ಅಗ್ನಿ ಮತ್ತು ಮಳೆ**. ಇಬ್ಬರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಾದಂಬರಿಗಳನ್ನು ಕುವೆಂಪುರವರ ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಯು ಆರ್ ಅನಂತಮೂರ್ತಿಯವರ ಸಂಸ್ಕಾರ ಸಿನಿಮಾ ಮಾಡಿದ ಏಕೈಕ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೆಂಬ ಗೌರವಕ್ಕೆ ಕಾರ್ನಾಡರು ಪಾತ್ರರಾಗಿದ್ದಾರೆ. ಒಂದು ಸಮಸ್ಯೆಯನ್ನು ನಾಟಕ ರೂಪಕ್ಕೆ ಒಗ್ಗಿಸಿಕೊಂಡು ಅದಕ್ಕೊಂದು ಕಲ್ಪನೆ ಕೊಟ್ಟು ಜನರ ಮುಂದಿಡುವುದರಲ್ಲೇ ನಾಟಕಕಾರನ ಸೋಲು ಗೆಲುವು ಎರಡೂ ಅಡಗಿದೆ." ಎಂದು ಕಾರ್ನಾಡರ ಹೇಳುತ್ತಾರೆ.

'ತಲೆದಂಡ' ಕಾರ್ನಾಡರ ಮಹತ್ವದ ಕೃತಿಗಳಲ್ಲೊಂದು. ಜನಸಾಮಾನ್ಯರು, ವಿಶೇಷವಾಗಿ ಭಕ್ತರು, ತಾವು ಆರಾಧಿಸುವ ವ್ಯಕ್ತಿಯೊಬ್ಬನ ಕೆಲವು ಮಹತ್ವದ ಕೆಲಸಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾದಾಗ ಅದನ್ನು ಪವಾಡಗಳೆಂದು ಕರೆದು ಬಿಡುವುದನ್ನು 12ನೆಯ ಶತಮಾನವಲ್ಲದೆ 21ನೆಯ ಶತಮಾನದಲ್ಲೂ ಕಾಣಬಹುದಾಗಿದೆ. ಕಾರ್ನಾಡರು ತಮ್ಮ ಮನಸ್ಸನ್ನು ನಾಟಕ ರಚನೆಯಲ್ಲಿ ನೆಟ್ಟು ತಮ್ಮ ದೇಹವನ್ನು ಚಲನಚಿತ್ರದಲ್ಲಿ ತೊಡಗಿಸಿಕೊಂಡವರು.

## ಚಂದ್ರಶೇಖರ ಕಂಬಾರ:

ಕನ್ನಡ ಸಾಹಿತ್ಯ, ಸಿನಿಮಾ, ರಂಗಭೂಮಿ, ಸಂಗೀತ, ಜಾನಪದ, ಅಧ್ಯಾಪನ, ಆಡಳಿತ ಹೀಗೆ ವಿವಿಧಮುಖೀ ವಿದ್ವಾಂಸರಾದ **ಚಂದ್ರಶೇಖರ ಕಂಬಾರರು ಗೋಕಾಕ ಮತ್ತು ಬೆಳಗಾವಿಯ ಬ್ರಿಟಿಷರ ಭಯದ ನೆರಳು ಆವರಿಸಿದ್ದ ಪರಿಸರದಿಂದ ಲೇಖಕನಾಗಿ ಕಾಣಿಸಿಕೊಳ್ಳುತ್ತಾರೆ.** ಇವರ ಬಾಲ್ಯದ ವಸಾಹತು ಸಂದರ್ಭದ ಅನುಭವಗಳನ್ನು 'ನನ್ನ ಬದುಕು-ಬರಹ' ಎಂಬ ಲೇಖನದಲ್ಲಿ ಅವರೇ ಸೂಚಿಸಿದ್ದಾರೆ. ಅಂಥ ವಸಾಹತು ಸಂದರ್ಭದ ಸಂವೇದನೆಯುಳ್ಳ ಕಂಬಾರರು ಕನ್ನಡದ ಮಹತ್ವದ ಕವಿಗಳು. ಸುಮಾರು ಇಪ್ಪತ್ತೈದು ನಾಟಕಗಳು, ಹತ್ತಕ್ಕೂ ಹೆಚ್ಚು ಕವನ ಸಂಕಲನಗಳು, ಮೂರು ಕಾದಂಬರಿಗಳು, ಹತ್ತಕ್ಕೂ ಹೆಚ್ಚು ಜಾನಪದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಮೂರು ಸಾವಿರ ಪುಟಗಳಿಗೂ ಅಧಿಕವಾದ 'ಕನ್ನಡ ಜಾನಪದ ವಿಶ್ವಕೋಶ'ವನ್ನು ಸಂಪಾದಿಸಿದ್ದಾರೆ. ಕಂಬಾರರ 'ಜೋಕುಮಾರಸ್ವಾಮಿ' ಭಾರತದ ಅತ್ಯುತ್ತಮ ನಾಟಕವೆಂದು 'ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಪಡೆದಿದೆ. ಇವರಿಗೆ ಸಾಹಿತ್ಯದ ಮೇರುಪ್ರಶಸ್ತಿಯಾದ 'ಜ್ಞಾನಪೀಠ' ಪ್ರಶಸ್ತಿಯೂ ಸಂದಿದೆ. 'ಹೇಳತೇನ ಕೇಳ'ದಲ್ಲಿ ಅತ್ಯಂತ ಅಮೂರ್ತವಾದ ವಸಾಹತು ಸಂಸ್ಕೃತಿ ತಂದ ಸಂಕೀರ್ಣವಾದ ಬದುಕಿನ ನೋವುಗಳನ್ನು ವ್ಯಕ್ತಪಡಿಸಲು ಕಂಬಾರರು ಗಟ್ಟಿದನಿಯಲ್ಲಿ ಹಾಡುವ ಜಾನಪದ ಲಾವಣಿಯ ಮಾಧ್ಯಮವನ್ನು ಅಭಿವ್ಯಕ್ತಿಗೆ ಶೋಧಿಸಿಕೊಂಡಿರುವುದು ಕವಿತೆ ಹೊರಡಿಸುವ ಒಟ್ಟು ಧ್ವನಿ ಪರಂಪರೆಗೆ ಅನನ್ಯತೆಯನ್ನು ಒದಗಿಸಿಕೊಟ್ಟಿದೆ

ಆಧುನಿಕ ನಾಗರೀಕ ಪ್ರಪಂಚವು ಗ್ರಾಮದ ಸಹಜತೆಗಳನ್ನು ಇಲ್ಲವಾಗಿಸುವ ಹಾಗೂ ಹಳ್ಳಿಯ ಅನನ್ಯತೆಗಳ ಮೇಲೆ ಸವಾರಿ ಮಾಡುವ ಪ್ರಕ್ರಿಯೆಗಳನ್ನು ಕಂಬಾರರು 'ಕರಿಮಾಯಿ' ಕಾದಂಬರಿಯಲ್ಲಿ ಮುಖಾಮುಖಿಯಾಗಿಸಿದ್ದಾರೆ. ನಾಗರೀಕ ಪ್ರಪಂಚದ ಬಗೆಗಿನ ಆಕರ್ಷಣೆಗಳ ಮತ್ತು ಗ್ರಾಮದ ನೈಜತೆಗಳ ಮುಖಾಮುಖಿಯಿಂದ ಎದುರಾಗುವ ದ್ವಂದ್ವಗಳ ಪುರಾಣದಂತೆ 'ಕರಿಮಾಯಿ' ಕಾದಂಬರಿ ಕಾಣುತ್ತದೆ. ಈ

ಬಗೆಯ ದ್ವಂದ್ವಗಳು 'ಹುಲಿಯ ನೆರಳು'. 'ನಾಯಿಕತೆ', 'ಋಷ್ಯಶೃಂಗ' ನಾಟಕಗಳಲ್ಲಿ ಹಾಗೂ ಅವರ ಅನೇಕ ಕವಿತೆಗಳಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಮೈದಾಳುವ ಕ್ರಮವು ವಿಶಿಷ್ಟವಾಗಿದೆ. ಹೊಸ ಸಂಸ್ಕೃತಿಯೊಂದು ದೇಸೀ ಸಂಸ್ಕೃತಿಯ ಮೇಲೆ ನಡೆಸಿದ ಅನೈತಿಕ ದಾಳಿಯಿಂದ ದೇಸೀ ಪರಿಸರ ಬರಡಾಗುವ ಬಗೆಯನ್ನು ಕಂಬಾರರ ಕಾವ್ಯ ಚಿಂತನೆಗೆ ಗುರಿಪಡಿಸುತ್ತದೆ. ಪಶ್ಚಿಮ ಸಂಸ್ಕೃತಿಯ ಸಹವಾಸದ ಫಲವಾಗಿ ಬದುಕಿನ ಎಲ್ಲ ಮಟ್ಟದ ಸಂದರ್ಭಗಳಲ್ಲಿ ಉಂಟಾದ ಅಧಃಪತನಗಳನ್ನು ಕಂಬಾರರು ಕಾವ್ಯ ವಿಶ್ಲೇಷಣೆಗೆ ಗುರಿಪಡಿಸುತ್ತಾರೆ. ಅಂಥ ವಿಶ್ಲೇಷಣೆ 'ಸಾವಿರದ ನೆರಳು', 'ಬೆಳ್ಳಿಮೀನು', 'ಅಕ್ಕಕ್ಕು ಹಾಡುಗಳ್' ಕವನ ಸಂಕಲನಗಳಲ್ಲಿ ಬೆಳೆಯುತ್ತದೆ. ನವೋದಯ ಕಾವ್ಯದ ಅನಂತರದ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಕಂಬಾರರದು ವಿಶಿಷ್ಟ ಅಭಿವ್ಯಕ್ತಿಯಾಗಿದೆ. ಸ್ಥಳೀಯತೆಯ ಸತ್ವಗಳನ್ನು ಕೇಂದ್ರಪ್ರಜ್ಞೆಯನ್ನಾಗಿಸಿಕೊಂಡ ಅವರ ಕೃತಿ ಸಮೂಹ ಸ್ವಾತಂತ್ರ್ಯಾ ನಂತರದ ನೆಲೆಯಲ್ಲಿ ನಿಂತು ವಸಾಹತುಶಾಹಿಯ ಪ್ರಭಾವ ಪರಿಣಾಮಗಳು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಬೇರೂರಿದ ನೆಲೆಗಳನ್ನು ಮುಖ್ಯಭಿತ್ತಿಯನ್ನಾಗಿಸಿಕೊಂಡು ವಿವೇಚಿಸಿತು. ಅವರ ಸಾಹಿತ್ಯ ವಸಾಹತು ಹಾಗೂ ವಸಾಹತು ಆಳ್ವಿಕೆಯ ಅನಂತರದ ಸಂಕೀರ್ಣತೆಯ ಸಂದರ್ಭಗಳನ್ನು ಗಂಭೀರವಾಗಿ ಜಿಜ್ಞಾಸೆಗೆ ಒಳಪಡಿಸುವ ಅಭಿವ್ಯಕ್ತಿಯಾಗಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

### ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. "**ಯುಗದ ಕವಿ - ಜಗದ ಕವಿ**" ಎಂದು ಬಿರುದಾಂಕಿತ ಕನ್ನಡದ ಶ್ರೇಷ್ಠ ಕವಿ ಯಾರು?
    1. ಬಿ ಎಂ ಶ್ರೀಕಂಠಯ್ಯ
    2. ಆದಿಕವಿ ಪಂಪ
    3. ಕುಮಾರವ್ಯಾಸ
    4. ರಾಷ್ಟ್ರಕವಿ ಕುವೆಂಪು
2. "**ರಸವೆ ಜನನ, ವಿರಸವೇ ಮರಣ ಮತ್ತು ಸಮರಸವೇ ಜೀವನ**" ಎಂದು ಜೀವನ ಸತ್ವವನ್ನು ಸಾರಿದ ಕವಿ ಯಾರು?
    1. ಹರಿಹರ
    2. ಪುರಂದರದಾಸರು
    3. ಅಂಬಿಕಾತನಯದತ್ತ
    4. ಮಾಸ್ತಿ ವೆಂಕಟೇಶ ಅಯ್ಯಂಗಾರ್
3. ಕನ್ನಡದ ಶ್ರೇಷ್ಠ "**ಕಡಲ ತೀರ ಭಾರ್ಗವ**" ಮತ್ತು "**ನಡೆದಾಡುವ ವಿಶ್ವಕೋಶ**" ಎಂದು ಪ್ರಖ್ಯಾತ ಸಾಹಿತಿ ಯಾರು?
    1. ಶಿವರಾಮ ಕಾರಂತರು

2. ಮಾಸ್ತಿ ವೆಂಕಟೇಶ ಅಯ್ಯಂಗಾರ್
3. ಪೂರ್ಣಚಂದ್ರ ತೇಜಸ್ವಿ
4. ರಾಷ್ಟ್ರಕವಿ ಗೋವಿಂದ ಪೈ

4. **ಚಿಕ್ಕವೀರರಾಜೇಂದ್ರ** ಎಂಬ ಕೊಡಗಿನ ರಾಜಕೀಯ ಇತಿಹಾಸವನ್ನು ಕುರಿತಾದ ಕೃತಿಯ ಕರ್ತೃ ಯಾರು?

1. ಕೃಷ್ಣರಾಜ ಒಡೆಯರು
2. ಯು ಆರ್ ಅನಂತಮೂರ್ತಿ
3. ಮಾಸ್ತಿ ವೆಂಕಟೇಶ ಅಯ್ಯಂಗಾರ್
4. ಗಿರೀಶ್ ಕಾರ್ನಾಡ್

5. ಕನ್ನಡ ಭಾಷೆಯ ಉಳುವಿಗಾಗಿ ಮತ್ತು ಬೆಳವಣಿಗೆಗೆ ಪೂರಕವಾದ ಸ್ಥಾನಮಾನ ಕುರಿತಾದ ಶ್ರೇಷ್ಠ ವರದಿಯನ್ನು ನೀಡಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿ ಯಾರು?

1. ಯು ಆರ್ ಅನಂತಮೂರ್ತಿ
2. ಚಂದ್ರಶೇಖರ ಕಂಬಾರ
3. ವಿ ಕೃ ಗೋಕಾಕ್
4. ಗೋಪಾಲಕೃಷ್ಣ ಅಡಿಗರು

6. ಸಂಸ್ಕಾರ ಮತ್ತು ಭಾರತೀಪುರ ಕಾದಂಬರಿಗಳ ಕರ್ತೃ ಯಾರು?

1. ಗಿರೀಶ್ ಕಾರ್ನಾಡ್
2. ಆ ನ ಕೃಷ್ಣರಾಯರು
3. ಯು ಆರ್ ಅನಂತಮೂರ್ತಿ
4. ದತ್ತಾತ್ರೇಯ ರಾಮಚಂದ್ರ ಬೇಂದ್ರೆ

7. ಒಂದು ಸಮಸ್ಯೆಯನ್ನು ನಾಟಕ ರೂಪಕ್ಕೆ ಒಗ್ಗಿಸಿಕೊಂಡು ಅದಕ್ಕೊಂದು ಕಲ್ಪನೆ ಕೊಟ್ಟು ಜನರ ಮುಂದಿಡುವುದರಲ್ಲೇ ನಾಟಕಕಾರನ ಸೋಲು ಗೆಲುವು ಎರಡೂ ಅಡಗಿದೆ." ಎಂದು ಹೇಳಿದ ಜ್ಞಾನಪೀಠ ಪುರಸ್ಕೃತ ನಾಟಕಕಾರ ಯಾರು?

1. ರಾಷ್ಟ್ರ ಕುವೆಂಪು
2. ಶಿವರಾಮ ಕಾರಂತರು
3. ಚಂದ್ರಶೇಖರ ಕಂಬಾರರು
4. ಗಿರೀಶ್ ಕಾರ್ನಾಡ್

8. ಜೋಕುಮಾರಸ್ವಾಮಿ ಕೃತಿಯ ಕರ್ತೃ ಯಾರು ?

1. ರಾಷ್ಟ್ರ ಕುವೆಂಪು
2. ಶಿವರಾಮ ಕಾರಂತರು
3. ಚಂದ್ರಶೇಖರ ಕಂಬಾರರು
4. ಗಿರೀಶ್ ಕಾರ್ನಾಡ್

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1 ಯಾವ ಕಾರಣದಿಂದಾಗಿ ಶ್ರೀರಾಮಾಯಣದರ್ಶನಂ ಒಂದು ಶ್ರೇಷ್ಠ ಕೃತಿಯಾಗಿದೆ?

2. ದರಾ ಬೇಂದ್ರೆಯವರ ಗೆಳೆಯರ ಗುಂಪು ಇದರ ವಿಶೇಷತೆಯನ್ನು ತಿಳಿಸಿರಿ ?

3. ಶಿವರಾಮಕಾರಂತರು ಯಕ್ಷಗಾನದ ಉಳಿವಿಗೆ ನಡೆಸಿದ ಪ್ರಯತ್ನ ಯಾವುದು?

4 ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಇತರ ಕೃತಿಗಳನ್ನು ತಿಳಿಸಿರಿ ?

5. ವಿ ಕೃ ಗೋಕಾಕ್ ರವರು ಗೋಕಾಕ್ ವರದಿಯ ಯಾವ ಉದ್ದೇಶಕ್ಕೆ ಸಲ್ಲಿಸಿದರು?

6. ಮ್ಯಾನ್ ಬೂಕರ್ ಪ್ರಶಸ್ತಿ ( ಬೂಕರ್ ಪ್ರಶಸ್ತಿ) ಇದನ್ನು ಯಾರಿಗೆ ಕೊಡಲಾಗುತ್ತದೆ?

7 ಗಿರೀಶ್ ಕಾರ್ನಾಡ್ ರವರ ಇತರ ಪ್ರಮುಖ ನಾಟಕಗಳನ್ನು ಹೆಸರಿಸಿ ?

8. ಚಂದ್ರಶೇಖರ ಕಂಬಾರ ಅವರು ಯಾವ ಕಾರಣದಿಂದಾಗಿ ಪ್ರಮುಖ ಲೇಖಕರಾಗಿ ಹೊರಹೊಮ್ಮುತ್ತಾರೆ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

1. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕುವೆಂಪು ಮತ್ತು ಬೇಂದ್ರೆ ರವರು ಯಾವ ಕಾರಣಗಳಿಂದಾಗಿ ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತಾರೆ ?.

2. ಶಿವರಾಮ ಕಾರಂತರ ಸಾಹಿತ್ಯವು ಹೇಗೆ ವಿಶಿಷ್ಟಪೂರ್ಣ ಸಾಹಿತ್ಯವಾಗಿದೆ ಎಂಬುದನ್ನು ವಿವರಿಸಿ.

3. ಚಂದ್ರಶೇಖರ್ ಕಂಬಾರ ರವರ ಸಾಹಿತ್ಯವು ಹೇಗೆ ಆಧುನಿಕ ಜೀವನ ಶೈಲಿ ಮತ್ತು ಆಧುನಿಕ ತಲ್ಲಣಗಳ ವಿಶ್ಲೇಷಣೆಯಾಗಿದೆ ಎಂಬುದನ್ನು ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 Draft

# ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳು ಮತ್ತು ಸಾಹಿತ್ಯ

## ಭಾಗ : 2.3

### (ಪ್ರಮುಖ ಪಂಥದ/ಪ್ರಕಾರಗಳ ಸಾಹಿತಿಗಳು – ಮಾಹಿತಿಗಾಗಿ)

### ಬಿ. ಎಂ. ಶ್ರೀ.:

ಬಿ.ಎಂ. ಶ್ರೀಕಂಠಯ್ಯನವರು 'ಶ್ರೀ' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿದ್ದಾರೆ. ವಿದ್ಯಾರ್ಥಿಗಳಿಗಾಗಿ ಬರೆದ **ಹ್ಯಾಂಡ್ಬುಕ್ ಆಫ್ ರಿಟಾನಿಕ್** ಒಂದು ಪ್ರಮುಖ ಕೃತಿಯಾಗಿದೆ. ತದನಂತರ ಬರೆದ 'ಇಂಗ್ಲೀಷ್ ಗೀತೆಗಳು' ಕೃತಿಯು ಅತ್ಯಂತ ಜನಪ್ರಿಯ ಕೃತಿಯಾಗಿದ್ದು ಆಂಗ್ಲ ಉಡುಪನ್ನು ಧರಿಸಿದ್ದರು ಕನ್ನಡದ ಸೊಬಗನ್ನು ಬಿಟ್ಟುಕೊಟ್ಟಿಲ್ಲ. ಪ್ರಮುಖ ನಾಟಕವಾದ 'ಗದಾಯುದ್ಧ ನಾಟಕಂ' ರನ್ನನ ಕಾವ್ಯದ ರೂಪಾಂತರವಾಗಿದೆ. ಇವರು ಬರೆದ **ರುದ್ರನಾಟಕವಾದ 'ಅಶ್ವತ್ಥಾಮನ್' ನಾಟಕವು ಸೋಫೋಕ್ಲಿಸ್ ನ ಏಜಾಕ್ಸ್ ನಾಟಕದ ಆಧಾರದಿಂದ ರೂಪಗೊಂಡಿದೆ.** ಮತ್ತೊಂದು ನಾಟಕ **'ಪಾರಸಿಕರು' ಈಸ್ಕಿಲಸ್ ನಾಟಕದ ಆಧಾರದಿಂದ** ಭಾಷಾಂತರವಾಗಿದೆ. 'ಹೊಸಗನ್ನಡ ಕವಿತೆಗಳ ಜನಕ' ಎಂದು ಬಿ.ಎಂ.ಶ್ರೀ. ಅವರನ್ನು ಗುರುತಿಸಲಾಗುತ್ತದೆ. **'ಕನ್ನಡದ ಕಣ್ವ'** ಎಂದು ಕರೆಯಲಾಗುವ **ಇವರನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ 'ರಾಜಸೇವಾಸಕ್ತ' ಎಂಬ** ಬಿರುದನ್ನು ನೀಡಿದ್ದಾರೆ. ಇವರಿಗೆ ಶಿಷ್ಯಂದಿರು ನೀಡಿದ ಅಭಿನಂದನಾ ಗ್ರಂಥ ಸಂಭಾವನೆಯೂ ಕನ್ನಡದ ಮೊದಲ ಅಭಿನಂದನಾ ಗ್ರಂಥವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ನವೋದಯ ಕನ್ನಡ ಸಾಹಿತ್ಯದ ಆಚಾರ್ಯ ಪುರುಷರೆಂದು ಪ್ರಸಿದ್ಧರಾಗಿದ್ದಾರೆ.

### ಗೋವಿಂದ ಪೈ:

ಕನ್ನಡದ ಮೊದಲ ರಾಷ್ಟ್ರಕವಿ ಎಂದು ಕರೆಯಲ್ಪಡುವ ಗೋವಿಂದ ಪೈ ಅವರು ಬಹುಭಾಷಾ ಪರಿಚಿತರು 25ಕ್ಕೂ ಹೆಚ್ಚು ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಹೊಂದಿದ್ದವರು ಹೊಸಗನ್ನಡ ಕವಿತೆಗಳಿಗೆ ಮಾದರಿ ಬರಹಗಾರರಾಗಿದ್ದಾರೆ. **ಪ್ರಾಸವನ್ನು ಬಿಟ್ಟು ಹೊಸಗನ್ನಡದ ಪದ್ಯ ರಚನೆಗೆ ದಾರಿ ತೋರಿಸಿದವರು.** ಇವರ ಗಿಳಿವಿಂಡು, ನಂದಾದೀಪ, ಹರಯದ ರಂಗ, ನೀಳ್ಗವನಗಳು, ಗೊಲ್ಗಥಾ ಮತ್ತು ವೈಶಾಖ ಪ್ರಮುಖ ಕವನ ಸಂಕಲನಗಳಾಗಿವೆ. **ಇವರ ಹೆಬ್ಬೆರಳು ನಾಟಕ ಏಕಲವ್ಯನ ಕುರಿತಾದ ಏಕಾಂಕ ನಾಟಕವಾಗಿದೆ.** ಚಿತ್ರಭಾನು ನಾಟಕವು 1942 ರ

ಚಳುವಳಿಯನ್ನು ಕುರಿತಾದ ನಾಟಕವಾಗಿದೆ. **ತಾಯಿ ನಾಟಕವು ಒಂದು ಸಾಮಾಜಿಕ ನಾಟಕವಾಗಿದೆ** . ಅಚ್ಚಗನ್ನಡದಲ್ಲಿ ಸಾಹಿತ್ಯವನ್ನು ರಚಿಸಿದ ಶ್ರೇಷ್ಠರಾಗಿದ್ದಾರೆ ಹೊಸಪದಗಳನ್ನು ಸೃಷ್ಟಿಸಿದ್ದಾರೆ.

## ಪ್ರಮುಖವಾಗಿ ಕಂಡುಬರುವ ಸಾಹಿತಿಗಳ ವಿವರಗಳು:

**ಪಂಜೆ ಮಂಗೇಶರಾಯರಿಂದ - ಟಿ.ಎಸ್. ವೆಂಕಣ್ಣಯ್ಯನವರವರೆಗೆ**

ಪಂಜೆ ಮಂಗೇಶರಾಯರು ಬರೆದಿರುವ **ಮಕ್ಕಳ ಕವಿತೆಗಳು** ಇಂದಿಗೂ ಪ್ರಸಿದ್ಧವಾಗಿವೆ. ಹಟ್ಟಿಯಂಗಡಿ ನಾರಾಯಣರಾಯರು ಇಂಗ್ಲೀಷ್ ನಿಂದ ಕನ್ನಡಕ್ಕೆ ಕವಿತೆಗಳನ್ನು ಭಾಷಾಂತರದ ಮುಖಾಂತರ ರಚಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಧಾರವಾಡ ಜಿಲ್ಲೆಯ ಶಾಂತಕವಿ ಬೇಡಲು ಬಂದಿಹನು ಕನ್ನಡ ದಾಸಯ್ಯ ಎಂಬ ಹಾಡನ್ನು ರಚಿಸುವುದರ ಮುಖಾಂತರ **ಕನ್ನಡ ದಾಸಯ್ಯ** ಎಂಬ ಹೆಸರಿನಿಂದ ಖ್ಯಾತರಾಗಿದ್ದಾರೆ. ಕನ್ನಡದ ಮೊದಲ ಕಾದಂಬರಿಕಾರರೆಂದು ಗುರುತಿಸಲ್ಪಡುವುದು ಗುಲ್ವಾಡಿ ವೆಂಕಟರಾವ್ ಅವರು, ಇವರು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು, ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. 1898ರಲ್ಲಿ ಇವರಿಂದ ರಚಿತವಾದ '**ಇಂದಿರಾಬಾಯಿ' ಅಥವಾ 'ಸದ್ಧರ್ಮ ವಿಜಯ'ವು ಕನ್ನಡದ ಮೊದಲ ಕಾದಂಬರಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ಎಂ ಎಸ್ ಪುಟ್ಟಣ್ಣ ಇವರು ಮಾಡಿದ್ದುಣ್ಣೋ ಮಹಾರಾಯ ಹಾಗೂ ಮುಸುಕು ತೆಗೆಹೇ ಮಾಯಾಂಗನೆ ಎಂಬ ಪ್ರಮುಖ ಕಾದಂಬರಿಗಳನ್ನು ರಚಿಸಿದ್ದಾರೆ.** ನೀತಿ ಚಿಂತಾಮಣಿ ಇವರ ಪ್ರಮುಖ ಕೃತಿಯಾಗಿದೆ. ಮಂಡ್ಯದ ಬಿಂಡಿಗನವಿಲೆ ಯ ಬಿ ವೆಂಕಟಾಚಾರ್ಯರು ಬಂಗಾಳದ ಈಶ್ವರಚಂದ್ರ ವಿದ್ಯಾಸಾಗರ ಇವರಿಂದ ಬಂಗಾಳಿ ಭಾಷೆಯನ್ನು ಕಲಿತು ಸುಮಾರು ಎಂಬತ್ತಕ್ಕೂ ಹೆಚ್ಚು ಬಂಗಾಳಿ ಕಾದಂಬರಿಗಳನ್ನು ಕನ್ನಡ ಭಾಷೆಗೆ ಭಾಷಾಂತರಿಸಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಗಳಗನಾಥರು ಪ್ರಬುದ್ಧ ಪದ್ಮನಯನೆ, ಕುಮುದಿನಿ, ಬಾಲಕ್ಕೆ ಬಡಿದಾಟ, ಭಗವತಿ ಕಾತ್ಯಾಯಿನಿ ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ಊರುರೂಗಳನ್ನು ತಿರುಗಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡಿದ ಕನ್ನಡದ ಹಿರಿಯ ಕವಿ ಇವರಾಗಿದ್ದಾರೆ. **ಎ. ಆರ್. ಕೃಷ್ಣಶಾಸ್ತ್ರಿ ಅವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಿಘಂಟುವಿನ ಪ್ರಥಮ ಸಂಪಾದಕರಾಗಿದ್ದು** ಅದಕ್ಕೆ ಒಂದು ಖಚಿತ ರೂಪವನ್ನು ತಂದುಕೊಟ್ಟಿದ್ದಾರೆ. **ಟಿ ಎಸ್ ವೆಂಕಣ್ಣಯ್ಯ ಮತ್ತು ಎ ಆರ್ ಕೃಷ್ಣಶಾಸ್ತ್ರಿ ಇವರುಗಳನ್ನು ಕನ್ನಡದ ಅಶ್ವಿನಿ ದೇವತೆಗಳು** ಎಂದು ಕರೆಯಲಾಗುತ್ತದೆ. ರಾಷ್ಟ್ರಕವಿ ಕುವೆಂಪುರವರ ಪ್ರಮುಖ ಗುರುಗಳಾಗಿದ್ದವರು ಟಿ ಎಸ್ ವೆಂಕಣ್ಣಯ್ಯನವರು. ಇವರನ್ನು **ಕನ್ನಡದ ಪ್ರಥಮ ಕನ್ನಡ ಪ್ರಾಧ್ಯಾಪಕರು** ಎಂದು ಕರೆಯಲಾಗುತ್ತದೆ. ಸೌಜನ್ಯ ಮೂರ್ತಿಯಾಗಿದ್ದ ವೆಂಕಣ್ಣಯ್ಯನವರು ಸದಾ ಕೊಡುಗೈ ದಾನಿಯಾಗಿದ್ದುರು. ನೊಂದವರಿಗೆ ಆಸರೆಯನ್ನು ನೀಡುತ್ತಿದ್ದರು. ಇವರು ಬರೆದಿರುವುದಕ್ಕಿಂತ ಬರೆಯುವವರನ್ನು ಪ್ರೋತ್ಸಾಹಿಸಿರುವುದೇ ಹೆಚ್ಚಾಗಿ ಕಂಡು ಬರುತ್ತದೆ.

## ಡಿ ವಿ ಗುಂಡಪ್ಪನವರಿಂದ - ತೀ ನಂ ಶ್ರೀಕಂಠಯ್ಯನವರವರೆಗೆ :

**'ತಿರುಳ್ಗನ್ನಡ ತಿರುಕ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು ಉತ್ತಂಗಿ ಚನ್ನಪ್ಪ ಇವರ ಶ್ರಮದಿಂದ ಸರ್ವಜ್ಞನ ವಚನಗಳು ಹೆಚ್ಚು ಜನರನ್ನು ತಲುಪುವಂತಾಯಿತು. **'ಕನ್ನಡದಲ್ಲಿ ಅಭಿನವ ಕಾಳಿದಾಸ'** ಎಂದು ಬಿರುದಾಂಕಿತರಾದ ಬಸವಪ್ಪ ಶಾಸ್ತ್ರಿಗಳು ಶಕುಂತಲಾ ನಾಟಕದ ಭಾಷಾಂತರವನ್ನು ಮಾಡಿದ್ದಾರೆ. ಇವರ ನಂತರದಲ್ಲಿ ಬರುವ ಪ್ರಮುಖ ಸಾಹಿತಿಗಳೆಂದರೆ ಕುವೆಂಪು, ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ಮಧುರಚೆನ್ನ, ಪು.ತಿ. ನರಸಿಂಹಚಾರ್ಯ ಅವರುಗಳು. ಡಿ ವಿ ಗುಂಡಪ್ಪನವರಿಂದ ರಚಿಸಲ್ಪಟ್ಟ **'ಆಧುನಿಕ ಭಗವದ್ಗೀತೆ' ಎಂದು ಕರೆಯಲ್ಪಡುವ 'ಮಂಕುತಿಮ್ಮನ ಕಗ್ಗ'** ಸರ್ವ ಜನರ ಜೀವನಕ್ಕೆ ಆದರ್ಶವನ್ನು ತಿಳಿಸುವ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖ ಕೃತಿಯಾಗಿ ಹೊರಹೊಮ್ಮಿರುವ ಮತ್ತು ಪೂರ್ವ ಹಾಗೂ ಪಶ್ಚಿಮದ ವಿಚಾರಗಳ ಅಂಶಗಳನ್ನು ಸಮನ್ವಯಗೊಳಿಸಿ ತಿಳುವಳಿಕೆಯನ್ನು ನೀಡುವ ಆದರ್ಶ ರೂಪದ ಗ್ರಂಥವಾಗಿದೆ. ಈ ಗ್ರಂಥವು **ಡಿವಿಜಿ ಅವರಿಗೆ ಆಧುನಿಕ ಸರ್ವಜ್ಞ** ಎಂಬ ಬಿರುದನ್ನು ತಂದುಕೊಟ್ಟಿದೆ. ಅಧ್ಯಯನದ ದೃಷ್ಟಿಯಿಂದ ಒಂದು ಪದ್ಯಭಾಗವನ್ನು ಈ ಕೆಳಗೆ ನೀಡಲಾಗಿದೆ.

**ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,**

**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ.**

**ಬೆಲ್ಲ-ಸಕ್ಕರೆಯಾಗು ದೀನದುರ್ಬಲರಿಂಗೆ.**

**ಎಲ್ಲರೊಳಗೊಂದಾಗು ಮಂಕುತಿಮ್ಮ.**

ತದನಂತರದ ದಿನಗಳಲ್ಲಿ ಬೆನಗಲ್ ರಾಮರಾವ್ ಮತ್ತು ಕನ್ನಡದ ಕಾಳಿದಾಸ ಮತ್ತು ಮೂರು ಜನ ಸಂಸ್ಕೃತದ ಪ್ರಸಿದ್ಧ ಕವಿಗಳ ಕೃತಿಗಳನ್ನು ಅನುವಾದಿಸಿದ ಎಸ್ ವಿ ಪರಮೇಶ ಭಟ್ಟ ಇವರ ಸಾಹಿತ್ಯ ರಚನೆಯನ್ನು ಕಾಣುತ್ತೇವೆ. ಮುಂದುವರೆದು ಶಿವರಾಮ ಕಾರಂತರು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸಾಹಿತ್ಯವನ್ನು ನೋಡಬಹುದು. ನಿಸರ್ಗ, ರಾಷ್ಟ್ರಪುರುಷ, ರಾಮಣ್ಣ ಮಾಸ್ತರ್, ಎರಡು ಹೆಜ್ಜೆ ಎಂಬ ಸಾಮಾಜಿಕ ಕಾದಂಬರಿಗಳನ್ನು ರಚಿಸಿರುವ ಮಿರ್ಜಿ ಅಣ್ಣಾರಾಯರ ಸಾಹಿತ್ಯರಚನೆ ಕಂಡುಬರುತ್ತದೆ. ತೀ ನಂ **ಶ್ರೀಕಂಠಯ್ಯ ನವರಿಂದ ರಚಿಸಲ್ಪಟ್ಟ 'ಕನ್ನಡ ಮಾಧ್ಯಮ ವ್ಯಾಕರಣ' ಕೃತಿಯು ಕರ್ನಾಟಕದ ವಿದ್ಯಾರ್ಥಿಗಳಿಗಾಗಿ ಕಾಣಿಕೆ ರೂಪದಲ್ಲಿ ನೀಡಿರುವ ಕೃತಿ ರತ್ನವಾಗಿದೆ.** ಭಾಷಾಶಾಸ್ತ್ರದ ಅಧ್ಯಯನದ ದೃಷ್ಟಿಯಿಂದ ನಾಡಿನ ವಿದ್ಯಾರ್ಥಿಗಳಿಗೆ ಭಾಷಾ ಕೈಗನ್ನಡಿಯಾಗಿದೆ. ಕಾವ್ಯಮೀಮಾಂಸೆ, ಕಾವ್ಯ ಸಮೀಕ್ಷೆ, ಕಾವ್ಯಾನುಭವ ಮೊದಲಾದ ಕಾವ್ಯಶಾಸ್ತ್ರ ಸಂಬಂಧಿತ ಕೃತಿಗಳನ್ನು ರಚಿಸಿದ್ದಾರೆ. ಇವರ ಭಾರತೀಯ ಕಾವ್ಯಮೀಮಾಂಸೆಗೆ ಪಂಪ ಪ್ರಶಸ್ತಿ ಸಂದಿದೆ.

## ಡಿ ಎಲ್ ನರಸಿಂಹಾಚಾರ್ ಅವರಿಂದ - ಕೆ ಎಸ್ ನರಸಿಂಹಸ್ವಾಮಿಯವರವರೆಗೆ :

VTU BSc ಸಾಹಿತ್ಯ ಸಿಂಚನ

ಕನ್ನಡದಲ್ಲಿ ಅತ್ಯಂತ ಅಪರೂಪದ **ಕನ್ನಡ ಗ್ರಂಥ ಸಂಪಾದನೆಯನ್ನು ಡಿ ಎಲ್ ನರಸಿಂಹಾಚಾರ್** ರವರು ಮಾಡಿದ್ದಾರೆ. ಇವರು ಪಂಪರಾಮಾಯಣ ಸಂಗ್ರಹ, ವಡ್ಡಾರಾಧನೆ, ಸಿದ್ಧರಾಮ ಚರಿತ್ರೆ, ದರ್ಪಣ, ಗೋವಿನ ಹಾಡು ಇವುಗಳು ಇವರಿಂದ ಸಂಪಾದಿತವಾದ ಗ್ರಂಥಗಳಾಗಿವೆ. **ಎ. ಎನ್ ಮೂರ್ತಿರಾವ್ ಅವರು ಪ್ರಸಿದ್ಧ ಪ್ರಬಂಧಕಾರರು** ಹಾಗೂ ವಿಮರ್ಶಕರು ಆಗಿದ್ದೂ ಉತ್ತಮ ಅನುವಾದಕರು ಸಹ ಆಗಿದ್ದಾರೆ. ಇವರು ಹಗಲುಗನಸುಗಳು, ಅಲೆಯುವ ಮನ, ಮಿನುಗುಮಿಂಚು ಇವರ ಪ್ರಸಿದ್ಧ ಲಲಿತಪ್ರಬಂಧ ಕೃತಿಗಳಾಗಿವೆ. ಹಲವಾರು ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿರುವ ಇವರು 'ದೇವರು' ಎಂಬ ವೈಚಾರಿಕ ಕೃತಿಯನ್ನು ಸಹ ಬರೆದಿದ್ದಾರೆ. ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಕನ್ನಡದ ಕಾದಂಬರಿ ಸಾಮ್ರಾಟ ಸಾರ್ವಭೌಮ ಎಂದು ಬಿರುದಾಂಕಿತರಾದ ಮತ್ತು ಪ್ರಗತಿಶೀಲ ಚಳುವಳಿಯ ಪ್ರವರ್ತಕರೆಂದು ಗುರುತಿಸಲ್ಪಡುವ **ಕೃಷ್ಣರಾಯರು 190 ವಿವಿಧ ಕೃತಿಗಳು ಮತ್ತು ಗ್ರಂಥಗಳನ್ನು** ರಚಿಸಿದ್ದಾರೆ. ಉದಯರಾಗ, ಸಾಹಿತ್ಯ ರತ್ನ, ನಟಸಾರ್ವಭೌಮ, ನಗ್ನ ಸತ್ಯ, ಜೀವನಯಾತ್ರೆ, ಸಂಜೆಗತ್ತಲು ಇವರ ಪ್ರಮುಖ ಕೃತಿಗಳಾಗಿವೆ. ನಾಗರಹಾವು, ಚಂದ್ರವಳ್ಳಿಯ ತೋಟ, ದುರ್ಗಾಸ್ತಮಾನ, ಚಂದನದ ಗೊಂಬೆ, ಬೆಂಕಿಯ ಬಲೆ, ಗಾಳಿಮಾತು ಮೊದಲಾದ ಕೃತಿಗಳ ಕರ್ತೃ ತ.ರಾ.ಸು., ಬಸವರಾಜ ಕಟ್ಟಿಮನಿ, ಬೀಚಿ, ಕೃಷ್ಣಮೂರ್ತಿ ಪುರಾಣಿಕ, **ಮೈಸೂರು ಮಲ್ಲಿಗೆ ಎಂಬ ಕೃತಿಯಿಂದ ಪ್ರಖ್ಯಾತರಾದ ಕೆ ಎಸ್ ನರಸಿಂಹಸ್ವಾಮಿ ಶ್ರೇಷ್ಠ ಪ್ರೇಮ ಕವಿಯಾಗಿ ಕಂಡುಬರುತ್ತಾರೆ.** ಮೈಸೂರು ಮಲ್ಲಿಗೆ ಕೃತಿಯಿಂದ ಆಯ್ದ ಒಂದು ಕಾವ್ಯ ಭಾಗ:

**ನೀನು ಯಾರೆ?**

**ಹೊಳೆಯ ಬಂಡೆಯ ಮೇಲೆ ನಾ ನಿನ್ನ ಕಂಡೆ,**

**ನಿನ್ನ ಹೆರಳೊಳಗಿತ್ತು ಮಲ್ಲಿಗೆಯ ದಂಡೆ;**

**ನಿನ್ನ ಹಣೆಯಲ್ಲಿತ್ತು ಕಸ್ತೂರಿ ತಿಲಕ,**

**ಕುಡಿಹುಬ್ಬುಗಳ ನಡುವೆ ಬೈತಲೆಯ ತನಕ.**

**ಸೀರೆ ಸೆರಗನು ಹಿಡಿದು ಗಾಳಿಯಲಿ ನಿಂತ**

**ನಿನ್ನ ನೋಟವೆ ಸಾಕು, ಪ್ರತಿದಿನ ವಸಂತ;**

**ನಿನ್ನ ಮುಂಬೆರಳಲ್ಲಿ ಹೊಳೆದಿತ್ತು ಮಿಂಚು'**

**ನೀನುಟ್ಟ ಸೀರೆಯದು ಹೊಬಳ್ಳಿಯಂಚು.**

**ನಿನ್ನ ಕಿವಿಯಲಿ ಹೊಳೆಯುತಿತ್ತು ಬೆಂಡೋಲೆ,**

**ನಿನ್ನ ಕೊರಳೊಳಗಿತ್ತು ನವರತ್ನಮಾಲೆ;**

**ನಿನ್ನ ಕಾಲ್ಗೆಜ್ಜೆಗಳ ಇನಿದನಿಗಳಲ್ಲಿ**

ನಾನು ಒಲವನು ಕಂಡೆ ಹಾಡಹಗಲಲ್ಲಿ.

ನಾ ಕಂಡ ಮಂದಹಾಸವನು ವರ್ಣಿಸಲಾರೆ,

ಅಪ್ಸರೆಯೊ ಕಿನ್ನರಿಯೊ, ಓ ನೀನು ಯಾರೆ?

## ಬೀಚಿ ಅವರಿಂದ - ಎಲ್ ಎಸ್ ಶೇಷಗಿರಿ ರಾವ್ ರವರೆಗೆ :

ಬೀಚಿ ಅವರು ಹಾಸ್ಯ ಸಾಹಿತ್ಯದ ಮೂಲಕ ಕನ್ನಡಕ್ಕೆ ಹೊಸತನ ತಂದುಕೊಟ್ಟ ಅಪ್ರತಿಮ ಲೇಖಕರು. ಮನೆ ಮಾತು ತೆಲುಗು ಭಾಷೆಯಾಗಿದ್ದರೂ ಕನ್ನಡದ ಪ್ರಾದೇಶಿಕ ಸೊಗಡನ್ನು ತಮ್ಮ ಕೃತಿಗಳಲ್ಲಿ ನೀಡಿದ್ದಾರೆ. "ಬೀchi" ಕನ್ನಡ-ಇಂಗ್ಲಿಷ್ ಲಿಪಿಗಳ ಎರಡು ತಲೆ ಕರುವಿನಂತೆ ವಿಚಿತ್ರವಾಗಿ ಕಾಣುವ ಈ ಹೆಸರು ನಿಜವಾಗಿ ಅಚ್ಚಕನ್ನಡದ 'ಬೀಚಿ'ಯೇ. ಅವರ ನಿಜವಾದ ಹೆಸರು ಹೆದರಿಕೆ ಹುಟ್ಟಿಸುವಂತ ಬಲಶಾಲಿಯಾದ ಹೆಸರೇ. ರಾಯಸಂ ಭೀಮಸೇನರಾವ್. ಈ ಬಗ್ಗೆ ಅವರೇ ವಿವರಣೆ ನೀಡಿದ್ದಾರೆ.

ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು

ಚೆನ್ನೆಂದು ದೊಡ್ಡವರ ಅನುಕರಿಸ ಬೇಡ

ಏನಾಯ್ತು ಮರಿಕತ್ತೆ? ಚೆಲುವಿತ್ತು, ಮುದ್ದಿತ್ತು

ತನ್ನಪ್ಪನಂತಾಗಿ ಹಾಳಾಯ್ತೊ ತಿಂಮ".

(- ಅಂದನಾ ತಿಂಮ)

ಬರಹಗಾರನ ವೈಯಕ್ತಿಕ ಪ್ರತಿಭೆ ಜಡ ಅನುಕರಣೆಯ ಮರಳಿನಲ್ಲಿ ಇಂಗಿ ಹೋಗಬಾರದು. ಇದು ಬೀchi ದೃಷ್ಟಿಕೋನ. ರತ್ನನ ಪದಗಳ ಮುಖಾಂತರ ನಾಡಿನ ಮನೆ ಮಾತಾಗಿರುವ ಜಿ.ಪಿ. ರಾಜರತ್ನಂ ಅವರು ಪ್ರಮುಖವಾಗಿ ಕಂಡು ಬರುತ್ತಾರೆ. ಇವರ ಪದ್ಯದ ಒಂದು ಆಯ್ದ ಭಾಗ :

ನರಕಕ್ ಇಳ್ಸಿ, ನಾಲ್ಗೆ ಸೀಳ್ಸಿ,

ಬಾಯ್ ಒಲಿಸಾಕಿದ್ರೂನೆ –

ಮೂಗ್ನಲ್ ಕನ್ನಡ್ ಪದವಾಡ್ತೀನಿ !

ನನ್ನ ಮನಸನ್ನ್ ನೀ ಕಾಣೆ !

ಯೆಂಡ ಒಗ್ಲಿ! ಯಂಡ್ತಿ ಒಗ್ಲಿ!

ಎಲ್ಲಾ ಕೊಚ್ಕೊಂಡ್ ಒಗ್ಲಿ

**ಪರ್ಮಂಚ್ ಇರೋ ತನಕ ಮುಂದೆ**

**ಕನ್ನಡ್ ಪದಗೊಳ್ ನುಗ್ಲಿ!**

ಕನ್ನಡ ಛಂದೋವಿಕಾಸ ಎಂಬ ಮಹಾಪ್ರಬಂಧವನ್ನು ಬರೆದ ಡಿ ಎಸ್ ಕರ್ಕಿ, ಕಾವ್ಯಾನಂದ ಎಂಬ ಕಾವ್ಯನಾಮದಿಂದ ಪ್ರಖ್ಯಾತರಾದ ಸಿದ್ದಯ್ಯ ಪುರಾಣಿಕ, ಭೂತಯ್ಯನ ಮಗ ಅಯ್ಯು, ಹೇಮಾವತಿ, ನಮ್ಮ ಊರಿನ ರಸಿಕರು, ಹಳ್ಳಿಯ ಬಾಳು, ಭಾರತ ಸ್ವಾತಂತ್ರ್ಯ, ಹಳ್ಳಿ ಚಿತ್ರಗಳು ಮತ್ತು ಅಮೆರಿಕದಲ್ಲಿ ಗೊರೂರು ಎಂಬ ಪ್ರಖ್ಯಾತ ಕೃತಿಗಳನ್ನು ರಚಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇವರು ಸಹ ಪ್ರಮುಖ ಸಾಹಿತಿಯಾಗಿ ಕಂಡುಬರುತ್ತಾರೆ. ಆನಂದಕಂದ ಕಾವ್ಯನಾಮದಿಂದ ಪ್ರಖ್ಯಾತರಾದ ಬೆಟಗೇರಿ ಕೃಷ್ಣಶರ್ಮ ಅವರು ಎನಿತು **"ಇನಿದು ಈ ಕನ್ನಡ ನುಡಿಯು"** ಎಂಬ ಚೆಲುವಾದ ಗೀತೆಯನ್ನು ರಚಿಸಿದ್ದಾರೆ. ಹೊಸ ನಾಟಕಗಳ ಸೃಷ್ಟಿಯಿಂದ ಕನ್ನಡ ನಾಟಕ ಕ್ಷೇತ್ರವನ್ನು ಬೆಳಗಿನ ಪ್ರಸಿದ್ಧ ನಾಟಕಕಾರರು ನಿರ್ದೇಶಕರು ಆದ **ಟಿ ಪಿ ಕೈಲಾಸಂ ಅವರು ಕನ್ನಡಕ್ಕೊಬ್ಬನೇ ಕೈ** ಎಂಬ ಹೆಸರಿನಿಂದ ಕನ್ನಡ ಸಾಹಿತ್ಯದಲ್ಲಿ ಹೆಸರುವಾಸಿಯಾಗಿದ್ದಾರೆ. ಇವರನ್ನು ಕನ್ನಡ ಸಾಹಿತ್ಯದ ನವ್ಯ ನಾಟಕಗಳ ಪಿತಾಮಹ ಎಂದು ಕರೆಯಲಾಗುತ್ತದೆ ಮತ್ತು **ಕರ್ನಾಟಕ ನಾಟಕ ಪ್ರಹಸನ ಪಿತಾಮಹರು** ಸಹ ಎಂದೆನಿಸಿ ಕೊಂಡಿದ್ದಾರೆ. ಈ ಕಾಲಘಟ್ಟದಲ್ಲಿಯೇ ಬರುವ **ರಂ ಶ್ರೀ ಮುಗಳಿ** ಅವರು ಕನ್ನಡ ಸಾಹಿತ್ಯ ಚರಿತ್ರೆ ಎಂಬ ಮೇರುಕೃತಿಯನ್ನು ಬರೆಯುವುದರ ಮುಖಾಂತರ ಪ್ರಮುಖ ಕನ್ನಡ ಕವಿಗಳ ಹೆಸರಿನಲ್ಲಿ ಕನ್ನಡ ಸಾಹಿತ್ಯದ ವಿಭಾಗವನ್ನು ಸ್ಪಷ್ಟಪಡಿಸಿದ್ದಾರೆ.

## ದೇ ಜವರೇಗೌಡರವರಿಂದ - ಕೆ ಎಸ್ ನಿಸಾರ್ ಅಹಮದ್ ರವರ ವರೆಗೆ:

ಕನ್ನಡ ನಾಡಿನಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕು, ಕನ್ನಡನಾಡಿನಲ್ಲಿ ಕನ್ನಡವೇ ಅಗ್ರಸ್ಥಾನದಲ್ಲಿ ಪ್ರತಿಷ್ಠಾಪನೆಯಾಗಬೇಕು ಕನ್ನಡಕ್ಕೆ ವಿಶ್ವಮಾನ್ಯತೆ ದೊರೆಯಬೇಕು ಎಂದು ಹೋರಾಡಿದ ಕೀರ್ತಿ **ದೇ ಜವರೇಗೌಡ** ಅವರಿಗೆ ಸಲ್ಲುತ್ತದೆ. **ಪ್ರೊಫೆಸರ್ ಜಿ ವೆಂಕಟಸುಬ್ಬಯ್ಯನವರು ಕನ್ನಡ ಖ್ಯಾತ ನಿಘಂಟು ತಜ್ಞರೆಂ**ದು ಕನ್ನಡದಲ್ಲಿ ಪ್ರಸಿದ್ಧರಾಗಿದ್ದಾರೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ **ಎಲ್ ಎಸ್ ಶೇಷಗಿರಿ ರಾವ್** ಅವರು ಇಂದು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ತಿಳಿಯಲು ಪ್ರತಿಯೊಬ್ಬರಿಗೂ ಮಾರ್ಗದರ್ಶನ ಗ್ರಂಥವಾಗಿರುವ ಹೊಸಗನ್ನಡ ಸಾಹಿತ್ಯ ಚರಿತ್ರೆ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆ, ಇಂಗ್ಲಿಷ್ ಸಾಹಿತ್ಯ ಚರಿತ್ರೆ ಮತ್ತು ಹಲವಾರು ವಿಮರ್ಶಾ ಗ್ರಂಥಗಳನ್ನು ಕಥಾಸಂಕಲನಗಳನ್ನು ರಚಿಸಿದ್ದಾರೆ. **ಎಂ ಎಂ ಕಲಬುರ್ಗಿ** ಅವರು ಹಲವಾರು ಸಂಶೋಧನಾ ಗ್ರಂಥಗಳನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಪ್ರಕಟಿಸಿರುತ್ತಾರೆ **ಕೆ ಎಸ್ ನಿಸಾರ್ ಅಹಮದ್** ಅವರು ನವೋದಯ ಮತ್ತು ನವ್ಯ ಎರಡು ಸಾಹಿತ್ಯ ಮಾರ್ಗಗಳಲ್ಲಿ ಕಾವ್ಯ ರಚಿಸುತ್ತಾ ಬಂದಿರುತ್ತಾರೆ. ಇವರು ಬರೆದ ಅನೇಕ ಜನಪ್ರಿಯ ಕವಿತೆಗಳು ಕುರಿಗಳು ಸಾರ್ ನಾವು ಕುರಿಗಳು, ಅಂಡಲೆಯುವ ಜನಗಳು, **ಜೋಗದ ಸಿರಿ ಬೆಳಕಿನಲ್ಲಿ, ತಾಯಿ ನಿನಗೆ ನಿತ್ಯೋತ್ಸವ** ಇವು ಪ್ರಮುಖ ಕವಿತೆಗಳಾಗಿವೆ. ಕನ್ನಡದ ಕುಲಪುರೋಹಿತ ಎಂದು ಹೆಸರಾದವರು **ಆಲೂರು ವೆಂಕಟರಾಯರು. ಕರ್ನಾಟಕ ಗತವೈಭವ** ಇವರ ಪ್ರಮುಖ ಕೃತಿ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದ ವಿದ್ಯಾವರ್ಧಕ ಸಂಘದ

ಬೆಳವಣಿಗೆಗೆ ಕಾರಣಕರ್ತರಾದವರು. ಫ. ಗು ಹಳಕಟ್ಟಿ ಇವರನ್ನು **ಕನ್ನಡದ ವಚನ ಶಾಸ್ತ್ರದ ಪಿತಾಮಹ** ಎಂದು ಕರೆಯಲಾಗುತ್ತದೆ. ಇವರು ಬರೆದ ವಚನ ಶಾಸ್ತ್ರಸಾರ ಕನ್ನಡಿಗರ ಕಣ್ಮನಗಳನ್ನು ತೃಪ್ತಿಗೊಳಿಸಿದೆ.

## ಕೆ ಎಸ್ ನರಸಿಂಹಸ್ವಾಮಿ ರವರಿಂದ - ಪಾಟೀಲ್ ಪುಟ್ಟಪ್ಪನವರ ವರೆಗೆ:

ಮೈಸೂರು ಮಲ್ಲಿಗೆ ಖ್ಯಾತಿಯ ಕೆ ಎಸ್ ನರಸಿಂಹಸ್ವಾಮಿಯವರು ಮುಂದುವರೆದು ಬಿ ಎಂ ಶ್ರೀ ಅವರ ಸಹೋದರರ ಮಗಳಾದ ಮತ್ತು ಪ್ರಸಿದ್ಧ ಕಾದಂಬರಿಗಳಾದ ಶರಪಂಜರ, ದೂರದ ಬೆಟ್ಟ, ಹೂವು ಹಣ್ಣು, ಹೃದಯ ಗೀತೆ, ಬೆಳ್ಳಿಮೋಡ, ವಸಂತಗಾನ ಮೊದಲಾದ ಕಾದಂಬರಿಗಳ ಕರ್ತೃ ತ್ರಿವೇಣಿ ಅವರು ಪ್ರಮುಖ ಸ್ಥಾನದಲ್ಲಿ ಕಂಡುಬರುತ್ತಾರೆ. ಎಚ್ ತಿಪ್ಪೇರುದ್ರಸ್ವಾಮಿ ಅವರು **ತೌಲನಿಕ ಕಾವ್ಯಮೀಮಾಂಸೆ**ಯನ್ನು ಕನ್ನಡಕ್ಕೆ ನೀಡಿ ಹೆಚ್ಚು ಆಕರ್ಷಿತರಾಗಿದ್ದಾರೆ. ವಿಮರ್ಶೆಯ ಮೂಲ ತತ್ವಗಳು ಇವರ ವಿಮರ್ಶಾತ್ಮಕ ವೈಚಾರಿಕತೆಯಿಂದ ಕೂಡಿದ ಕೃತಿಯಾಗಿದೆ. ಇವರ ಮತ್ತೊಂದು ಗ್ರಂಥ ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಹೆಚ್ಚು ಪ್ರಭಾವಿತ ಗ್ರಂಥವಾಗಿದೆ. ಮುಂದುವರೆದು ನಿರಂಜನ, ಚದುರಂಗ, ಯಶವಂತ ಚಿತ್ತಾಲ, ಹಾ ಮಾ ನಾಯಕ್, ಚೆನ್ನವೀರ ಕಣವಿ, ಪಿ ಲಂಕೇಶ್, ಶಾಂತಿನಾಥ ದೇಸಾಯಿ, ಪ್ರಭುಶಂಕರ, ಕೆ ಮರುಳಸಿದ್ದಪ್ಪ, ಕೀರ್ತಿನಾಥ ಕುರ್ತಕೋಟಿ, ಗಂಗಾಧರ ಚಿತ್ತಾಲ, ಗಿರಡ್ಡಿ ಗೋವಿಂದರಾಜ್, ಅನುಪಮಾ ನಿರಂಜನ್, ಕೃಷ್ಣ ಆಲನಹಳ್ಳಿ, ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ, ಸಿ.ಪಿ.ಕೆ., ಎಚ್ ಎಸ್ ಶಿವಪ್ರಕಾಶ್, ಎಲ್ ಹನುಮಂತಯ್ಯ, ಬಿ ಟಿ ಲಲಿತಾ ನಾಯಕ್, ರಹಮತ್ ತರೀಕೆರೆ, ಅರವಿಂದ ಮಾಲಗತ್ತಿ ಜಾಹೋ ನಾರಾಯಣಸ್ವಾಮಿ, ಎಸ್ ಜಿ ಸಿದ್ದರಾಮಯ್ಯ, ಸಾರಾ ಅಬೂಬಕರ್, ವಿಜಯದಬ್ಬೆ, ಶಾಂತರಸ, ಹಂಪ ನಾಗರಾಜಯ್ಯ, ಕಮಲಾ ಹಂಪನಾ, ಗೀತಾ ನಾಗಭೂಷಣ್, ಸವಿತಾ ನಾಗಭೂಷಣ, ವೈದೇಹಿ, ಡಿ ಎಸ್ ಕರ್ಕಿ ಮೊದಲಾದವರನ್ನು ಕಾಣುತ್ತೇವೆ. ದಿನಕರ ದೇಸಾಯಿ ಇವರನ್ನು **ಚುಟುಕು ಸಾಹಿತ್ಯದ ಬ್ರಹ್ಮ** ಎಂದು ಕರೆಯಲಾಗುತ್ತದೆ. ಕೈಯಾರ ಕಿಯಣ್ಣರೈ 'ದುರ್ಗದಾಸ' ಎಂಬ ಕಾವ್ಯನಾಮದಿಂದ ಸಾಹಿತ್ಯ ರಚಿಸಿದ್ದಾರೆ. ಕನ್ನಡದ ಅಪರೂಪದ ಸಸ್ಯಶಾಸ್ತ್ರಜ್ಞರು ಮತ್ತು ಲೇಖಕರು ಆದ ಬಿ.ಜಿ.ಎಲ್. ಸ್ವಾಮಿ ಅವರು **ಹಸಿರು ಹೊನ್ನು** ಎಂಬ ಪ್ರಮುಖ ಕೃತಿಯನ್ನು ರಚಿಸಿದ್ದಾರೆ. **ಪಾಟೀಲ್ ಪುಟ್ಟಪ್ಪನವರು ಕನ್ನಡ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಹೆಸರನ್ನು ಮಾಡಿದ ಸಾಹಿತಿ ಮತ್ತು ಬರಹಗಾರರು.** ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ ಇವರು ನಮ್ಮ ದೇಶ, ನಮ್ಮ ಜನ, ನನ್ನದು ಈ ಕನ್ನಡ, ಕರ್ನಾಟಕದ ಕಥೆ, ಉಸಿರಾಗಲಿ ಕನ್ನಡ ಎಂಬ ಹಲವಾರು ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ.

## ದೇವನೂರು ಮಹದೇವರವರಿಂದ - ಪ್ರಸ್ತುತದವರೆಗೆ:

ದೇವನೂರು ಮಹಾದೇವ ಅವರು ದಲಿತ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸಿ ಯಶಸ್ವಿ ಬರಹಗಾರರಾಗಿದ್ದಾರೆ. ಮಾರಿಕೊಂಡವರು, **ಡಾಂಬರು ಬಂದದ್ದು, ಒಡಲಾಳ, ಕುಸುಮಬಾಲೆ, ನಂಬಿಕೆಯ ನೆಂಟ, ಎದೆಗೆ ಬಿದ್ದ ಅಕ್ಷರ** ಇವರ ಪ್ರಮುಖ ಕೃತಿಗಳು. ಬಂಡಾಯ ಸಾಹಿತ್ಯದ ಪ್ರಮುಖ ಕವಿಯಾಗಿ ಕಾವ್ಯ ಬಂತು ಬೀದಿಗೆ ಮತ್ತು ಹೊಕ್ಕಳಲ್ಲಿ ಹೂವಿದೆ ಎಂಬ ಕೃತಿಗಳ ಕರ್ತೃ ವಾದ ರಂಜಾನ್

21KSS27 Draft Copy
VTU BSc ಸಾಹಿತ್ಯ ಸಿಂಚನ

ದರ್ಗಾ ಅವರು ಪ್ರಮುಖವಾಗಿ ಕಂಡುಬರುತ್ತಾರೆ. **ಮುಸ್ಲಿಂ ಸಂವೇದನೆಗಳನ್ನು ಹಿಡಿದಿಡುವುದರ ಮುಖಾಂತರ ಸಂಪ್ರದಾಯದ ಅಂಧ ವಿಶ್ವಾಸಗಳ ಖಂಡನೆಯನ್ನು ಮಾಡಿದ ಮತ್ತೋರ್ವ ಸಾಹಿತಿ ಬೋಳುವಾರು ಮಹಮದ್** ಕೂಂಇ ದೇವರ ರಾಜ್ಯದಲ್ಲಿ, ಆಕಾಶಕ್ಕೆ ನೀಲಿ ಪರದೆ, ಜಿಹಾದ್, ತುಂಡು ಗೋಡೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕದ ಬಂಡಾಯ ಸಾಹಿತ್ಯದ ಪ್ರತಿನಿಧಿಯಾಗಿ ಕಂಡುಬರುವ ವೀರಭದ್ರಪ್ಪನವರು ಇನ್ನಾದರೂ ಸಾಯಬೇಕು, ನಿಜಲಿಂಗ, ಭಗವತಿ ಕಾಡು, ದಿವಿ ಸೀಮೆಯ ಹಾಡು, ಬೇಲಿ ಮತ್ತು ಹೊಲ, ಡೋಮ ಮತ್ತು ಇತರ ಕಥೆಗಳು ಎಂಬ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ದಲಿತ ಕವಿ ಎಂದು ಪ್ರಖ್ಯಾತರಾದ ಮತ್ತು ದಲಿತರ ಹೋರಾಟ ಹಾಗೂ ಸಾಮಾಜಿಕ ಸಮಾನತೆಗಾಗಿ ಎತ್ತರದ ಧ್ವನಿಯಲ್ಲಿ ಕಾವ್ಯವನ್ನು ಹಾಡನ್ನಾಗಿ ಮಾರ್ಪಡಿಸಿದರು **ಡಾ. ಸಿದ್ಧಲಿಂಗಯ್ಯನವರು.** ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು, ಅಲ್ಲೆ ಕುಂತವರೆ ಇವರ ಪ್ರಮುಖ ಸಾಹಿತ್ಯ ಕೃತಿಗಳು. ಇವರ ಸಾಲಿನಲ್ಲಿ ಕಂಡುಬರುವ ಮತ್ತು ಅವರು ಸು ರಂ ಎಕ್ಕುಂಡಿ ಅವರು ಬಕುಲದ ಹೂವುಗಳು ಸಾಹಿತ್ಯ ಕೃತಿಯನ್ನು ರಚಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯದ ಮೇಲೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ ಹೆಚ್ಚಾಗಿ ಬರವಣಿಗೆಯ ರೂಪದಲ್ಲಿ ಕಂಡು ಬರುತ್ತಿರುವುದನ್ನು ಕಾಣುತ್ತೇವೆ. ಹೊಸಬರಹಗಳು ಮತ್ತು ಹೊಸ ಆಯಾಮದ ಸಾಹಿತ್ಯಕೃತಿಗಳು ವಿವಿಧ ಕ್ಷೇತ್ರಗಳ ಪರಿಣಿತರಿಂದ ರಚನೆಯಾಗುತ್ತಿರುವುದು ಕಾಣಬಹುದು. ಕನ್ನಡ ಸಾಹಿತ್ಯವು ಇಂಟರ್ನೆಟ್, ಯೂಟ್ಯೂಬ್, ಮೊದಲಾದ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಇತ್ತೀಚೆಗೆ ಇನ್ನೂ ಹೆಚ್ಚು ಕ್ರಿಯಾಶೀಲವಾಗಿ ಯುವಜನತೆಯಿಂದ ಮತ್ತು ಹೊಸ ತಂತ್ರಜ್ಞಾನದ ತಂತ್ರಜ್ಞರಿಂದ ರಚನೆಯಾಗುತ್ತಿರುವುದು ಸಂತಸದ ವಿಷಯವಾಗಿದೆ. ಕನ್ನಡ ಸಾಹಿತ್ಯವು ವಿವಿಧ ಹೊಸ ರೂಪಗಳು ಮತ್ತು ಪ್ರಕಾರಗಳೊಂದಿಗೆ ಜಾಗತಿಕ ಸಾಹಿತ್ಯದೊಂದಿಗೆ ಸ್ಪರ್ಧೆಯನ್ನು ನೀಡುತ್ತಾ ಬೆಳೆಯುತ್ತಿರುವುದು ಸಹ ಸಾಫ್ಟ್ವೇರ್ ಯುಗದ ಮುಂಚೂಣಿಯ ಸಾಧನೆಯಾಗಿದೆ. ಇತ್ತೀಚೆಗೆ ಹಳಗನ್ನಡ ಸಾಹಿತ್ಯ ಚರಿತ್ರೆಯ ಬಳಕೆ ಹೊಸ ತಂತ್ರಜ್ಞರಿಂದ ಆಧುನಿಕ ಶೈಲಿಯಲ್ಲಿ ಬಳಕೆಯಾಗುತ್ತಿರುವುದು ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಇನ್ನೂ ಹೆಚ್ಚು ಪ್ರಬುದ್ಧಮಾನಕ್ಕೆ ಬರುತ್ತದೆ ಎಂಬುದರ ಸೂಚನೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ವಿಜ್ಞಾನ ಮತ್ತು ಪರಿಸರವಿಜ್ಞಾನದ ಲೇಖನಗಳು ಸಾಮಾಜಿಕ ಹಿನ್ನಲೆಯಲ್ಲಿ ರಚನೆಗೊಳ್ಳುತ್ತಿರುವುದು ಆಧುನಿಕ ಸಾಹಿತ್ಯರಚನೆಯ ಮಾದರಿಯ ನಿದರ್ಶನಗಳಾಗಿವೆ.

VTU BSc ಸಾಹಿತ್ಯ ಸಿಂಚನ 21KSS27 Draft Copy

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ಏಕಲವ್ಯನ ಕಥೆಯನ್ನು ಕುರಿತಾದ ಬರೆದ ಏಕಾಂಕ ನಾಟಕ "ಹೆಬ್ಬೆರಳು" ಇದರ ಕರ್ತೃ ಯಾರು?

1. ಗೋವಿಂದ ಪೈ 2. ಟಿ ಎಸ್ ವೆಂಕಣ್ಣಯ್ಯ

3. ತಾರಾಸು 4. ಡಾ. ಸಿದ್ದಲಿಂಗಯ್ಯ

2. ಕನ್ನಡದ ಅಶ್ವಿನಿ ದೇವತೆಗಳು ಎಂದು ಈ ಕೆಳಗಿನ ಸಾಹಿತಿಗಳನ್ನು ಕರೆಯಲಾಗುತ್ತದೆ?

1. ಟಿ ಎಸ್ ವೆಂಕಣ್ಣಯ್ಯ ಮತ್ತು ಆರ್ ಕೃಷ್ಣಶಾಸ್ತ್ರಿ
2. ಕುವೆಂಪು ಮತ್ತು ದರಾಬೇಂದ್ರೆ
3. ದೇವನೂರು ಮಹಾದೇವ ಮತ್ತು ಸಿದ್ದಲಿಂಗಯ್ಯ
4. ಬಿ ಎಂ ಶ್ರೀಕಂಠಯ್ಯ ಮತ್ತು ತಿ ನಂ ಶ್ರೀಕಂಠಯ್ಯ

3. ಆಧುನಿಕ ಕನ್ನಡದ ಭಗವದ್ಗೀತೆ ಎಂದು ಕರೆಯಲ್ಪಡುವ ಜೀವನ ಸಾರದ ಮಹಾಕೃತಿ ಯಾವುದು?

1. ಶ್ರೀ ರಾಮಾಯಣ ದರ್ಶನಂ
2. ಪಂಪಭಾರತ
3. ಮಂಕುತಿಮ್ಮನ ಕಗ್ಗ
4. ದುರ್ಗಾಸ್ತಮಾನ

4. ಕೆಎಸ್ ನರಸಿಂಹಸ್ವಾಮಿ ರವರ ಪ್ರಮುಖ ಕವನ ಸಂಕಲನ?

1. ಜೀವನಯಾತ್ರೆ
2. ಸಂಜೆಗತ್ತಲು
3. ಅಲೆಯುವ ಮನ
4. ಮೈಸೂರು ಮಲ್ಲಿಗೆ

5. "ಎನಿತು ಇನಿದು ಈ ಕನ್ನಡ ನುಡಿಯು" ಗೀತೆಯ ಸಾಹಿತ್ಯ ರಚನೆಕಾರರು ಯಾರು?

1. ಬೆಟಗೇರಿ ಕೃಷ್ಣಶರ್ಮ
2. ಟಿ ಪಿ ಕೈಲಾಸಂ
3. ಜಿ ಪಿ ರಾಜರತ್ನಂ

21KSS27 Draft Copy
VTU BSc ಸಾಹಿತ್ಯ ಸಿಂಚನ

4. ಪಂಜೆ ಮಂಗೇಶರಾಯರು

6. ಕರ್ನಾಟಕ ನಾಟಕ ಪ್ರಹಸನ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?

1. ಆ ನ ಕೃಷ್ಣರಾಯರು
2. ಬಿ ಎಲ್ ರೈಸ್
3. ಟಿ ಪಿ ಕೈಲಾಸಂ
4. ಪುರಂದರದಾಸರು

7. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರ ಪ್ರಮುಖ ಕೃತಿ ಯಾವುದು?

1. ವಿಜಯನಗರ ನಗರ ಸಾಮ್ರಾಜ್ಯ ವೈಭವ
2. ಬೇಲೂರು ಹಳೇಬೀಡು ವೈಭವ
3. ಕರ್ನಾಟಕ ಗತವೈಭವ
4. ಕರ್ನಾಟಕ ನಿತ್ಯೋತ್ಸವ

8. . **“ಕಾವ್ಯ ಬಂತು ಬೀದಿಗೆ ಮತ್ತು ಮಕ್ಕಳಲ್ಲಿ ಹೂವಿದೆ”** ಎಂಬ ಕೃತಿಗಳನ್ನು ರಚಿಸಿದ ಬಂಡಾಯ ಸಾಹಿತ್ಯದ ಪ್ರಮುಖ ಕವಿ ಯಾರು?

1. ರಂಜಾನ್ ದರ್ಗಾ
2. ಬೋಳುವಾರು ಮಹಮದ್ ಕೂಂಞ
3. ಡಿ ಎಸ್ ಕರ್ಕಿ
4. ಸಿದ್ದಲಿಂಗಯ್ಯನ

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.

1. ದೇವನೂರು ಮಹಾದೇವ ರವರು ರಚಿಸಿರುವ ಪ್ರಮುಖ ಸಾಹಿತ್ಯದ ಕೃತಿಗಳು ಯಾವುವು?
2. ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಪದ್ಯದ ಸಾರಾಂಶವೇನು?
3. ಟಿಎಸ್ ವೆಂಕಣ್ಣಯ್ಯನವರು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಪ್ರಚಲಿತರಾಗಲು ಕಾರಣವೇನು?
4. ತೀ ನಂ ಶ್ರೀಕಂಠಯ್ಯ ನವರು ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ನೀಡಿರುವ ಕೊಡುಗೆಗಳು ಯಾವುವು ?
5. ಜಿಪಿ ರಾಜರತ್ನಂ ರವರು ಬರೆದಿರುವ ಗೀತೆ ನರಕಕ್ಕೆ ಇಳಿಸಿ ನಾಲಿಗೆ ಸೀಳ್ಸಿ ಇದರ ತಾತ್ಪರ್ಯವೇನು?
6. ಕರ್ನಾಟಕ ಗತವೈಭವ ಕೃತಿಯ ಕರ್ತೃ ಆಲೂರು ವೆಂಕಟರಾಯರ ಕೊಡುಗೆಗಳು ಯಾವುವು?

VTU BSc ಸಾಹಿತ್ಯ ಸಿಂಚನ 21KSS27 Draft Copy

7. ದಲಿತ ಕವಿ ಸಿದ್ದಲಿಂಗಯ್ಯನವರ ಪ್ರಮುಖ ಕೃತಿಗಳು ಯಾವುವು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ**

( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.

1. ಪ್ರೇಮಕವಿ ಕೆ ಎಸ್ ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆ ಈ ಗೀತೆಯ ಸಾರಾಂಶವನ್ನು ಬರೆಯಿರಿ.

2. ಡಿ ವಿ ಗುಂಡಪ್ಪನವರ ಇಂದ ಹಿಡಿದು ಶ್ರೀಕಂಠಯ್ಯನವರ ವರೆಗೆ ಕಂಡುಬರುವ ಪ್ರಮುಖ ಕನ್ನಡದ ಸಾಹಿತಿಗಳ ಕುರಿತು ಬರೆಯಿರಿ.

VTU BSc ಸಾಹಿತ್ಯ ಸಿಂಚನ 21KSS27 ... Copy

# ಭಾಗ – 4 (ಆಧುನಿಕ ಕಾವ್ಯ ಭಾಗ)

## ಕುವೆಂಪುರವರ "ವಿಶ್ವಮಾನವ ಗೀತೆ" :

ಓ ನನ್ನ ಚೇತನ,

ಆಗು ನೀ ಅನಿಕೇತನ!

ರೂಪರೂಪಗಳನು ದಾಟಿ,

ನಾಮಕೋಟಿಗಳನು ಮೀಟಿ,

ಎದೆಯ ಬಿರಿಯೆ ಭಾವದೀಟಿ,

ಓ ನನ್ನ ಚೇತನ,

ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,

ಎಲ್ಲ ತತ್ತ್ವದೆಲ್ಲೆ ಮೀರಿ,

ನಿರ್ದಿಗಂತವಾಗಿ ಏರಿ,

ಓ ನನ್ನ ಚೇತನ,

ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;

ಮನೆಯನೆಂದೂ ಕಟ್ಟದಿರು;

ಕೊನೆಯನೆಂದೂ ಮುಟ್ಟದಿರು;

ಓ ಅನಂತವಾಗಿರು!

21KSS27 Draft Copy

VTU BSc ಸಾಹಿತ್ಯ ಸಿಂಚನ

ಓ ನನ್ನ ಚೇತನ,

ಆಗು ನೀ ಅನಿಕೇತನ!

ಅನಂತ ತಾನ್ ಅನಂತವಾಗಿ

ಆಗುತಿಹನೆ ನಿತ್ಯಯೋಗಿ;

ಅನಂತ ನೀ ಅನಂತವಾಗು;

ಆಗು, ಆಗು, ಆಗು, ಆಗು,

ಓ ನನ್ನ ಚೇತನ,

ಆಗು ನೀ ಅನಿಕೇತನ!

ಈ ಗೀತೆಯಲ್ಲಿ ಕುವೆಂಪುರವರು ಪ್ರತಿಯೊಂದು ಮಗುವೂ ಹುಟ್ಟುತ್ತಲೆ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಹುಟ್ಟುವಾಗ 'ವಿಶ್ವಮಾನವನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ, ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಲೋಕ ಉಳಿದು, ಬಾಳಿ ಬದುಕಬೇಕಾದರೆ! ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು.

ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಒಂದು ಯುಗಕ್ಕೆ ಅಗತ್ಯವೆನ್ನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪುಗುಂಪಾಗಿ ಜನತೆಯನ್ನು ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ, ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ! ವಿಜ್ಞಾನಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನು ಮೇಲೆ ಮತಮೌಢ್ಯ ಒಪ್ಪಿಗೆಯಾಗದು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ- ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; "ಮನುಜಮತ". ಆ ಪಥ ಈ ಪಥ ಅಲ್ಲ; "ವಿಶ್ವಪಥ". ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ ಅದುವೇ "ಸರ್ವೋದಯ". ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ ಅಂತಹ ದೃಷ್ಟಿ ಬರಿಯ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಮೂಲಮೌಲ್ಯಗಳು ಇವು. ಈ 'ದರ್ಶನ'ವನ್ನೆ ಕುವೆಂಪುರವರ 'ವಿಶ್ವಮಾನವ ಗೀತೆ' ಸಾರುತ್ತದೆ.

# ದ.ರಾ ಬೇಂದ್ರೆ ರವರ ನಾದಲೀಲೆಯಿಂದ "ನೀ ಹಿಂಗೆ ನೋಡಬ್ಯಾಡ ನನ್ನ" ಗೀತೆ

ನೀ ಹೀಂಗ ನೋಡಬ್ಯಾಡ ನನ್ನ

ನೀ ಹೀಂಗ ನೋಡಿದರ ನನ್ನ,

ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ ? ||ಪಲ್ಲ||

ಸಂಸಾರಸಾಗರದಾಗ, ಲೆಕ್ಕವಿರದಷ್ಟು ದುಃಖದ ಬಂಡಿ

ನಾ ಬಲ್ಲೆ ನನಗ ಗೊತ್ತಿಲ್ಲದಿದ್ದರು ಎಲ್ಲಿ ಆಚೆಯಾ ದಂಡಿ

ಮಲಗಿರುವ ಕೂಸು ಮಲಗಿರಲಿ ಅಲ್ಲಿ, ಮುಂದಿನದು ದೇವರ ಚಿತ್ತ

ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ ?

ತಂಬಲ ಹಾಕದ ತುಂಬ ಕೆಂಪು ಗಿಣಿಗಡಕ ಹಣ್ಣಿನ ಹಾಂಗ

ಇದ್ದಂಥ ತುಟಿಯ ಬಣ್ಣೆತ್ತ ಹಾರಿತು ? ಯಾವ ಗಾಳಿಗೆ ಹೀಂಗ

ಈ ಗದ್ದ, ಗಲ್ಲ, ಹಣೆ, ಕಣ್ಣು, ಕಂಡು ಮಾರೀಗೆ ಮಾರಿsಯಾ ರೀತಿ

ಸಾವನs ತನ್ನ ಕೈ ಸವರಿತಿಲ್ಲಿ, ಬಂತೆನಗ ಇಲ್ಲದ ಭೀತಿ.

ದಾರೀಲೆ ನೆನೆದ ಕೈ ಹಿಡಿದೆ ನೀನು, ತಣ್ಣsಗ ಅಂತನ ತಿಳಿದು

ಬಿಡಲೊಲ್ಲಿ ಇನ್ನುನೂ, ಬೂದಿ ಮುಚ್ಚಿದ ಕೆಂಡ ಇದಂತ ಹೊಳೆದು

ಮುಗಿಲsನ ಕಪ್ಪರಿಸಿ ನೆಲಕ ಬಿದ್ದರ ನೆಲಕ ನೆಲಿ ಎಲ್ಲಿನ್ನs

ಆ ಗಾದಿ ಮಾತು ನಂಬಿ, ನಾನು ದೇವರಂತ ತಿಳಿದಿಯೇನ ನೀ ನನ್ನ ?

VTU

**ಇಬ್ಬನ್ನಿ ತೊಳೆದರೂ ಹಾಲು ಮೆತ್ತಿದಾ ಕವಳಿಕಂಟಿಯಾ ಹಣ್ಣು**

**ಹೊಳೆಹೊಳೆವ ಹಾಂಗ ಕಣ್ಣಿರುವ ಹೆಣ್ಣ, ಹೇಳು ನಿನ್ನವೇನ ಈ ಕಣ್ಣು?**

**ದಿಗಿಲಾಗಿ ಅನ್ನತದ ಜೀವ ನಿನ್ನ ಕಣ್ಣಾರೆ ಕಂಡ ಒಮ್ಮಿಗಿಲs**

**ಹುಣ್ಣವೀ ಚಂದಿರನ ಹೆಣಾ ಬಂತೊ ಮುಗಿಲಾಗ ತೇಲತs ಹಗಲ !**

**ನಿನ ಕಣ್ಣಿನ್ಯಾಗ ಕಾಲೂರಿ ಮಳೆಯು, ನಡನಡಕ ಹುಚ್ಚನಗಿ ಯಾಕ**

**ಹನಿ ಒಡೆಯಲಿಕ್ಕೆ ಬಂದಂಥ ಮೊಡ ತಡಧಾಂಗ ಗಾಳಿಯ ನೆವಕ**

**ಅತ್ತಾರೆ ಅತ್ತು ಬಿಡು, ಹೊನಲು ಬರಲಿ, ನಕ್ಯಾಕ ಮರಸತೀ ದುಕ್ಕ ?**

**ಎವೆ ಬಡಸಿ ಕೆಡವು, ಬಿರಿಗಣ್ಣು ಬ್ಯಾಡ, ತುಟಿಕಚ್ಚಿ ಹಿಡಿಯದಿರು ಬಿಕ್ಕ.**

……………………………………………………………..

ಬೇಂದ್ರೆ ದಂಪತಿಗಳು ತಮಗೆ ಜನಿಸಿದ ೯ ಮಕ್ಕಳಲ್ಲಿ ೭ ಮಕ್ಕಳನ್ನು ಕಳೆದುಕೊಂಡ ದುರ್ದೈವಿಗಳು. ಮೇಲಿಂದ ಮೇಲೆ ಎರಗಿದ ಈ ಆಘಾತಗಳನ್ನು ಸಹಿಸಿದ ಬೇಂದ್ರೆಯವರು ತಮ್ಮ ನೋವನ್ನು ಕಾವ್ಯದ ಮುಖಾಂತರ ಹೊರಹಾಕಿದ್ದಾರೆ. ಕಣ್ಣೆದುರಿನಲ್ಲಿಯೇ ಕೊನೆಯುಸಿರನ್ನು ಎಳೆಯುತ್ತಿರುವ ಕೂಸನ್ನು ತನ್ನ ತೊಡೆಯ ಮೇಲಿರಿಸಿಕೊಂಡಿರುವ ತಾಯಿ ತನ್ನ ಪತಿಯ ಕಡೆಗೆ ನೋಡುತ್ತಾಳೆ. ಆ ನೋಟದಲ್ಲಿ ಏನೆಲ್ಲ ಭಾವನೆಗಳು ಅಡಗಿವೆ? ಸಾಯುತ್ತಿರುವ ಕೂಸಿನ ಬಗೆಗಿನ ದುಃಖ, ತನ್ನ ಪತಿ ಏನಾದರೂ ಮಾಡಿ ಆ ದುರಂತವನ್ನು ತಪ್ಪಿಸಬಹುದೇನೊ ಎನ್ನುವ ಆಸೆ, ತನ್ನ ಹಾಗೂ ತನ್ನ ಪತಿಯ ಅಸಹಾಯಕತೆ ಹಾಗು ಅವನ ದುಃಖದ ಅರಿವು ಇವೆಲ್ಲ ಅವಳ ನೋಟದಲ್ಲಿವೆ. ಕೂಸು ಜೀವ ಬಿಡುತ್ತಿರುವ ಈ ಗಳಿಗೆಯಲ್ಲಿ, ಅವಳ ಪತಿಯೂ ಅಸಹಾಯಕ. ಅವಳ ಶೋಕದ ಉಪಶಮನಕ್ಕಾಗಿ, ಅವಳ ಕೂಸನ್ನು ಬದುಕಿಸುವ ಭರವಸೆ ಕೊಡಲು ಗಂಡನಾದ ಆತ ಏನೂ ಮಾಡಲಾರ. ಅವಳ ನೋಟವನ್ನು ಎದುರಿಸಲಾರ. ಇದು ಪತಿಯಾದವನ ಸಂಕಟದ ಪರಾಕಾಷ್ಠೆ.

“ ನೀನು ಈ ರೀತಿಯಾಗಿ ನನ್ನನ್ನು ನೋಡಿದರೆ, ನಾನು ನಿನ್ನ ನೋಟವನ್ನು ಎದುರಿಸಲಾರೆ, ನಿನ್ನ ಕಣ್ಣಲ್ಲಿ ಕಣ್ಣಿಡಲಾರೆ, ನಿನಗೆ ಸಾಂತ್ವನ ಹೇಳಲಿಕ್ಕಾದರೂ ನಿನ್ನ ಮುಖ ಹೇಗೆ ನೋಡಲಿ ?” ಎನ್ನುವ ಭಾವನೆ ಕವನದ ಪದ್ಯದಲ್ಲಿ ಮೂಡಿ ಬಂದಿದೆ. ವಾಲ್ಮೀಕಿಗಾದ ದುಃಖದಿಂದ “ರಾಮಾಯಣ” ಮಹಾಕಾವ್ಯ ಹುಟ್ಟಿತು. ಭರ್ತೃಹರಿಯು ತನ್ನ ಉತ್ತರ ರಾಮಾಯಣ ನಾಟಕದಲ್ಲಿ “ದುಃಖವನ್ನು ಸಹಿಸಲೆಂದೇ ರಾಮನಲ್ಲಿ ಚೈತನ್ಯವನ್ನು ತುಂಬಲಾಯಿತು” ಎಂದು ಹೇಳಿದ್ದಾನೆ. ಬೇಂದ್ರೆಯವರು ಸಹ ತಮ್ಮೆಲ್ಲ ದುಃಖಗಳಲ್ಲಿ ಬೆಂದು, ತಮ್ಮ ಪಾಡನ್ನು ಹಾಡಾಗಿಸಿ ನಮಗೆ ನೀಡಿದ್ದಾರೆ.

# ಚಂದ್ರಶೇಖರ ಕಂಬಾರರವರ "ಗುಡುಗುಡು ಗುಮ್ಮ".

'ಗುಡು ಗುಡು ಗುಮ್ಮ' ಕವನದ ವಸ್ತು ಪಶ್ಚಿಮ ಸಂಸ್ಕೃತಿಯ ಸಂಬಂಧದಿಂದ ಎದುರಾದ ಅಧಃಪತನ. ಕಂಬಾರರೇ ಸೂಚಿಸುವಂತೆ, "ಪಶ್ಚಿಮ, ಅದರ ಸಹವಾಸದ ಫಲದ ವಾಣಿಜ್ಯ ಸಂಸ್ಕೃತಿ, ಅದಕ್ಕೆ ಮನೆ, ಮಠ ಕೆಡವಿ ಮಾಡಿದ ರಸ್ತೆ, ಅದರ ಪರಿಣಾಮ ರಾಜ್ಯ, ವೃತ್ತಿ, ಸಮಾಜ, ಸಂಸ್ಕೃತಿ, ಕುಟುಂಬಗಳ ಸಂಬಂಧದ ಅಧಃಪತನ ಇದರ ವಸ್ತು".

**ಕಿಟಕಿಯ ಗಾಜು ಒಡೆಯುತ್ತಿವೆ, ಮುರಿಯುತ್ತಿವೆ**

**ಬಾಗಿಲು, ಗೋಡೆ ಬಿರಿಯುತ್ತಿವೆ ಬರುತ್ತಿದೆ**

**ಮನೆಯಲ್ಲೇ ನಮ್ಮ ಸದರಿನಲ್ಲೇ ಗುಮ್ಮ**

**ನುಗ್ಗುತ್ತಿದೆ! ಮನೆಯಲ್ಲೇ ಹಾಯುತ್ತಿದೆ**

**ಮನೆಯನ್ನೆಲ್ಲ ರಸ್ತೆ ನಾಡುತ್ತದೆ, ಹೆಮ್ಮೆ ಪಡುತ್ತದೆ.**

**ನಾನು?**

**ಕಸದ ಗುಂಡಿಯಲ್ಲಿ ಕಳಕೊಂಡ ವಿಳಾಸದ**

**ಚೀಟಿ ಹುಡುಕುತ್ತ**

**ಹುಡುಕುತ್ತ**

**ಹುಡುಕುತ್ತಾ ಅಲೆದಾಡುತ್ತೇನೆ....**

ಈ ಮೇಲಿನ ಪದ್ಯದಲ್ಲಿ 'ಗುಡು ಗುಡು ಗುಮ್ಮ'ನ ದಮನಕಾರೀ ಶಕ್ತಿಯ ಪರಿಣಾಮದ ಚಿತ್ರಗಳನ್ನು ಕಾಣುತ್ತೇವೆ. 'ದಿಲ್ಲಿಯೆಂಬ ಕ್ಯಾಬರಿ', 'ಇಟ್ಟಿಗೆಯ ಪಟ್ಟಣ', 'ನಾಡು-ಕಾಡು', 'ಸೈನಿಕರ ಕೋವಿಯ ಹಾಡು', 'ಸೈನಿಕರ ಸಿಟಿ ಬಗೆಗಿನ ಹಾಡು', 'ಶಿವಾಪುರದ ಹಾಡು', 'ಭಾರತಿ', 'ಕೇಳೆನ್ನ ದೇಶವೆ' ಮೊದಲಾದ ಕವಿತೆಗಳಲ್ಲಿ ನಗರ ಮತ್ತು ಗ್ರಾಮಸಂಸ್ಕೃತಿಗಳ ಸಂಘರ್ಷ ಮೈಪಡೆಯುತ್ತವೆ.

# ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ದಿಂದ ಆಯ್ದ ಪದ್ಯಭಾಗಗಳು:

ಡಿ.ವಿ.ಜಿ. ಎಂಬ ಮೂರಕ್ಷರದಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ಹಲವು ಮುಖಗಳಲ್ಲಿ ಶ್ರೀಮಂತಗೊಳಿಸಿದವರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. ಅವರ 'ಮಂಕುತಿಮ್ಮನ ಕಗ್ಗ' ಹೊಸಗನ್ನಡದ ಚಿರಕೃತಿಗಳಲ್ಲೊಂದಾಗಿ ಜನಜನಿತವಾಗಿದೆ. "ಕನ್ನಡದ ಭಗವದ್ಗೀತೆ" ಎಂದು ಕೃತಿ ಪ್ರಸಿದ್ಧವಾಗಿದ್ದರೆ; ಆಧುನಿಕ ಸರ್ವಜ್ಞ; ತಿರುವಳ್ಳುವರ್; ವೇಮನ ಎಂಬ ಅಭಿದಾನವನ್ನು ಡಿ.ವಿ.ಜಿ.ಯವರಿಗೆ ಕಗ್ಗ ತಂದುಕೊಟ್ಟಿದೆ. ಇದರಲ್ಲಿ ಡಿ.ವಿ.ಜಿ.ಯವರು ಜೀವನದ ವಿಶಿಷ್ಟ ಆಯಾಮಗಳನ್ನು,ಜೀವನದ ರೀತಿ ನೀತಿಗಳನ್ನು ಉದಾಹರಣೆ ಸಮೇತವಾಗಿ ವಿವರಿಸಿದ್ದಾರೆ.

**ನಗುವು ಸಹಜದ ಧರ್ಮ ನಗಿಸುವುದು ಪರಧರ್ಮ।**

**ನಗುವ ಕೇಳುತ ನಗುವುದತಿಶಯದ ಧರ್ಮ ॥**

**ನಗುವ ನಗಿಸುವ ನಗಿಸಿ ನಗುತ ಬಾಳುವ ವರವ।**

**ಮಿಗೆ ನೀನು ಬೇಡಿಕೊಳೋ - ಮಂಕುತಿಮ್ಮ ॥**

ನಗು ಒಂದು ನೈಸರ್ಗಿಕ ಧರ್ಮ-ಸಂತೋಷವಾಗಿರುವುದು ಮನುಷ್ಯನ ಮೂಲ ಸ್ವರೂಪ. ಇತರರನ್ನು ನಗುವಂತೆ ಮಾಡುವುದು ಪರಿಶುದ್ಧ ಧರ್ಮ. ಯಾವಾಗಲೂ ನಗುತ್ತ ಮತ್ತು ಎಲ್ಲರನ್ನೂ ನಗಿಸುತ್ತ ಬಾಳುವ ವರವನ್ನು ದೇವರಿಂದ ಬೇಡಿಕೊಳ್ಳಿ ಎಂದು ಡಿವಿಜಿ ಯವರು ಹೇಳುತ್ತಾರೆ.

**ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು|**

**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ||**

**ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ|**

**ಎಲ್ಲರೊಳಗೊಂದಾಗು ಮಂಕುತಿಮ್ಮ||**

ಪರ್ವತಗಳ ಬುಡದಲ್ಲಿರುವ ಹುಲ್ಲಾಗಿರಿ, ಅಂದರೆ ವಿನಯದಿಂದ ಇರಿ ಮತ್ತು ಎಲ್ಲರಿಗೂ ಉಪಯೋಗಕ್ಕೆ ಬರುವಂತಹ ವಸ್ತುವಾಗಿರಿ. ಮನೆಯಲ್ಲಿ ಹೂವಿನಂತೆ ಪರಿಮಳ ಹರಡಿಸಿ. ಭಾಗ್ಯ ನಿಮ್ಮ ಮೇಲೆ ಧಾರಾಕಾರ ತೊಂದರೆಗಳನ್ನು ಎಸೆದಾಗ ಕಲ್ಲಿನಂತೆ

ಗಟ್ಟಿಯಾಗಿರಿ.ನಿರ್ಗತಿಕರಿಗೆ ಮತ್ತು ದೀನ ದುರ್ಬಲರಿಗೆ ಸಕ್ಕರೆಯಂತೆ ಸಿಹಿಯಾಗಿರಿ ಅಂದರೆ ಯವಾಗಲೂ ದೀನ ದುರ್ಬಲರ ಗೆಳೆಯರಾಗಿರಿ, ಎಲ್ಲರೊಳಗೆ ಒಬ್ಬರಾಗಿರಿ ಎಂದು ಡಿ.ವಿ.ಜಿ.ಯವರು ಈ ಕಗ್ಗದಲ್ಲಿ ಹೇಳುತ್ತಾರೆ.

**ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು |**

**ಗುರುತಿಸೊಳಿತಿರುವುದನು ಕೇಡುಗಳ ನಡುವೆ ||**

**ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು |**

**ಹರುಷಕ್ಕಿದೆ ದಾರಿಯೆಲೊ - ಮಂಕುತಿಮ್ಮ ||**

ಕೈಗೆ ಸಿಗದೆ ಇರುವುದರ ಲೆಕ್ಕಾಚಾರದಲ್ಲಿ ಕೈಯಲ್ಲಿರುವದನ್ನು ಮರೆಯದೆ ಇರು. ನಮಗೆ ಕಾಣುವ ಬಹಳಷ್ಟು ಕೇಡುಗಳ ಮಧ್ಯೆ ಒಳ್ಳೆಯದನ್ನು ಗುರುತಿಸು. ಕೈಗೆ ಸಿಗದ ಭಾಗ್ಯವನ್ನು ಬಿಟ್ಟು ಕೈಯಲ್ಲಿರುವ ಭಾಗ್ಯವನ್ನು ತೃಪ್ತಿಯಿಂದ ಅನುಭವಿಸು. ಇದೇ ಹರುಷಕ್ಕೆ ದಾರಿ ಎಂದು ಡಿವಿಜಿಯವರು ಈ ಕಗ್ಗದಲ್ಲಿ ಹೇಳುತ್ತಾರೆ.

**ಗೌರವಿಸು ಜೀವನವ ಗೌರವಿಸು ಚೇತನವ**

**ಆರದೋ ಜಗವೆಂದು ಭೇದವೆಣಿಸದಿರು**

**ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ**

**ದಾರಿಯಾತ್ಮೋನ್ನತಿಗೆ-ಮಂಕುತಿಮ್ಮ**

ಇದು ಡಿವಿಜಿಯವರು ಮಾನವ ಜನಾಂಗಕ್ಕೆ ನೀಡಿರುವ ಸಂದೇಶವಾಗಿದೆ. ಸೌಂದರ್ಯ ಸಾಧಕಗಳಾದ ನಮ್ಮ ಲೋಕವ್ಯಾಪಾರಗಳನ್ನು ಗೌರವಿಸಬೇಕು. ನಮ್ಮ ಸುತ್ತ ಮುತ್ತ ಇರುವ ಸೌಂದರ್ಯವನ್ನು ಗ್ರಹಿಸುವ ಕಣ್ಣು ಬೇಕು. ಜಗದ ದೈನಂದಿನ ಜಂಗಮತೆಯೊಂದಿಗೆ ನಮಗಿರುವ ಸಂಬಂಧವನ್ನು ಅರಿಯಬೇಕು. ಆ ಮೂಲಕ ಜೀವನ ಸಮೃದ್ಧಿಯನ್ನು ಪಡೆಯುವುದು ಉದ್ಧಾರದ ದಾರಿಯಾಗಬೇಕು ಎಂದು ವಿವರಿಸಿದ್ದಾರೆ.

VTU BSc

# ಡಾ. ಸಿದ್ದಲಿಂಗಯ್ಯ ನವರ "ನನ್ನ ಕವನ" :

ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ

ಬದುಕು ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗಳು
ಜೀವ ನನ್ನ ಕವನ

ಚಿಮ್ಮಿ ಹರಿಯುವ ರಕ್ತದ ಕೋಡಿ
ಕೆಂಪು ಕಡಲು ಕವನ
ಹೆಣ್ಣು ತುಳುಕಿಸಿದ ಕಣ್ಣೀರಿನ ಹನಿ
ನನ್ನ ಪುಟ್ಟ ಕವನ

ಕಾಡಿನ ನಡುವೆ ಕಂಗೆಟ್ಟವರಿಗೆ
ಕಂಡ ದಾರಿ ಕವನ
ನಡುರಾತ್ರಿಯಲ್ಲಿ ನಡುಗುವ ಜನತೆಗೆ

ಧೈರ್ಯ ಕೊಡುವ ಕವನ

ಮರಳುಗಾಡಿನಲ್ಲಿ ಬೀಸುತ್ತಲಿರುವ
ಬಿರುಗಾಳಿ ನನ್ನ ಕವನ
ಅರಮನೆಯಲ್ಲಿ ಉರುಳುತಲಿರುವ
ಸಾವು ನನ್ನ ಕವನ

ಕುರಿಗಳ ಕಾಯುವ ಕುರುಬನ ಕೂಗು
ಜನರ ಮಾತು ಕವನ
ಸೋತ ರಟ್ಟೆಗಳ ಹೂತ ಕಾಲುಗಳ
ಬೆವರ ಹಸಿರು ಕವನ

ನನ್ನ ಜನರೊಡನೆ ನಾನಾಡಿದ ಮಾತು
ನಾನು ಕೊಡುವ ಕವನ
ನನ್ನ ಜನರ ನಾ ನೋಡಿದ ರೀತಿ
ನನ್ನ ಒಡಲ ಕವನ

ಕನ್ನಡದ ಪ್ರಮುಖ ದಲಿತ ಕವಿ ಸಿದ್ದಲಿಂಗಯ್ಯನವರು ಬರೆದ ಹೊಲೆಮಾದಿಗರ ಹಾಡು ಎಂಬ ಕವನ ಸಂಕಲನವು ಪ್ರಕಟಗೊಂಡಾಗ ಕನ್ನಡ ಕಾವ್ಯಲೋಕ ಹೊಸ ಆಯಾಮ ಮತ್ತು ಧ್ವನಿಯನ್ನು ಪಡೆದುಕೊಂಡಿತು. ಅಲ್ಲಿಯವರೆಗೆ ಕೆಳ ವರ್ಗಗಳು, ಶೋಷಿತ ಸಮಾಜದ ಪಂಗಡಗಳು, ನೊಂದ ಅದೆಷ್ಟೋ ಹೃದಯಗಳು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದೆ, ನೋವು ಕಷ್ಟ ಕಾರ್ಪಣ್ಯಗಳ ದುಃಖವನ್ನು ತೋಡಿಕೊಳ್ಳಲು ಸಾಧ್ಯವೇ ಆಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಹಾಡಿನ ರೂಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮುನ್ನುಡಿಯನ್ನು ಬರೆದರು ಕವಿ ಸಿದ್ದಲಿಂಗಯ್ಯನವರು.

"ನನ್ನ ಕವನ" ಈ ಗೀತೆಯನ್ನು ಇವರ ಸಾವಿರಾರು ನದಿಗಳು ಎಂಬ ಕವನ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ. ಇಲ್ಲಿ ಕವಿಯು ತನ್ನ ಕಾವ್ಯ ಸ್ವರೂಪವನ್ನು ಕುರಿತಾಗಿ ಬರೆದ ಮೀಮಾಂಸೆಯೇ ಕವನದ ಪ್ರಧಾನ ವಸ್ತುವಾಗಿದೆ. ಇಲ್ಲಿ ಕಾವ್ಯ ಮತ್ತು ಕವಿಯ ಸಂಬಂಧದಲ್ಲಿ

21KSS27 Draft Copy

ಮೂಡುವ ಸಾವಯವ ಅಭಿವ್ಯಕ್ತಿಯ ವಿವರಗಳನ್ನು ಕಾಣುತ್ತೇವೆ. ಕಾವ್ಯದ ಬಗ್ಗೆ ಇದ್ದಂತಹ ರೂಢಿಗತ ನಿಲುವುಗಳಿಗಿಂತ ಭಿನ್ನವಾದ ವಿಶಿಷ್ಟ ಕ್ರಮವನ್ನು ಈ ಕವನ ತೆರೆದಿಡುತ್ತದೆ. ಕನ್ನಡ ಕಾವ್ಯವು ಅದುವರೆಗೆ ಅಭಿವ್ಯಕ್ತಿಸದ ಮೂಕ ದನಿಗಳನ್ನು ನನ್ನ ಕವನ ಅಭಿವ್ಯಕ್ತಿಸುತ್ತದೆ ಎಂದು ಕವಿ ಸ್ಪಷ್ಟಪಡಿಸಿದ್ದಾರೆ.

# ಎಂ ಗೋಪಾಲಕೃಷ್ಣ ಅಡಿಗ ಅವರ ಕವನ "ಭೂತ":

ಕಾಡುತ್ತಿವೆ ಭೂತಕಾಲದ ಭ್ರೂಣಗೂಢಗಳು :

ಹುಗಿದ ಹಳಬಾವಿಯೊಳ ಕತ್ತಲ ಹಳಸುಗಾಳಿ

ಅಂಬೆಗಾಲಿಟ್ಟು ತಲೆಕೆಳಗು ತೆವಳುತ್ತೇರಿ

ಅಳ್ಳಳ್ಳಾಯಿ ಜಪಿಸುವ ಬಿಸಿಲಕೋಲಿಗೇರಿ ತೆಕ್ಕಾಮುಕ್ಕಿ

ಹಾಯುತ್ತಿದೆ ಆಗಾಗ್ಗೆ ತುಳಸಿವೃಂದಾವನದ ಹೊದರಿಗೂ.

ತೊಟ್ಟು ಕಳಚಿದ ಹೊಕ್ಕುಳಿನ ಬಳ್ಳಿ ದಡದಲ್ಲಿ

ಕತ್ತರಿಸಿದಿಲಿಬಾಲ ಮಿಡುಕುತ್ತದೆ.

ಕತ್ತಲಲ್ಲೇ ಕಣ್ಣುನೆಟ್ಟು ತಡಕುವ ನನಗೆ

ಹೊಳೆವುದು ಹಠಾತ್ತನೊಂದು ಚಿನ್ನದ ಗೆರೆ :

ಅಮವಾಸ್ಯೆ ಕಂದಕಗಳಲ್ಲಿ ಹೇಗೋ ಬಿದ್ದು ಒದ್ದಾಡುತ್ತಿರುವ ಗರಿ ಸುಟ್ಟ ತಾರೆ.

--೨--

ವರ್ತಮಾನಪತ್ರಿಕೆಯ ತುಂಬ ಭೂತದ ಸುದ್ದಿ :

ನೀರ ಮೇಲಕ್ಕೊಂದು ಮಡಿ, ಕೆಳಕ್ಕೇಳು ಮಂಜಿನ ಶಿಖರಿ ;

ಇದ್ದಕ್ಕಿದ್ದಂತಕಸ್ಮಾತ್ತಗ್ನಿನುಡಿಯುಗಿದ

ಮಂಜು ಮುಸುಕಿದ ಮುಗ್ಧ ಜ್ವಾಲಾಮುಖಿ.

ಪತ್ರಿಕೆಯ ಮುಚ್ಚಿದರು----

ಸದ್ದಿರದ ಖಾಲಿಕಂಕಾಲ ಕೋಣೆಗಳಲ್ಲಿ

ತಾಳವಿಲ್ಲದೆ ಮೂಕಸನ್ನೆ ಮುಲುಕುವ ತಿರುಗುಮುರುಗು ಪಾದದ ಪರಿಷೆ

ಅಂತರಾಳಗಳಲ್ಲಿ ನಿಂತ ನೀರುಗಳಲ್ಲಿ

ಕಂತಿ ಕೈಬಡೆವ ಬೀಜಾಣುಜಾಲ ;

ಕಾಳರಂಗಸ್ಥಳದ ಪರದೆ ಮುರಿಮರೆಯಲ್ಲಿ

ಮಾತು ಹೆಕ್ಕುವ ಮಿಣುಕು ಮೊನೆಯ ಬಾಲ----- ಇವು

ಬಯಸವೆ ಹೊರಂಗಳದ ರಂಗುರಂಗಿನ ಬಳ್ಳಿ ಹೂವು ಹೊದರ ?

---೩—

ನೀರು ನೆಲೆಯಿಲ್ಲದವರು ಪಿತೃಪಿತಾಮಹರು,

ಗಾಳಿಹೆದ್ದೆರೆಲಾಳಿಗಂಟಿ ನೆಲಸಿಕ್ಕಿಯೂ ದಕ್ಕದವರು.

ಉಚ್ಚಾಟನೆಯ, ತರ್ಪಣದ ತಂತ್ರ ಬಲ್ಲೆ ; ಆದರು ಮಂತ್ರ ಮರೆತೆ ;

ಬರಿದೇ ಹೀಗೆ ಆಡಿಸುತ್ತಿದ್ದೇನೆ ಮಂತ್ರದಂಡ.

ಪುರೋಹಿತರ ನೆಚ್ಚಿ ಪಶ್ಚಿಮಬುದ್ಧಿಯಾದೆವೋ ;

ಇನ್ನಾದರೂ ಪೂರ್ವಮೀಮಾಂಸೆ ಕರ್ಮಕಾಂಡಗಳನ್ನು ಬಗೆಯಬೇಕು.

ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು ;

ಕೆಳಕ್ಕೆ ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ

ಕಂಡೀತು ಗೆರೆ ಮಿರಿವ ಚಿನ್ನದದಿರು,

ಹೊರತೆಗೆದು ಸುಟ್ಟು ಸೋಸುವಪರಂಜಿ ವಿದ್ಯೆಗಳ

ಇನ್ನಾದರೂ ಕೊಂಚ ಕಲಿಯಬೇಕು :

ಹೊನ್ನ ಕಾಯಿಸಿ ಹಿಡಿದು ಬಡಿದಿಷ್ಟದೇವತಾ---

ವಿಗ್ರಹಕ್ಕೊಗ್ಗಿಸುವ ಅಸಲು ಕಸಬು.

--೪—

ಬಾವಿಯೊಳಗಡೆ ಕೊಳೆವ ನೀರು ; ಮೇಲಕ್ಕಾವಿ ;

ಆಕಾಶದುದ್ದವೂ ಅದರ ಕಾರಣ ಬೀದಿ ;

**ಕಾರ್ಮುಗಿಲ ಖಾಲಿಕೋಣೆಯ ಅಗೋಚರ ಬಿಂದು**

**ನವಮಾಸವೂ ಕಾವ ಭ್ರೂಣರೂಪಿ---**

**ಅಂತರಪಿಶಾಚಿ ಗುಡುಗಾಟ, ಸಿಡಿಲಿನ ಕಾಟ---**

**ಭೂತರೂಪಕ್ಕೆ ಮಳೆ ವರ್ತಮಾನ ;**

**ಅಗೆದುತ್ತ ಗದ್ದೆಗಳ ಕರ್ಮಭೂಮಿಯ ವರಣ ;**

**ಭತ್ತಗೋಧುವೆ ಹಣ್ಣುಬಿಟ್ಟ ವೃಂದಾವನ,**

**ಗುಡಿಗೋಪುರಗಳ ಬಂಗಾರ ಶಿಖರ.**

ಇದು ಮುಖ್ಯವಾಗಿ ಚಿಂತನಾ ಪ್ರಧಾನವಾದ ಜಿಜ್ಞಾಸೆಯಿಂದ ಕೂಡಿದ ತಾತ್ವಿಕ ಕವನವಾಗಿದೆ. ಕವನದಲ್ಲಿ ಶಿಲ್ಪ ಸೌಂದರ್ಯವಿದೆ. ಈ ಕವನದಲ್ಲಿ ಬರುವ ಭೂತ ಪದಕ್ಕೆ ಎರಡು ಅರ್ಥಗಳನ್ನು ಮಾಡಬಹುದು. ಒಂದು past ; ಎರಡನೆಯದು ghost. ಕವಿ ತನ್ನ ಭೂತಕಾಲವನ್ನು ಅಂದರೆ ತನ್ನ ಪೂರ್ವಸಂಸ್ಕಾರಗಳನ್ನು, ಪೂರ್ವಪರಂಪರೆಯನ್ನು ಮರೆತಿದ್ದಾನೆ. ಇದು ವರ್ತಮಾನದ ಪರಿಣಾಮವಾಗಿರಬಹುದು; ಪರಸಂಸ್ಕೃತಿಯ ಆಕರ್ಷಣೆಯ ಪರಿಣಾಮವಾಗಿರಬಹುದು. ಇದರಿಂದ ಕವಿಯ ಮೇಲೆ Alienation Effect ಅಂತೂ ಆಗಿದೆ. ಕವಿಯು ಇಲ್ಲಿ ತನ್ನ ಜನಾಂಗದ ಪ್ರತಿನಿಧಿಯೂ ಹೌದು. ಆದುದರಿಂದ ಒಂದು ಜನಾಂಗವೇ ತನ್ನ ಪರಂಪರೆಯ ವಿಸ್ಮರಣೆಗೆ ಒಳಗಾಗಿದ್ದನ್ನು ಕವಿಯು ವೈಯಕ್ತಿಕವಾಗಿ ಅನುಭವಿಸುತ್ತಿದ್ದಾನೆ. ಆದರೆ ಓರ್ವ ವ್ಯಕ್ತಿಯ ಅಥವಾ ಒಂದು ಜನಾಂಗದ ಸುಪ್ತಪ್ರಜ್ಞೆಯಲ್ಲಿರುವ ಪರಂಪರೆಯ ನೆನಪಿನ ಗ್ರಂಥಿಗಳು ಸುಲಭವಾಗಿ ನಾಶವಾಗುವುದಿಲ್ಲ. ಅವು ಒಂದಿಲ್ಲ ಒಂದು ರೀತಿಯಲ್ಲಿ ತಮ್ಮ ಇರುವಿಕೆಯನ್ನು ವ್ಯಕ್ತಪಡಿಸುತ್ತವೆ. ಆದುದರಿಂದಲೇ ಕವಿಯು ಇವುಗಳನ್ನು 'ಭೂತಕಾಲದ ಭ್ರೂಣ ಗೂಢಗಳು ' ಎಂದು ಹೇಳುತ್ತಿದ್ದಾನೆ. ಪರಂಪರೆಯ ನೆನಪಿನ ಈ ಗ್ರಂಥಿಗಳು ಕವಿಗೂ ಸಹ ಗೂಢವಾಗಿಯೇ ಇವೆ. ಅವುಗಳನ್ನು ಗುರುತಿಸಲು ಆತ ಶಕ್ತನಾಗುತ್ತಿಲ್ಲ. ಆದರೆ ಅವು ನಿರ್ಜೀವ ಗೂಢಗಳಲ್ಲ. ಅವು ಭ್ರೂಣಾವಸ್ಥೆಯಲ್ಲಿವೆ. ಅಂದರೆ ಅವುಗಳಲ್ಲಿ ಜೀವವಿದೆ. ಅವು ಕವಿಯ ಸುಪ್ತ ಪ್ರಜ್ಞೆಯಿಂದ ಅವನ ಜಾಗೃತ ಪ್ರಜ್ಞೆಗೆ ಅಂದರೆ ಅವನ ಸಂಕಲ್ಪಾತ್ಮಕ ಪ್ರಜ್ಞೆಗೆ (Determining mind) ಬರಲು ತವಕಿಸುತ್ತವೆ. ಶಾಸ್ತ್ರೀಯ ಮನೋವಿಜ್ಞಾನದ ಪಿತಾಮಹನಾದ ಫ್ರಾಯ್ಡನ ಭಾಷೆಯಲ್ಲಿ ಈ ಭ್ರೂಣಗೂಢಗಳು ಅಂದರೆ complexes in subconscious mind ಎಂದು ಹೇಳಬಹುದು. ಮತ್ತೊಬ್ಬ ಮನೋವಿಜ್ಞಾನಿ ಯೂಂಗನ ಭಾಷೆಯಲ್ಲಿ ಇವನ್ನು ಜನಾಂಗೀಯ ಪ್ರಜ್ಞೆಯ ಗ್ರಂಥಿಗಳು ಎಂದೂ ಹೇಳಬಹುದು. ಒಟ್ಟಿನಲ್ಲಿ ಈ ಭ್ರೂಣಗೂಢಗಳಿಂದಾಗಿ ಕವಿಯ ಮನಸ್ಸು ತೀವ್ರ ತಳಮಳಕ್ಕೊಳಗಾಗಿದೆ.

ಕವನದ ಮೊದಲ ಭಾಗದಲ್ಲಿ ಈ ಅಸ್ವಸ್ಥತೆಯ ವರ್ಣನೆ ಇದೆ. ಎರಡನೆಯ ಭಾಗದಲ್ಲಿ ಗುರುತಿಸಲಾಗದ ಈ ಭೂತಗಳ ವರ್ಣನೆ ಇದೆ. ಮೂರನೆಯ ಭಾಗದಲ್ಲಿ ಕವಿಯ ಸಂಕಲ್ಪವರ್ಣನೆ ಇದೆ. ನಾಲ್ಕನೆಯ ಭಾಗದಲ್ಲಿ ಆಶಯ ಮುನ್ನೋಟದ ಸಂಕೇತವಿದೆ. ನಿರಾಶೆಯಿಂದಲೇ ಪ್ರಾರಂಭವಾದ ಕವನವು ಸಂಕಲ್ಪದಲ್ಲಿ ಹಾಗೂ ಆಶಾವಾದದಲ್ಲಿ ಮುಕ್ತಾಯವಾಗುತ್ತದೆ.

# ವೈದೇಹಿ ರವರ ಅಡುಗೆಮನೆಯ ಹುಡುಗಿ :

ಇವೆಯಂತೆ ತರತರದ ಅರ್ಥ

ಅಡುಗೆಮನೆಗೆ - ತರತರದ ಪದಾರ್ಥಗಳಂತೆ

ಆದರೆ ಆ ಹುಡುಗಿ ಗಂತು ಇದೆ

ಇದೇ ಮನೆ ಅಡುಗೆ ಮನೆ ಆ ಮನೆ ಈ ಮನೆ

ಗಟ್ಟಿ ಕೇಳಿದರೆ ಸ್ಮಶಾನವು ಸುಮ್ಮನೆ

ಪ್ರತಿ ಪ್ರಾಣಿಗೂ ಒಂದು ಹೊಟ್ಟೆ ಇದ್ದಹಾಗೆ

ಅವಳ ಅಡುಗೆಮನೆ

ಯಾರ ಸಿದ್ಧಾಂತ ಪಾಕವೋ

ಬಾಗಿಲಿಲ್ಲ ಕಿಟಕಿಯಿಲ್ಲ

ಕೊನೆಗೊಂದು ಕಿರು ಕಿಂಡಿಯಾದರೂ....

ಹಂಬಲಿಸುತ್ತಾಳೆ.

ಹುಡುಗಿ ಹಾಡುವಾಗ ಹೊರಗೆ

ಹಕ್ಕಿ ಪಕ್ಕಿ ಮತ್ತು ಮಕ್ಕಳಾಡುವ ಸದ್ದು

ಬಸ್ಸು-ಕಾರು ಆಟೋ ದೂರಕೋ ಕಡಲ ತೀರಕೋ

ಓಡುವಾ ಸದ್ದು.

ಮಸಾಲೆ ಕಡೆಯುತ್ತ ಕಡೆಗಣಿಸುತ್ತಾಳೆ.

ಅಭಾವವಿದ್ದರೆ ವೈರಾಗ್ಯ ತಾನೆ?

ಆದರೂ ಒಮ್ಮೊಮ್ಮೆ

ಕೇಳಿಸಿದರೆ ವಿಮಾನ !

ವಿಮಾನ ವಿಮಾನ ! ಇದ್ದ ಇದ್ದಲ್ಲೇ ಕೂಗುತ್ತಾಳೆ
ಎಷ್ಟೆಂದರೂ ಉಪ್ಪು ಹುಳಿ ವಯೋಮಾನ
ಕೇಳುವಳು - ಎತ್ತ ಪಯಣ ?
ಇಪ್ಪತ್ತೊಂದನೆಯ ಶತಮಾನ ? ಜೊತೆಗೆ
ಕರೆದೊಯ್ಯುವೆಯಾ ನನ್ನ ?
ಕರಗುತ್ತದೆ
ಆಗಸದ ಸದ್ದು ನಿಧಾ.........ನ.

ಕ್ರಿ ಪೂ ಅಡುಗೆ ಮನೆಯ ಹುಡುಗಿ
ಪೂ ಪೂ ಊ
ದುತ್ತ ಹಾಡುಗಳು
ಇರಬಹುದು ಈ ವಿಮಾನದೊಳಗೂ ಒಬ್ಬ
ಹಗಲುವೇಷದ ಯಜಮಾನ
ಇರುವಂತೆ ಪ್ರತಿ ಪ್ರಾಣಿಗೂ ಕುದಿಯುವ ಮತ್ತು
ಆಳುವ ಜಾಯಮಾನ.

ಮತ್ತೆ ಬರಬಹುದು ಪುಷ್ಪಕ ರೆಕ್ಕೆ ಬಡಿಯುತ್ತಾ

ಮಾಡನ್ನು ಸೀಳಿ

ಏಣಿ ಕೆಳಗಿಳಿಸಿ

ಸಾಮ್ರಾಣಿ ಸಿಪ್ಪೆ ಬಿಡಿಸುತ್ತಿರುವ ತನ್ನ

ಎತ್ತಿ ಒಯ್ದು ಸಾಮ್ರಾಜ್ಞೆ ಮಾಡಿ

ರಾಮ ರಾಮ ! ಲಂಕೆಗೋ ಅಯೋಧ್ಯೆಗೂ !

ಛೆ ! ಕೇಳಿ ಹಳಸಿದ ಅವವೇ ಊರುಗಳು ಹೆಸರುಗಳು,

ಕಂಡಿದ್ದೀರಾ ಯಾರೂ ಕಾಣದಂತಹ ಲೋಕ ?

ಹಾರಲಲ್ಲಿಗೆ _ ಆಜ್ಞೇ ಮಾಡುವವಳು ತಾನು

ಹೀಗೆ_

ಹಾಡು ನೇಯುವವಳು ಹುಡುಗಿ

ಮುರಿಯುತ್ತಾ ಮೆಣಸಿನ ಚೋಟ್ಟು

ಆಕಾಶದ ಸದ್ದಿಗೆ ಕಿವಿಯ ತೆರೆದಿಟ್ಟು

ಕಳೆಯುವಳು ಆಯುಷ್ಯ ಬೊಟ್ಟು ಬೊಟ್ಟು.

ಕನ್ನಡ ಸಾಹಿತ್ಯದಲ್ಲಿ ಸೃಜನಾತ್ಮಕವಾಗಿ ಮತ್ತು ಎಲ್ಲಾ ಕಾಲದಲ್ಲಿಯೂ ಬೆಲೆಬಾಳುವಂತಹ ಸಾಹಿತ್ಯವನ್ನು ಬರೆದ ಲೇಖಕಿಯರಲ್ಲಿ ವೈದೇಹಿ ರವರು ಮೊದಲ ಸಾಲಿನಲ್ಲಿ ಕಂಡುಬರುತ್ತಾರೆ. ಇವರ ಮೂಲ ಹೆಸರು ಜಾನಕಿ. ಅಧಿಕಾರವಿಲ್ಲದ ಜಗತ್ತಿನ ಒಡತಿಯಾಗಿರುವ ಹೆಣ್ಣಿನ ಪ್ರಪಂಚವೇ ವೈದೇಹಿ ರವರ ಎಲ್ಲ ಕವನಗಳ ಪ್ರಧಾನ ವಸ್ತುವಾಗಿದೆ. ತನ್ನದೇ ಆದ ಅನುಭವಗಳನ್ನು ಕ್ಷುಲ್ಲಕ ಎನಿಸಿಕೊಳ್ಳಬಹುದು ಎಂಬ ಸಂದೇಹ ಸಂಕೋಚವಿಲ್ಲದೆ ಸ್ವಂತಿಕೆಯ ಮಿತಿಯಲ್ಲಿ ತನ್ನತನವನ್ನು ಮೀರಿ ಕೊಳ್ಳಲು ಪ್ರಯತ್ನಿಸುವ ಸೃಜನಶೀಲ ಪ್ರಜ್ಞೆಯನ್ನು ಹೊಂದಿರುವ ಹೆಣ್ಣು ಈ ಕವನದ ಕೇಂದ್ರ ವ್ಯಕ್ತಿ. ತರತರಹದ ಪಾತ್ರೆ ಪದಾರ್ಥಗಳ ನಡುವೆ ತಾನು ಬರಿ ಒಂದು ಪಾತ್ರೆಯು ಅಥವಾ ಪದಾರ್ಥವಾಗಿ ಒಳಗೊಳಗೆ ಬೇಯುವ ಅಡುಗೆ ಮನೆಯ ಹುಡುಗಿ : ಹೇಳಲಾರದ ಹೇಳಬಾರದ ಬಾಲ್ಯದ ನೆನಪುಗಳು ಗುಟ್ಟುಗಳು ಇವನ್ನೆಲ್ಲಾ ಭದ್ರವಾಗಿ ಮುಚ್ಚಿಟ್ಟುಕೊಂಡಿರುವ ಜಂಭದ ಚೀಲ ವ್ಯಾನಿಟಿ ಬ್ಯಾಗ್ ಇವೆಲ್ಲವೂ ಹೆಣ್ಣುತನಕ್ಕೆ ಒತ್ತುಕೊಟ್ಟು ಹೆಣ್ಣಿನ ಸ್ವಂತಿಕೆ ವ್ಯಕ್ತಪಡಿಸುವ ಸಹಜ ಚಿತ್ರಗಳಾಗಿ ವೈದೇಹಿಯವರ ಕವನಗಳಲ್ಲಿ ಮೂಡಿಬಂದಿರುವುದನ್ನು ಕಾಣಬಹುದು. ಈ ಕವನದಲ್ಲಿ ಹೆಣ್ಣಿನ ಅನುಭವದ ಹಲವು ವಿಧಾನಗಳು ಮತ್ತು ವಿಭಿನ್ನ ನೆಲೆಗಟ್ಟಿನಲ್ಲಿ ಅವಳು ತನ್ನ ಭಾವನೆಗಳನ್ನು ಹೇಗೆ ವ್ಯಕ್ತಪಡಿಸುತ್ತಾಳೆ ಎಂಬುದನ್ನು ವಿವರಿಸಿರುವುದನ್ನು ನೋಡುತ್ತೇವೆ.

# ಅಧ್ಯಾಯ - 9

==============================

## ಕನ್ನಡ ಸಿನಿಮಾರಂಗ ಬೆಳೆದು ಬಂದ ದಾರಿ ಮತ್ತು ನಾಡು - ನುಡಿ ಹಾಗೂ ನಾಡಿನ ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವಗಳು :

VTU BSc ಸಾಹಿತ್ಯ ಸಿಂಚನ 21KSS27 Draft Copy

### ಚಿತ್ರರಂಗದ ಹಿನ್ನೆಲೆ :

ನೂರಾರು ವರ್ಷಗಳ ಇತಿಹಾಸದ ಹಿನ್ನೆಲೆಯನ್ನು ಹೊಂದಿರುವ ಕನ್ನಡ ಚಿತ್ರರಂಗವು ಕರ್ನಾಟಕದಲ್ಲಿ ರಚಿಸಲಾಗುವ ಚಲನಚಿತ್ರಗಳನ್ನು ಒಳಗೊಂಡಿದೆ. ಪ್ರಮುಖವಾಗಿ ಕನ್ನಡ ಚಿತ್ರಗಳು, ಕೆಲವು ತುಳು ಹಾಗು ಕೊಂಕಣಿ ಭಾಷೆಗಳ ಚಿತ್ರಗಳು ಸಹ ಕನ್ನಡ ಚಿತ್ರರಂಗಕ್ಕೆ ಸೇರುತ್ತವೆ. ೧೯೩೪ ರಲ್ಲಿ ತೆರೆ ಕಂಡ "ಸತಿ ಸುಲೋಚನ" ಕನ್ನಡದ ಮೊದಲ ಚಿತ್ರ. ಕನ್ನಡ ಮೊದಲ ವರ್ಣಮಯ ಚಿತ್ರ 'ಅಮರಶಿಲ್ಪಿ ಜಕ್ಕಣಚಾರಿ'. "ಮೂರು ದಾರಿಗಳು"- ಇದು ಕನ್ನಡ ಚಿತ್ರರಂಗದ ಕೊನೆಯ ಕಪ್ಪುಬಿಳುಪು ಚಲನಚಿತ್ರ. ೧೯೫೪ರಲ್ಲಿ ಬಿಡುಗಡೆ ಹೊಂದಿದ "ಬೇಡರ ಕಣ್ಣಪ್ಪ" ಚಿತ್ರರಂಗದ ಪ್ರಮುಖ ನಟರಾದ ರಾಜಕುಮಾರ್ ಅವರ ಮೊದಲ ಚಿತ್ರ. ಕನ್ನಡ ಚಿತ್ರರಂಗವು ಮೂಲತಃ ರಂಗಭೂಮಿ ಯನ್ನು ಅವಲಂಬಿಸಿ ಆರಂಭವಾಯಿತು. ಕರ್ನಾಟಕದಲ್ಲಿ 'ವಸಂತಸೇನಾ' ಚಿತ್ರಕ್ಕೆ ಮೊದಲು ಮೂಕಿ ಚಿತ್ರಗಳು ತಯಾರಾಗಿದ್ದವು. ಆದರೆ ಅವು ಈಗಿನ ಪರಿಭಾಷೆಯಲ್ಲಿ ಹೇಳುವುದಾದರೆ ಕಥಾ ಚಿತ್ರಗಳಲ್ಲ. ರಂಗಭೂಮಿಯಲ್ಲಿ ಅಭಿನಯಿಸುವ ನಾಟಕಗಳನ್ನು ಚಿತ್ರಿಸಿ ಸಿನಿಮಾ ಮಾಡಿ ತೋರಿಸುತ್ತಿದ್ದರು. ಮೈಸೂರಿನ ಅಂದಿನ ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರು ಅರಮನೆಯಲ್ಲಿ ಪ್ರದರ್ಶನವಾದ ಎ.ವಿ. ವರದಾಚಾರ್ಯರು ಅಭಿನಯಿಸಿದ್ದ ರತ್ನಾವಳಿ ಥಿಯೇಟ್ರಿಕಲ್ ಕಂಪನಿಯ ನಾಟಕ ನಿರುಪಮಾ (೧೯೨೧)ವನ್ನು ಕೈಯಲ್ಲಿ ಸುತ್ತುವ ಕ್ಯಾಮೆರಾದಿಂದ (ಕ್ರಾಂಕಿಂಗ್ ಮಿಷಿನ್) ಚಿತ್ರೀಕರಿಸಿದ್ದರಂತೆ. ಹಾಗಾಗಿ ಎ.ವಿ. ವರದಾಚಾರ್ಯರು ಕನ್ನಡ ನೆಲದಲ್ಲಿ ಚಿತ್ರೀಕರಣಗೊಂಡ ಮೂಕಿ ಚಿತ್ರದ ಮೊದಲ ನಾಯಕ. ಕಂಠೀರವ ನರಸಿಂಹರಾಜ ಒಡೆಯರ್ ಮೊದಲ ನಿರ್ಮಾಪಕ. ೧೯೨೫ರಲ್ಲಿ ಗುಬ್ಬಿ ಚನ್ನಬಸವೇಶ್ವರ ಕಂಪನಿಯು ತರೀಕೆರೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಮಹಾತ್ಮಾ ಕಬೀರ್ ಚಿತ್ರವನ್ನು ಚಿತ್ರೀಕರಿಸಿ ಸಿನಿಮಾ ಮಾಡಿತು. ನಾಯಕ ಕಬೀರನ ಪಾತ್ರವನ್ನು ಅಭಿನವ ಶಿರೋಮಣಿ ಸಿ.ಬಿ. ಮಲ್ಲಪ್ಪನವರು ವಹಿಸಿದ್ದರು. ಮೂಕಿ ಚಿತ್ರಗಳ ತಯಾರಿಕೆಗೆ ಆಗ ಮುಂಬಯಿ ಕೇಂದ್ರವಾಗಿತ್ತು. ಆದರೆ ವೀರಣ್ಣನವರ ಪಾಲಿಗೆ ಮೂಕಿ ಚಿತ್ರ ನಿರ್ಮಾಣ ಒಂದು ದುಸ್ಸಾಹಸವಾಗಿತ್ತು.

### ಕನ್ನಡ ಚಿತ್ರರಂಗದ ಬೆಳವಣಿಗೆ :

ನಿರಂತರ ಪ್ರಯೋಗಶೀಲರಾಗಿದ್ದ ಕೋಟ ಶಿವರಾಮಕಾರಂತ ಅವರೂ ಮೂಕಿ ಚಿತ್ರ ನಿರ್ಮಾಣಕ್ಕೆ ಕೈಹಾಕಿದ್ದು ಮತ್ತೊಂದು ಸಾಹಸ. ಹರಿಜನರ ಬದುಕನ್ನು ಆಧರಿಸಿದ್ದ ಡೊಮಿಂಗೋ (೧೯೩೦) ಚಿತ್ರವನ್ನು ತಾವೇ ಚಿತ್ರೀಕರಿಸಿ, ಅಭಿನಯಿಸಿ ನಿರ್ದೇಶಿಸಿದ್ದರು. ಅನಂತರ ಭೂತರಾಜ್ಯ (೧೯೩೧) ಎಂಬ ಚಿತ್ರವನ್ನು ಸಹ ನಿರ್ಮಿಸಿದರು. ಕನ್ನಡದ ಮೊದಲ ಮಾತನಾಡುವ ಚಿತ್ರ ಸತಿ ಸುಲೋಚನ ಬಿಡುಗಡೆಯ ವೇಳೆಗೆ ಮೂಕಿ ಯುಗ ಅಂತ್ಯ ಕಂಡಿತು, ಕನ್ನಡ ಚಿತ್ರ ರಂಗದ ಇತಿಹಾಸದಲ್ಲಿ "ಷಾ ಚಮನ್‌ಮಲ್ ಡುಂಗಾಜಿ" ಪಾತ್ರ ಅತ್ಯಂತ ಮಹತ್ವದ್ದು. ಮೂಲತಃ ರಾಜಸ್ತಾನದವರಾದ ಇವರು ವ್ಯಾಪರಕ್ಕೆಂದು ೧೯೦೩ ರಲ್ಲಿ ಬೆಂಗಳೂರಿಗೆ ಆಗಮಿಸಿದವರು. ಇವರು ಪ್ರಾಣಿಗಳ ಮೇಲಿನ ಪ್ರೀತಿಯಿಂದ "ಪ್ರಾಣಿಬಲಿ" ನಾಶ ಪ್ರಚಾರವನ್ನು ಮಾಡಲು ಪ್ರಾರಂಭಿಸಿದರು, ಆನಂತರ ಈ ಕಾರ್ಯವನ್ನು ಜನರು ಸಂಪೂರ್ಣವಾಗಿ ನಿಲ್ಲಿಸಿದರು. ಇಲ್ಲಿನ ಮಾತೃಭಾಷೆಯಾದ ಕನ್ನಡದಲ್ಲಿ ಚಿತ್ರವನ್ನೇಕೆ ಮಾಡಬಾರದೆಂಬ ಪ್ರಶ್ನೆ ಮೂಡಿಬಂದಾಗ ಪೂರ್ವಾಪರ ಎಲ್ಲವನ್ನೂ ಯೋಚಿಸಿ ೧೯೩೨ ರಲ್ಲಿ "ಸೌತ್ ಇಂಡಿಯನ್ ಮೋವಿ ಟೋನ್" ಎಂಬ ಸಂಸ್ಥೆಯನ್ನು ಸ್ಥಾಪಿಸಿ ನಂತರ ಕನ್ನಡದ ಮೊದಲ ವಾಕ್ಚಿತ್ರವಾದ "ಸತಿ ಸುಲೋಚನಾ" ಚಿತ್ರವನ್ನು ನಿರ್ಮಿಸಿದರು.

ಪ್ರತಿ ವಾರ ಕನ್ನಡ ಸಿನಿಮಾಗಳು ಬಿಡುಗಡೆಯಾಗುತ್ತವೆ. ಈಗ ಕನ್ನಡ ಚಿತ್ರರಂಗದ ಖಾತೆಗೆ ಅನೇಕ ಸಾವಿರ ಸಿನಿಮಾಗಳು ಜಮಾ ಆಗಿವೆ. ಇಷ್ಟು ವರ್ಷದ ಪಯಣದಲ್ಲಿ ಎಷ್ಟೋ ಮರೆಯಲಾಗದ ಘಟನೆಗಳು ನಡೆದಿದೆ. ಇಂದು ಕನ್ನಡ ಚಿತ್ರರಂಗ ಭಾರತದ ನಾಲ್ಕನೇ ಅತಿ ದೊಡ್ಡ ಚಿತ್ರರಂಗವಾಗಿದೆ. 'ಬೇಡರ ಕಣ್ಣಪ್ಪ'ನಾಗಿ ಬಂದ ಮುತ್ತುರಾಜ್ ಈ ಚಿತ್ರದಿಂದ ರಾಜ್ ಕುಮಾರ್ ಆಗಿ ಬದಲಾದರು. ಮುಂದೆ ಈ ನಟ 200ಕ್ಕೂ ಹೆಚ್ಚು ಸಿನಿಮಾ ಮಾಡಿ ಕನ್ನಡಿಗರ ಕಣ್ಮಣಿ ಆದರು.ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ 1967 ರ 'ಬೆಳ್ಳಿ ಮೋಡ' ಸಿನಿಮಾದಿಂದ ಕನ್ನಡ ಚಿತ್ರರಂಗಕ್ಕೆ ಒಬ್ಬ ದೈತ್ಯ ನಿರ್ದೇಶಕನ ಪ್ರವೇಶ ಆಗುತ್ತದೆ. ಪುಟ್ಟಣ್ಣ ಇಂದಿಗೂ ಕನ್ನಡದ ಎಲ್ಲ ನಿರ್ದೇಶಕರಿಗೆ ಸ್ಫೂರ್ತಿ ನೀಡುವ ನಿರ್ದೇಶಕ. 'ಗೆಜ್ಜೆ ಪೂಜೆ', 'ರಂಗನಾಯಕಿ', ಮಾನಸ ಸರೋವರ' ಸೇರಿದಂತೆ ಸಾಕಷ್ಟು ಹೊಸ ಹೊಸ ಬಗೆಯ ಸಿನಿಮಾಗಳನ್ನು ಕನ್ನಡಕ್ಕೆ ಕೊಟ್ಟ ಖ್ಯಾತಿ ಇವರಿಗೆ ಸಲ್ಲುತ್ತದೆ.

ಮೊದಲ ಕಲರ್ ಸಿನಿಮಾ ಪರದೆ ಮೇಲೆ ಕಪ್ಪು ಬಿಳಿಪು ಎರಡೇ ಬಣ್ಣ ನೋಡುತ್ತಿದ್ದ ಪ್ರೇಕ್ಷಕರಿಗೆ ಹೊಸ ಜಗತ್ತನ್ನು ತೋರಿಸಿದ್ದು 'ಅಮರಶಿಲ್ಪಿ ಜಕಣಾಚಾರಿ' ಚಿತ್ರ. 1964ರಲ್ಲಿ ಬಂದ ಈ ಸಿನಿಮಾವನ್ನು ಬಿ.ಎಸ್.ರಂಗ ಅವರು ನಿರ್ಮಾಣ ಮತ್ತು ನಿರ್ದೇಶನ ಮಾಡಿದ್ದರು. ಈ ಸಮಯದಲ್ಲಿ ರಾಜ್ ಕುಮಾರ್, ವಿಷ್ಣುವರ್ಧನ್, ಶಂಕರ್ ನಾಗ್ ಮತ್ತು ಅಂಬರೀಶ್ ಪ್ರೇಕ್ಷಕರ ಮುಂದೆ ಪಾಸ್ ಆದರು. 'ನಾಗರಹಾವು' ಮೂಲಕ ವಿಲನ್ ಆಗಿ ಎಂಟ್ರಿ ಕೊಟ್ಟ ಅಂಬರೀಶ್ ಮುಂದೆ ನಾಯಕರಾದರು. ಉಳಿದಂತೆ, ಅನಂತ್ ನಾಗ್, ಶ್ರೀನಾಥ್, ದ್ವಾರಕೀಶ್, ಲೋಕೇಶ್, ಪ್ರಭಾಕರ್, ದೇವರಾಜ್, ಕಾಶೀನಾಥ್ ಚಿತ್ರರಂಗದಲ್ಲಿ ಭದ್ರವಾಗಿ ಬೇಳೆದು ನಿಂತರು. ನಟಿಯರ ಸಾಲಿನಲ್ಲಿ ಲೀಲಾವತಿ, ಕಲ್ಪನಾ, ಆರತಿ, ಭಾರತಿ, ಜಯಂತಿ, ಲಕ್ಷ್ಮಿ, ತಾರಾ, ಪ್ರೇಮ ಸಿನಿಪ್ರಿಯರ ಪ್ರೀತಿ ಪಡೆದರು.

### ಪ್ರಸ್ತುತ ಸನ್ನಿವೇಶದ ಕನ್ನಡ ಚಿತ್ರರಂಗ :

ಸದ್ಯ ಕನ್ನಡದಲ್ಲಿ ಸಾಕಷ್ಟು ಸ್ಟಾರ್ ನಟ/ನಟಿಯರು ಒಳ್ಳೆಯ ಸಿನಿಮಾ ಮೂಲಕ ರಾಷ್ಟ್ರ ಮಟ್ಟದಲ್ಲಿ ಕನ್ನಡ ಸಿನಿಮಾವನ್ನು ತಲುಪಿಸುತ್ತಿದ್ದಾರೆ. ನಟ ಶಿವರಾಜ್ ಕುಮಾರ್, ಜಗ್ಗೇಶ್ ಮತ್ತು ರಮೇಶ್ ನೂರು ಸಿನಿಮಾಗಳನ್ನು ಪೂರೈಸಿದ್ದಾರೆ. ಸುದೀಪ್, ದರ್ಶನ್, ಉಪೇಂದ್ರ, ಪುನೀತ್ ರಾಜ್ ಕುಮಾರ್, ಯಶ್, ಗಣೇಶ್, ದುನಿಯಾ ವಿಜಯ್, ರಕ್ಷಿತ್ ಶೆಟ್ಟಿ ಅಪಾರ ಅಭಿಮಾನಿ ಬಳಗ

ಹೊಂದಿದ್ದಾರೆ. ರವಿಚಂದ್ರನ್ ಕನ್ನಡ ಚಿತ್ರರಂಗದ ಶೋ ಮ್ಯಾನ್ ಆಗಿದ್ದಾರೆ. ನೆಕ್ಸ್ಟ್ ಲೆವೆಲ್ ಸಿನಿಮಾಗಳು ಒಂದು ಕಡೆಯಾದರೆ ಪ್ರಸ್ತುತದಲ್ಲಿ ಕನ್ನಡ ಚಿತ್ರರಂಗ 4000 ಸಿನಿಮಾಗಳ ಗಡಿಯನ್ನು ದಾಟಿದೆ. ಇನ್ನೊಂದು ಕಡೆ ಸಧ್ಯ ಕನ್ನಡದಲ್ಲಿ ಬರುತ್ತಿರುವ ಸಿನಿಮಾಗಳು ಹೆಮ್ಮೆ ಪಡುವಂತೆ ಮಾಡುತ್ತಿವೆ. ಇತ್ತೀಚಿನ ಯುವ ನಿರ್ದೇಶಕರು ಹೊಸ ಹೊಸ ರೀತಿಯ ಸಿನಿಮಾಗಳನ್ನು ನೀಡುತ್ತಿದ್ದಾರೆ.

**ಕನ್ನಡ ಸಾಹಿತ್ಯ ಮತ್ತು ಸಿನಿಮಾ ಪರಂಪರೆ:**

ಕನ್ನಡ ಸಾಹಿತ್ಯಕ್ಕೂ ಮತ್ತು ಸಿನಿಮಾರಂಗಕ್ಕೂ ಒಂದು ಅವಿನಾಭಾವ ಸಂಬಂಧ ಪ್ರಾರಂಭದಿಂದ ಪ್ರಸ್ತುತ ದವರೆಗೆ ಬೆಸೆದುಕೊಂಡು ಬಂದಿದೆ. ಒಂದು ಸಾಹಿತ್ಯ ಜನಪರವಾಗಿ ಮತ್ತು ನಾಡಿನ ಸಂಸ್ಕೃತಿ ಮತ್ತು ಜೀವನಶೈಲಿ ಗ್ರಾಮೀಣ ಸೊಬಗನ್ನು ಹೇಳಿದರೆ ಮಾತ್ರ ಅದು ಸಿನಿಮಾ ಚಿತ್ರವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಅಂತಹ ಎಲ್ಲ ಲಕ್ಷಣಗಳನ್ನು ಒಳಗೊಂಡ ಕನ್ನಡ ಸಾಹಿತ್ಯವು ಕನ್ನಡ ಸಿನಿಮಾ ರಂಗದೊಂದಿಗೆ ನಿರಂತರವಾಗಿ ಜನಮಾನಸವಾಗಿ ಬೆಳೆದಿದೆ. ಎಷ್ಟೋ ಕನ್ನಡ ಸಾಹಿತಿಗಳು ಸಾಹಿತ್ಯ-ಸಿನಿಮಾ ರೂಪವನ್ನು ಪಡೆದುಕೊಂಡ ಹೆಚ್ಚು ಪ್ರಚಲಿತಕ್ಕೆ ಬಂದಿರುವುದನ್ನು ಕಾಣುತ್ತೇವೆ. ಸಿನಿಮಾದ ಹಾಡುಗಳು ಹೆಚ್ಚು ಅರ್ಥಗರ್ಭಿತ ಮತ್ತು ಮನಸ್ಸಿಗೆ ಮದ ನೀಡುವಂತಹ ಸಾಹಿತ್ಯದ ರೂಪವನ್ನು ಹೊಂದಿದ್ದವು. ಕನ್ನಡ ಸಾಹಿತ್ಯ ಹೆಚ್ಚು ಸಮಾಜದ ಬೆಳವಣಿಗೆಗೆ ಪೂರಕವಾದ ವಿಷಯಗಳನ್ನು ಮತ್ತು ಸಾಮಾಜಿಕ ಸನ್ನಿವೇಶಗಳನ್ನು ಹೊಂದಿದ್ದರಿಂದ ಕನ್ನಡ ಸಿನಿಮಾ ರಂಗವೂ ಅದನ್ನು ಜನರಿಗೆ ದೃಶ್ಯಮಾಧ್ಯಮದ ಮುಖಾಂತರ ತಲುಪಿಸುವ ನಿರಂತರವಾದ ಪ್ರಯತ್ನ ನಡೆಯುತ್ತಿದೆ.

**ಬೆಳ್ಳಿಮೋಡ ಹಾಗೂ ಗೆಜ್ಜೆ ಪೂಜೆ ಚಿತ್ರಗಳ** ಮೂಲಕ ತನ್ನ ಸೃಜನಶೀಲತೆ, ಹಾಗೂ ನವ್ಯತೆಗಳನ್ನು ಚಿತ್ರಪ್ರೇಮಿಗಳಿಗೆ ಪರಿಚಯಮಾಡಿಕೊಟ್ಟ ಪುಟ್ಟಣ್ಣನವರು ಅದೇ ಜಾಡಿನ ಮತ್ತೊಂದು ಯಶಸ್ವೀ ಚಿತ್ರ, **ತ್ರಿವೇಣಿ** ಕಾದಂಬರಿ ಆಧಾರಿತ **ಶರಪಂಜರ**ವನ್ನು ನಿರ್ದೇಶಿಸಿ, ಚಿತ್ರನಟಿ ಕಲ್ಪನಾರವರನ್ನು ಅಂದಿನ ಜನಪ್ರಿಯ ತಾರೆಯಾಗುವಂತೆ ಮಾಡಿದರು. **ತ.ರಾ.ಸು** ರವರ ಕಾದಂಬರಿ ಆಧಾರಿತವಾಗಿ ಮಾಡಿದ ನಾಗರಹಾವು ಚಿತ್ರದಲ್ಲಿ ವಿಷ್ಣುವರ್ಧನ್ ಅವರನ್ನು ಕನ್ನಡಚಿತ್ರರಂಗಕ್ಕೆ ನಾಯಕನ ಪಾತ್ರದಲ್ಲಿ ಪರಿಚಯ ಮಾಡಿಸಿ, ಮುಂದೆ ಆತ ತಾರಾ ಪಟ್ಟಕ್ಕೇರಲು ನೆರವು ಮಾಡಿಕೊಟ್ಟರು. ಹೊಸ ಅಲೆಯ ಜಾಡನ್ನು ಅನುಸರಿಸಿ, **ಎಸ್.ಎಲ್, ಭೈರಪ್ಪನವರ ಕಾದಂಬರಿ ವಂಶವೃಕ್ಷ**ವನ್ನು ಚಿತ್ರೀಕರಿಸಬೇಕೆಂದು ನಿರ್ದೇಶನದ ಹೊಣೆಯನ್ನು ಜಿ.ವಿ.ಅಯ್ಯರ್ ರವರು, ಬಿ.ವಿ.ಕಾರಂತ್ ಮತ್ತು ಗಿರೀಶ್ ಕಾರ್ನಾಡ್ ಜೋಡಿಗೆ ವಹಿಸಿದರು. ವಂಶವೃಕ್ಷ ದಂತಹ ಬೃಹದಾಕಾರದ ಗ್ರಂಥವನ್ನು ಚಲನಚಿತ್ರಕ್ಕೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ ಈ ನಿರ್ದೇಶಕ ಜೋಡಿಗೆ ಉತ್ತಮ ನಿರ್ದೇಶನಕ್ಕೆ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳಿಸಿದರು. 1972ರಲ್ಲಿ, ಜನಪ್ರಿಯತೆಯಲ್ಲಿ ದಾಖಲೆ ಮಾಡಿದ ಚಿತ್ರವೆಂದರೆ **ಬಂಗಾರದ ಮನುಷ್ಯ. ಟಿ.ಕೆ.ರಾಮರಾಯರ ಕಾದಂಬರಿ ಆಧಾರ** ಮಾಡಿಕೊಂಡು ಚಿತ್ರ ನಿರ್ದೇಶಿಸಿದವರು ಸಿದ್ದಲಿಂಗಯ್ಯನವರು. ಹಳ್ಳಿಯ ಕುಟುಂಬದಲ್ಲಿ ಹುಟ್ಟಿ, ಮನೆತನದ ಗೌರವಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿದ ಆದರ್ಶಪ್ರಾಯ ವ್ಯಕ್ತಿಯಾಗಿ ಮಾಡಿದ ರಾಜಕುಮಾರ್ ರವರ ಅಭಿನಯ ಈ ಚಿತ್ರದ ವೈಶಿಷ್ಟ್ಯತೆ. ಈ ಚಿತ್ರ ಬೆಂಗಳೂರಿನ ಒಂದು ಚಿತ್ರ ಮಂದಿರದಲ್ಲಿ ಸು. 100 ವಾರಗಳಿಗೂ ಹೆಚ್ಚು ನಡೆದು ಹೆಸರು ಮಾಡಿತು. ಖ್ಯಾತ **ಸಾಹಿತಿ ಗೊರೂರು ರಾಮಸ್ವಾಮಿ** ಐಯಂಗಾರ್ ರವರ ಒಂದು ಕಿರು ಕಥೆಯನ್ನು ಅಳವಡಿಸಿಕೊಂಡು ಮಾಡಿದ **ಬೂತಯ್ಯನ ಮಗ ಅಯ್ಯು** ಚಿತ್ರ ಕೂಡ ಅಪಾರ ಜನಪ್ರಿಯತೆ ಗಳಿಸಿತು.

ಗಿರೀಶ್ ಕರ್ನಾಡ್ ಅವರಿಂದ ನಿರ್ದೇಶನಗೊಂಡ **ಕಾಡು** ಚಿತ್ರ ಹಲವಾರು ಪ್ರಶಸ್ತಿಗಳಿಸಿದೆ. ಇದು ಶ್ರಿ ಕೃಷ್ಣ ಆಲನಹಳ್ಳಿ ಅವರ ಕಥೆಯನ್ನು ಆಧಾರಿಸಿ ಮಾಡಿದ ಚಿತ್ರ. ಮತ್ತೊಮ್ಮೆ ಗ್ರಾಮೀಣ ಪ್ರದೇಶದ ಕಥೆ, ಎರಡುಹಳ್ಳಿಗಳ ಕ್ಷುಲ್ಲಕ ರಾಜಕೀಯದಲ್ಲಿ ನಡೆಯುವ ಘಟನೆಗಳನ್ನು ಒಬ್ಬಬಾಲಕನ ಕಣ್ಣಿನ ದೃಷ್ಟಿಯ ಮೂಲಕ ತೋರಿಸುವ ಈ ಚಿತ್ರ ವಿಷಯ ನಿರೂಪಣೆಯಲ್ಲಿ ವಿನೂತನ ಶೈಲಿಯನ್ನು ಅನುಸರಿಸಿತು. ನಾಂದಿ, ಉಯ್ಯಾಲೆ, ಮುಕ್ತಿ ಚಿತ್ರಗಳನ್ನು ನಿರ್ದೇಶಿಸಿ ಉತ್ತಮಶ್ರೇಣಿಯ ನಿರ್ದೇಶಕರು ಎಂದು ಖ್ಯಾತಿ ಪಡೆದಿದ್ದ ಎನ್. ಲಕ್ಷ್ಮೀನಾರಾಯಣ್ರವರು **ಅಬಚೂರಿನ ಪೋಸ್ಟ್ ಆಫೀಸು** ಚಿತ್ರವನ್ನು ನಿರ್ದೇಶಿಸಿ, ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಗಳಿಸಿದರು. ಲಕ್ಷ್ಮೀನಾರಾಯಣ್ ರವರು ಅಬಚೂರಿನ ಪೋಸ್ಟ್ ಆಫೀಸು (1973), ಮುಯ್ಯಿ (1979) ಚಿತ್ರಗಳನ್ನು ಹೊಸ ಅಲೆಯ ಮಾದರಿಯಲ್ಲೇ ಮಾಡಿದರು.

**ಸಂಸ್ಕಾರ, ವಂಶವೃಕ್ಷ, ಕಾಡು ಚಿತ್ರಗಳಿಗೆ ದೊರಕಿದ ಉತ್ತಮ ವಿಮರ್ಶೆ ಮತ್ತು ಪ್ರಶಸ್ತಿಗಳ ಸುರಿಮಳೆಗಳಿಂದ ಸ್ಫೂರ್ತಿಗೊಂಡ ಅನೇಕರು, ಹವ್ಯಾಸಿ ರಂಗಕರ್ಮಿಗಳು, ಸಾಹಿತಿಗಳು, ಅಧ್ಯಾಪಕ ವೃತ್ತಿಯಲ್ಲಿದ್ದವರು, ಮತ್ತು ಚಿತ್ರೋದ್ಯಮದಲ್ಲಿದ್ದವರು ಕೂಡ ಹೊಸ ಅಲೆಯ ಚಿತ್ರಗಳನ್ನು ನಿರ್ಮಿಸಲು ಹುರುಪಿನಿಂದ ಉದ್ಯುಕ್ತರಾದರು.**

ಒಟ್ಟಿನಲ್ಲಿ ಹೇಳುವುದಾದರೆ, **1971 ರಿಂದ 1980ನರವರೆಗಿನ ದಶಕ ಕನ್ನಡಚಿತ್ರರಂಗದಲ್ಲಿ ಒಂದು ಸ್ವರ್ಣ ಯುಗವೆನ್ನಬಹುದು.** ಬೆಂಗಳೂರಿನಲ್ಲಿ ಹೊಸ ಸ್ಟುಡಿಯೋಗಳ ಪ್ರಾರಂಭ, ಚಿತ್ರ ನಿರ್ಮಾಣ ಬಹುತೇಕ ಮದರಾಸಿನಿಂದ ಬೆಂಗಳೂರಿಗೆ ವರ್ಗಾವಣೆ, ಹಿಂದಿನ ದಶಕದಲ್ಲಿ ತಯಾರಾದ 229 ಚಿತ್ರಗಳಿಂದ ಈ ದಶಕದಲ್ಲಿ ಒಟ್ಟು 367 ಚಿತ್ರಗಳಿಗೆ ಏರಿದ್ದು ಇವು ಪ್ರಗತಿ ಪಥದ ಶುಭಸೂಚನೆಯಾಯಿತು. ಶಂಕರ್ ನಾಗ್ ಪಾದರಸದಂತಹ ವ್ಯಕ್ತಿಯಾಗಿದ್ದರು. ಏನಾದರೊಂದು ಹೊಸತನ್ನು ರಂಗಭೂಮಿಯಲ್ಲಿ ಹಾಗೂ ಚಿತ್ರರಂಗದಲ್ಲಿ ಮಾಡಬೇಕೆಂಬ ಹಂಬಲದಿಂದ ದುಡಿಯುತ್ತಿದ್ದರು. ಇವರ ಸಾಹಸದಿಂದಾಗಿ 1985ರಲ್ಲಿ ಸಂಕೇತ್ ಸ್ಟುಡಿಯೋ ಕೂಡ ನಿರ್ಮಾಣವಾಯಿತು. ಎಲೆಕ್ಟ್ರಾನಿಕ್ ತಾಂತ್ರಿಕತೆಯಿಂದ ಧ್ವನಿ ಮುದ್ರಣ, ಸಂಕಲನ, ಡಬ್ಬಿಂಗ್ ಮುಂತಾದ ಕಾರ್ಯಗಳನ್ನು ಮಾಡಬಹುದಾದಂತಹ ಸುಸಜ್ಜಿತವಾದ ಕಾರ್ಯಾಗಾರ ಇದಾಯಿತು. ಎನ್. ಲಕ್ಷ್ಮೀನಾರಾಯಣ್ ನಿರ್ದೇಶಿಸಿದ **ಬೆಟ್ಟದಹೂವು** ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿಗಳನ್ನು ಗಳಿಸಿ, ಭಾರತೀಯ ಪನೋರಮಾದಲ್ಲಿಯೂ ಭಾಗವಹಿಸಿ ಹೆಸರು ಮಾಡಿತು. ಪುಷ್ಪಕ ವಿಮಾನ ಹಾಗೂ ಪ್ರೇಮಲೋಕ ಈ ದಶಕದಲ್ಲಿ ಹೊಸಜಾಡನ್ನು ಸೃಷ್ಟಿಸಿ ಅಪಾರ ಜನಪ್ರಿಯತೆಗಳಿಸಿದ ಎರಡು ಚಿತ್ರಗಳಾದವು. ಫಣಿರಾಮಚಂದ್ರರವರ ಹಾಸ್ಯಪ್ರಧಾನವಾದ ಸಂಭಾಷಣೆಗಳೊಂದಿಗೆ, ತಯಾರಿಸಿದ ಹೊಸ ಶೈಲಿಯ **ಗಣೇಶನ ಮದುವೆ, ಗಣೇಶನ ಗಲಾಟೆ,** ಮುಂತಾದ ಚಿತ್ರಗಳು ಮನೆಮಂದಿಗೆ ಮನರಂಜನೆ ಕೊಟ್ಟು ಸಾಕಷ್ಟು ಜನಪ್ರಿಯತೆಗಳಿಸಿದವು.

**1991 ರಿಂದ ಪ್ರಸ್ತುತದವರೆಗೆ** :

ಸಂಖ್ಯಾ ದೃಷ್ಟಿಯಿಂದ ಈ ದಶಕದಲ್ಲಿ ಚಿತ್ರಗಳು ಹಿಂದಿನಂತೆಯೇ ವೃದ್ಧಿಗೊಳ್ಳುತ್ತಲೇ ಬಂದಿತು. ಆದರೆ ಕನ್ನಡದಲ್ಲಿನ ಉತ್ತಮ ಸಾಹಿತ್ಯ, ಉತ್ತಮ ಕಾದಂಬರಿಗಳನ್ನು ಆಧರಿಸಿ ತಯಾರಾಗುತ್ತಿದ್ದ ಒಂದು ಸಂಪ್ರದಾಯ ಕ್ರಮೇಣ ಕಮ್ಮಿಯಾಗುತ್ತಾ ಬಂದಿತು. ಚಿತ್ರ ವಿಚಿತ್ರ ಹೆಸರುಗಳಿಂದ, ದ್ವಂದ್ವಾರ್ಥ ಬರುವ ಅಶ್ಲೀಲ ಪದಗಳ ನಾಮಾಂಕಿತದ ಚಿತ್ರಗಳು ಒಂದರಮೇಲೊಂದರಂತೆ ಬರಲು ಪ್ರಾರಂಭವಾಯಿತು. ಚಿತ್ರಗಳಲ್ಲಿನ ಸಂಭಾಷಣೆಗಳೂ ಕೂಡ ಅಶ್ಲೀಲ ಪದಗಳಿಂದ, ದ್ವಂದ್ವಾರ್ಥಗಳಿಂದ ತುಂಬಿ ತುಳುಕಾಡುವಂತಹ ಪರಿಸ್ಥಿತಿ ಬಂದೊದಗಿತು.

ಪತ್ರಿಕೆಗಳಲ್ಲಿ ಹಿರಿಯ ಪತ್ರಕರ್ತರುಗಳು, ಹಾಗೂ ಅನೇಕ ಸಾರ್ವಜನಿಕ ಕ್ಷೇತ್ರಗಳಿಂದ, ಮತ್ತು ಸರ್ಕಾರದ ವತಿಯಿಂದಲೂ ಇಂತಹ ಚಿತ್ರಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಲೇಖನಗಳು ಬರತೊಡಗಿದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೂಡ 1991-92ರಲ್ಲಿ ಲೋಕೇಶ ರವರ ಭುಜಂಗಯ್ಯನ ದಶಾವತಾರ, ಪ್ರೇಮಾಕಾರಂತರ ನಕ್ಕಳಾರಾಜಕುಮಾರಿ, ಗಿರೀಶ್ ಕಾಸರವಳ್ಳಿಯವರ ಮನೆ, ನಾಗಾಭರಣರ ಮೈಸೂರು ಮಲ್ಲಿಗೆ, ಸದಾನಂದ ಸುವರ್ಣರ ಕುಬಿ ಮತ್ತು ಇಯಾಲ, ರವಿ ಅವರ ಹರಕೆಯ ಕುರಿ, ಸುಂದರ ಕೃಷ್ಣ ಅರಸು ಅವರ ಸಂಗ್ಯಾ ಬಾಳ್ಯಾ, ಈ ಚಿತ್ರಗಳು ಮೆಚ್ಚಿಕೊಳ್ಳುವಂತಹ ಪ್ರಯತ್ನದಿಂದಾಗಿ ಉತ್ತಮಚಿತ್ರಗಳಾಗಿ ತೆರೆ ಕಂಡವು. ಈ ದಶಕದ ಮತ್ತೊಂದು ಪರಿಣಾಮಕಾರಿ ಬೆಳೆವಣಿಗೆಯೆಂದರೆ ವರ್ಣ ಟಿ.ವಿ. ಮತ್ತು ದೂರದರ್ಶನದ ಜೊತೆಗೆ ಖಾಸಗಿ ಚಾನೆಲ್ಗಳು ಹುಟ್ಟಿಕೊಂಡು, ಟಿ.ವಿ.ಮೂಲಕ ಚಿತ್ರಗಳನ್ನು ಪ್ರದರ್ಶನಮಾಡಲು ಪ್ರಾರಂಭವಾದದ್ದು.

ಬೆಳದಿಂಗಳ ಬಾಲೆಯಲ್ಲಿ ಯುವತಿಯನ್ನು ತೋರಿಸದೆಯೇ ಕೇವಲ ದೂರವಾಣಿ ಮೂಲಕ ಪ್ರೀತಿಯನ್ನು ವ್ಯಕ್ತಪಡಿಸುವ ಒಂದು ನವೀನ ಶೈಲಿಯಲ್ಲಿ ಚಿತ್ರ ನಿರ್ದೇಶಿಸಿದ ವ್ಯಕ್ತಿ ಸುನಿಲ್ ಕುಮಾರ್ ದೇಸಾಯಿ. ಕನಸು ಚಿತ್ರದಲ್ಲಿ ತಮ್ಮ ಪ್ರತಿಭೆಯನ್ನು ಪರಿಚಯಮಾಡಿ ಕೊಟ್ಟಿದ್ದ ನಾಗತಿಹಳ್ಳಿ ಚಂದ್ರಶೇಖರ್ ಅವರು, ಅಮರಿಕಾ ಅಮೆರಿಕಾ ಚಿತ್ರವನ್ನು, ಅಮೆರಿಕಾದಲ್ಲಿ ಚಿತ್ರೀಕರಿಸಿ, ತಮ್ಮ ಚುರುಕಾದ ಸಂಭಾಷಣೆಗಳನ್ನು ಫಲಪ್ರದವಾಗಿ ರಚಿಸಿ, ಕನ್ನಡ ಚಿತ್ರರಂಗದಲ್ಲಿ ಖ್ಯಾತ ನಿರ್ದೇಶಕರುಗಳ ಪಟ್ಟಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿದರು. ನಾಗಾಭರಣರ ಮತ್ತೊಂದು ಯಶಸ್ವಿ ಚಿತ್ರ ನಾಗಮಂಡಲವೂ ಇದೇ ಸಮಯದಲ್ಲಿ ತೆರೆ ಕಂಡು, ರಾಜ್ಯ ಮಟ್ಟದಲ್ಲಿ ಪ್ರಶಸ್ತಿಗಳಿಸಿತು. ಕಿರುತೆರೆಯ ಮೇಲೆ ಶ್ರೇಷ್ಠಮಟ್ಟದ, ಅತ್ಯಂತ ಜನಪ್ರಿಯ ಧಾರಾವಾಹಿಗಳನ್ನು ಕನ್ನಡಿಗರಿಗೆ ಕೊಡುವಲ್ಲಿ ಸಿದ್ಧಹಸ್ತದ ವ್ಯಕ್ತಿ ಎಂದು ಜನಾನುರಾಗಿಯಾಗಿರುವ ಟಿ.ಎನ್.ಸೀತಾರಾಂ ಅವರು, ಎಸ್.ಎಲ್.ಭೈರಪ್ಪನವರ ಕಾದಂಬರಿ ಆಧರಿಸಿ ನಿರ್ದೇಶಿಸಿದ ಚಿತ್ರ ಮತದಾನ ಕೂಡ ಭಾರತೀಯ ಪನೋರಮದಲ್ಲಿ ಭಾಗವಹಿಸಿತು. 2000 - 01 ರ ವರ್ಷದಲ್ಲಿ ಶಾಪ ಮತ್ತು ಕುರಿಗಳು ಸಾರ್ ಕುರಿಗಳು ಚಿತ್ರಗಳಿಗೆ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರಗಳ ಸ್ಥಾನ ರಾಜ್ಯಮಟ್ಟದಲ್ಲಿ ದೊರಕಿತು.

ಇತ್ತೀಚಿನ ಮತ್ತೊಂದು ಬೆಳೆವಣಿಗೆಯೆಂದರೆ ಸುದೀಪ್, ಸುನಿಲ್, ದರ್ಶನ್, ಮುರಳಿ, ಪುನೀತ್ ಮುಂತಾದ ಹೊಸ ಪೀಳಿಗೆಯ ಅನೇಕ ತರುಣ ನಟರು ಕನ್ನಡ ಚಿತ್ರಗಳಲ್ಲಿ ನಾಯಕನ ಪಾತ್ರಗಳಲ್ಲಿ ಅಭಿನಯಿಸಿ, ಚಿತ್ರರಂಗಕ್ಕೆ ಹೊಸ ಮೆರುಗನ್ನು ಲೇಪಿಸಿದ್ದಾರೆ. ಬೆಂಗಳೂರಿನಲ್ಲಿ ಈಗ ಮಲ್ಟಿಪ್ಲೆಕ್ಸ್ ಸಂಸ್ಕೃತಿ ಬಂದು, ಕನ್ನಡ ಚಿತ್ರಗಳಿಗೆ ಪ್ರದರ್ಶನಾವಕಾಶ ಸಿಕ್ಕಿದೆ, ಎಲ್ಲ ಉತ್ತಮ ಚಿತ್ರಗಳೂ ಯಶಸ್ಸು ಗಳಿಸುವ ಸೂಚನೆಗಳಿವೆ ಎಂಬುದು ಕನ್ನಡ ಚಲನಚಿತ್ರ ರಂಗದ ತಜ್ಞರ ಆಶಾದಾಯಕ ಭಾವನೆಯಾಗಿದೆ.

### ಕನ್ನಡ ಚಿತ್ರರಂಗದಲ್ಲಿ ಸಂಗೀತ, ಗೀತೆ ಮತ್ತು ಗಾಯನ :

ಮೊದಲಿನಿಂದಲೂ ಸಂಗೀತ ಸಿನಿಮಾದ ಅವಿಭಾಜ್ಯ ಅಂಗವಾಗಿ ಹೋಗಿದೆ. 1930ರ ದಶಕದಲ್ಲಿ, ಕಲಾವಿದರು ಸ್ವತಃ ತಾವೇ ಹಾಡಿಕೊಂಡು ಅಭಿನಯಿಸಬೇಕಿತ್ತು ಮತ್ತು ಅವರ ಜೊತೆಯಲ್ಲಿ ಪಕ್ಕವಾದ್ಯದವರು ತಮ್ಮ ವಾದ್ಯಗಳನ್ನು ಸ್ವಲ್ಪ ದೂರದಲ್ಲಿ ನುಡಿಸಿಕೊಂಡು ಅವರನ್ನು ಹಿಂಬಾಲಿಸಬೇಕಿತ್ತು. ಇವರುಗಳನ್ನು ಹಿಂಬಾಲಿಸಿ ಮೈಕ್ ಹಿಡಿದುಕೊಂಡು, ತಂತ್ರಜ್ಞರು ಧ್ವನಿಯನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದರು. ಅನೇಕ ದಾಖಲೆಗಳ ಪ್ರಕಾರ ಕನ್ನಡದಲ್ಲಿ ಮೊದಲ ಬಾರಿಗೆ ಆರ್ಕೆಸ್ಟ್ರಾ ದೊಂದಿಗೆ ಸಂಗೀತ ನೀಡಿ, ಹಾಡುಗಳನ್ನು ರಚಿಸಿ, ಚಿತ್ರಗಳಲ್ಲಿ ಅಳವಡಿಸಿದವರು ಪಿ. ಕಾಳಿಂಗರಾಯರು. ಜಗನ್ಮೋಹಿನಿ ಚಿತ್ರ ಕನ್ನಡದಲ್ಲಿ ಒಂದು ಯಶಸ್ವಿ ಚಿತ್ರ, ಅನಂತರದ ದಿನಗಳಲ್ಲಿ, ಹಲವಾರು ಚಿತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಸಂಗೀತ

ನಿರ್ದೇಶಕರುಗಳೆಂದರೆ, ಎಂ.ವೆಂಕಟರಾಜು, ಆರ್. ರತ್ನ, ಉಪೇಂದ್ರಕುಮಾರ್. ರಾಜೀವ್ ತಾರಾನಾಥ್, ಬಿ.ವಿ.ಕಾರಂತ್, ಎಲ್.ವೈದ್ಯನಾಥನ್, ಸಿ. ಅಶ್ವತ್, ಅವರುಗಳು, ಸಾಮಾನ್ಯವಾಗಿ ಹೊಸ ಶೈಲಿಯಲ್ಲಿ ಹೊಸ ಅಲೆಯ ಚಿತ್ರಗಳೊಂದಿಗೆ ಗುರುತಿಸಿ ಕೊಂಡ ಪ್ರತಿಭೆಗಳು.

ಕನ್ನಡಕ್ಕೆ ಸಂಪೂರ್ಣ ಹೊಸತನ್ನು ನೀಡಬೇಕೆಂದು, ನವ್ಯ ಸಾಹಿತ್ಯದೊಂದಿಗೆ ನವ್ಯ ಶೈಲಿಯ ಹಾಡುಗಳನ್ನು ಸಂಯೋಜಿಸಿ ಅತ್ಯಂತ ಜನ ಪ್ರಿಯತೆಗಳಿಸಿರುವ ವ್ಯಕ್ತಿ ಹಂಸಲೇಖ. ಕಳೆದ ಒಂದು ದಶಕದಲ್ಲಿ ಅವರು ಅಸಂಖ್ಯಾತ ಚಿತ್ರಗಳಿಗೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ವಿ.ಮನೋಹರ್, ರಾಜೇಶ್ ರಾಮನಾಥ್, ಗುರುಕಿರಣ್, ಕೆ.ಕಲ್ಯಾಣ್, ಎಸ್.ಗೋವರ್ಧನ್ ಮುಂತಾದವರು ಬೆಳಕಿಗೆ ಬಂದಿದ್ದಾರೆ. ಮಲ್ಲಿಕಾರ್ಜುನ ಮನ್ಸೂರವರು ಚಂದ್ರಹಾಸ ಸೇರಿದಂತೆ ಕೆಲವು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಕನ್ನಡಚಿತ್ರಗಳಿಗೆ ಹಿನ್ನೆಲೆ ಗಾಯನದಲ್ಲಿ ಪಿ.ಸುಶೀಲ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಾಲಮುರಳಿ ಕೃಷ್ಣ, ಎಸ್.ಪಿ, ಬಾಲಸುಬ್ರಹ್ಮಣ್ಯಂ, ಭೀಮಸೇನಜೋಶಿ, ಡಾ.ರಾಜಕುಮಾರ್, ಕಸ್ತೂರಿ ಶಂಕರ್, ವಾಣಿ ಜಯರಾಂ, ಜೇಸುದಾಸ್, ಸಿ.ಅಶ್ವತ್, ಎಲ್. ಆರ್.ಈಶ್ವರಿ, ರಾಜಕುಮಾರ್ ಭಾರತಿ, ಶಿವಮೊಗ್ಗ ಸುಬ್ಬಣ್ಣ, ಮಂಜುಳಾ ಗುರುರಾಜ್, ಬಿ.ಕೆ.ಸುಮಿತ್ರ, ಬಿ.ಆರ್.ಛಾಯಾ, ಬಿ.ಜಯಶ್ರಿ, ಕಸ್ತೂರಿ ಶಂಕರ್ ಮತ್ತು ಇನ್ನೂ ಅನೇಕರು ತಮ್ಮ ಕಂಠದಾನವಿತ್ತು ಚಿತ್ರಸಂಗೀತ ವನ್ನು ಇಂಪುಗೊಳಿಸಿದ್ದಾರೆ.

**ಚಲನಚಿತ್ರದಲ್ಲಿ ತರಬೇತಿ :**

ಕರ್ನಾಟಕದಲ್ಲಿ ಚಲನಚಿತ್ರದ ಬಗ್ಗೆ ತರಬೇತಿ ಪಡೆಯಲು ಕೆಲವು ಸೌಕರ್ಯಗಳಿವೆ. ಕರ್ನಾಟಕದಲ್ಲಿ 1940ರ ದಶಕದಲ್ಲಿ ವೃತ್ತಿಶಿಕ್ಷಣ ತರಬೇತಿಗಾಗಿ, **ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಸಂಸ್ಥೆ** ಪ್ರಾರಂಭವಾಯಿತು. 1944-45ರಲ್ಲಿ ಅನೇಕ ವೃತ್ತಿ ಗಳ ಜೊತೆ ಧ್ವನಿಗ್ರಹಣ ಮತ್ತು ಸಿನಿಮಟೊಗ್ರಫಿ ವಿಭಾಗಗಳನ್ನು ಸೇರಿಸಲಾಯಿತು. ಅಂದಿನ ದಿನಗಳಲ್ಲಿ ಸರ್ಕಾರದ ಆಡಳಿತದಲ್ಲಿದ್ದವರಿಗೆ ಎಷ್ಟರಮಟ್ಟಿಗೆ ದೂರದೃಷ್ಟಿ ಇತ್ತು ಎಂಬುದು ಅರಿವಾಗುತ್ತದೆ. ಈ ಒಂದು ಶಿಕ್ಷಣ ಸಂಸ್ಥೆಯಿಂದ ಇದುವರೆಗೆ ಅನೇಕರು ತರಬೇತಿ ಪಡೆದು ತಮ್ಮ ವೃತ್ತಿ ಜೀವನದಲ್ಲಿ ಹೆಸರು ಮಾಡಿದ್ದಾರೆ. ಇವರುಗಳಲ್ಲಿ ಪ್ರತಿಭಾವಂತರಾಗಿ ಚಲನ ಚಿತ್ರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳಲ್ಲಿ ಆರ್.ಎನ್.ಕೃಷ್ಣಪ್ರಸಾದ್, ಆರ್.ಎನ್.ಜಯಗೋಪಾಲ್, ಛಾಯಾಗ್ರಾಹಕರುಗಳಾದ ಲೋಕೇಶ್, ಬಿ.ಎಸ್. ಬಸವಾರಾಜು, ಕುಣಿಗಲ್ ನಾಗಭೂಷಣ್, ಬಿ.ಸಿ.ಗೌರಿಶಂಕರ್, ವಿ.ಕೆ.ಮೂರ್ತಿ, ಹೆಚ್.ಎಂ.ಕೆ.ಮೂರ್ತಿ, ಎಂ.ಬಿ.ಎಸ್.ಪ್ರಸಾದ್ ಮತ್ತು ಇನ್ನೂ ಅನೇಕರು. 1996ರಲ್ಲಿ ಈ ಸಂಸ್ಥೆ ವಿಶ್ವಬ್ಯಾಂಕ್ ನ ಆರ್ಥಿಕ ನೆರವಿನೊಂದಿಗೆ, ಹೆಸರುಘಟ್ಟದ ಬಳಿ ವಿಶಾಲವಾದ ಭೂಮಿಯಲ್ಲಿ ಗೌರ್ನಮೆಂಟ್ ಫಿಲಂ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಎಂಬ ಹೆಸರಿನಲ್ಲಿ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ನಿಂದ ಬೇರ್ಪಟ್ಟು, ಮರು ಸ್ಥಾಪಿತಗೊಂಡಿತು. ಈಗ ಈ ಸಂಸ್ಥೆ ಫಿಲಂ ಮತ್ತು ಟೆಲಿವಿಷನ್ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ತಾಂತ್ರಿಕ ತರಬೇತಿ ನೀಡುತ್ತಿದೆ. ಈ ಸಂಸ್ಥೆ ಹೆಸರಘಟ್ಟದ ಬಳಿ ತನ್ನದೇ ಆದ ಜಮೀನಿನಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಿ, ಅಭಿನಯ, ಹಿನ್ನೆಲೆ ಗಾಯನ, ಶಾಸ್ತ್ರೀಯ ನೃತ್ಯ, ಚಲನಚಿತ್ರ ನೃತ್ಯ, ಈ ಕ್ಷೇತ್ರಗಳಲ್ಲಿ ತರಬೇತಿ ಕೊಡುತ್ತಿದೆ. ರಾಜ್ಯ ಸರ್ಕಾರದಿಂದ ಈ ಸಂಸ್ಥೆಗೆ ಅನುದಾನ ಸಿಗುತ್ತಿದೆ.

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

### ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ಕನ್ನಡದ ಮೊದಲ ಚಲನಚಿತ್ರ ಯಾವುದು?

1. ಅಮರಶಿಲ್ಪಿ ಜಕಣಾಚಾರಿ
2. ಸತಿ ಸುಲೋಚನ
3. ಬೇಡರ ಕಣ್ಣಪ್ಪ
4. ಸತ್ಯ ಹರಿಶ್ಚಂದ್ರ

2. ಕನ್ನಡದ ಮೊದಲ ಕಲರ್ ಚಲನಚಿತ್ರ ಯಾವುದು?

1. ಬಂಗಾರದ ಮನುಷ್ಯ
2. ಸತಿ ಸುಲೋಚನ
3. ಅಮರಶಿಲ್ಪಿ ಜಕಣಾಚಾರಿ
4. ಶರಪಂಜರ

5. ಶಿವರಾಮ ಕಾರಂತರು ತಾವೇ ನಿರ್ದೇಶನವನ್ನು ಮಾಡಿ ನಿರ್ಮಿಸಿದ ಚಲನಚಿತ್ರ ಯಾವುದು?

1. ಡೊಮಿಂಗೋ
2. ಕನಸುಗಳು
3. ವಿಶ್ವ ಪರ್ಯಟನೆ
4. ಕ್ರಾಂತಿ

6. ಶರಪಂಜರ ಇದು ಯಾರ ಕಾದಂಬರಿ?

1. ತ್ರಿವೇಣಿ
2. ಕಲ್ಪನಾ
3. ಭಾರತಿ
4.ಲಕ್ಷ್ಮಿ

7. ಬೆಳ್ಳಿಮೋಡ ಚಲನಚಿತ್ರದ ಮುಖಾಂತರ ಖ್ಯಾತರಾದ ಕನ್ನಡದ ಪ್ರಸಿದ್ಧ ನಿರ್ದೇಶಕರು ಯಾರು?

1. ಪುಟ್ಟಣ್ಣ ಕಣಗಾಲ್
2. ರವಿಚಂದ್ರನ್
3. ಗಿರೀಶ್ ಕಾಸರವಳ್ಳಿ
4. ಟಿ ಎಸ್ ನಾಗಾಭರಣ

5. ಬಂಗಾರದ ಮನುಷ್ಯ ಚಲನಚಿತ್ರವು ಯಾವ ವರ್ಷ ನಿರ್ಮಾಣವಾಯಿತು?

1. 1960

21KSS27 Draft Copy
VTU BSc ಸಾಹಿತ್ಯ ಸಿಂಚನ

2. 1972

3. 1973

4. 1975

6. "ಷಾ ಚಮನ್ ಮಲ್ ಡುಂಗಾಜಿ" ಯಾರು?

1. ಲೇಖಕರು

2. ನಿರ್ದೇಶಕರು

3. ವ್ಯಾಪಾರಿಗಳು

4. ನಟ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

೧ ಬೇಡರಕಣ್ಣಪ್ಪ ಚಲನಚಿತ್ರ ದ ಕುರಿತು ಬರೆಯಿರಿ?

೨. ಪುಟ್ಟಣ್ಣ ಕಣಗಾಲ್ ರವರು ನಿರ್ದೇಶಿಸಿರುವ ಪ್ರಮುಖ ಚಲನಚಿತ್ರಗಳು ಯಾವುವು?

೩. ನಾಗರಹಾವು ಒಂದು ಪ್ರಮುಖ ಚಲನಚಿತ್ರವಾಗಿದೆ - ಹೇಗೆ?

4 ಎಸ್ಎಲ್ ಭೈರಪ್ಪನವರ ಪ್ರಮುಖ ಕಾದಂಬರಿಗಳು ಯಾವುವು ?

5. 1930ರಲ್ಲಿ ಶಿವರಾಮ ಕಾರಂತರಿಂದ ತಯಾರಾದ ಸಿನಿಮಾ ಡೊಮಿಂಗೋ ಕುರಿತು ಬರೆಯಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

೧. ಕನ್ನಡ ಚಲನಚಿತ್ರದ ಇತಿಹಾಸದಲ್ಲಿ ಬಂಗಾರದ ಮನುಷ್ಯ ಸಿನಿಮಾ ಹೆಚ್ಚು ಸಾಮಾಜಿಕ ಪ್ರಸಿದ್ಧಿಯನ್ನು ಗಳಿಸಿದೆ. ಇದಕ್ಕೆ ಕಾರಣವೇನು?

೨. ಸಾಹಿತಿ ಆಲನಹಳ್ಳಿ ಕೃಷ್ಣ ರವರಿಂದ ರಚಿತವಾದ ಕಾದಂಬರಿ "ಕಾಡು" ಆಧಾರಿತ ಚಲನಚಿತ್ರವು ಹೇಗೆ ಒಂದು ವಿಶೇಷ ಪರಿಕಲ್ಪನೆಯಾಗಿದೆ ?

3. 1971 ರಿಂದ 1980 ರ ಅವಧಿಯಲ್ಲಿನ ಕನ್ನಡ ಸಿನಿಮಾ ಚರಿತ್ರೆಯನ್ನು ಸುವರ್ಣ ಯುಗ ಎಂದು ಗುರುತಿಸಲಾಗುತ್ತದೆ. ಇದಕ್ಕೆ ಪ್ರಮುಖ ಕಾರಣಗಳು ಯಾವುವು?

4. ಕನ್ನಡ ಸಾಹಿತ್ಯ ಮತ್ತು ಸಿನಿಮಾ ರಂಗದ ಮಧ್ಯದ ಅವಿನಾಭಾವ ಸಂಬಂಧವನ್ನು ವಿವರಿಸಿ.

VTU ಸಾಹಿತ್ಯ ಸಿಂಚನ 2022 21KSS27 Draft Copy

# ಅಧ್ಯಾಯ - 10

# ಕನ್ನಡದ ಸಾಮಾಜಿಕ ಉಪಭಾಷೆಗಳು

# (ಭಾಷಾ ಪ್ರಭೇದಗಳು)

– ಡಾ. ಎಲ್. ತಿಮ್ಮೇಶ

21KSS27 Draft copy

## ಕನ್ನಡ ಉಪಭಾಷೆಗಳು :

ಜಗತ್ತಿನ ಯಾವುದೇ ಪ್ರಾದೇಶಿಕ ಭಾಷೆಯನ್ನು ಬರೆಯವ ಹಾಗೂ ಉಪಯೋಗಿಸುವ ಮತ್ತು ಮಾತನಾಡುವ ಭಾಷೆಯಲ್ಲಿ ಇರುವ ಸಾಮಾನ್ಯ ವ್ಯತ್ಯಾಸಗಳು ಇರುವಂತೆ ಕನ್ನಡದಲ್ಲಿಯೂ ಇದೆ. ಮಾತನಾಡಲು ಉಪಯೋಗಿಸುವ ಕನ್ನಡವು ಪ್ರದೇಶಕ್ಕೆ ಅನುಸಾರವಾಗಿ ಬದಲಾಗುತ್ತದೆ. ಆದರೆ ಬರೆಯಲು ಉಪಯೋಗಿಸುವ ಕನ್ನಡ ಹೆಚ್ಚಿನದಾಗಿ ಕರ್ಣಾಟಕದೆಲ್ಲೆಡೆ ಒಂದೇ ಬಗೆಯದಾಗಿದೆ.

ಕನ್ನಡ ಭಾಷಾ ಪ್ರದೇಶವನ್ನು ಗಮನಿಸಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿ ಅನೇಕ ಬಗೆಯ ಭಾಷಾ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗಾ ಕನ್ನಡ- ಎಂಬ ನಾಲ್ಕು ಉಪಭಾಷಾ ಪ್ರಭೇದಗಳನ್ನು ಗುರುತಿಸಬಹುದು. ಈ ಪ್ರಭೇದಗಳನ್ನು ಪ್ರಾದೇಶಿಕವಾಗಿ ಹಾಗೂ ಸಾಮಾಜಿಕವಾಗಿ ಪರಿಶೀಲಿಸಲು ಹೊರಟಾಗ ಇವುಗಳಲ್ಲೇ ಎಷ್ಟೋ ಬಗೆಯ ಒಳ ಪ್ರಭೇದಗಳು ಇರುವುದು ಸಹ ಕಂಡುಬರುತ್ತದೆ.

ಕನ್ನಡ ನಾಡು ಬಹಳ ವಿಶಾಲವಾಗಿದ್ದು, ಕನ್ನಡ ಭಾಷೆಯು ಸಾಕಷ್ಟು ವಿಸ್ತಾರವಾದ ಭೂಪ್ರದೇಶದಲ್ಲಿ ಬಳಕೆಯಲ್ಲಿದೆ. ವಿವಿಧ ಸಾಮಾಜಿಕ ವರ್ಗದ ಜನರು ಇದನ್ನು ಬಳಸುತ್ತಾ ಬಂದಿದ್ದಾರೆ. ಅನ್ಯಭಾಷಾ ಸಂಸರ್ಗವಿದ್ದರೂ, ಅನ್ಯ ನಾಗರೀಕತೆಗಳು ಮತ್ತು ಸಂಸ್ಕೃತಿಗಳ ಪ್ರಭಾವವಿದ್ದರೂ ಸಹ ಕಾಲಕಾಲಕ್ಕೆ ಕನ್ನಡ ಉತ್ಕೃಷ್ಟ ಭಾಷೆಯಾಗಿ ಬೆಳೆಯುತ್ತಾ ಬಂದಿದೆ.

ಕನ್ನಡ ಭಾಷೆಯಲ್ಲಿ ಉಪಭಾಷೆಗಳು ಅಥವಾ ಒಳಭೇದಗಳು ಇಂದು ಹುಟ್ಟಿಕೊಂಡಿಲ್ಲ. ಕನ್ನಡ ಗ್ರಾಂಥಿಕ ರೂಪವನ್ನು ಪಡೆದಾಗಿನಿಂದ ಕನ್ನಡಿಗರ ಮನಸ್ಸಿನಲ್ಲಿ ಅದು ಬೇರುಬಿಟ್ಟಿದೆ. ಕವಿರಾಜಮಾರ್ಗದಲ್ಲಿ ಕೇಶಿರಾಜ ಕನ್ನಡದ ಉಪಭಾಷೆಗಳ ಅಸ್ತಿತ್ವವನ್ನು ಗುರುತಿಸಿದ್ದಾನೆ. ಒಂದು ಭಾಷೆ ಮತ್ತು ಅದರ ಉಪಭಾಷೆಗಳಿಗಿರುವ ವ್ಯತ್ಯಾಸವನ್ನು ತಿಳಿಸುವುದು ಕಷ್ಟ ಹಾಗೂ ಅದು ಅತಿ ಸೂಕ್ಷ್ಮವಾದದ್ದು. ಉಪಭಾಷೆ ಅಥವಾ ಒಳಭೇದ ಎನ್ನುವುದು ಭಾಷಾಶಾಸ್ತ್ರಜ್ಞರಿಂದ ಉಪಯೋಗಿಸಲಟ್ಟ ಪಾರಿಭಾಷಿಕ ಶಬ್ದವಷ್ಟೆ. ಸಾಮಾನ್ಯ ಅರ್ಥದಲ್ಲಿ ಒಳಭೇದಗಳನ್ನೆಲ್ಲಾ ಭಾಷೆಗಳೆಂದೇ ಕರೆಯಲಾಗುತ್ತದೆ.

ಯಾವುದೇ ಭಾಷೆಯಲ್ಲಿ ನಾವು ಏಕರೂಪತೆ ಹಾಗೂ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು. ಜನ ಸಂಪರ್ಕ ಎಷ್ಟೆಷ್ಟು ಹೆಚ್ಚಾಗಿರುತ್ತದೋ ಅಷ್ಟು ಏಕರೂಪತೆ ಇರುತ್ತದೆ. ಸಂಪರ್ಕ ಕಡಿಮೆಯಾದಂತೆ ವ್ಯತ್ಯಾಸಗಳು ಜಾಸ್ತಿಯಾಗುತ್ತಾ ಹೋಗುತ್ತವೆ. ಮನುಷ್ಯ ಅನುಕರಣಾಶೀಲ, ಕ್ರಮೇಣ ವ್ಯತ್ಯಾಸಗಳೇ ಹೆಚ್ಚಾಗಿ, ಸಾಮ್ಯತೆ ಏಕರೂಪತೆ ಕಡಿಮೆಯಾಗಿ ಅದೇ ಪ್ರತ್ಯೇಕ ಭಾಷೆ ಎನ್ನುವಂತೆ ಕಾಣತೊಡಗುತ್ತದೆ. ಅದನ್ನೇ ನಾವು 'ಉಪಭಾಷೆ' ಎಂದು ಕರೆಯುತ್ತೇವೆ.

**ಉಪಭಾಷೆಗಳಲ್ಲಿ ಎರಡು ವಿಧ:**

1. **ಪ್ರಾದೇಶಿಕ ಉಪಭಾಷೆ**
2. **ಸಾಮಾಜಿಕ ಉಪಭಾಷೆ.**

**ಪ್ರಾದೇಶೀಕ ಉಪಭಾಷೆ:** ಈ ಉಪಭಾಷೆ ರೂಪುಗೊಳ್ಳಲು ಭೌಗೋಳಿಕ ಕಾರಣಗಳು, ರಾಜಕೀಯ ಕಾರಣಗಳು ಹಾಗೂ ಅನ್ಯಭಾಷಾ ಸಂಸರ್ಗಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಿಂದಿನಿಂದಲೂ ಕನ್ನಡ ನಾಡು ಒಂದೇ ಅಧಿಪತ್ಯಕ್ಕೆ ಒಳಪಟ್ಟಿರಲಿಲ್ಲ. ಹಲವು ಭಾಗಗಳಾಗಿ ಹಂಚಿಹೋಗಿತ್ತು. ಮೈಸೂರು ಅಧಿಪತ್ಯದ ಕನ್ನಡಿಗರು, ಮದ್ರಾಸು ಅಧಿಪತ್ಯದ ಕನ್ನಡಿಗರು, ಬೊಂಬಾಯಿ ಅಧಿಪತ್ಯದ ಕನ್ನಡಿಗರು, ಹೈದರಾಬಾದು ಅಧಿಪತ್ಯದ ಕನ್ನಡಿಗರು.. ಹೀಗೆ ರಾಜಕೀಯ ಕಾರಣಗಳಿಂದ ತುಂಡಾಗಿದ್ದ ಆಯಾ ಗಡಿಭಾಷೆಯ ಪ್ರಭಾವದಿಂದ ಒಂದೇ ಭಾಷೆಯು ಉಪಭಾಷೆಗಳಾಗಿ ಕಾಣಿಸಿಕೊಂಡವು.

**ಸಾಮಾಜಿಕ ಉಪಭಾಷೆ:** ಒಂದೊಂದು ಸಮುದಾಯಕ್ಕೆ ಸೇರಿದ ಜನರು ಪ್ರತ್ಯೇಕ ಗುಂಪುಗಳಾಗಿ, ಅವರಲ್ಲಿನ ಒಡನಾಟದಿಂದ ಅವರ ಭಾಷೆಯಲ್ಲಿ ಕಾಣುವ ವಿಶಿಷ್ಟತೆಯು ಕ್ರಮೇಣ ಉಪಭಾಷೆಯಾಗಿ ಬಳಕೆಯಾಗಬಹುದು. ಕನ್ನಡದಲ್ಲಿ ಸಾಮಾಜಿಕ ಉಪಭಾಷೆಯ ಬಗ್ಗೆ ಪ್ರಸ್ತುತ ಸನ್ನಿವೇಶದಲ್ಲಿಯೂ ಸಹ ಇನ್ನೂ ಹೆಚ್ಚಿನ ಚರ್ಚೆಗಳು ನಡೆಯುತ್ತಲೆ ಇವೆ.

**ಕನ್ನಡದಲ್ಲಿ ಮುಖ್ಯವಾಗಿ ನಾಲ್ಕು ಉಪಭಾಷೆಗಳನ್ನು ಗುರುತಿಸಬಹುದು:**

1. ಮೈಸೂರು ಕನ್ನಡ,
2. ಧಾರವಾಡ ಕನ್ನಡ,
3. ಮಂಗಳೂರು / ಕರಾವಳಿ ಕನ್ನಡ ಮತ್ತು
4. ಹೈದರಾಬಾದ್ / ಗುಲ್ಬರ್ಗಾ / ಕಲ್ಯಾಣ ಕನ್ನಡ.

21KSS27 Draft Copy

# ಮೈಸೂರು ಕನ್ನಡ :

ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು- ಈ ಜಿಲ್ಲೆಗಳಲ್ಲಿ ಆಡುವ ಕನ್ನಡಭಾಷೆಯನ್ನು ಮೈಸೂರು ಕನ್ನಡ ಎಂದು ಕರೆಯುವುದು ವಾಡಿಕೆ. ಮೈಸೂರು ಕನ್ನಡದ ವಿದ್ಯಾವಂತ ಹಾಗೂ ಅವಿದ್ಯಾವಂತರ ಭಾಷೆಗಳ ನಡುವೆ ವ್ಯಾಕರಣ ವಿಚಾರಗಳಲ್ಲಿ ಕೇವಲ ಸ್ವಲ್ಪ ಅಂತರ ಕಂಡುಬರುತ್ತದೆ.

# ಕರಾವಳಿ ಕನ್ನಡ :

ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎರಡು ರೀತಿಯ ಕನ್ನಡ ಬಳಕೆಯಲ್ಲಿದೆ. ತುಳು, ಕೊಂಕಣಿ, ಮರಾಠಿ, ಮಲೆಯಾಳಂ ಮೊದಲಾದ ಭಾಷೆಗಳನ್ನು ಮನೆಮಾತಾಗಿ ಬಳಸುವ ಜನರು ಪರಸ್ಪರ ಸಾಧನೆಗಾಗಿ ಬಳಸುವ ಕನ್ನಡ ಒಂದು ರೀತಿಯದಾದರೆ ನಾಡವರು, ಹವ್ಯಕ, ಗೌಡ, ಕೋಟ, ಕುಂಬಾರ, ಬೈರ ಮೊದಲಾದ ಸಮಾಜಗಳಿಗೆ ಸೇರಿದ ಜನ ತಮ್ಮತಮ್ಮೊಳಗೆ ಬಳಸುವ ಕನ್ನಡ ಇನ್ನೊಂದು ರೀತಿಯದು. ಇವುಗಳಲ್ಲಿ ಮೊದಲಿನದನ್ನು ಸಾಂಪರ್ಕಿಕ ಕನ್ನಡವೆಂದು ಎರಡನೆಯದನ್ನು ತಾಯಿನುಡಿ ಕನ್ನಡವೆಂದೂ ಪ್ರತ್ಯೇಕಿಸಿ ಹೇಳಬಹುದು.

ಹೊರಗಿನಿಂದ ಬಂದವರಿಗೆ ಈ ಜಿಲ್ಲೆಯಲ್ಲಿ ಮೊದಲಿಗೆ ಕೇಳಿಸುವುದು ಸಾಂಪರ್ಕಿಕ ಕನ್ನಡ. ಇದನ್ನು ಆಡುವವರು ಬೇರೆ ಬೇರೆ ಭಾಷೆಗಳನ್ನು ಮನೆಮಾತಾಗಿ ಬಳಸುವವರಾದ್ದರಿಂದ, ಈ ನುಡಿಯಲ್ಲಿ ತುಳು, ಕೊಂಕಣಿ ಮೊದಲಾದ ಭಾಷೆಗಳ ಪ್ರಭಾವ ಹೆಚ್ಚು ಕಾಣಿಸುತ್ತದೆ. ಅಲ್ಲದೆ, ಈ ಕನ್ನಡವನ್ನು ಬಹುಮಂದಿ ಶಾಲೆ, ಕಾಲೇಜು, ಪುಸ್ತಕ, ಪತ್ರಿಕೆ ಇವುಗಳ ಮೂಲಕ ಮತ್ತು ಸಭೆ, ನಾಟಕಗಳ ಮೂಲಕ ಪಡೆದಿರುವರಾದ್ದರಿಂದ ಇದು ಆಡುನುಡಿಗಿಂತಲೂ ಬರಹದ ಕನ್ನಡವನ್ನೇ ಹೆಚ್ಚು ಹೋಲುತ್ತದೆ. ಮುಂದುವರೆದು ಸಾಂಪರ್ಕಿಕ ಕನ್ನಡ ಯಾವ

ರೀತಿಯಲ್ಲಿ ಬೆಳೆದುಬಂದಿದೆ. ಅದರ ಬೆಳವಣಿಗೆಗೂ ಆಡುನುಡಿಯ ಬೆಳವಣಿಗೆಗೂ ಏನು ಭೇದವಿದೆ. ಇದರಲ್ಲಿ ಬೇರೆ ಬೇರೆ ಸಮಾಜಗಳಿಗೆ ಮತ್ತು ಆ ಸಮಾಜದವರ ಮಾತೃಭಾಷೆಗಳಿಗೆ ಅನುಗುಣವಾಗಿ ಹೇಗೆ ಪ್ರಭೇದಗಳು ಮೂಡಿಬಂದಿವೆ ಎಂಬ ವಿಷಯಗಳು ಇನ್ನೂ ಚರ್ಚೆಯ ಹಂತದಲ್ಲಿ ಇವೆ.

## ಧಾರವಾಡ ಕನ್ನಡ:

ಇದು ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲಿ ಪ್ರಮುಖ ಉಪಭಾಷಾಪ್ರಭೇದ. ಇದರಲ್ಲಿ ಧಾರವಾಡ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಭಾಷಾರೂಪಗಳು ಸಮಾವೇಶಗೊಳ್ಳುತ್ತವೆ. ಜಿಲ್ಲೆ ಜಿಲ್ಲೆಗೆ, ತಾಲ್ಲೂಕು ತಾಲ್ಲೂಕಿಗೆ ಒಳಭೇದಗಳು ಕಂಡುಬಂದರೂ ಈ ಪ್ರದೇಶದ ವಿಶಿಷ್ಟ ರೂಪಗಳೆನ್ನಲು ಬರುವಂಥ ಪ್ರಯೋಗಗಳಿವೆ. ಈ ಪ್ರಯೋಗಗಳನ್ನು ಇತರ ಉಪಭಾಷಾ ಪ್ರಭೇದಗಳಲ್ಲಿ ಕಂಡುಬರುವ ರೂಪಗಳೊಡನೆ ಹೋಲಿಸಿ ನೋಡಿದಾಗ ಧಾರವಾಡ ಕನ್ನಡದ ವೈಶಿಷ್ಟ್ಯಗಳು ವಿಶಿಷ್ಟವಾಗಿ ಕಂಡುಬಂದು, ಅದಕ್ಕೆ ಒಂದು ಭಿನ್ನಸ್ಥಾನ ಒದಗಿಸಿಕೊಡುತ್ತವೆ.

## ಗುಲ್ಬರ್ಗಾ ಕನ್ನಡ :

ಗುಲ್ಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳ ಕನ್ನಡವನ್ನು ಹೈದರಾಬಾದ್ ಕರ್ನಾಟಕ ಕನ್ನಡ ಎಂದೂ ಕರೆಯುವುದುಂಟು. ಈ ಉಪಭಾಷೆಯ ಮೇಲೆ ಮರಾಠಿ, ಉರ್ದು, ಸಂಸ್ಕೃತಗಳ ಪ್ರಭಾವ ತೀವ್ರತರವಾಗಿ ಆಗಿದೆ. ಮೊದಲಿಗೆ ಈ ಉಪಭಾಷೆಯನ್ನಾಡುವ ಪ್ರದೇಶ ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಗಾಗಿತ್ತಾದ ಕಾರಣ ಉರ್ದು ಈ ಭಾಷೆಯ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ.

### ಸಮುದಾಯಕ್ಕೆ ಸೇರಿದ ಉಪಭಾಷೆಗಳು:

ಉಪಭಾಷೆಗಳಲ್ಲಿ ಮೇಲೆ ಚರ್ಚಿಸಲಾದ ಪ್ರಾದೇಶಿಕ ಉಪಭಾಷೆಗಳ ಜೊತೆಗೆ ಆಯಾ ವಿಶಿಷ್ಟ ಸಮುದಾಯಕ್ಕೆ ಸೇರಿದ ಉಪಭಾಷೆಗಳೂ ಇವೆ. ಸೋಲಿಗ, ಬಡಗ, ಅರೆಭಾಷೆ, ಹವ್ಯಕ, ಕುರುಬ (ಕುರುಂಬ) ಇತ್ಯಾದಿ ಭಾಷೆಗಳು ಈ ಗುಂಪಿಗೆ ಸೇರುತ್ತವೆ.

**ಸೋಲಿಗ :**ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ, ಮೈಸೂರು ಜಿಲ್ಲೆಯ, ಹೆಗ್ಗಡದೇವನಕೋಟೆ, ಕಾಕನಕೋಟೆ ಹಾಗೂ ಬೆಂಗಳೂರು, ಮಂಡ್ಯ, ತುಮಕೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಾಸವಾಗಿರುವ ಸೋಲಿಗ (ಶೋಲಿಗ) ಎಂಬ ಆದಿವಾಸಿ ಜನಾಂಗದವರ ಆಡು ಭಾಷೆ. ಸೋಲಿಗ ಭಾಷೆಯನ್ನು ಸಾಮಾನ್ಯವಾಗಿ ಸೋಲಿಗ ಕನ್ನಡ ಎಂದು ಕರೆಯುವುದು ರೂಡಿ.

**ಬಡಗ ಭಾಷೆ :** ಈ ಭಾಷೆಯನ್ನು ಇತ್ತೀಚೆಗೆ ಕೆಲವು ವಿದ್ವಾಂಸರು ಒಂದು ಸ್ವತಂತ್ರ ದ್ರಾವಿಡ ಭಾಷೆ ಎಂದು ಪರಿಗಣಿಸಿದ್ದಾರೆ. ತಮಿಳುನಾಡು, ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವೆ ಸಾಲಾಗಿ ಹಬ್ಬಿರುವ ಮಧುಮಲೈ ಮತ್ತು ನೀಲಗಿರಿಬೆಟ್ಟಗಳ ಸುತ್ತಮುತ್ತಲ ಪ್ರದೇಶಗಳಲ್ಲಿ

ವಾಸವಾಗಿರುವ ಹೆಚ್ಚು ಬಡಗರು ಈ ಭಾಷೆಯನ್ನಾಡುವರು. **ಹವ್ಯಕ:** ಹೆಚ್ಚಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನೆಲಸಿರುವ ಹವ್ಯಕರ ಆಡುಭಾಷೆ. ಇದು ಕನ್ನಡದ ಉಪಭಾಷೆಯಾಗಿದ್ದರೂ ಇದನ್ನಾಡುವ ಜನ ಹವ್ಯಕ ಕನ್ನಡ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಭಾಷೆಗೆ ತನ್ನದೇ ಆದ ಲಿಪಿ ಸೌಲಭ್ಯವಿಲ್ಲ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಕುಮಟ ಮುಂತಾದ ಕಡೆ ಆಡುವ ಹವ್ಯಕ ಭಾಷೆಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸುಳ್ಯ, ಪುತ್ತೂರು, ಮೂಡಬಿದರೆ, ಬಂಟ್ವಾಳ, ಮಂಗಳೂರು, ಉಡುಪಿ ಮುಂತಾದ ಕಡೆ ಆಡುವ ಭಾಷೆಗೂ ತುಂಬ ಅಂತರ ಕಂಡುಬರುತ್ತದೆ.

**ಕುರುಬ :** ಕೇರಳದ ವೈನಾಡು (ಮಲಬಾರು), ತಮಿಳು ನಾಡಿನ ನೀಲಗಿರಿ, ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಕುರುಬ ಎಂಬ ಆದಿವಾಸಿ ಜನಾಂಗದವರು ಈ ಭಾಷೆಯನ್ನಾಡುತ್ತಾರೆ. ಕುರುಬರಲ್ಲಿ ಪ್ರಮುಖವಾಗಿ ಊರುಕುರುಬ,ಕಾಡುಕುರುಬ ಎಂಬ ಎರಡು ಪಂಗಡಗಳಿವೆ. ಈ ಪಂಗಡಗಳಲ್ಲಿಯೂ ಹಲವಾರು ಒಳಪಂಗಡಗಳಿವೆ. ಇವರು ಆಡುವ ಭಾಷೆಯನ್ನು ಕುರುಬಕನ್ನಡ ಎಂದು ಕರೆಯುತ್ತಾರೆ.

### ಇಂದು ಕನ್ನಡ ಜಾಗತಿಕ ಭಾಷೆಯಾಗಿದೆ:

ಇಂದು ಕನ್ನಡ ಭಾಷೆಯನ್ನು ಮಾತನಾಡುವ ಕನ್ನಡಿಗರು ಅಮೆರಿಕ, ಇಂಗ್ಲೆಂಡ್, ದುಬೈ, ಆಸ್ಟ್ರೇಲಿಯಾ ಹೀಗೆ ಜಗತ್ತಿನ ಹಲವಾರು ದೇಶಗಳಲ್ಲಿ ಕನ್ನಡ ಸಂಘಗಳನ್ನು ಮಾಡಿಕೊಂಡು ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿ ಮತ್ತು ಭಾಷೆಯ ಶ್ರೀಮಂತಿಕೆಯನ್ನು ಕಾರ್ಯಕ್ರಮಗಳನ್ನು ಆಯೋಜಿಸುವುದರ ಮುಖಾಂತರ ಮತ್ತು ಕನ್ನಡ ಭಾಷೆಯನ್ನೇ ಮಾತೃಭಾಷೆಯನ್ನಾಗಿಸಿಕೊಂಡು ವಿದೇಶಗಳಲ್ಲಿ ಜೀವನ ಮಾಡುತ್ತಿದ್ದಾರೆ. ಇದು ಕನ್ನಡ ಭಾಷೆಯಲ್ಲಿರುವ ವಿಶೇಷ ಗುಣಲಕ್ಷಣವಾಗಿದೆ. ಕನ್ನಡ ಭಾಷೆಯನ್ನು ಕಲಿತು, ಬಳಸುತ್ತ ಈ ಭಾಷೆಯನ್ನು ಇನ್ನಷ್ಟು ಶ್ರೀಮಂತಗೊಳಿಸುವ ಜವಾಬ್ದಾರಿ ನಮ್ಮದಾಗಬೇಕು. ಭಾಷೆಯನ್ನು ಬರಿ ಕಲಿತರೆ ಸಾಲದು ಅದನ್ನು ಸಂಭಾಷಣೆಗಳಲ್ಲಿ ಮತ್ತು ಬರವಣಿಗೆಯಲ್ಲಿ ಬಳಸಬೇಕು. ಯಾವ ಭಾಷೆ ಹೆಚ್ಚು ಬಳಸಲ್ಪಡುತ್ತದೆಯೋ ಅಂತಹ ಭಾಷೆ ಹೆಚ್ಚು ಪ್ರಕಾಶಿಸುತ್ತದೆ.

ಶ್ರೇಷ್ಠಕವಿ **ಸರ್ವಜ್ಞರ** ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ:

**"ಬಚ್ಚಿಟ್ಟ ಜ್ಞಾನ ಕೊಳೆಯುವುದು,**

**ಬಿಚ್ಚಿಟ್ಟ ಜ್ಞಾನ ಹೊಳೆಯುವುದು"**

## ಕನ್ನಡ ಒಂದು ಅದ್ಭುತ ಭಾಷೆ ಎಂಬುದಕ್ಕೆ ಹಲವಾರು ಕಾರಣಗಳಿವೆ:

1. ಅತ್ಯಂತ ಪ್ರಾಚೀನ ಭಾಷೆ ವಿಶ್ವದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ವಿಶ್ವದ ನಾನಾ ಪ್ರದೇಶಗಳಲ್ಲಿ ಸಿಕ್ಕ ಅಚ್ಚಗನ್ನಡ ಶಾಸನಗಳು ಕನ್ನಡದ ಪ್ರಾಚೀನತೆಯನ್ನು ಸಾಬೀತುಪಡಿಸಿವೆ.

2. 2500 ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡ ಭಾಷೆ ಎರಡೂವರೆ ಸಹಸ್ರಮಾನದಷ್ಟು ಹಳೆಯದು! 2500 ವರ್ಷಗಳ ಹಿಂದೇ ಕನ್ನಡ ಭಾಷೆಯ ಅಸ್ತಿತ್ವದಲ್ಲಿತ್ತು ಎಂದು ಸಾಬೀತಾಗಿದೆ. ಅಲೆಗ್ಸ್ಯಾಂಡರ್ ಕಾಲದಲ್ಲಿ ಅಂದರೆ ಕ್ರಿ.ಪೂ. ನಾಲ್ಕನೇ ಶತಮಾನದಲ್ಲಿ ಸಿಕ್ಕ ತಾಳೆಗರಿಯೊಂದರಲ್ಲಿ ಕನ್ನಡದ 'ಊರಲ್ಲಿ' ಎಂಬ ಶಬ್ಧ ಪತ್ತೆಯಾಗಿ ಅಚ್ಚರಿ ಮೂಡಿಸಿತ್ತಾದರೂ ಆ ತಾಳೆಗರಿಗಳನ್ನು ಸುಟ್ಟಿದ್ದರಿಂದ ಕನ್ನಡಕ್ಕೆ ಸಂಬಂಧಿಸಿದ ಪ್ರಮುಖ ಸಾಕ್ಷ್ಯವೊಂದು ನಾಶವಾಗಿತ್ತು.

3. ಕಿಟೆಲ್ ಶಬ್ದಕೋಶದ ಹೆಗ್ಗಳಿಕೆ ಫರ್ಡಿನೆಂಡ್ ಕಿಟೆಲ್ ಕನ್ನಡ ಶಬ್ದಕೋಶ ರಚಿಸಿದ್ದು ಎಲ್ಲ ಕನ್ನಡಿಗರಿಗೂ ಗೊತ್ತಿರುವ ವಿಷಯ. ಆದರೆ ಹೀಗೆ ವಿದೇಶಿಯರೊಬ್ಬರು ಭಾರತೀಯ ಪ್ರಾದೇಶಿಕ ಭಾಷೆಯೊಂದರ ಶಬ್ದಕೋಶ ರಚಿಸಿದ್ದು ಕನ್ನಡದಲ್ಲಿ ಮಾತ್ರ ಎಂಬುದು ಕನ್ನಡದ ಹೆಗ್ಗಳಿಕೆಗೆ ಮೇರುಗರಿ!

4. ಹಿಂದಿ ಹುಟ್ಟಿಲ್ಲದ ಕಾಲದಲ್ಲಿ ಕನ್ನಡ ಮುಗಿಲಲ್ಲಿತ್ತು! ಅಮೋಘವರ್ಷ 'ಕವಿರಾಜಮಾರ್ಗ' ರಚಿಸುವಾಗ ಇಂಗ್ಲೀಷ್ ಭಾಷೆಯಿನ್ನೂ ತೊಟ್ಟಿಲೊಳಗಿನ ಕೂಸಾಗಿತ್ತು. ಹಿಂದಿ ಭಾಷೆ ಹುಟ್ಟಿರಲೇ ಇಲ್ಲವಂತೆ!

5. ಪರಿಪೂರ್ಣ ಭಾಷೆ ಕನ್ನಡ ಭಾಷೆ ಮತ್ತು ವರ್ಣಮಾಲೆ ತಾರ್ಕಿಕ ಮತ್ತು ವೈಜ್ಞಾನಿಕವಾಗಿಯೂ 99.99 ಪ್ರತಿಶತಃ ಪರಿಪೂರ್ಣವಾದುದು ಎಂಬುದು ಸಾಬೀತಾಗಿದೆ.

6. ವಿಶ್ವದ ಲಿಪಿಗಳ ರಾಣಿ ಎಂದರೆ ಕನ್ನಡ ಲಿಪಿ ಎಂದು ಶ್ರೀ ವಿನೋಭಾ ಭಾವೆಯವರೇ ಹೇಳಿದ್ದರು ಎಂಬುದು ಕನ್ನಡದ ಶ್ರೇಷ್ಠತೆಗೆ ಸಾಕ್ಷಿ.

7. ಸಾಹಿತ್ಯಕ್ಕಾಗಿ ಅತೀ ಹೆಚ್ಚು ಪ್ರಶಸ್ತಿ ಪಡೆದ ಭಾರತೀಯರೆಂದರೆ ಅದು ಕುವೆಂಪು. ಅಂದರೆ ಕನ್ನಡ ಸಾಹಿತ್ಯದಿಂದಾಗಿಯೇ ಜಗದ ಕವಿ, ಯುಗದ ಕವಿ ಕುವೆಂಪು ಅವರು ಈ ಗೌರವ ಪಡೆದರು.

8. ಎಂಟು ಜ್ಞಾನಪೀಠದ ಹೆಗ್ಗಳಿಕೆ , ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಭಾಷೆ ಎಂದರೆ ಕನ್ನಡ. ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ವಿ.ಕೃ.ಗೋಕಾಕ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಈ ಎಂಟು ಜನ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಕೃಷಿ ಮಾಡಿ ಕನ್ನಡಕ್ಕೆ ಗರಿಷ್ಠ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟವರು.

9. ವಿಕಿಪೀಡಿಯ ಲೋಗೋದಲ್ಲೂ ಕನ್ನಡ! ಆಧುನಿಕ ಸರ್ವಜ್ಞ ವಿಕಿಪೀಡಿಯವನ್ನು ದಿನಕ್ಕೆ ಕನಿಷ್ಠವೆಂದರೆ ಒಮ್ಮೆಯಾದರೂ ನೋಡುತ್ತೇವೆ. ಮಾಹಿತಿಯ ಕಣಜವಾದ ಈ ವಿಕಿಪೀಡಿಯಾದ ಲೋಗೋವನ್ನೊಮ್ಮೆ ಸರಿಯಾಗಿ ನೋಡಿ. ಇದರಲ್ಲಿ ಕನ್ನಡ ಲಿಪಿಯ 'ವಿ' ಅಕ್ಷರವೂ ಇದೆ. ಇದು ಕನ್ನಡಕ್ಕೆ ನಿಜಕ್ಕೂ ಹೆಮ್ಮೆಯ ವಿಷಯ.

10. "ಚಾರಿಯಟ್ ಮೈಮ್" ಎಂಬ ಎರಡನೇ ಶತಮಾನದ ಗ್ರೀಕ್ ನಾಟಕವೊಂದು ಕನ್ನಡದ ಸಾಲನ್ನು ಉಪಯೋಗಿಸಿದೆ. ಅಂದರೆ ಎರಡನೇ ಶತಮಾನದಷ್ಟು ಹಿಂದೆಯೇ ಕನ್ನಡ ಭಾಷೆ ಗ್ರೀಸ್ ದೇಶದವರೆಗೂ ಲಗ್ಗೆಯಿಟ್ಟಿತ್ತು ಎಂದಾಯ್ತು!

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

### ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ಕನ್ನಡದಲ್ಲಿ ಎಷ್ಟು ಪ್ರಮುಖ ಉಪಭಾಷಾ ಪ್ರಭೇದಗಳು ಇವೆ?

1. 3
2. 4
3. 5
4. 6

2. ಕನ್ನಡ ಭಾಷೆಗೆ ಇಲ್ಲಿಯವರೆಗೆ ಎಷ್ಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ?

1. 6
2. 8
3. 10
4. 5

3. ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ಯಾವ ವರ್ಷದಲ್ಲಿ ಮರುನಾಮಕರಣ ಮಾಡಲಾಯಿತು?

1. 1950
2. 1956
3. 1971

21KSS27 Draft Copy
VTU ಸಾಹಿತ್ಯ ಸಿಂಚನ

4. 1973

4. ಉಪಭಾಷೆಗಳಲ್ಲಿ ಮತ್ತೆ ಎಷ್ಟು ವಿಧಗಳಿವೆ?

1. 2

2. 4

3. 6

4. 8

5. ಕನ್ನಡ ಭಾಷೆಯನ್ನು ವಿಶ್ವ ಲಿಪಿಗಳ ರಾಣಿ ಎಂದು ಯಾರು ಕರೆದಿದ್ದಾರೆ?

1. ಶ್ರೀ ವಿನೋಬಾ ಭಾವೆ ರವರು 2. ಕುವೆಂಪುರವರು

3. ಆದಿಕವಿ ಪಂಪ

4. ಬಿ ಎಂ ಶ್ರೀಕಂಠಯ್ಯ

5. ಕನ್ನಡದ ಮೊದಲ ಶಿಲಾಶಾಸನ ಯಾವುದು?

1. ಕಪ್ಪೆ ಅರೆಭಟ್ಟನ ಶಿಲಾಶಾಸನ

2. ಶ್ರವಣಬೆಳಗೊಳದ ಶಿಲಾಶಾಸನ 3. ಹಲ್ಮಿಡಿ ಶಿಲಾಶಾಸನ

4. ಪಟ್ಟದಕಲ್ಲು ಶಿಲಾಶಾಸನ

6. ಕರ್ನಾಟಕದ ರಾಜಧಾನಿ ಯಾವುದು?

1. ಮೈಸೂರು

2. ಬೆಂಗಳೂರು

3. ಹುಬ್ಬಳ್ಳಿ-ಧಾರವಾಡ

4. ಬೆಳಗಾವಿ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

೧ ಯಾವುದನ್ನು ಉಪಭಾಷೆ ಎಂದು ಕರೆಯಲಾಗುತ್ತದೆ?

೨. ಕನ್ನಡದ ಪ್ರಮುಖ ಉಪಭಾಷೆಗಳು ಯಾವುವು?

೩. ಸಾಮಾಜಿಕ ಉಪಭಾಷೆ ಎಂದರೇನು?

4 ಕರಾವಳಿ ಕನ್ನಡ ಯಾವ ಯಾವ ಜಿಲ್ಲೆಗಳಲ್ಲಿ ಹೆಚ್ಚು ಬಳಕೆಯಲ್ಲಿದೆ ?

5. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಹೆಸರುಗಳನ್ನು ಬರೆಯಿರಿ?

೩. ಸೋಲಿಗ ಭಾಷೆಯನ್ನು ಯಾವ ಪ್ರದೇಶಗಳಲ್ಲಿ ಹೆಚ್ಚು ಬಳಸುತ್ತಾರೆ?

4 ಹವ್ಯಕ ಕನ್ನಡ ಭಾಷೆಯು ಯಾವ ಪ್ರದೇಶದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ ?

5. ಮೈಸೂರು ಕನ್ನಡದ ವೈಶಿಷ್ಟತೆ ಏನು?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

೧. ಪ್ರಾದೇಶಿಕ ಉಪಭಾಷೆ ಮತ್ತು ಸಾಮಾಜಿಕ ಉಪಭಾಷೆ ಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

೨. ಧಾರವಾಡ ಕನ್ನಡ ಮತ್ತು ಗುಲ್ಬರ್ಗ ಕನ್ನಡ ಗಳಿಗೆ ಇರುವ ಪ್ರಮುಖ ವ್ಯತ್ಯಾಸ ಮತ್ತು ವೈಶಿಷ್ಟತೆಯನ್ನು ಕುರಿತು ಬರೆಯಿರಿ.

3. ಕನ್ನಡ ಒಂದು ಅದ್ಭುತ ಭಾಷೆ ಎಂಬುದಕ್ಕೆ ಐದು ಕಾರಣಗಳನ್ನು ಬರೆಯಿರಿ.

4. ಕನ್ನಡವು ಇಂದು ಜಾಗತಿಕ ಭಾಷೆಯಾಗಿ ಬೆಳೆದಿದೆ ಎಂಬ ಈ ಮಾತನ್ನು ವಿವರಿಸಿ.

VTU BSc ಸಾಹಿತ್ಯ ಸಿಂಚನ 21KSS27 Draft Copy

# ಅಧ್ಯಾಯ - 11

==========================================

# ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಸಮೀಕ್ಷೆ ಮತ್ತು ಅವಲೋಕನ

Draft Co

**"ಇಪ್ಪತ್ತನೆಯ ಶತಮಾನ ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದ ಸುವರ್ಣಯುಗ. ಏಕೆಂದರೆ ಈ ಕಾಲದಲ್ಲಿ ಕಂಡಷ್ಟು ವೈವಿಧ್ಯತೆಯನ್ನೂ, ಬೆಳವಣಿಗೆಗಳನ್ನೂ ಕನ್ನಡಕಾವ್ಯ ಯಾವ ಕಾಲದಲ್ಲೂ ಕಂಡಿರಲಿಲ್ಲ. ಈ ಕಾಲದಲ್ಲೂ, ಮಹಾಕಾವ್ಯಗಳು, ಶೃಂಗಾರ ಕಾವ್ಯಗಳು, ದೀರ್ಘ ಕಥಾ ಕವನಗಳು, ಭಾವಗೀತೆಗಳು, ಹೊಸ ಛಂದಸ್ಸಿನ (ಸಾನೆಟ್) ಕವನ-ಗದ್ಯ-ಕಾವ್ಯಗಳು, ಗೀತೆಗಳು (ಕೆಲವು ಸಿನೇಮಾದ ಗೀತೆಗಳೂ ಉತ್ತಮ ಸಾಹಿತ್ಯ ಹೊಂದಿವೆ), ಹನಿಗವನಗಳು, ಕಗ್ಗಗಳು, ಚುಟುಕಗಳು, ಗೀತ ನಾಟಕಗಳು ರಚನೆಯಾಗಿವೆ."**

19 ಮತ್ತು 20ನೇ ಶತಮಾನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷಿಪ್ರಗತಿಯ ಬೆಳವಣಿಗೆ ಮತ್ತು ಜಗತ್ತಿನ ಎಲ್ಲ ಭಾಷೆಗಳನ್ನು ತಲ್ಲಣಿಸಿದ ಇಂಗ್ಲಿಷ್ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳ ಮೇಲೆ ಅದರ ಪರಿಣಾಮ ಇಡೀ ವಿಶ್ವವೇ ಆ ಸಂದರ್ಭದಲ್ಲಿ ಯುರೋಪಿನ ಹಲವು ದೇಶಗಳ ಆಡಳಿತದ ಕಪಿಮುಷ್ಟಿಯಲ್ಲಿ ಇದ್ದದ್ದನ್ನು ಹಿರಿಯರು ಅನುಭವಿಸಿದ್ದಾರೆ ಮತ್ತು ಕಿರಿಯರು ಅನುಭವಿಸುತ್ತಿದ್ದೇವೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯು 19ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಬತ್ತಿಯೇ ಹೋಗುವುದೇನೊ ಎನ್ನುವಷ್ಟು ತೆಳುವಾಯಿತು. ಆ ವೇಳೆಗಾಗಲೇ ಕರ್ನಾಟಕ ಬ್ರಿಟಿಷರ ಆಳ್ವಿಕೆಗೆ ಸೇರಿಹೋಗಿತ್ತು. ಇಂಗ್ಲಿಷ್ ಶಿಕ್ಷಣದ ಮೂಲಕ ಕನ್ನಡ ಭಾಷೆಯ ಅಭ್ಯಾಸ ಕುಂಠಿತಗೊಂಡಿತು. ಬುದ್ಧಿಜೀವಿಗಳ ಮಾತೃಭಾಷಾಪ್ರೇಮ ಇಂಗ್ಲಿಷ್ ಭಾಷೆಯ ಮೋಹದಲ್ಲಿ ಮುಳುಗಿ ಹೋಯಿತು. ಆದರೆ ಅದೇ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಅಧ್ಯಯನವೇ ಕನ್ನಡ ಜನರ ಆತ್ಮಾಬಿಮಾನವನ್ನು ಕೆರಳಿಸಿ, ದೇಶಭಾಷೆಗಳ ಅದ್ಭುತ ಕ್ರಾಂತಿಗೂ ಮೂಲವಾಯಿತು ಎಂದರೆ ಅತಿಶಯೋಕ್ತಿಯಲ್ಲ. ಇಂಗ್ಲಿಷ್ ಸಾಹಿತ್ಯದಲ್ಲಿನ ಸ್ವಾತಂತ್ರ್ಯ, ಸೌಲಭ್ಯ, ರೀತಿ, ರಸಪುಷ್ಟಿಗಳನ್ನು ಕಂಡು ಕನ್ನಡದಲ್ಲಿಯೂ ಅಂಥ ಸಾಹಿತ್ಯವನ್ನು ಸೃಷ್ಟಿಸಬೇಕೆಂಬ ಉತ್ಸಾಹ ಕನ್ನಡನಾಡಿನ ಸಾಹಿತಿಗಳಲ್ಲಿ ಮೂಡಿತು. ಮೊದಲಿಗೆ ಈ ಕಾರ್ಯ ಅನುವಾದಗಳ ಮೂಲಕ ನಡೆಯಿತು.

ಕಾಲಕ್ರಮದಲ್ಲಿ ಕನ್ನಡ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಗೊಂಡು, ಅರ್ಧ ಶತಮಾನದಿಂದ ಈಚೆಗೆ ಉತ್ತಮ ಕಾವ್ಯಗಳು ರಚನೆಗೊಳ್ಳುತ್ತ ಬಂದಿವೆ.

ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದ ಸಮಯದಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದುವು. ಇವರು ಕರ್ನಾಟಕದ ಜನಜೀವನದಲ್ಲಿ ಸಮರಸವಾಗಿ ಬೆರೆತು, ಇಲ್ಲಿನ ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದುದಲ್ಲದೆ, ಕನ್ನಡ ಭಾಷಾಸ್ವರೂಪವನ್ನು ದಿಗ್ದರ್ಶಿಸಬಲ್ಲ ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈಹಾಕಿದರು.

> **“ಕನ್ನಡ ಭಾಷೆಯ ಬೆಳವಣಿಗೆಗೆ ಜಾನ್ಸ್ಯಾಂಡ್, ವಿಲಿಯಂ ರೀವ್, ಕಿಟ್ಟೆಲ್, ಜೀಗ್ಲರ್, ಬಿ.ಎಲ್.ರೈಸ್, ಇ.ಪಿ.ರೈಸ್ ಮೊದಲಾದವರಿಂದ ಕನ್ನಡ ಭಾಷಾಸಾಹಿತ್ಯಗಳಿಗೆ ಆಗಿರುವ ಸೇವೆ ಅಪಾರ. ಪಾದ್ರಿಗಳು ಕನ್ನಡ ಸಾಹಿತ್ಯದ ಹಲವು ಹೊಸಮುಖಗಳಿಗೆ ಅಂಕುರಾರ್ಪಣೆ ಮಾಡಿದರು: ವಸ್ತುನಿಷ್ಠವಾದ ಆಧುನಿಕ ಸಾಹಿತ್ಯ ವಿಮರ್ಶೆಗೆ ತಳಹದಿ ಹಾಕಿದರು. ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀರ್ತಿ ಇ.ಪಿ.ರೈಸ್ (ಮೊದಲ ಮುದ್ರಣ 1915) ಅವರಿಗೆ ಸಲ್ಲುತ್ತದೆ. ಕನ್ನಡ ಶಾಸನಗಳನ್ನು ಕಲೆಹಾಕಿದ ಕೀರ್ತಿ ಫ್ಲೀಟ್ (ಮೊದಲ ಮುದ್ರಣ 1878) ಅವರದಾದರೆ, ಮೈಸೂರು ಗೆಜೆಟಿಯರಿನ ಎರಡು ಸಂಪುಟಗಳನ್ನೂ ಎಪಿಗ್ರಾಪಿಯ ಕರ್ನಾಟಿಕದ 12 ಸಂಪುಟಗಳನ್ನೂ ಹೊರತಂದ ಕೀರ್ತಿ ಬಿ.ಎಲ್.ರೈಸ್ ಅವರಿಗೆ ಸಲ್ಲುತ್ತದೆ. ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ ನೀಡಿದ ಕಾಲ್ಡ್‌ವೆಲ್ಲರು ಹಲವು ದೃಷ್ಟಿಗಳಿಂದ ಕನ್ನಡ ಭಾಷಾ ಬೆಳವಣಿಗೆಗೆ ಚಿರಸ್ಮರಣೀಯ ವ್ಯಕ್ತಿಗಳಾಗಿದ್ದಾರೆ”.**

ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆ ಮೈಸೂರು ಅರಸರಿಂದ ದೊರೆತ ಸಹಾಯವೂ ಬಹುಮುಖ್ಯವಾದದ್ದು. ಚಾಮರಾಜ ಒಡೆಯರು ತಮ್ಮ ಆಶ್ರಯದಲ್ಲಿ ಶ್ರೀ ಚಾಮರಾಜೇಂದ್ರ **ಕರ್ನಾಟಕ ನಾಟಕ ಸಭಾವನ್ನು** ಸ್ಥಾಪಿಸಿ, ತಮ್ಮ ಆಸ್ಥಾನಪಂಡಿತರನ್ನು ನಾಟಕ ರಚನೆಗೆ ಕೈ ಹಾಕುವಂತೆ ಪ್ರೋತ್ಸಾಹಿಸಿದರು. **ಅಬಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು** ಶಾಕುಂತಲ ಮೊದಲಾದ ಸಂಸ್ಕೃತ ನಾಟಕಗಳ ಭಾಷಾಂತರಗಳನ್ನೂ ಶೂರಸೇನಚರಿತೆ ಎಂಬ ಹೆಸರಿನಿಂದ ಒಥೆಲೊ ಎಂಬ ಇಂಗ್ಲಿಷ್ ನಾಟಕದ ಭಾಷಾಂತರ ವನ್ನೂ ಕನ್ನಡಕ್ಕೆ ಕೊಟ್ಟರು. ಆಸ್ಥಾನಕವಿಗಳಾದ ಜಯರಾಯಾಚಾರ್ಯ, ಸುಬ್ಬಾಶಾಸ್ತ್ರಿ, ಅನಂತನಾರಾಯಣ ಶಾಸ್ತ್ರಿ ಮೊದಲಾದವರೂ ಈ ಕಾರ್ಯರಂಗದಲ್ಲಿ ದುಡಿದು ಕೀರ್ತಿಶೇಷ ರಾದರು. **ಚಾಮರಾಜರ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಕನ್ನಡದ ಸ್ವರ್ಣಯುಗಕ್ಕೆ ತಳಹದಿ ಹಾಕಿದವರೆಂದು ಹೇಳಬಹುದು.** ಅವರ ಆಸ್ಥಾನಕವಿಗಳಾದ ಶ್ರೀಕಂಠಶಾಸ್ತ್ರಿಗಳೂ ನರಹರಿಶಾಸ್ತ್ರಿಗಳೂ ನೂರಾರು ಸ್ವತಂತ್ರ ನಾಟಕಗಳನ್ನು ರಚಿಸಿ ನಾಟಕ ರಂಗಸ್ಥಳಗಳ ದಿಗ್ವಿಜಯಕ್ಕೆ ಕಾರಣರಾದುದಲ್ಲದೆ ಹಲವು ಕಾವ್ಯಗಳ ಕರ್ತೃಗಳಾಗಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಅದರಲ್ಲಿಯೂ ಶ್ರೀಕಂಠಶಾಸ್ತ್ರಿಗಳ ಬಹುಮುಖ ಪ್ರತಿಭೆ ಅಚ್ಚರಿಯನ್ನುಂಟುಮಾಡುತ್ತದೆ. ಹಲವು

ಕಾದಂಬರಿಗಳು, ವ್ಯಂಗ್ಯಚಿತ್ರಗಳು, ವಿಡಂಬನಾತ್ಮಕ ಪ್ರಬಂಧಗಳು, ಸಂಸ್ಕೃತ, ತೆಲುಗು ಗ್ರಂಥಗಳ ಅನುವಾದಗಳು ಇವರಿಂದ ಮೂಡಿಬಂದವು. ಇದೇ ಸಂದರ್ಭದಲ್ಲಿ

> **"ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ನವೋದಯಕ್ಕಾಗಿ ನೀಡಿದ ಎರಡು ಮುಖ್ಯ ಕಾಣಿಕೆಗಳೆಂದರೆ ಕನ್ನಡ ಸಾಹಿತ್ಯ ಪರಿಷತ್ತು (1915) ಮತ್ತು ಮೈಸೂರು ವಿಶ್ವವಿದ್ಯಾನಿಲಯ (1916). ಈ ಎರಡು ಸಂಸ್ಥೆಗಳಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂದಿರುವ ಸೇವೆ ಅಪಾರ. ಕನ್ನಡ ಸಾಹಿತ್ಯದಲ್ಲಾದ ನವೋದಯ ಕ್ರಾಂತಿ ನಮಗೆ ನಿಚ್ಚಳವಾಗಿ ಕಾಣುವುದು 20ನೆಯ ಶತಮಾನದ ಆದಿಭಾಗದಿಂದ ಪ್ರಸ್ತುತ ದವರೆಗೆ".**

ನಮ್ಮ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು ಹೊಸತು ಹಳತು, ನಮ್ಮದು ಹೆರರದು ಎಲ್ಲವನ್ನೂ ಹೊಂದಿಸಿಕೊಂಡು, ಸಮನ್ವಯಗೊಳಿಸಿಕೊಂಡು ಆಧುನಿಕ ಸಾಹಿತ್ಯ ಶ್ರೀಮಂತವಾಯಿತು. ಹಿಂದೆಂದೂ ಕಾಣಬರದಷ್ಟು ಅಪಾರ ಸಂಖ್ಯೆಯ ಕವಿಗಳೂ ಗ್ರಂಥಕರ್ತರೂ ಈ ಯುಗದಲ್ಲಿ ಕಾಣಿಸಿಕೊಂಡರು. ಇಲ್ಲಿನ ಸಾಹಿತ್ಯದ ವೈಪುಲ್ಯ ವೈವಿಧ್ಯ. ವೈಶಾಲ್ಯಗಳು ಚಕಿತಗೊಳ್ಳುವಷ್ಟು ಅಪಾರವಾದುವು. ಈ ಸಾಹಿತ್ಯ ರಾಶಿಯನ್ನು ಪದ್ಯ ಮತ್ತು ಗದ್ಯ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಹೊಸ ಸಾಹಿತ್ಯ ಬೆಳೆಯುವುದರ ಜೊತೆ ಜೊತೆಯಲ್ಲೇ ಸಂಪ್ರದಾಯಬದ್ಧವಾದ ಕಾವ್ಯಪ್ರಕಾರ - ವಸ್ತು, ರೀತಿಗಳಲ್ಲಿ ಪ್ರಾಚೀನ ಸಾಹಿತ್ಯವನ್ನು ಅನುಸರಿಸುತ್ತಿರುವ ಕಾವ್ಯಗಳು ಬೆಳೆದುಕೊಂಡು ಬಂದುವು. ಸೋಸಲೆ ಅಯ್ಯಾಶಾಸ್ತ್ರಿ, ಹೊಸಕೆರೆ ಚಿದಂಬರಯ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರಿ, ಶ್ರೀನಿವಾಸ ರಂಗಾಚಾರ್ಯ, ಡಿ.ವಿ.ಗುಂಡಪ್ಪ, ಹೆಮ್ಮಿಗೆ ದೇಶಿಕಾಚಾರ್ಯ, ಘನಪಾಠಿ ನಾರಾಯಣ ಮೊದಲಾದವರು ಚಂಪೂಕಾವ್ಯಗಳನ್ನು ರಚಿಸಿದ್ದಾರೆ. ಮುದ್ದಣನ ಶ್ರೀ ರಾಮಪಟ್ಟಾಬಿಃಷೇಕ, ವೆಂಕಟಸುಬ್ಬಯ್ಯನವರ ವಿನಾಯಕವಿಜಯ, ಸೋಸಲೆ ಅಯ್ಯಾಶಾಸ್ತ್ರಿಗಳ ಶೇಷರಾಮಾಯಣಂ, ಮುಳಿಯ ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿ, ಸೇಡಿಯಾಪು ಕೃಷ್ಣಭಟ್ಟರ ಕೃಷ್ಣಾಕುಮಾರಿ, ಮೈ.ಶೇ.ಅನಂತ ಪದ್ಮನಾಭರಾಯರ ಶ್ರೀಕೃಷ್ಣಾಚರಿತಾಮೃತಂ, ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರ ಶ್ರೀನಿವಾಸ ಲೀಲಾವಾಸ ಇತ್ಯಾದಿ ಗ್ರಂಥಗಳು ವಿವಿಧ ಷಟ್ಪದಿಗಳಲ್ಲಿವೆ. ಜಯದೇವಿತಾಯಿ ಲಿಗಾಡೆಯವರು ಸಿದ್ಧರಾಮಪುರಾಣವನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ. ಕಾವ್ಯಗುಣದ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ.

## ಆಧುನಿಕ ಕನ್ನಡದಲ್ಲಿ ಹೊರಹೊಮ್ಮಿದ ಸಾಹಿತ್ಯದ ಪ್ರಮುಖ ಪ್ರಕಾರಗಳು :

ಆಧುನಿಕ ಸಾಹಿತ್ಯಪ್ರಕಾರದಲ್ಲಿ ಬಹುಮಟ್ಟಿಗೆ ಭಾವಗೀತೆ ಪ್ರಮುಖವಾಯಿತು. ಖಂಡಕಾವ್ಯಗಳು, ಕಥನಕವನಗಳು, ಗೀತನಾಟಕಗಳು ಇತ್ಯಾದಿ ಕಾವ್ಯಮುಖಗಳು ಕಾಣಿಸಿಕೊಂಡಿದ್ದರೂ ಅವುಗಳ ಸಂಖ್ಯೆ ಅಲ್ಪ. ವಸ್ತುರೀತಿಗಳಲ್ಲಿ ಹಿಂದಿನ ಕಾವ್ಯಗಳು ಅನುಸರಿಸಬೇಕಾಗಿದ್ದ ಕಠಿಣವಾದ ನಿಯಮಗಳ ಶೃಂಖಲೆಗಳನ್ನು ಈ ಸಾಹಿತ್ಯ ಪ್ರಕಾರ ಸಡಿಲಗೊಳಿಸಿತು. ಚ.ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ.ನರಸಿಂಹಾಚಾರ್, ಪಂಜೆ ಮಂಗೇಶರಾವ್ ಮೊದಲಾದ ಕವಿಗಳು ಈ ಶತಮಾನದ ಆರಂಭ ಕಾಲದಲ್ಲಿಯೆ ಈ

ಪ್ರಕಾರಕ್ಕೆ ಕೈಹಾಕಿದ್ದರೂ ಇವುಗಳ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿ, ಹೊಸ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ **ಬಿ.ಎಂ.ಶ್ರೀ** ಅವರಿಗೆ ಸಲ್ಲುತ್ತದೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಅವರ ಇಂಗ್ಲಿಷ್ ಗೀತಗಳು ಸ್ವಭಾವ ಸುಂದರವಾಗಿವೆ, ಲಲಿತ ರಮಣೀಯವಾಗಿವೆ. ಅಸಂಖ್ಯಾತ ಕವಿಗಳು ಈ ಪ್ರಕಾರಕ್ಕೆ ಕೈಹಾಕಿರುವರಾದರೂ ಕುವೆಂಪು, ಬೇಂದ್ರೆ ಇವರಿಬ್ಬರೂ ಆಧುನಿಕ ನವೋದಯ ಸಾಹಿತ್ಯಕ್ಕೆ ಒತ್ತುಕೊಟ್ಟ ಕವಿಗಳು. **ಕುವೆಂಪು ಅವರು ಕನ್ನಡಕ್ಕೆ ನೀಡಿರುವ ಕೊಡುಗೆ ಅಸದೃಶವಾದುದು**. ಅವರ ಶ್ರೀ ರಾಮಾಯಣದರ್ಶನಂ ಆಧುನಿಕ ಕನ್ನಡ ಸಾಹಿತ್ಯದ ಮೇರುಕೃತಿ. ಈ ಕಾವ್ಯದಲ್ಲಿ ಕುವೆಂಪು ಅವರ ಕಾವ್ಯಾಸಕ್ತಿ ಅಪೂರ್ವವಾದುದು. ಆಧುನಿಕ ಕನ್ನಡ ಕವಿಗಳಲ್ಲಿ ಅಗ್ರಗಣ್ಯರಾದ ಇವರ ಭಾವಗೀತೆಗಳನ್ನು ಕುರಿತು ವಿವೇಚಿಸುವಾಗ ಮಾತ್ರ ಇವರ ಕಾವ್ಯಶಕ್ತಿ ಇಂಗ್ಲಿಷ್ನಲ್ಲಿ ಮೊದಲು ಇಣಿಕಿ ಹಾಕಿ, ಆಮೇಲೆ ಕನ್ನಡದ ಭಾವಗೀತೆಗಳಲ್ಲಿ ಅಬಿವ್ಯಕ್ತವಾಗಿದೆ ಎನ್ನಬೇಕು. ಇವರ ಕವಿತೆಗಳಲ್ಲಿ ಸರ್ವತೋಮುಖವಾದ ಆಸಕ್ತಿ ಕಂಡುಬರುವುದಾದರೂ ಪ್ರಕೃತಿ ಪ್ರೇಮ, ಅಧ್ಯಾತ್ಮ, ಭಕ್ತಿ -ಇವು ಸ್ಥಾಯೀಭಾವವನ್ನು ಪಡೆದಿವೆ. ಇವರ ನಾಟಕಗಳು ಕೂಡ ಭಾವ ಗೀತಾತ್ಮಕವಾದುವು. **ದ.ರಾ.ಬೇಂದ್ರೆಯವರು ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ವಿಪುಲವಾಗಿ ಕವನಗಳನ್ನು ಬರೆದಿರುವರು.** ಇವರ ಕವನಗಳಲ್ಲಿ ವಿಷಯ ಮತ್ತು ಅದರ ನಿರೂಪಣೆಯಲ್ಲಿ ಕಾಣಬರುವ ವೈವಿಧ್ಯ, ಮಾತಿನ ಚಮತ್ಕಾರ, ಅಧ್ಯಾತ್ಮ ವಿಚಾರ ಲಹರಿ, ಜನಪದ ಧಾಟಿ, ನಾದಮಾಧುರ್ಯಗಳು ಅತ್ಯಂತ ಹೃದ್ಯವಾಗಿವೆ. **ಇವರಿಬ್ಬರೂ ಆಧುನಿಕ ಕನ್ನಡ ಸಾಹಿತ್ಯದ ಎರಡು ವಿಶಿಷ್ಟ ಪಂಥಗಳ ಮಾದರಿ ಮತ್ತು ನಿದರ್ಶನ ಆಗಿದ್ದಾರೆ.** ಪು.ತಿ.ನ. ಅವರು ಪ್ರಕೃತಿವರ್ಣನೆಯಲ್ಲಿ, ಭಕ್ತಿಪಾರಮ್ಯದಲ್ಲಿ, ಭಾರತಸಂಸ್ಕೃತಿಯ ದಿಗ್ದರ್ಶನದಲ್ಲಿ, ಭಾವಭಾಷೆಗಳ ಕುಸುರಿಗೆಲಸ ಮಾಡುವುದರಲ್ಲಿ ಅಗ್ರಗಣ್ಯರು. ವಿ.ಸೀ., ಡಿ.ವಿ.ಜಿ., ಶ್ರೀನಿವಾಸ, ವಿನಾಯಕ, ರಾಜರತ್ನಂ. ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ ಮೊದಲಾದ ಹಿರಿಯ ಕಿರಿಯ ಕವಿಗಳು ಒಬ್ಬೊಬ್ಬರೂ ತಮ್ಮ ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡಿರುವ ಶ್ರೇಷ್ಠ ಕವಿಗಳಾಗಿ ಕಂಡುಬರುತ್ತಾರೆ.

**"1947 ನಂತರದ ಸ್ವತಂತ್ರ ಭಾರತದಲ್ಲಿ ನವ್ಯಕಾವ್ಯ ಎಂಬ ಹೆಸರಿನಿಂದ ಹೊಸದೊಂದು ಶಾಖೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು".**

ಟಿ.ಎಸ್.ಎಲಿಯೆಟ್, ಆಡೆನ್, ಸೆಸಿಲ್ ಡೆ ಲೂಯಿ ಮೊದಲಾದ ಸಮಕಾಲೀನ ಇಂಗ್ಲಿಷ್ ಕವಿಗಳಿಂದ ಸ್ಫೂರ್ತಿಗೊಂಡ ಹಲವು ಕವಿಗಳು ಹೊಸರೀತಿಯ ಪ್ರಯೋಗಗಳ ಮೂಲಕ ಹೊಸ ಹಾದಿಯೊಂದನ್ನು ನಿರ್ಮಿಸಲು ಹೊರಟರು. ವ್ಯಕ್ತಿನಿಷ್ಠವಾಗಿ ಹೊಸ ವಸ್ತು, ಹೊಸ ಭಾಷೆ, ಹೊಸ ಶೈಲಿ, ಹೊಸ ಧೋರಣೆಗಳಿಂದ ಹೊರಟಿರುವ ಈ ಕವಿ ಕಾವ್ಯಗಳಲ್ಲಿ ಕವಿಮನದ ಸಂಕೀರ್ಣತೆಯನ್ನು ಅಬಿವ್ಯಕ್ತಗೊಳಿಸಲು ಬಳಸುವ ರೂಪಕಗಳೂ ಸಾಮತಿಗಳೂ ಅನೇಕ ವೇಳೆ ಓದುಗರನ್ನು ಚಕಿತಗೊಳಿಸುತ್ತವೆ. ಸಾಂಕೇತಿಕವಾಗಿರುವ ಹಲವು ಮಾತುಗಳು ಅವುಗಳ ಪರಿಚಯ ವಿಲ್ಲದವರಿಗೆ ಕ್ಲಿಷ್ಟವೆನಿಸಿವೆ. ಈ ಪರಂಪರೆಯನ್ನು **ಪ್ರಾರಂಬಿಸಿದ ಕೀರ್ತಿ ವಿ.ಕೃ. ಗೋಕಾಕರಿಗೆ ಸಲ್ಲುತ್ತದೆ.** ಆದರೆ ಇವರ ಕವನಗಳಲ್ಲಿ ಸಂಪ್ರದಾಯ, ನವ್ಯತೆಗಳು ಸಮರಸವಾಗಿ ಬೆರೆತಿವೆ. **ನವ್ಯಮಾರ್ಗದಲ್ಲಿ ಗೋಪಾಲಕೃಷ್ಣ ಅಡಿಗರ ಹೆಸರು ಅತ್ಯಂತ**

**ಗಣ್ಯವಾದುದು**. ಇವರ ಕವಿತೆಗಳು ಪ್ರತಿಭೆ, ಕಲ್ಪನಾಶಕ್ತಿಗಳ ಮಹತ್ತಿಗೆ ಸಾಕ್ಷಿಗಳಾಗಿವೆ. ಗಂಗಾಧರ ಚಿತ್ತಾಲ, ಶಂಕರ ಮೊಕಾಶಿ, ಕೆ.ಎಸ್.ನ., ರಾಮಚಂದ್ರ ಶರ್ಮ, ಎ.ಕೆ.ರಾಮಾನುಜನ್, ಜಿ.ಎಸ್.ಸಿದ್ಧಲಿಂಗಯ್ಯ, ಅರವಿಂದನಾಡಕರ್ಣಿ, ಪಿ.ಲಂಕೇಶ್, ಎಚ್.ಎಂ.ಚನ್ನಯ್ಯ, ಸುಮತೀಂದ್ರ ನಾಡಿಗ, ಕೆ.ಎಸ್.ನಿಸಾರ್ ಅಹಮದ್, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಶ್ರೀಕೃಷ್ಣ ಅಲನಹಳ್ಳಿ ಮೊದಲಾದವರು ನವ್ಯಕಾವ್ಯ ಜಗತ್ತಿನಲ್ಲಿ ಗಣ್ಯರಾದವರು. ನವ್ಯರೆಂದು ಮುದ್ರೆಯೊತ್ತದ ಕವಿ ಕುವೆಂಪು, ಬೇಂದ್ರೆ, ಪುತಿನ ಇವರಲ್ಲಿಯೂ ಈಚಿನ ಕೆಲವು ಕೃತಿಗಳಲ್ಲಿ ನವ್ಯತೆಯ ಸೊಗಡನ್ನು ಕಾಣಬಹುದು.

> **"ಅತಿಯಾದ ಇಂಗ್ಲಿಷ್ ಶಿಕ್ಷಣ, ಪಾಶ್ಚಿಮಾತ್ಯ ಆಲೋಚನೆಗಳು ಮತ್ತು ಇವುಗಳ ಪ್ರಭಾವ ಕನ್ನಡದ ಸಾಹಿತಿಗಳನ್ನು ದೇಸಿ ಸಾಹಿತ್ಯದ ಕಡೆ ಮತ್ತು ನಾಡಿನ ಜನರ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆ ಆಸಕ್ತಿ ಮೂಡುವಂತೆ ಮಾಡಿತು. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ನಮ್ಮಲ್ಲಿ ಜಾನಪದದತ್ತ ಆಸಕ್ತಿ ಮೂಡಿ ಜನಪದ ಸಾಹಿತ್ಯ ಸಂಗ್ರಹದ ಕೃಷಿ ಕಳೆದ ಏಳು ದಶಕಗಳ ಹಿಂದಿನಿಂದ ಪ್ರಾರಂಭವಾಯಿತು".**

ಹಲಸಂಗಿ ಸೋದರರಾದ ರೇವಪ್ಪ, ಮಧುರ ಚೆನ್ನ, ಸಿಂಪಿ ಲಿಂಗಣ್ಣ- ಈ ಮೂವರು ಹೊರತಂದ "ಗರತಿಯ ಹಾಡು"ಕನ್ನಡದ ಮೊಟ್ಟಮೊದಲ ಜನಪದ ಸಂಗ್ರಹ. ರೇವಪ್ಪನವರು ಹೊರತಂದ ಮಲ್ಲಿಗೆ ದಂಡೆ ಜನಪದ ಸಾಹಿತ್ಯದ ಎಲ್ಲ ಮುಖಗಳನ್ನೂ ಒಳಗೊಂಡ ಅಮೂಲ್ಯ ಸಂಗ್ರಹ. ಇವೆರಡೂ ತ್ರಿಪದಿಗಳಲ್ಲಿವೆ. ಸಿಂಪಿ ಲಿಂಗಣ್ಣ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ, ಗದ್ದಗಿಮಠ, ಕರಾಕೃ, ಜೀ.ಶಂ.ಪ., ರಾಗೌ, ಧವಳಶ್ರೀ, ಪಿ.ಕೆ.ರಾಜಶೇಖರ ಮೊದಲಾದ ನೂರಾರು ಜನ ತಮ್ಮ ಸಂಗ್ರಹಗಳಿಂದ ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಅಧ್ಯಯನಕ್ಕೆ ಅವಕಾಶ ದೊರೆತು ಜಾನಪದ ವಸ್ತುಸಂಗ್ರಹಾಲಯವೂ ಸ್ಥಾಪನೆಯಾಗಿದ್ದು ಜಾನಪದದ ವೈಜ್ಞಾನಿಕ ಅಧ್ಯಯನ ನಡೆಯುತ್ತಿರುವುದು ಅತ್ಯಂತ ಸಂತಸದ ವಿಷಯವಾಗಿದೆ.

> **"ಪಾಶ್ಚಾತ್ಯ ಮತ್ತು ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಪ್ರಾರಂಭವಾದ ಆಧುನಿಕ ಕನ್ನಡ ಸಾಹಿತ್ಯದ ಇನ್ನೊಂದು ವಿಶೇಷ ಪ್ರಕಾರವೆಂದರೆ ಗದ್ಯಸಾಹಿತ್ಯ. ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾಣಬರುವ ಎಲ್ಲ ಗದ್ಯಪ್ರಕಾರಗಳೂ - ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ನಾಟಕ, ವ್ಯಕ್ತಿಚಿತ್ರ, ಪ್ರಬಂಧ - ಹರಟೆ, ಪ್ರವಾಸ ಸಾಹಿತ್ಯ, ಪತ್ರ ಸಾಹಿತ್ಯ, ವೈಜ್ಞಾನಿಕ ಸಾಹಿತ್ಯ, ಮಕ್ಕಳ ಸಾಹಿತ್ಯ, ವಿಮರ್ಶೆ, ಹಾಸ್ಯ ಪ್ರಬಂಧ ಇತ್ಯಾದಿ - ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೆಳೆದು ನಿಂತಿವೆ".**

ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ಕೆಂಪುನಾರಾಯಣ (ಸು.1823) ತನ್ನ ಮುದ್ರಾಮಂಜೂಷದಿಂದ ನಾಂದಿ ಹಾಡಿದನೆಂದು ಹೇಳಬಹುದು. ಇದೇ ಸಂದರ್ಭದಲ್ಲಿ ಸಂಪ್ರದಾಯಕ್ಕೂ ಆಧುನಿಕತೆಗೂ ಕಟ್ಟಿದ ರಸಸೇತುವೆಯಂತಿರುವ ಮುದ್ದಣನನ್ನು ಹೆಸರಿಸಬಹುದು. ಈತ ಅದ್ಭುತ ರಾಮಾಯಣ, ರಾಮಾಶ್ವಮೇಧ ಎಂಬ ಎರಡು ಗದ್ಯಗ್ರಂಥಗಳನ್ನು ಬರೆದಿದ್ದಾನೆ. ಹಳಗನ್ನಡ-ನಡುಗನ್ನಡ ಬೆರೆತ ಇವನ

VTU R

ಗದ್ಯಶೈಲಿ ಹೊಸಗನ್ನಡಕ್ಕೆ ನಾಂದಿ ಹಾಡಿತೆಂದು ಹೇಳಬಹುದು. ಭಾಷಾಶೈಲಿಯ ದೃಷ್ಟಿಯಿಂದ ಈತನ ಗದ್ಯ ವಿಶಿಷ್ಟವಾಗಿದೆ. ಇವೆರಡರ ವಸ್ತುವೂ ಹಳೆಯದು. ಬಳಸಿರುವ ಭಾಷೆ ಹಳಗನ್ನಡ, ಆದರೆ ಕವಿಯ ಮನೋಭಾವ ಆಧುನಿಕ. ರಾಮಾಶ್ವಮೇಧದ ಮುದ್ದಣ ಮನೋರಮೆಯರ ಸಂಭಾಷಣೆ ಸ್ವಾರಸ್ಯಪೂರ್ಣವಾಗಿದೆ.

**ಆಧುನಿಕ ಕನ್ನಡ ಗದ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಜನಪ್ರಿಯವಾದುದು.** ಈ ಪ್ರಕಾರ ಕನ್ನಡದಲ್ಲಿ 19ನೆಯ ಶತಮಾನದ ಪೂರ್ವಾರ್ಧದಲ್ಲಿಯೆ ಕ್ವಚಿತ್ತಾಗಿ ಕಾಣಿಸಿಕೊಂಡಿತಾದರೂ ನಮ್ಮ ಜನರಲ್ಲಿ ಇದರ ವಾಚನಾಬಿರುಚಿಯನ್ನು ನೆಲೆಗೊಳಿಸಿದವರು ಬಿ.ವೆಂಕಟಾಚಾರ್ಯ ಮತ್ತು ಗಳಗನಾಥರು. ಗುಲ್ವಾಡಿ ವೆಂಟರಾಯ, ಬೋಳಾರ ಬಾಬುರಾಯ, ಕೆರೂರ ವಾಸುದೇವಾಚಾರ್ಯ ಮೊದಲಾದವರು ಸುಂದರವಾದ ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ. ಅವು ಕೇವಲ ಒಂದೋ ಎರಡೋ ಅಷ್ಟೇ. ವಾಸ್ತವಿಕತೆಯನ್ನು ಕಾದಂಬರಿಯಲ್ಲಿ ತರುವ ಸಂಪ್ರದಾಯಕ್ಕೆ ಎಂ.ಎಸ್.ಪುಟ್ಟಣ್ಣನವರು ಆದ್ಯರಾದರು. **1930ರಿಂದ ಈಚೆಗೆ ಕಾದಂಬರಿಕಾರರ ಸಂಖ್ಯೆ ಅಪರಿಮಿತವಾಗಿದೆ**. ಇವರ ಸಾಲಿನಲ್ಲಿ ಶಿವರಾಮ ಕಾರಂತ, ಕುವೆಂಪು, ರಾವಬಹಾದ್ದೂರ ಇವರ ಹೆಸರುಗಳು ಅಗ್ರಗಣ್ಯವಾದವು. ಆಧುನಿಕ ಕಾದಂಬರಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆದವರಲ್ಲಿ ಅ.ನ.ಕೃ. ಪ್ರಸಿದ್ಧರು. ಅ.ನ.ಕೃ. ಅವರ ಪರಂಪರೆಗೆ ಸೇರಿದವರು ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನು ಆಧರಿಸಿ ಬರೆದಿರುವ ಇವರ ಐತಿಹಾಸಿಕ ಕಾದಂಬರಿಗಳು ಸುಪ್ರಸಿದ್ಧವಾಗಿವೆ. ವಿನಾಯಕ, ಮಿರ್ಜಿ ಅಣ್ಣಾರಾಯ, ಶ್ರೀರಂಗ, ಶ್ರೀನಿವಾಸ, ಕೆ.ವಿ.ಅಯ್ಯರ್, ಬಿ.ಪುಟ್ಟಸ್ವಾಮಯ್ಯ, ಕೃಷ್ಣಮೂರ್ತಿ ಪುರಾಣಿಕ, ಎಸ್.ಎಲ್.ಭೈರಪ್ಪ, ತ್ರಿವೇಣಿ, ಎಂ.ಕೆ.ಇಂದಿರಾ ಮೊದಲಾದ ಕಾದಂಬರಿಕಾರರು ಈ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ.

**ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ಕಾದಂಬರಿಯನ್ನು ಬಿಟ್ಟರೆ ಎರಡನೆಯ ಸ್ಥಾನ ಸಣ್ಣಕಥೆಗೆ ಸಲ್ಲುತ್ತದೆ.** ಈ ಪ್ರಕಾರದಲ್ಲಿ ಕೆಲಸ ಮಾಡಿರುವವರ ಸಂಖ್ಯೆಯೂ ಅಪಾರ. ಕನ್ನಡದಲ್ಲಿ ಸಣ್ಣಕಥೆಯನ್ನು ಆರಂಬಿಸಿದವರು ಯಾರೇ ಆಗಲಿ ಅದನ್ನು ಸ್ಥಾಯಿಯಾಗಿ ಮಾಡಿದವರು ಶ್ರೀನಿವಾಸರು. ಕೆರೂರ ವಾಸುದೇವಾಚಾರ್ಯ, ಎಂ.ಎನ್.ಕಾಮತ್, ಪಂಜೆಮಂಗೇಶರಾವ್ - ಇವರು ಶ್ರೀನಿವಾಸರ ಸಮಕಾಲೀನರು. ಈ ಪ್ರಕಾರವನ್ನು ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚದುರಂಗ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಅಶ್ವತ್ಥ, ಅ.ನ.ಕೃ. ಗೌರಮ್ಮ, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ, ತೇಜಸ್ವಿ, ಸದಾಶಿವ, ಬಿ. ಶಾಮಸುಂದರ, ದೇವನೂರು ಮಹಾದೇವ, ಮೊಗಳ್ಳಿಗಣೇಶ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

> **"ಗದ್ಯಪ್ರಕಾರಗಳಲ್ಲಿ ಜೀವನಚರಿತ್ರೆ ಮತ್ತೊಂದು. ಕನ್ನಡದಲ್ಲಿ ಡಿ.ವಿ.ಜಿ., ಕುವೆಂಪು, ಸಿ.ಕೆ.ವೆಂಕಟರಾಮಯ್ಯ, ದೇಜಗೌ ಮೊದಲಾದ ಅನೇಕರು ಶ್ರೇಷ್ಠವಾದ ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಬಹುಮುಖ್ಯವಾದುದು".**

19ನೆಯ ಶತಮಾನದ ಕಡೆಯ ಭಾಗದಿಂದ ಮುಂದೆ ಈ ಪ್ರಕಾರ ಅತ್ಯಂತ ಹುಲುಸಾಗಿ ಬೆಳೆಯುತ್ತಾ ಬಂದಿದೆ. ಮೊದಮೊದಲು ಸಂಸ್ಕೃತದಿಂದ ಭಾಷಾಂತರ ಮಾಡಿಕೊಳ್ಳುವ ಪರಿಪಾಠವಿದ್ದುದು ಈ ಶತಮಾನದ ಆರಂಭದಿಂದ ಸ್ವತಂತ್ರ ನಾಟಕ ರಚನೆಗೆ

ಎಡೆಮಾಡಿಕೊಟ್ಟಿತು. ಶುದ್ಧ ಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ. ನಾಟಕದ ಎಲ್ಲ ಪ್ರಕಾರಗಳಲ್ಲಿಯೂ ಗದ್ಯ ಬಳಕೆಯಾಗಿರುವ ನಾಟಕಗಳು ವಿಪುಲ ಸಂಖ್ಯೆಯಲ್ಲಿ ಈಗ ಕಾಣಿಸಿಕೊಂಡಿವೆ. ಶ್ರೀರಂಗ, ಕುವೆಂಪು, ಮಾಸ್ತಿ, ಶಿವರಾಮ ಕಾರಂತ, ಪರ್ವತವಾಣಿ, ಪು.ತಿ.ನ., ವಿ.ಸೀತಾರಾಮಯ್ಯ, ಎಚ್.ಕೆ.ರಂಗನಾಥ, ಗಿರೀಶಕಾರ್ನಾಡ ಮೊದಲಾದ ನಾಟಕ ಕರ್ತೃಗಳು ಪ್ರಸಿದ್ಧರಾಗಿದ್ದಾರೆ.

## ದಲಿತ ಮತ್ತು ಬಂಡಾಯ ಸಾಹಿತ್ಯ :

ಕಾವ್ಯವನ್ನು ಪುನಃ ಸಾಮಾನ್ಯ ಜೀವನದ ಹತ್ತಿರ ತರಲು ದಲಿತ ಕಾವ್ಯ-ಬಂಡಾಯ ಕಾವ್ಯ ಪ್ರಕಾರ ಹುಟ್ಟಿ ಕೊಂಡಿತು. ದಲಿತ ಸಾಹಿತ್ಯದಲ್ಲಿ ಸಹಜವಾಗಿ ಬಂಡಾಯ ಸಾಹಿತ್ಯವಿರುತ್ತದೆ. ಆದರೆ ಬಂಡಾಯ ಕಾವ್ಯದಲ್ಲಿ ದಲಿತ ಭಾವನೆ ಇದ್ದೇ ಇರುವುದೆಂದು ಹೇಳುವಂತಿಲ್ಲ. ಇದು ನವ್ಯದ ಲಕ್ಷಣಕ್ಕೆ ವಿರುದ್ಧವಾಗಿ ಗೇಯತೆ ಅಥವಾ ಏರಿದ ದನಿಯಲ್ಲಿ ಹಾಡುವ ಪದ್ಯಗಳಾಗಿರುತ್ತವೆ. ಸಾಮಾನ್ಯವಾಗಿ ಇವು ಸಾಮಾಜಿಕ ಅಸಮಾನತೆ, ಶೋಷಣೆಯ ಪ್ರತಿಭಟನೆ ವಿಷಯಗಳನ್ನು ಒಳಗೊಂಡಿರುತ್ತವೆ. ಉದಾಹರಣೆಗೆ: ಜನಪದರು ಹೇಳುವ ಹಾಗೆ :

**ಬಡವರು ಸತ್ತಾರೆ ಸುಡಲೀಕೆ ಸೌದಿಲ್ಲೋ**

**ಒಡಲ ಬೆಂಕೀಲೆ ಹೆಣ ಬೆಂದೋ**

**ಒಡಲ ಬೆಂಕೀಲೆ ಹೆಣ ಬೆಂದೋ**

**ದೇವಾರೆ ಬಡವರಿಗೆ ಸಾವಾ ಕೊಡಬ್ಯಾಡ -** ಇದು ಅನೇಕ ಲೇಖಕ/ಲೇಖಕಿಯರನ್ನು ಪ್ರಭಾವಿಸಿದೆ.

**ಆಧುನಿಕ ಸಾಹಿತ್ಯ ಮತ್ತು ಪ್ರತಿಭಟನೆ**

ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಸಾಹಿತ್ಯ ಸಾಮಾನ್ಯವಾಗಿ ಪ್ರತಿಭನೆಯ ಸಾಹಿತ್ಯವೇ ಆಗಿದೆ. ಈ ನವೋದಯ, ನವ್ಯ , ದಲಿತ, ಬಂಡಾಯ ಕಾವ್ಯಗಳು ಒಂದು ಆದ ನಂತರ ಮತ್ತೊಂದು ಕ್ರಮವಾಗಿ ಆಯಿತೆಂದು ಹೇಳಲು ಬರುವುದಿಲ್ಲ. ಒಂದರ ಕೊರತೆಯನ್ನು ಇನ್ನೊಂದು ತುಂಬುತ್ತಾ ಕೆಲವೊಮ್ಮೆ ಜೊತೆ ಜೊತೆಯಾಗಿ ಹೊರಹೊಮ್ಮಿವೆ. ಇವು ಒಂದಕ್ಕೊಂದು ಪೂರಕವಾಗಿ ಆಧುನಿಕ ಕನ್ನಡ ಕಾವ್ಯ ಪರಂಪರೆಯನ್ನು ರೂಪಿಸಿದವು ಎನ್ನಬಹುದು. ಈಗಲೂ ನವೋದಯ, ನವ್ಯ, ದಲಿತ ಕಾವ್ಯ, ಬಂಡಾಯ ಇವು ಒಟ್ಟಿಗೆ ಇವೆ. ಈ ಪರಂಪರೆಗೆ ಹಿಂದಿನ ಹಳೆಗನ್ನಡ, ನಡುಕನ್ನಡ ದ ಒಂದು ಸಾವಿರ ವರ್ಷದ ಕನ್ನಡ ಇತಿಹಾಸದ ಪರಂಪರೆ ಸೇರಿದೆ ಮತ್ತು ಜೊತೆ ಜೊತೆ ಇವೆ. ಪಂಪನ ಚಂಪೂ, ಬಸವಣ್ಣನ ವಚನ, ಕುಮಾರವ್ಯಾಸನ ಷಟ್ಪದಿ, ಸರ್ವಜ್ಞನ ತ್ರಿಪದಿ ಇವೆಲ್ಲವೂ ಇದರೊಡನೆ ಸಂಬಂಧಿಸಿದೆ. ಹೊಸ ಚಿಗುರು, ಹಳೆ ಬೇರು ಎಂಬಂತೆ ಹಳತು ಹೊಸತಕ್ಕೆ ಪೂರಕವಾಗಿದೆ. ಕಾವ್ಯದಲ್ಲಿ ಈ ಪ್ರತಿಭಟನೆಯ ದನಿ ಮೊದಲಿಂದಲೂ ಇದ್ದೇ ಇದೆ. ವಚನಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು.

# ಆಧುನಿಕ ಕನ್ನಡ ಭಾಷೆಯ ಅಭಿವೃದ್ಧಿ:

ಇದೇ ಸಮಯದಲ್ಲಿ ಕನ್ನಡ ಭಾಷೆಯ ಬೆಳವಣಿಗೆಗಾಗಿ ಕನ್ನಡ ಶಬ್ದಕೋಶ ಕನ್ನಡ ವ್ಯಾಕರಣ, ಛಂದಸ್ಸು, ಅಲಂಕಾರ ಈ ಬಗೆಯ ಕನ್ನಡ ಭಾಷಾಶಾಸ್ತ್ರದ ಬೆಳವಣಿಗೆಯೂ ಆಯಿತು. ಮಕ್ಕಳಿಗಾಗಿ ಮೈಸೂರು ವಿದ್ಯಾ ಇಲಾಖೆ ಪ್ರಕಟಿಸಿದ ಶ್ರೀ ತೀ.ನಂ. ಶ್ರೀಕಂಠಯ್ಯ ನವರ **'ಕನ್ನಡ ಮಧ್ಯಮ ವ್ಯಾಕರಣ'** ಮತ್ತು ಪ್ರೌಢರಿಗಾಗಿ ಬರೆದ '**ಕನ್ನಡ ಕೈಪಿಡಿ**' ಪ್ರಸಿದ್ಧವಾದವು.ಹೆಚ್ಚು ಮಾಹಿತಿಯುಳ್ಳ ಕನ್ನಡ -ಇಂಗ್ಲಿಷ್ ಕನ್ನಡ ಶಬ್ದಕೋಶವನ್ನು ಮೊದಲು ರೆ.ಜೆ.ಎಫ್. ಕಿಟ್ಟೆಲ್ ರಚಿಸಿದರು. ಅದಕ್ಕೂ ಮೊದಲೇ ಆ ಬಗೆಯ ಶಬ್ದಕೋಶವನ್ನು ಕ್ರಿಶ್ಚಿಯನ್ ಮತದ ಪಾದರಿಯವರು ರಚಿಸಿದ್ದರು(ಪುಸ್ತಕದ ಮನೆ). ರೆ.ಜೆ.ಎಫ್. ಕಿಟ್ಟಲ್ ರವರ ಶಬ್ದ ಕೋಶವು ಸಮಗ್ರವಾಗಿದೆ.ನಂತರ ಶ್ರೀ ಶಿವರಾಮ ಕಾರಂತರು ೧೯೫೧ ರಲ್ಲಿ **ಕನ್ನಡ-ಕನ್ನಡ ನಿಘಂಟು- ಸಿರಿಗನ್ನಡ** ಅರ್ಥಕೋಶವನ್ನು ರಚಿಸಿದರು.ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೭೫ ರಲ್ಲಿ **ಕನ್ನಡ -ಕನ್ನಡ ಅರ್ಥಕೊಶ**, ಸಂಕ್ಷಿಪ್ತ ಕನ್ನಡ ನಿಘಂಟು ಹೊರಬಂದಿತು.ಮೈಸೂರು ವಿಶ್ವವಿದ್ಯಾಲಯದಿಂದ ಸಮಗ್ರವಾದ **ಕನ್ನಡ-ಇಂಗ್ಲಿಷ್-ಕನ್ನಡ** ನಿಘಂಟು ರಚಿಸಲ್ಪಟ್ಟಿತು.

ಈ ಎಲ್ಲಾ ವಿಷಯಗಳು ಕನ್ನಡ ಸಾಹಿತ್ಯ 19, 20 ಮತ್ತು 21ನೇ ಶತಮಾನದಲ್ಲಿ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ರಚನೆಯಾಗಿ ಜಾಗತಿಕ ಸಾಹಿತ್ಯದಲ್ಲಿ ಮೇರು ಸ್ಥಾನದಲ್ಲಿ ನಿಲ್ಲುವಂತೆ ಮಾಡಿದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜಗತ್ತಿನ ಎಲ್ಲ ಪ್ರಕಾರಗಳ ಸಾಹಿತ್ಯ ರಚನೆಯಾಗಿರುವುದನ್ನು ಕಾಣುತ್ತೇವೆ. ರಾಷ್ಟ್ರಕವಿ ಕುವೆಂಪು, ಬೇಂದ್ರೆ, ಶಿವರಾಮ ಕಾರಂತ್, ಡಿ ವಿ ಗುಂಡಪ್ಪ, ಕೆ ಎಸ್ ನರಸಿಂಹಸ್ವಾಮಿ, ಜಿಎಸ್ ಶಿವರುದ್ರಪ್ಪ, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಎಸ್‌ಎಲ್ ಭೈರಪ್ಪ, ಪೂರ್ಣಚಂದ್ರ ತೇಜಸ್ವಿ, ಕೆ ಎಸ್ ನಿಸಾರ್ ಅಹಮದ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವೈದೇಹಿ ಮೊದಲಾದವರು ಮತ್ತು ಅನೇಕ ಪ್ರಮುಖ ಸಾಹಿತಿಗಳು, ಕವಿಗಳು ಮತ್ತು ವಿಮರ್ಶಕರು, ಕನ್ನಡ ನಾಡು-ನುಡಿಗಾಗಿ ಹೋರಾಟವನ್ನು ಮಾಡಿದವರು ಜಾಗತಿಕ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಆದುದರಿಂದಾಗಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ವಿಶಿಷ್ಟ ಜಾಗತಿಕ ಸಾಹಿತ್ಯ ಪರಂಪರೆಯಾಗಿ ರೂಪ ಗೊಂಡಿರುವುದನ್ನು ಕನ್ನಡಿಗರಾದ ನಾವೆಲ್ಲರೂ ಹೆಮ್ಮೆಪಡುವಂಥಹ ವಿಷಯವಾಗಿದೆ.

VTU BSc

## ಅಭ್ಯಾಸಕ್ಕಾಗಿ ಚಟುವಟಿಕೆಗಳು :

### ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

1. ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾದ ವರ್ಷ ಯಾವುದು?

1. 1912 2. 1915

3. 1918 4. 1916

2. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಎಂದರೆ ಯಾರು ?

1. ಬಿ ಎಂ ಶ್ರೀಕಂಠಯ್ಯನವರು
2. ಕುವೆಂಪುರವರು
3. ಪಾಟೀಲ್ ಪುಟ್ಟಪ್ಪನವರು
4. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ರವರು

3. ಆಧುನಿಕ ಕನ್ನಡ ಸಾಹಿತ್ಯದ ಸುವರ್ಣಯುಗಕ್ಕೆ ಅಡಿಪಾಯವನ್ನು ಹಾಕಿಕೊಟ್ಟ ಮಹಾರಾಜರು ಯಾರು?

1. ನಾಲ್ವಡಿ ಕೃಷ್ಣರಾಜ ಒಡೆಯರು
2. ಚಾಮರಾಜ ಒಡೆಯರು
3. ಮೂರನೇ ಕೃಷ್ಣರಾಜ ಒಡೆಯರು
4. ಜಯಚಾಮರಾಜೇಂದ್ರ ಒಡೆಯರು

4. ಆಧುನಿಕ ಕಾಲಘಟ್ಟದಲ್ಲಿ ತಲ್ಲಣಗಳ ಮಧ್ಯೆಯೂ ಹೆಚ್ಚಿನ ಪ್ರಮಾಣದಲ್ಲಿ ಮತ್ತು ವಿಭಿನ್ನ ರೀತಿಯ ಹೊಸಗನ್ನಡ ಸಾಹಿತ್ಯದ ಉದಯಕ್ಕೆ ಪ್ರಮುಖ ಕಾರಣ ಯಾವುದು?

1. ಬರವಣಿಗೆಯಲ್ಲಿ ಶ್ರೇಷ್ಠತೆ
2. ರಾಜಾಶ್ರಯದಿಂದ ಮುಕ್ತಿ ಮತ್ತು ಸ್ವತಂತ್ರ ಮುದ್ರಣಕ್ಕೆ ಅವಕಾಶ
3. ಹೊಸ ಸಾಹಿತ್ಯದ ಉದಯ
4. ಆಧುನಿಕ ವಿಚಾರಗಳ ಮಂಡನೆ

5. ವಿದೇಶಿಗರಾಗಿದ್ದರು ಕನ್ನಡನಾಡಿನ ಸಂಪೂರ್ಣ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಾರಂಭದಿಂದ ಪ್ರಸ್ತುತದವರೆಗೆ ಮೊಟ್ಟಮೊದಲ ಬಾರಿಗೆ "ಕನ್ನಡ ಸಾಹಿತ್ಯ ಚರಿತ್ರೆಯನ್ನು" ಬರೆದ ಕೀರ್ತಿ ಇವರಿಗೆ ಸಲ್ಲುತ್ತದೆ?

1. ಇ ಪಿ ರೈಸ್
2. ಫರ್ಡಿನಾಂಡ್ ಕಿಟೆಲ್
3. ಬಿ ಎಲ್ ರೈಸ್
4. ಫ್ರಾನ್ಸಿಸ್ ಬೇಕನ್

6. "ಕನ್ನಡ ಮಧ್ಯಮ ವ್ಯಾಕರಣ" ಈ ಪ್ರಸಿದ್ಧ ಕನ್ನಡದ ವ್ಯಾಕರಣ ಕೃತಿಯ ಕರ್ತೃ ಯಾರು?

1. ತಿ ನಂ ಶ್ರೀಕಂಠಯ್ಯನವರು
2. ಬಿಎಂ ಶ್ರೀಕಂಠಯ್ಯನವರು
3. ರಂ ಶ್ರೀ ಮುಗಳಿ
4. ಎಲ್ ಎಸ್ ಶೇಷಗಿರಿ ರಾವ್

7 ಕನ್ನಡದ ಮೊದಲ ಶಿಲಾಶಾಸನ ಯಾವುದು?

1. ಕಪ್ಪೆ ಅರೆಭಟ್ಟನ ಶಿಲಾಶಾಸನ
2. ಶ್ರವಣಬೆಳಗೊಳದ ಶಿಲಾಶಾಸನ
3. ಹಲ್ಮಿಡಿ ಶಿಲಾಶಾಸನ
4. ಪಟ್ಟದಕಲ್ಲು ಶಿಲಾಶಾಸನ

8. ಕನ್ನಡ ನಾಡಿನ ಪ್ರಸಿದ್ಧ ಮೈಸೂರು ವಿಶ್ವವಿದ್ಯಾಲಯವು ಪ್ರಾರಂಭವಾದ ವರ್ಷ ಯಾವುದು?

1. 1911 2. 1919

3. 1915 4. 1916

9. ಶುದ್ಧ ಗದ್ಯದಲ್ಲಿ ಸಾಮಾಜಿಕ ನಾಟಕಗಳನ್ನು ರಚಿಸಿ, ಕನ್ನಡ ಸಾಹಿತ್ಯದಲ್ಲಿ ಹೆದ್ದಾರಿಯೊಂದನ್ನು ನಿರ್ಮಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

1. ಮಾಸ್ತಿ ವೆಂಕಟೇಶ ಅಯ್ಯಂಗಾರ್
2. ಅ ನ ಕೃಷ್ಣರಾಯರು
3. ಗಿರೀಶ್ ಕಾರ್ನಾಡ್

4. ಟಿ ಪಿ ಕೈಲಾಸಂ

10. ನವ್ಯ ಕನ್ನಡ ಸಾಹಿತ್ಯ ಪರಂಪರೆಯನ್ನು ಪ್ರಾರಂಭಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

1. ಆ ನ ಕೃಷ್ಣರಾಯರು 2. ವಿ ಕೃ ಗೋಕಾಕ್

3. ಜಿ ಪಿ ರಾಜರತ್ನಂ 4. ಗಿರೀಶ್ ಕಾರ್ನಾಡ್

11. ಸಾವಿರಾರು ನದಿಗಳು ಕವನ ಸಂಕಲನದ ಕರ್ತೃ ಯಾರು?

1. ಸಿದ್ದಲಿಂಗಯ್ಯ
2. ಚಂದ್ರಶೇಖರ ಕಂಬಾರ
3. ದೇವನೂರು ಮಹದೇವ
4. ಮೂಡ್ನಾಕೂಡು ಚಿನ್ನಸ್ವಾಮಿ

12 . ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರುನಾಮಕರಣ ಗೊಳಿಸಿದ ವರ್ಷ ಯಾವುದು?

1. 1956 2. 1973

3. 1981 4. 1986

VTU BSc ಸಾಹಿತ್ಯ ಸಿಂಚನ

**ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

೧ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಶ್ರಮಿಸಿದ ವಿದೇಶಿ ಬರಹಗಾರರ ಹೆಸರುಗಳನ್ನು ಬರೆಯಿರಿ?

೨. ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮೈಸೂರು ರಾಜ್ಯದ ಅರಸರ ಕೊಡುಗೆ ಯಾವುದು?

೩. ಕನ್ನಡ ಸಾಹಿತ್ಯದ ಬೆಳವಣಿಗೆಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳು ಏನು?

4 ಕನ್ನಡದ ಮೂರು ರಾಷ್ಟ್ರ ಕವಿಗಳ ಹೆಸರುಗಳನ್ನು ಬರೆಯಿರಿ ?

5. ಕನ್ನಡದ ಪ್ರಮುಖ ನವ್ಯ ಕಾಲಘಟ್ಟದ ಸಾಹಿತಿಗಳ ಹೆಸರುಗಳನ್ನು ತಿಳಿಸಿರಿ?

೩. ದಲಿತ-ಬಂಡಾಯ ಪ್ರಕಾರದ ಪ್ರಮುಖ ಸಾಹಿತಿಗಳ ಹೆಸರುಗಳನ್ನು ಬರೆಯಿರಿ?

5 ಕುವೆಂಪುರವರು ರಚಿಸಿರುವ ಪ್ರಮುಖ ನಾಟಕಗಳಲ್ಲಿ ಯಾವುದಾದರೂ ಐದು ನಾಟಕಗಳ ಹೆಸರುಗಳನ್ನು ಬರೆಯಿರಿ?

6. ಬಿ ಎಂ ಶ್ರೀಕಂಠಯ್ಯನವರ ಇಂಗ್ಲಿಷ್ ಗೀತೆಗಳು ಕವನ ಸಂಕಲನದ ಕುರಿತು ಬರೆಯಿರಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ( ವಿವರಣಾತ್ಮಕವಾಗಿ) ಉತ್ತರವನ್ನು ಬರೆಯಿರಿ.**

೧. ಏಕೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಒಂದು ಪ್ರಮುಖ ಕಾಲಘಟ್ಟ - ಈ ಮಾತನ್ನು ವಿವರಿಸಿ.

೨. ಕನ್ನಡದ ಪ್ರಮುಖ ಮಹಿಳಾ ಲೇಖಕಿಯರುಗಳ ಹೆಸರುಗಳನ್ನು ಮತ್ತು ಅವರ ಕೃತಿಗಳನ್ನು ಹೆಸರಿಸಿ.

3. ಕನ್ನಡಕ್ಕಾಗಿ ದುಡಿದ ವಿದೇಶಿಗರ ಹೆಸರುಗಳು ಮತ್ತು ಅವರು ಭಾಷಾ ಬೆಳವಣಿಗೆಗೆ ಸಂಬಂಧಿಸಿದಂತೆ ರಚಿಸಿದ ಕೃತಿಗಳ ಹೆಸರುಗಳನ್ನು ಬರೆಯಿರಿ ?.

VTU BSc ಸ

# ಗ್ರಂಥಋಣ:

1. ಕನ್ನಡ ಸಾಹಿತ್ಯ ಚರಿತ್ರೆ - ತ ಸು ಶಾಮರಾಯ
2. ಕನ್ನಡ ಸಾಹಿತ್ಯ ಚರಿತ್ರೆ - ರಂ ಶ್ರೀ ಮುಗಳಿ
3. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ - ಜಿ ಎಸ್ ಶಿವರುದ್ರಪ್ಪ
4. ಕನ್ನಡ ಕೈಪಿಡಿ - ಕೆ ವಿ ಪುಟ್ಟಪ್ಪ
5. ಕನ್ನಡ ಸಾಹಿತ್ಯ ಕೋಶ - ರಾಜಪ್ಪ ದಳವಾಯಿ
6. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ - ಚಿ ಸಿ ನಿಂಗಣ್ಣ
7. ಕರ್ನಾಟಕ ಸಂಸ್ಕೃತಿ ಸಮೀಕ್ಷೆ - ಎಚ್ ತಿಪ್ಪೇರುದ್ರಸ್ವಾಮಿ
8. ಕರ್ನಾಟಕ ಪರಂಪರೆ - ಸಂಪುಟ - 1 - ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರ್ಕಾರ
9. ಕರ್ನಾಟಕ ಪರಂಪರೆ - ಸಂಪುಟ - 2 - ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಸರ್ಕಾರ
10. ಸಮಗ್ರ ಗದ್ಯ ಸಂಪುಟ-1 - ಜಿಎಸ್ ಶಿವರುದ್ರಪ್ಪ
11. ಸಮಗ್ರ ಗದ್ಯ ಸಂಪುಟ 2 - ಜಿಎಸ್ ಶಿವರುದ್ರಪ್ಪ
12. ಹೊಸಗನ್ನಡ ಸಾಹಿತ್ಯ ಚರಿತ್ರೆ - ಎಲ್ ಎಸ್ ಶೇಷಗಿರಿರಾವ್
13. ಕುಮಾರವ್ಯಾಸ ಕಥಾಂತರ - ಎಚ್ ಎಸ್ ವೆಂಕಟೇಶಮೂರ್ತಿ
14. ಭಾಷೆ ಮತ್ತು ಕನ್ನಡ ಬೋಧನೆ - ಎನ್ ಬಿ ಕೊಂಗವಾಡ
15. ಚಂಪೂ ಕವಿಗಳು - ಪಿ ವಿ ನಾರಾಯಣ
16. ಕನ್ನಡ ಸಾಹಿತ್ಯ ಸಮೀಕ್ಷೆ - ಜಿಎಸ್ ಶಿವರುದ್ರಪ್ಪ
17. ವಚನ ಸಾಹಿತ್ಯ - ಎಂ ಚಿದಾನಂದಮೂರ್ತಿ
18. ತ್ರಿಪದಿ, ರಗಳೆ ಮತ್ತು ಜಾನಪದ ಸಾಹಿತ್ಯ -ಕಾಳೇಗೌಡ ನಾಗವಾರ
19. ಸಾಂಗತ್ಯ ಕವಿಗಳು - ಹಂಪ ನಾಗರಾಜಯ್ಯ
20. ಷಟ್ಪದಿ ಸಾಹಿತ್ಯ - ಕೆ ಮರಳಸಿದ್ದಪ್ಪ
21. ಕನ್ನಡ ಭಾಷೆಯ ಚರಿತ್ರೆ - ಡಾ. ಕೆ . ಕೆಂಪೇಗೌಡ
22. ಕನ್ನಡ ಭಾಷೆಯ ಚರಿತ್ರೆ - ಡಾ. ಬಿ ವಿ ವಸಂತ್ ಕುಮಾರ್

23. ಆಡಳಿತ ಕನ್ನಡ - ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

24. ಸಾಂಸ್ಕೃತಿಕ ಕನ್ನಡ - ಡಾ. ಎಲ್. ತಿಮ್ಮೇಶ ಮತ್ತು ಪ್ರೊ. ವಿ. ಕೇಶವಮೂರ್ತಿ - ಪ್ರಸಾರಾಂಗ ವಿ.ತಾ.ವಿ ಬೆಳಗಾವಿ.

25. ಪಂಪಭಾರತ (ಗದ್ಯಾನುವಾದ) - ಎನ್ ಅನಂತರಂಗಾಚಾರ್

26. ಕನ್ನಡ ನಿಘಂಟು ಪರಿಷ್ಕೃತ - ಮೈಸೂರು ವಿಶ್ವವಿದ್ಯಾಲಯ

27. ಸಂಕ್ಷಿಪ್ತ ಕನ್ನಡ ನಿಘಂಟು - ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

28. ಭಾಷಾ ವಿಜ್ಞಾನದ ಮೂಲ ತತ್ವಗಳು - ಡಾ. ಎಂ ಚಿದಾನಂದಮೂರ್ತಿ

29. ಕನ್ನಡ ಭಾಷಾ ಕೈಪಿಡಿ - ಸಂಗಮೇಶ ಸವದತ್ತಿಮಠ

30. ಆಡಳಿತ ಪದಕೋಶ - ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು

31. ಕನ್ನಡ ಭಾಷಾ ಸ್ವರೂಪ - ಕೆ ಎಂ ಕೃಷ್ಣ ರಾವ್, ಮೈಸೂರು

32. ಸಂಕ್ಷಿಪ್ತ ಕನ್ನಡ ನಿಘಂಟು ( ಪರಿಷ್ಕೃತ) - ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

VTU BSc ಸಾಹಿತ್ಯ ಸಿಂ

## ಲೇಖಕರನ್ನು ಕುರಿತು:



**ಡಾ. ಎಲ್. ತಿಮ್ಮೇಶ** ಇವರು ಪ್ರಸ್ತುತ ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸುಮಾರು ಹದಿನಾರು ವರ್ಷಗಳ ಬೋಧನಾ ಅನುಭವವನ್ನು ಹೊಂದಿರುವ ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾನವಿಕ ವಿಭಾಗದ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿಗಳಲ್ಲಿ ಹಾಗೂ ಪಠ್ಯಪುಸ್ತಕಗಳ ರಚನೆ, ಕನ್ನಡ ತಾಂತ್ರಿಕ ಪಠ್ಯಪುಸ್ತಕಗಳ ರಚನೆ, ತಾಂತ್ರಿಕ ಪದಕೋಶಗಳ ರಚನೆ ಮತ್ತು ಭಾಷಾಂತರಕಾರರಾಗಿ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಂತ್ರಿಕ ಶಿಕ್ಷಣ ಇಲಾಖೆಯ ಸಿ - 20 ಕನ್ನಡ ಪಠ್ಯಪುಸ್ತಕಗಳ ರಚನೆಯ ಸಲಹಾ ಸಮಿತಿಯ ಸದಸ್ಯರಾಗಿ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎನ್ಎಸ್ಎಸ್ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು 2018ರ ಎಐಸಿಟಿಇ ಪಠ್ಯಕ್ರಮಕ್ಕೆ ಅನುಗುಣವಾಗಿ ಹಲವಾರು ಪುಸ್ತಕಗಳನ್ನು ರಚಿಸಿರುತ್ತಾರೆ. ಈ ಪುಸ್ತಕಗಳು ಎಐಸಿಟಿಇ ಮತ್ತು ದೇಶದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳು ಮತ್ತು ಪರಾಮರ್ಶನ ಗ್ರಂಥಗಳಾಗಿರುತ್ತವೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಸೇವಾ ಯೋಜನೆಗೆ ಇವರು ಸಲ್ಲಿಸಿದ ಕೊಡುಗೆಯನ್ನು ಪರಿಗಣಿಸಿ "ರಾಜ್ಯ ಎನ್ಎಸ್ಎಸ್ ಪ್ರಶಸ್ತಿ" ಮತ್ತು ವಿಶ್ವವಿದ್ಯಾಲಯದ "ಉತ್ತಮ ಕಾರ್ಯಕ್ರಮ ಅಧಿಕಾರಿ ಪ್ರಶಸ್ತಿ" ಮತ್ತು "ರಾಷ್ಟ್ರೀಯ ಯುವ ನಾಯಕತ್ವ ಪ್ರಶಸ್ತಿ", ಆಯ್ದ ಕವನಗಳಿಗೆ "ಕಾವ್ಯಶ್ರೀ ಪ್ರಶಸ್ತಿ" ಮೊದಲಾದ ಹಲವಾರು ಪ್ರಶಸ್ತಿಗಳು ಲಭಿಸಿರುತ್ತವೆ.

VTU BSc ಸಾಹಿತ್ಯ ಸಿಂಚನ 21KSS27

ಪ್ರಸ್ತುತದವರೆಗೆ ಲೇಖಕರಾದ ಡಾ. ಎಲ್. ತಿಮ್ಮೇಶ ಇವರಿಂದ ಪ್ರಕಟಿತಗೊಂಡು ರಾಷ್ಟ್ರಮಟ್ಟದಲ್ಲಿ ಮತ್ತು ವಿಶ್ವವಿದ್ಯಾಲಯ ಹಾಗೂ ಇಲಾಖಾ ಮಟ್ಟದಲ್ಲಿ **ಪಠ್ಯಪುಸ್ತಕ ಮತ್ತು ಪರಾಮರ್ಶನ ಗ್ರಂಥಗಳಾಗಿರುವ ಪ್ರಮುಖ ಕೃತಿಗಳು :**

1. **Functional English -** as per AICTE model curriculum 2018 – published by Cengage International Publication.
2. **Technical communication** – as per AICTE model curriculum 2018 – published by Cengage International Publication.
3. **English language communication skills** (a workbook and language lab manual ) – published by Cengage International Publication.
4. **Constitution of India professional ethics and human rights –** (AICTE and UGC level) – as per AICTE model curriculum 2018 – published by Cengage International Publication.
5. **ಆಡಳಿತ ಕನ್ನಡ** - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ದಿಂದ 2018 ರಿಂದ 2020 ರ ವರೆಗೆ ಕನ್ನಡ ಮಾತೃಭಾಷೆಯ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಪಠ್ಯಪುಸ್ತಕ ವಾಗಿರುತ್ತದೆ.
6. **ವ್ಯಾವಹಾರಿಕ ಕನ್ನಡ** - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ದಿಂದ 2018 ರಿಂದ 2020 ರ ವರೆಗೆ ಕನ್ನಡೇತರ / ಕನ್ನಡ ಬಾರದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಕೆಗೆ ನಿಗದಿಪಡಿಸಿದ ಪಠ್ಯಪುಸ್ತಕವಾಗಿರುತ್ತದೆ.
7. **ಸಾಂಸ್ಕೃತಿಕ ಕನ್ನಡ** - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 2020ರಿಂದ ಕನ್ನಡ ಮಾತೃಭಾಷೆಯ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ನಿಗದಿಪಡಿಸಿದ ಪಠ್ಯಪುಸ್ತಕ ವಾಗಿರುತ್ತದೆ.
8. **ಬಳಕೆ ಕನ್ನಡ** - ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 2020ರಿಂದ ಕನ್ನಡೇತರ/ ಕನ್ನಡಬಾರದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಕನ್ನಡ ಭಾಷೆ ಕಲಿಸಲು ನಿಗದಿಪಡಿಸಿದ ಪಠ್ಯಪುಸ್ತಕ ವಾಗಿರುತ್ತದೆ.
9. **ಸಾಹಿತ್ಯ ಸಿಂಚನ ಭಾಗ-1,** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಥಮ ವರ್ಷದ ದ್ವಿತೀಯ ಸೆಮಿಸ್ಟರ್ ಡಿಪ್ಲೋಮಾ ಕನ್ನಡ ಮಾತೃಭಾಷೆ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನದ ಕಡ್ಡಾಯ ಪಠ್ಯಪುಸ್ತಕ ವಾಗಿರುತ್ತದೆ.
10. **ಬಳಕೆ ಕನ್ನಡ ಭಾಗ-1,** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಥಮ ವರ್ಷದ ದ್ವಿತೀಯ ಸೆಮಿಸ್ಟರ್ ನ ಡಿಪ್ಲೋಮೋ ಕನ್ನಡೇತರ / ಕನ್ನಡ ಬಾರದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಸಲು ನಿಗದಿಪಡಿಸಿದ ಕಡ್ಡಾಯ ಪಠ್ಯಪುಸ್ತಕ ವಾಗಿರುತ್ತದೆ.
11. **ತಾಂತ್ರಿಕ ಸಂವಹನ ಕೌಶಲ್ಯಗಳು** – ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಜನಪ್ರಿಯ ತಾಂತ್ರಿಕ ಶಿಕ್ಷಣ ಮಾಲೆ ಯೋಜನೆ ಅಡಿಯಲ್ಲಿ ಪ್ರಕಟಿತ ಪುಸ್ತಕ.

VTU BSc ಸಾಹಿತ್ಯ ಸಿಂಚನ 21KSS27 Draft copy

12. **ಸಾಹಿತ್ಯ ಸಿಂಚನ ಭಾಗ- 2,** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಎರಡನೇ ವರ್ಷದ ತೃತೀಯ ಸೆಮಿಸ್ಟರ್ ನ ಡಿಪ್ಲೋಮಾ ಕನ್ನಡ ಮಾತೃಭಾಷೆ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನದ ಕಡ್ಡಾಯ ಪಠ್ಯಪುಸ್ತಕವಾಗಿರುತ್ತದೆ.
13. **ಬಳಕೆ ಕನ್ನಡ ಭಾಗ-2 ,** ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಎರಡನೇ ವರ್ಷದ ತೃತೀಯ ಸೆಮಿಸ್ಟರ್ ನ ಡಿಪ್ಲೋಮೋ ಕನ್ನಡೇತರ / ಕನ್ನಡ ಬಾರದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಲಿಸಲು ನಿಗದಿಪಡಿಸಿದ ಕಡ್ಡಾಯ ಪಠ್ಯಪುಸ್ತಕವಾಗಿರುತ್ತದೆ.

VTU BSc ಸಾಹಿತ್ಯ ಸಿಂಚನ 21KSS27 Draft Copy

"ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ".

--------------------

- ಮಾಸ್ತಿ ವೆಂಕಟೇಶ ಅಯ್ಯಂಗಾರ್ .

21KSS27 Draft copy
VTU BSc ಸಾಹಿತ್ಯ ಸಿಂಚನ

# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

# Visvesvaraya Technological University

==================================

**B.Sc Engg** - ಬಿ.ಎಸ್ಸಿ- ದ್ವಿತೀಯ ಸೆಮಿಸ್ಟರ್ ಕನ್ನಡ

## ಸಾಹಿತ್ಯ ಸಿಂಚನ

## Sahitya Sinchana (21KSS27)

## Notes and Material Prepared by :

**Dr. L Thimmesha**
Assistant Professor & Head
Dept of English & Humanities,
Government Engineering College – Hassan.

For Any clarifications and Feedback Please contact : 9900832331

VTU BSc ಸಾಹಿತ್ಯ ಸಿಂಚನ 21KSS27 Draft Copy